₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 29.09.2024 ಸಂಪುಟ: 09 ಸಂಚಿಕೆ: 279 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಸರಾ ಕ್ರೀಡಾಕೂಟ ಉದ್ಘಾಟನೆಗೆ ಹರ್ಮನ್ ಪ್ರೀತ್ ಸಿಂಗ್ ಅತಿಥಿ

ಈ ಬಾರಿಯ ದಸರಾ ಕ್ರೀಡಾಕೂಟವು ಅಕ್ಟೋಬರ್ 3ರಿಂದ 6ರವರೆಗೆ ನಡೆಯಲಿದ್ದು, ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತ, ಭಾರತ ಹಾಕಿ ತಂಡದ ನಾಯಕ ಹರ್ಮನ್ ಪ್ರೀತ್ ಸಿಂಗ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಅ.3ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ.

ಪುಟ ತೆರೆದಂತೆ...

ಇನ್ನೂ ಯಾಕ ಬರಲಿಲ್ಲ ಈಜಲು ಹೋದಾಂವಾ...!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್

ಸಂ.ಪುಟ | 6

ಮಾತ್ರೆಗಳ ಲೆಕ್ಕವನ್ನು ಮಾತ್ರೆಗಳ ಲೆಕ್ಕದಿಂದಲೇ ಬಿಡಿಸಿದವರು!
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ

ಸಂ.ಗಮ | 7

ಮಾತಂದ್ರೆ ಮಾತು

ನಾನು ಮುಖ್ಯಮಂತ್ರಿಯಾದರೆ ಎಲ್ಲ ಪೊಲೀಸರ ಕೈಯಲ್ಲಿ ಎಕೆ 47 ಗನ್ ಕೊಡುತ್ತೇನೆ. ದೇಶ ವಿರೋಧಿ ಚಟುವಟಿಕೆ ಮಾಡುವವರಿಗೆ ಗುಂಡು ಹೊಡೆಯಲಾಗುವುದು. ಮುಂಬರುವ ದಿನಗಳಲ್ಲಿ ದೇಶದಲ್ಲಿ ಯೋಗಿ, ರಾಜ್ಯದಲ್ಲಿ ನಾವು.

– ಬಸನಗೌಡ ಪಾಟೀಲ್ ಯತ್ನಾಳ್
ಶಾಸಕ

ದಾರಿದೀಪೋಕ್ತಿ

ನೀವು ಎಲ್ಲಿರಬೇಕೆಂದು ಬಯಸಿದ್ದಿರೋ, ಆ ಗುರಿಯನ್ನು ಇನ್ನೂ ತಲುಪಲು ಆಗಿಲ್ಲ ಅಂದರೆ ಅದನ್ನು ತಲುಪಲು ಆಗುವುದೇ ಇಲ್ಲ ಎಂದರ್ಥವಲ್ಲ. ಅಷ್ಟಕ್ಕೇ ನಿರಾಶರಾಗಬಾರದು. ಕೆಲವು ಸಲ ದೊಡ್ಡ ಕಾರ್ಯಗಳು ನೆರವೇರಲು ಸಮಯ ಬೇಕಾಗುತ್ತದೆ ಎಂದು ಭಾವಿಸಬೇಕು.

ವಕ್ರತುಂಡೋಕ್ತಿ

ಮುಟ್ಟಿದರೆ ಸುಡುತ್ತದೆ ಅಥವಾ ಬೆಚ್ಚಗಾಗುತ್ತದೆ ಅಂತ ಯಾರಾದರೂ ಹೇಳಿದರೆ, ಬೆಂಕಿಯನ್ನೇ ಕಲ್ಪಿಸಿಕೊಳ್ಳಬೇಕಿಲ್ಲ. ಹೆಂಡತಿಯನ್ನೂ ನೆನಪಿಸಿಕೊಳ್ಳಬಹುದು.

ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ವಿರುದ್ಧ ಇಡಿ ಬಳಸಿ 8 ಸಾವಿರ ಕೋಟಿ ರುಪಾಯಿ ಸುಲಿಗೆ ಆರೋಪ
ಬಿಜೆಪಿ ರಾಷ್ಟ್ರಾಧ್ಯಕ್ಷ, ಇಡಿ ಹಾಗೂ ಬಿಜೆಪಿಯ ಪ್ರಮುಖರ ವಿರುದ್ಧ ಬೆಂಗಳೂರಿನ ತಿಲಕ ನಗರ ಠಾಣೆಯಲ್ಲಿ ಎಫ್‌ಐಆರ್

ಮೋದಿ ಬ್ರ್ಯಾಂಡ್ ಕಳಚಿದ ಬಾಂಡ್

ಬೆಂಗಳೂರು: ಭ್ರಷ್ಟಾಚಾರ ಮುಕ್ತ ಆಡಳಿತದ ಮೂಲಕ ಕೇಂದ್ರದಲ್ಲಿ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ವಿರುದ್ಧ ಮೊದಲ ಬಾರಿಗೆ ಸುಲಿಗೆ ಪ್ರಕರಣ ದಾಖಲಾಗಿದೆ. ತನಿಖಾ ಸಂಸ್ಥೆಯೊಂದನ್ನು ದುರುಪಯೋಗಪಡಿಸಿಕೊಂಡಿರುವ ಸಂಬಂಧ ಹಣಕಾಸು ಸಚಿವರ ವಿರುದ್ಧ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಎಫ್‌ಐಆರ್ ದಾಖಲಾಗಿದ್ದು, ಇದು ಮತ್ತೊಂದು ರೀತಿಯ ರಾಜಕೀಯ ಹಾಗೂ ಕಾನೂನು ಕದನಕ್ಕೆ ಕಾರಣವಾಗಿದೆ.

ಬೆಂಗಳೂರಿನ ಜನಾಧಿಕಾರ ಸಂಘರ್ಷ ಪರಿಷತ್‌ನ ಆದರ್ಶ ಆರ್. ಅಯ್ಯರ್ ಎಂಬುವವರು ಸಲ್ಲಿಸಿರುವ ಖಾಸಗಿ ದೂರಿನ ವಿಚಾರಣೆ ನಡೆಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮ್ಯಾಜಿಸ್ಟ್ರೇಟ್ ಕೆ.ಎನ್. ಶಿವಕುಮಾರ್ ಅವರು ಎಫ್‌ಐಆರ್ ದಾಖಲಿಸಲು ನಿರ್ದೇಶಿಸಿದ್ದು, ಅಕ್ಟೋಬರ್ 10ಕ್ಕೆ ವಿಚಾರಣೆ ಮುಂದೂಡಲಾಗಿದೆ.

ಬಹುರಾಷ್ಟ್ರೀಯ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸುಲಿಗೆ ನಡೆಸಲಾಗಿದೆ. ಅವರಿಂದ ಚುನಾವಣೆ ಬಾಂಡ್ ಖರೀದಿಸಿ ಬಿಜೆಪಿಗೆ ಸುಮಾರು 8,000 ಕೋಟಿ ರು.ಗೂ ಅಧಿಕ ಲಾಭ ಮಾಡಿಕೊಡಲಾಗಿದೆ. ಬಿಜೆಪಿ ಹಾಗೂ ಕರ್ನಾಟಕ ರಾಜ್ಯ ಘಟಕಕ್ಕೆ ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಜಾರಿ ನಿರ್ದೇಶನಾಲಯ (ಇಡಿ) ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ಆರೋಪ ಸಂಬಂಧ ಒಟ್ಟು ಐವರ ಮೇಲೆ ಎಫ್‌ಐಆರ್ ದಾಖಲಾಗಿದೆ. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಎ1 ಆರೋಪಿಯಾಗಿದ್ದು, ಇಡಿ ಅಧಿಕಾರಿಗಳು ಎ2, ಕೇಂದ್ರ ಬಿಜೆಪಿ ಪದಾಧಿಕಾರಿಗಳು ಎ3, ನಳಿನ್ ಕುಮಾರ್ ಕಟೀಲ್ ಎ4, ಬಿ.ವೈ.ವಿಜಯೇಂದ್ರ ಎ5 ಹಾಗೂ ರಾಜ್ಯ ಬಿಜೆಪಿ ಪದಾಧಿಕಾರಿಗಳು ಎ6 ಆರೋಪಿಗಳಾಗಿದ್ದಾರೆ. ಐಪಿಸಿ ಸೆಕ್ಷನ್ 384 (ಸುಲಿಗೆ), 120ಬಿ (ಅಪರಾಧಿಕ ಒಳಸಂಚು), 34 (ಸಮಾನ ಉದ್ದೇಶ) ಮೇಲೆ ಕೇಸ್ ದಾಖಲಾಗಿದೆ. → 4

ಏನಿದು ಸುಲಿಗೆ?

ಜಾರಿ ನಿರ್ದೇಶನಾಲಯ ದುರ್ಬಳಕೆ ಮಾಡಿಕೊಂಡು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಹುರಾಷ್ಟ್ರೀಯ ಕಂಪನಿಗಳಿಂದ ಕೋಟ್ಯಂತರ ರು. ಸುಲಿಗೆ ಮಾಡಿ ಬಿಜೆಪಿ ಬೊಕ್ಕಸ ತುಂಬಿಸಿದ್ದಾರೆ. ಜಾರಿ ನಿರ್ದೇಶನಾಲಯದ ಮೇಲೆ ಹಿಡಿತ ಹೊಂದಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಡಿ ಅಧಿಕಾರಿಗಳನ್ನು ಬಳಸಿ ಹಲವು ಕಾರ್ಪೊರೇಟ್ ಕಂಪನಿಗಳ ಕಾರ್ಯನಿರ್ವಹಣಾಧಿಕಾರಿ(ಸಿಇಒ), ವ್ಯವಸ್ಥಾಪಕ ನಿರ್ದೇಶಕರ ಮೇಲೆ ದಾಳಿಯ ಬೆದರಿಕೆ ಹಾಕಿದ್ದಾರೆ. ಇದರಿಂದ ವಿಚಲಿತರಾಗಿರುವ ಕಾರ್ಪೊರೇಟ್ ಕಂಪನಿಗಳು ಬಹುಕೋಟಿ ಚುನಾವಣಾ ಬಾಂಡ್‌ಗಳನ್ನು ಖರೀದಿಸಿ ರಾಷ್ಟ್ರೀಯ ಮತ್ತು ರಾಜ್ಯ ಬಿಜೆಪಿಗೆ ದೇಣಿಗೆಯಾಗಿ ನೀಡಿವೆ. ಇವುಗಳನ್ನು ಬಿಜೆಪಿಯು ನಗದಾಗಿ ಪರಿವರ್ತಿಸಿಕೊಂಡಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರು ರಾಜೀನಾಮೆ ಕೊಡುತ್ತಾರಾ? ನನ್ನ ರಾಜೀನಾಮೆ ಕೇಳುವ ಹಕ್ಕು ಬಿಜೆಪಿಯವರಿಗಿಲ್ಲ. ಮೊದಲು ನಿರ್ಮಲಾ ಸೀತಾರಾಮನ್, ಕುಮಾರಸ್ವಾಮಿ ರಾಜೀನಾಮೆ ಕೊಡಲಿ, ಆಮೇಲೆ ನಾನು ರಾಜೀನಾಮೆ ಕೊಡುವ ಬಗ್ಗೆ ಯೋಚಿಸುವೆ. **ಸಿದ್ದರಾಮಯ್ಯ**, ಮುಖ್ಯಮಂತ್ರಿ.

ಪಿತೂರಿ

ನಿರ್ಮಲಾ ಸೀತಾರಾಮನ್, ಜಾರಿ ನಿರ್ದೇಶನಾಲಯ, ಜೆ.ಪಿ.ನಡ್ಡಾ, ನಳಿನ್ ಕುಮಾರ್ ಕಟೀಲ್ ಮತ್ತು ಬಿ.ವೈ. ವಿಜಯೇಂದ್ರ ಅವರು ಹಲವು ಮಟ್ಟದಲ್ಲಿ ಗುಪ್ತವಾಗಿ ಪಿತೂರಿ ನಡೆಸಿದ್ದು, ಚುನಾವಣಾ ಬಾಂಡ್ ನೆಪದಲ್ಲಿ ಬಹುಕೋಟಿ ರುಪಾಯಿ ಸುಲಿಗೆ ಮಾಡಿದ್ದಾರೆ. ಚುನಾವಣಾ ಬಾಂಡ್ ಕುರಿತು ಲೋಕಸಭಾ ಚುನಾವಣೆಗೂ ಮುನ್ನ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ಹೊರಡಿಸಿದ್ದು, ಹಲವು ಅಭಿಪ್ರಾಯ ವ್ಯಕ್ತಪಡಿಸಿದೆ. ಚುನಾವಣಾ ಬಾಂಡ್ ಸಂಬಂಧಿತ ವಿಚಾರ, ವಾಸ್ತವಿಕ ಅಂಶಗಳು ಕಾನೂನು ಜಾರಿ ಸಂಸ್ಥೆಗಳ (ಚುನಾವಣಾ ಆಯೋಗ) ವ್ಯಾಪ್ತಿಯಲ್ಲಿದೆ ಎಂದು ಅರ್ಜಿದಾರರು ವಿವರಿಸಿದ್ದಾರೆ.



ಚುನಾವಣಾ ಬಾಂಡ್ ಎಂದರೇನು ?

ರಾಜಕೀಯ ಪಕ್ಷಗಳಿಗೆ ಕಪ್ಪು ಹಣ ಹರಿದು ಬರುವುದನ್ನು ತಡೆಯಲು ಹಾಗೂ ರಾಜಕೀಯ ಪಕ್ಷಗಳಿಗೆ ಬರುವ ದೇಣಿಗೆಗಳಿಗೆ ಒಂದು ಹೊಣೆಗಾರಿಕೆಯನ್ನಾಗಿಸು ವುದಕ್ಕಾಗಿ ಚುನಾವಣಾ ಬಾಂಡ್‌ಗಳನ್ನು ಕೇಂದ್ರ ಸರಕಾರ 2018ರಲ್ಲಿ ಜಾರಿಗೊಳಿಸಿತ್ತು. ಈ ರೀತಿಯ ದೇಣಿಗೆ ಪ್ರಕ್ರಿಯೆ ಪಾರದರ್ಶಕವಾಗಿಸುವಂತಹ ಉದ್ದೇಶಕ್ಕಾಗಿ ಈ ಚುನಾವಣಾ ಬಾಂಡ್‌ಗಳನ್ನು ಜಾರಿಗೊಳಿಸಲಾಗಿತ್ತು.

ಬಾಂಡ್ ಮುಖಬೆಲೆ: ಭಾರತದ ಯಾವುದೇ ನಾಗರಿಕ ಹಾಗೂ ಭಾರತದ ಯಾವುದೇ ಸಂಸ್ಥೆಯು ಚುನಾವಣಾ ಬಾಂಡ್‌ಗಳನ್ನು ಖರೀದಿಸಬಹುದಿತ್ತು. ಇವು ಬಡ್ಡಿ ರಹಿ ತ ಬಾಂಡ್‌ಗಳು. 1000 ರು. ಮುಖಬೆಲೆಯಿಂದ ಒಂದು ಕೋಟಿ ರು. ಗಳವರೆಗಿನ ಮುಖಬೆಲೆಯವರೆಗೆ ನಾನಾ ರೀತಿಯ ಬಾಂಡ್‌ಗಳು ಬಿಡುಗಡೆಗೊಳಿಸಲಾಗಿತ್ತು. ಈ ಎಲ್ಲ ಬಾಂಡ್‌ಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ಆಯ್ದ ಶಾಖೆಗಳಿಂದ ಕೊಳ್ಳಬಹುದಿತ್ತು.

ನಗದು ಪರಿವರ್ತನೆ ಹೇಗೆ?: ಬ್ಯಾಂಕ್ ಖಾತೆಗಳ ಮೂಲಕ ಹಣ ವರ್ಗಾವಣೆ ಮಾಡುವ ಮೂಲಕವಷ್ಟೇ ಬಾಂಡ್ ಕೊಳ್ಳಬಹುದಾಗಿತ್ತು. ಅಂದರೆ, ಈ ಬಾಂಡ್‌ಗಳನ್ನು ಕೊಳ್ಳುವ ವ್ಯಕ್ತಿಯು ಅಥವಾ ಸಂಸ್ಥೆಗಳು, ತಮ್ಮ ಹೆಸರಿನ ಬ್ಯಾಂಕ್ ಅಕೌಂಟ್‌ಗಳಿಂದಲೇ ತಾವು ಕೊಳ್ಳುವ ಬಾಂಡ್‌ಗಳ ಮೌಲ್ಯಕ್ಕೆ ತಕ್ಕಷ್ಟು ಹಣ ಪಾವತಿಸಿ ಬಾಂಡ್‌ಗಳನ್ನು ಖರೀದಿಸಬೇಕಿತ್ತು. ಇಲ್ಲಿ ಬಾಂಡ್‌ಗಳಿಗೆ 15 ದಿನಗಳ ಕಾಲ ಮಾತ್ರ ಅಸ್ತಿತ್ವವಿತ್ತು. ಆ 15 ದಿನಗಳಲ್ಲಿ ಆ ಬಾಂಡ್‌ಗಳನ್ನು ಯಾವ ರಾಜಕೀಯ ಪಕ್ಷಗಳ ಹೆಸರಿಗೆ ಖರೀದಿಸಲಾಗಿತ್ತೋ ಆ ಪಕ್ಷಗಳಿಗೆ ಕೊಡಬಹುದಿತ್ತು. ಆನಂತರ ಆ ಹಣ ನಗದಾಗಿ ಪರಿವರ್ತಿಸಿಕೊಂಡು ದೇಣಿಗೆಯಾಗಿ ಪರಿವರ್ತಿಸಿಕೊಳ್ಳಬಹುದಿತ್ತು.

ಹಣ ಸಂಗ್ರಹದ ವಿವರ

- ಮೆಸರ್ಸ್ ಸ್ಟರ್ಲೈಟ್ ಮತ್ತು ವೇದಾಂತ ಕಂಪನಿಗಳ ಮುಖ್ಯಸ್ಥ ಅನಿಲ್ ಅಗರ್ವಾಲ್ ಅವರ ಮೇಲೆ ಹಲವು ಬಾರಿ ಜಾರಿ ನಿರ್ದೇಶನಾಲಯ ದಾಳಿ ಮಾಡಿದ್ದು, ಇದರಿಂದ ಕಂಗೆಟ್ಟಿದ್ದ ಅಗರ್‌ವಾಲ್ ಅವರು 2019ರ ಏಪ್ರಿಲ್‌ನಿಂದ 2022ರ ಆಗಸ್ಟ್ ನಡುವೆ ಮತ್ತು 2023ರ ನವೆಂಬರ್‌ನಲ್ಲಿ ಒಟ್ಟು 230.15 ಕೋಟಿ ರುಪಾಯಿ ಮೌಲ್ಯದ ಚುನಾವಣಾ ಬಾಂಡ್ ಖರೀದಿಸಿದ್ದಾರೆ ಎಂದು ಅರ್ಜಿಯಲ್ಲಿ ಆಪಾದಿಸಲಾಗಿದೆ. ಇಡಿ ಅಧಿಕಾರಿಗಳು ದಾಳಿ ನಡೆಸಿರುವ ಕಾರ್ಪೊರೇಟ್ ಸಂಸ್ಥೆಗಳು ಮತ್ತು ಹೀಗೆ ದಾಳಿಗೆ ತುತ್ತಾದ ಸಂಸ್ಥೆಗಳು ಚುನಾವಣಾ ಬಾಂಡ್‌ನಿಂದ ಹಣ ಸಂಗ್ರಹಿಸಿರುವ ವಿವರವನ್ನು ಅರ್ಜಿದಾರರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.
- ಮೆಸರ್ಸ್ ಅರಬಿಂದೊ ಫಾರ್ಮಾದ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿ, ದಾಖಲೆಗಳನ್ನು ಜಪ್ತಿ ಮಾಡಿತ್ತು. ಇದರಿಂದ ಬೆದರಿದ್ದ ಅರಬಿಂದೊ ಫಾರ್ಮಾ ಸಮೂಹ ಸಂಸ್ಥೆಗಳು 2023ರ ಜನವರಿ 5 ಮತ್ತು ನವೆಂಬರ್ 8, 2022ರ ಜುಲೈ 2, 2022ರ ನವೆಂಬರ್ 15ರಂದು ಒಟ್ಟು 49.5 ಕೋಟಿ ರುಪಾಯಿ ಮೌಲ್ಯದ ಚುನಾವಣಾ ಬಾಂಡ್ ಖರೀದಿಸಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಅದೇ ರೀತಿ, ಅರಬಿಂದೊ ಫಾರ್ಮಾದ ಮೇಲಿನ ದಾಳಿಯ ವಿವರವನ್ನೂ ಅರ್ಜಿದಾರರು ನ್ಯಾಯಾಲಯಕ್ಕೆ ದಾಖಲೆಯಲ್ಲಿ ಲಗತ್ತಿಸಿದ್ದಾರೆ. ಇಡಿ ದಾಳಿಗೆ ಬೆದರಿದ ಅರಬಿಂದೊ ಫಾರ್ಮಾ ಬಾಂಡ್ ಖರೀದಿಗೆ ಒಪ್ಪಿತ್ತು ಎಂದು ವಿವರಿಸಲಾಗಿದೆ.

ದೇಣಿಗೆ ಪಡೆದ ಟಾಪ್ ಐದು ಪಕ್ಷಗಳು

ಪಕ್ಷ	ಹಣ
1. ಬಿಜೆಪಿ	6,986.5
2. ಟಿಎಂಸಿ	1,397
3. ಕಾಂಗ್ರೆಸ್	1,334.35
4. ಬಿಆರ್‌ಎಸ್	1,322
5. ಬಿಜೆಡಿ	944.5

(ಕೋಟಿ ರು.ಗಳಲ್ಲಿ)

ಖಾಸಗಿ ದೂರು ಯಾಕೆ?

ಈ ವಿಚಾರಕ್ಕೆ ಸಂಬಂಧಿಸಿ ಮಾರ್ಚ್ 30 ರಂದು ತಿಲಕ್ ನಗರ ಠಾಣಾಧಿಕಾರಿಗೆ ನಂತರ ಏಪ್ರಿಲ್ 2ರಂದು ಬೆಂಗಳೂರು ದಕ್ಷಿಣದ ಡಿಸಿಪಿಗೆ ದೂರು ನೀಡಲಾಗಿತ್ತು. ಅವರು ಯಾವುದೇ ಕ್ರಮಕೈಗೊಳ್ಳದ ಹಿನ್ನೆಲೆಯಲ್ಲಿ ಪ್ರಿಯಾಂಕಾ ಶ್ರೀವಾಸ್ತವ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪಿನ ಅನುಸಾರ ಅಧಿಕಾರಿಗಳು ದೂರು ಸ್ವೀಕರಿಸದೇ ತಮ್ಮನ್ನು ಹೇಗೆ ಕಚೇರಿಯಿಂದ ಕಚೇರಿಗೆ ಅಲೆಸಿದ್ದಾರೆ ಎಂಬುದರ ಸವಿವರವಾದ ಅಫಿಡವಿಟ್ ಅನ್ನು ದೂರುದಾರರು ಸಲ್ಲಿಸಿದ್ದಾರೆ. ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ಹಲವು ತೀರ್ಪುಗಳಲ್ಲಿ ಮ್ಯಾಜಿಸ್ಟ್ರೇಟ್ ಸಕ್ಷಮ ಪ್ರಾಧಿಕಾರದಿಂದ ಸಿಆರ್‌ಪಿಸಿ ಸೆಕ್ಷನ್ 197 ಅನ್ವಯ ಪೂರ್ವಾನುಮತಿ ಪಡೆಯದಿದ್ದರೂ ಸಿಆರ್‌ಪಿಸಿ ಸೆಕ್ಷನ್ 156(3)ರ ಅಡಿಯ ಖಾಸಗಿ ದೂರಿನಂತೆ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಆದೇಶಿಸಬಹುದು ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ಇದರ ಅನ್ವಯ ಮ್ಯಾಜಿಸ್ಟ್ರೇಟ್ ಆದೇಶ ಹೊರಬಿದ್ದಿದೆ.

ಸಿಎಂ ಸಿದ್ದರಾಮಯ್ಯ ಅವರ ಮುಡಾ ಹಗರಣಕ್ಕೂ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕರಣಕ್ಕೂ ವ್ಯತ್ಯಾಸವಿದೆ. ಸಿದ್ದರಾಮಯ್ಯ ಸ್ವಜನ ಪಕ್ಷಪಾತ ಮಾಡಿದ್ದಾರೆ. ಕೋಟ್ಯಂತರ ರುಪಾಯಿ ಬೆಲೆಬಾಳುವ ಜಮೀನು ಕಬಳಿಸಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ತಮ್ಮ ಸ್ವಂತಕ್ಕಾಗಿ ಏನೂ ಮಾಡಿಲ್ಲ. ಆ ಹಣ ಪಕ್ಷಕ್ಕೆ ಬಂದಿದೆ. ಕಾಂಗ್ರೆಸ್‌ಗೂ 1,200 ಕೋಟಿ ರು.ಗೂ ಅಧಿಕ ಹಣ ಬಂದಿದೆ. ಆ ಹಣ ಮೊದಲು ವಾಪಸ್ ನೀಡಲಿ. ಎಲ್ಲ ಪಕ್ಷಗಳು ದೇಣಿಗೆ ಸಂಗ್ರಹ ಮಾಡಿವೆ. – **ಆರ್.ಅಶೋಕ**, ಪ್ರತಿಪಕ್ಷ ನಾಯಕ

ಮಹಿಷ ದಸರಾ VS ಚಾಮುಂಡಿ ಚಲೋ

ಮೈಸೂರಲ್ಲಿ ನಿಷೇಧಾಜ್ಞೆ

ಮೈಸೂರು: ನಾಡ ಹಬ್ಬ ಮೈಸೂರು ದಸರಾ ಪ್ರಾರಂಭವಾಗುವುದಕ್ಕೆ ಕ್ಷಣಗಣನೇ ಪ್ರಾರಂಭವಾಗಿರುವ ಸಮಯದಲ್ಲೆ ಭಾನು ವಾರ ಮೈಸೂರಿನಲ್ಲಿ ಮಹಿಷ ಮಂಡಲೋತ್ಸವ ಆಚರಿಸಲಾಗುತ್ತಿದೆ. ಇದರ ನಡುವೆ ಮೈಸೂರು ನಗರದಲ್ಲಿ ನಿಷೇಧಾಜ್ಞೆ ಜಾರಿ ಮಾಡಿ ಆದೇಶ ಹೊರಡಿಸಲಾಗಿದೆ.

ಮಹಿಷ ಮಂಡಲೋತ್ಸವ ಆಚರಣೆ ವಿಷಯದಲ್ಲಿ ಪರ-ವಿರೋಧ ಚರ್ಚೆಗಳು ನಡೆಯುತ್ತಿದ್ದು, ಮಂಡಲೋತ್ಸವ ಆಚರಿಸಿದರೆ, ಹಿಂಸಾಚಾರ ಉಂಟಾಗಿ, ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಸಾಧ್ಯತೆಗಳಿವೆ ಎಂದು ಉಲ್ಲೇಖಿಸಿ, ಟೌನ್ ಹಾಲ್ ಹೊರತುಪಡಿಸಿ ಇನ್ನುಳಿದ ಸಾರ್ವಜನಿಕ ಸ್ಥಳಗಳಲ್ಲಿ ನಿಷೇಧಾಜ್ಞೆ ಜಾರಿಯಾಗಿದೆ. ಬಿಜೆಪಿಯು ಮಹಿಷ ಮಂಡಲ ಉತ್ಸವಕ್ಕೆ ಕೌಂಟರ್ ಆಗಿ ಚಾಮುಂಡಿ ಚಲೋ ಹಮ್ಮಿಕೊಂಡಿತ್ತು. ಆದರೆ ಚಾಮುಂಡಿ ಬೆಟ್ಟದಲ್ಲಿ ನಿಷೇಧಾಜ್ಞೆ ಜಾರಿ ಹಿನ್ನೆಲೆಯಲ್ಲಿ ಚಾಮುಂಡಿ ಚಲೋವನ್ನು ಕೈ ಬಿಟ್ಟಿದೆ.

ಮೈಸೂರು ಜಿಲ್ಲಾಡಳಿತದ ಮೇಲೆ ನಂಬಿಕೆ ಇಟ್ಟು ಚಾಮುಂಡಿ ಚಲೋ ಕೈ ಬಿಟ್ಟಿದ್ದೇವೆ. ಏನಾದರೂ ಚಾಮುಂಡಿ ಬೆಟ್ಟದಲ್ಲಿನ ಮಹಿಷ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರೆ, ನಾವು ಸುಮ್ಮನೆ ಇರುವುದಿಲ್ಲ. ಅದನ್ನು ವಿರೋಧಿಸಿ ಮೈಸೂರು ದಸರಾ ದಿನ ಪ್ರತಿಭಟನೆ ಮಾಡಬೇಕಾಗುತ್ತದೆ. **ಪ್ರತಾಪ್ ಸಿಂಹ**, ಮಾಜಿ ಸಂಸದ

ಹಿಂದೂ ಜನಸಂಖ್ಯೆ ಇಳಿಮುಖ ಅಭಿಪ್ರಾಯಕ್ಕೆ ಕತ್ತರಿ

ದೆಹಲಿ: ಧಾರ್ಮಿಕ ಸಮಾವೇಶಗಳಲ್ಲಿ ಮತಾಂತರ ನಿಲ್ಲದೇ ಹೋದರೆ ಈ ದೇಶದ ಬಹುಸಂಖ್ಯಾತರು ಒಂದು ದಿನ ಅಲ್ಪಸಂಖ್ಯಾತರಾಗುತ್ತಾರೆ ಎಂಬ ಅಲಹಾಬಾದ್ ಹೈಕೋರ್ಟ್ ಉಲ್ಲೇಖ ಮಾಡಿದ್ದನ್ನು ಸುಪ್ರೀಂಕೋರ್ಟ್ ಶುಕ್ರವಾರ ಕಡತದಿಂದ ತೆಗೆದುಹಾಕಿದೆ. ಮುಖ್ಯ ನ್ಯಾ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು ಆರೋಪಿಯೊಬ್ಬರಿಗೆ ಜಾಮೀನು ಮಂಜೂರು ಮಾಡಿ, ಈ ಅಭಿಪ್ರಾಯ ವ್ಯಕ್ತಪಡಿಸಿತು. ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಅಡಿ ಪ್ರಕರಣ ದಾಖಲಾಗಿತ್ತು.

ಮುನಿರತ್ನ ಮನೆ ಮೇಲೆ ಎಸ್‌ಐಟಿ ದಾಳಿ

ಬೆಂಗಳೂರು: ಅತ್ಯಾಚಾರ, ಜಾತಿ ನಿಂದನೆ ಹಾಗೂ ಗುತ್ತಿಗೆದಾರನಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಬಿಜೆಪಿ ಶಾಸಕ ಮುನಿರತ್ನ ಮನೆ ಮೇಲೆ ವಿಶೇಷ ತನಿಖಾ ತಂಡದ ಅಧಿಕಾರಿಗಳು ಶನಿವಾರ ಬೆಳಗ್ಗೆ ದಾಳಿ ನಡೆಸಿದರು. ಬೆಂಗಳೂರಿನ ವೈಯಾಲಿಕಾವಲ್ ನಿವಾಸದ ಮೇಲೆ ಎಸ್‌ಐಟಿ ಎಸಿಪಿ ಕವಿತಾ ನೇತೃತ್ವದಲ್ಲಿ ದಾಳಿ ನಡೆಸಿದ ಅಧಿಕಾರಿಗಳ ತಂಡ ದಾಖಲೆಗಳ ಪರಿಶೀಲನೆ ನಡೆಸಿದೆ.

ಸಚಿವ ಜಮೀರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಮನವಿ

ಬೆಂಗಳೂರು: ಮುಡಾ ಪ್ರಕರಣದಲ್ಲಿ ಸಿಎಂ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮ ಎತ್ತಿ ಹಿಡಿದಿದ್ದ ಹೈಕೋರ್ಟ್ ಆದೇಶವನ್ನು 'ರಾಜಕೀಯ ತೀರ್ಪು' ಎಂದು ವ್ಯಾಖ್ಯಾನಿಸಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಸಚಿವ ಜಮೀರ್ ಅಹ್ಮದ್ ಖಾನ್ ನ್ಯಾಯಾಂಗ ನಿಂದನೆ ಎಸಗಿದ್ದು, ಅವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಅನುಮತಿ ನೀಡಬೇಕು ಎಂದು ಕೋರಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರಿಗೆ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಪತ್ರ ಬರೆದಿದ್ದಾರೆ.

ನಾಗೇಂದ್ರ, ಪೊನ್ನಣ್ಣ ಜತೆ ಸಿಎಂ ಚರ್ಚೆ | ಮುಡಾ ತನಿಖೆಗೆ ನಾಲ್ವರು ಅಧಿಕಾರಿಗಳ ವಿಶೇಷ ತಂಡ

ಮುಡಾ: ನಾಳೆ ಸಿಎಂ ಅಪೀಲು ಸಂಭವ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕುಟುಂಬ ಸದಸ್ಯರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಲು ಸಿದ್ಧತೆ ಆರಂಭವಾಗಿದ್ದು, ಬಹುತೇಕ ಸೋಮವಾರ ಅರ್ಜಿ ಸಲ್ಲಿಕೆಯಾಗಲಿದೆ ಎನ್ನಲಾಗಿದೆ.

ರಾಜಕೀಯವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಪಕ್ಷದ ಹೈಕಮಾಂಡ್ ನಿಲ್ಲುವುದು ಈಗಾಗಲೇ ಸ್ಪಷ್ಟವಾಗಿದೆ. ಆದ್ದರಿಂದ ಇದೀಗ ಕಾನೂನಾತ್ಮಕವಾಗಿ ಯಾವ ರೀತಿಯಲ್ಲಿ ಪ್ರಕರಣವನ್ನು ತೆಗೆದುಕೊಂಡು ಹೋಗಬೇಕು ಎನ್ನುವ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಿದ್ದಾರೆ. ಇದರೊಂದಿಗೆ ಈಗಾಗಲೇ ದಾಖಲಾಗಿರುವ ಎಫ್‌ಐಆರ್ ತಡೆಗೆ ಯಾವ ರೀತಿಯಲ್ಲಿ ಕ್ರಮವಹಿಸಬೇಕು ಹಾಗೂ ರಾಜ್ಯಪಾಲರ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಯಾವ ರೀತಿಯಲ್ಲಿ ಎದುರಿಸಬೇಕು ಎನ್ನುವ ಬಗ್ಗೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ನಡುವೆ ಎಫ್‌ಐಆರ್ ರದ್ದತಿ ಕೋರಿ ಹೈಕೋರ್ಟ್‌ನಲ್ಲಿ ಸೋಮವಾರ ಅರ್ಜಿ ಸಲ್ಲಿಸುವ ಸಾಧ್ಯತೆಯದೆ. ವಿಶೇಷ ಜನಪ್ರತಿನಿಧಿಗಳ ನ್ಯಾಯಾಲ ಯದ ತೀರ್ಪಾಗಿರುವುದರಿಂದ ಈ ಪ್ರಕರಣವೂ ನಾಗಪ್ರಸನ್ನ ಅವರ ಪೀಠದ ಮುಂದೆಯೇ ಬರುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಇದೇ ವೇಳೆ ಮುಡಾ ಪ್ರಕರಣದ ವಿಚಾರಣೆಗೆ ಲೋಕಾಯುಕ್ತ ನಾಲ್ವರು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ತನಿಖಾ ತಂಡ ರಚಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ತಮ್ಮ ನಿವಾಸದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮತ್ತು ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರೊಂದಿಗೆ ಶನಿವಾರ ಎರಡು ತಾಸು ಚರ್ಚೆ ನಡೆಸಿದರು. ಪೊಲೀಸರು ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಕಾರಣ ನಡೆಸಬೇಕಾದ ಕಾನೂನು ಹೋರಾಟದ ಕುರಿತು ಅವರು ಚರ್ಚಿಸಿದರು. ಬಳಿಕ ಪಕ್ಷದ ಸ್ಥಳೀಯ ಮುಖಂಡರೊಂದಿಗೂ ಸಮಾಲೋಚನೆ ನಡೆಸಿದರು. ಮುಡಾ ಪ್ರಕರಣದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ. ಕಾನೂನು ಹೋರಾಟ ನಡೆಸುತ್ತೇನೆ, ಪ್ರತಿಪಕ್ಷದವರಿಗೆ ತಕ್ಕ ಉತ್ತರ ಕೊಡುವ ಕೆಲಸವನ್ನು ನೀವು ಮಾಡಬೇಕು ಎಂದು ತಿಳಿಸಿದರು ಎಂದು ಮೂಲಗಳು ತಿಳಿಸಿವೆ. ಬಳಿಕ ಮಾತನಾಡಿರುವ ಸಿಎಂ, ಪೊನ್ನಣ್ಣ ನನ್ನ ಕಾನೂನು ಸಲಹೆಗಾರ ಆಗಿರುವುದರಿಂದ, ನಿತ್ಯವೂ ಅವರೊಂದಿಗೆ ಕಾನೂನಿನ ಚರ್ಚೆ ನಡೆಸುತ್ತೇನೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ. ಶನಿವಾರ ಕ್ಷೇತ್ರಕ್ಕೆ ಹೋಗುತ್ತಿದ್ದ ಅವರು ಸೌಜನ್ಯದ ಭೇಟಿಯಾಗಿದ್ದಾರಷ್ಟೆ. ನಾನು ಅವರ ಬಳಿ ಚರ್ಚೆಯನ್ನೂ ಮಾಡಿಲ್ಲ. ಕಾನೂನು ಹೋರಾಟ ನಮ್ಮ ವಕೀಲರ ತಂಡ ನೋಡಿಕೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದರು.

ದ್ವಿಸದಸ್ಯ ಪೀಠದಲ್ಲಿ ಅರ್ಜಿ ಸಲ್ಲಿಕೆ?

ಎಫ್‌ಐಆರ್‌ಗೆ ತಡೆಯಾಜ್ಞೆ ಒಂದು ಭಾಗವಾದರೆ, ರಾಜ್ಯಪಾಲರ ಅನುಮತಿ ವಿಷಯದಲ್ಲಿ ನ್ಯಾ.ನಾಗಪ್ರಸನ್ನ ಅವರು ನೀಡಿರುವ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್ ದ್ವಿಸದಸ್ಯ ಪೀಠದಲ್ಲಿ ಅರ್ಜಿ ಸಲ್ಲಿಸಲು ಅಗತ್ಯ ಸಿದ್ಧತೆ ನಡೆಸಲಾಗಿದೆ. ಈ ಪ್ರಕರಣವನ್ನು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬೇಕೇ ಎನ್ನುವ ಗೊಂದಲವಿತ್ತು. ಆದರೀಗ ಹೈಕೋರ್ಟ್ ದ್ವಿಸದಸ್ಯ ಪೀಠದಲ್ಲಿ ಚರ್ಚಿಸುವ ತೀರ್ಮಾನಕ್ಕೆ ಬರಲಾಗಿದೆ ಎಂದು ತಿಳಿದುಬಂದಿದೆ. ಎಲ್ಲಿ ಪ್ರಶ್ನಿಸಬೇಕು ಎನ್ನುವ ಬಗ್ಗೆ ಇರುವ ಬಗ್ಗೆ ಸಿಂಘ್ವಿ ಅವರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಅಗ್ನಿ ಅವಘಡ, ಅಪಾರ ನಷ್ಟ

ಹೊಸೂರು: ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ಬಳಿಯ 'ಟಾಟಾ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ ಘಟಕದಲ್ಲಿ ಶನಿವಾರ ಬೆಳಗ್ಗೆ ಭಾರೀ ಬೆಂಕಿ ಅವಘಡ ಸಂಭವಿಸಿದ್ದು, 9 ಮಂದಿ ಗಾಯಗೊಂಡಿದ್ದಾರೆ. ಕೋಟ್ಯಂತರ ಮೌಲ್ಯದ ಪರಿಕರಗಳು ಭಸ್ಮವಾಗಿವೆ. ಮೂಲಗಳ ಪ್ರಕಾರ ಘಟನೆ ನಡೆದಾಗ ಮೊದಲ ಪಾಳಿಯಲ್ಲಿ 1,500 ಉದ್ಯೋಗಿಗಳು ಕರ್ತವ್ಯದಲ್ಲಿದ್ದರು.

ಕೈ ನಾಯಕರ ಮಾರಾಮಾರಿ

ಕೋಲಾರ: ನಗರ ಹೊರವಲಯದ ನಂದಿನಿ ಪ್ಯಾಲೇಸ್‌ನಲ್ಲಿ ಶನಿವಾರ ಜಿಲ್ಲಾ ಕಾಂಗ್ರೆಸ್ ಉಸ್ತುವಾರಿ ಎಂ.ನಾರಾಯಣಸ್ವಾಮಿ ನೇತೃತ್ವದಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಸಭೆಯಲ್ಲಿ ಗಲಾಟೆ ನಡೆಯಿತು. ರಮೇಶ್ ಕುಮಾರ್ ಅವರನ್ನು ಜಿಲ್ಲಾ ಕಾಂಗ್ರೆಸ್‌ನಿಂದ ನಿರ್ಲಕ್ಷಿಸಲಾಗುತ್ತಿದೆ, ಬ್ಯಾನರ್‌ನಲ್ಲಿ ಅವರ ಫೋಟೊ ಕೂಡ ಹಾಕಿಲ್ಲ ಎಂದು ರಮೇಶ್ ಕುಮಾರ್ ಬೆಂಬಲಿಗರು ಆಕ್ಷೇಪ ತೆಗೆದರು. ಆಗ ಮಾತಿನ ಚಕಮಕಿ, ನೂಕಾಟ, ತಳ್ಳಾಟ ನಡೆಯಿತು.

ನಾನು ಡಿನೋಟಿಫಿಕೇಷನ್ ಮಾಡಿದ್ದೇ ಬೇರೆ, ಸಿದ್ದರಾಮಯ್ಯ ಡಿನೋಟಿಫಿಕೇಷನ್ ಬೇರೆ

ಸಮಯ ಬಂದಾಗ ರಾಜೀನಾಮೆ ನೀಡುವೆ

ಬೆಂಗಳೂರು: ನಾನು ಯಾವುದೇ ತಪ್ಪು ಮಾಡಿಲ್ಲ. ಆದ್ದರಿಂದ ರಾಜೀನಾಮೆ ನೀಡುವು ದಿಲ್ಲ. ಅಂತಹ ಸಮಯ ಬಂದಾಗ ರಾಜೀನಾಮೆ ನೀಡುವೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಕಾಂಗ್ರೆಸಿಗರಿಗೆ ತಿರುಗೇಟು ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಿನೋಟಿಫಿಕೇಷನ್ ಮಾಡುವ ಅಧಿಕಾರ ಸರಕಾರಕ್ಕೆ, ಮುಖ್ಯಮಂತ್ರಿಗೆ ಇದೆ. ಡಿನೋಟಿಫಿಕೇಷನ್ ತಪ್ಪಲ್ಲ. ಆದರೆ ಅದರಿಂದ ಯಾರಿಗೆ ಲಾಭವಾಗಿದೆ ಎಂಬುದು ಮುಖ್ಯ. ನಾನು ಡಿನೋಟಿಫಿಕೇಷನ್ ಮಾಡಿದ್ದೇ ಬೇರೆ, ಸಿದ್ದರಾಮಯ್ಯ ಅವರ ಡಿನೋಟಿಫಿಕೇಷನ್ ಬೇರೆ. ಕೆಸರೆ ಗ್ರಾಮದ ಪ್ರಕರಣ ಮತ್ತು ಗಂಗೇನಹಳ್ಳಿ ಪ್ರಕರಣದ ಮಧ್ಯೆ ಬಹಳ ವ್ಯತ್ಯಾಸವಿದೆ. ಆದ್ದರಿಂದ ನಾನು ಈಗ ರಾಜೀನಾಮೆ ನೀಡುವ ಅವಶ್ಯಕತೆ ಇಲ್ಲ. ನಾನು ಸಿದ್ದರಾಮಯ್ಯರಂತೆ ಭಂಡ ಅಲ್ಲ. ಅಂತಹ ಸಮಯ ಬಂದರೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದರು.

ಭ್ರಷ್ಟ ಅಧಿಕಾರಿಯಿಂದ ತನಿಖೆ: ಮಾಹಿತಿ ಸೋರಿಕೆ ಸಂಬಂಧ ರಾಜಭವನ ಸಚಿವಾಲಯದ

ಪಾತ್ರದ ಕುರಿತು ತನಿಖೆ ನಡೆಸಲು ಅನುಮತಿ ನೀಡಿ ಎಂದು ಪತ್ರ ಬರೆದಿರುವ ಲೋಕಾಯುಕ್ತ ವಿಶೇಷ ತನಿಖಾ ತಂಡದ ಐಜಿಪಿ ಎಂ. ಚಂದ್ರಶೇಖರ್ ರಾಜ್ಯದಲ್ಲಿ ಕರ್ತವ್ಯದಲ್ಲಿರುವುದೇ ಕಾನೂನುಬಾಹಿರ. ಈ ವ್ಯಕ್ತಿ ಹಿಮಾಚಲ ಪ್ರದೇಶ ಕೇಡರ್‌ನ ಅಧಿಕಾರಿ. ನಿಯೋಜನೆ ಮೇರೆಗೆ ಇಲ್ಲಿಗೆ ಬಂದವನು, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಇಲ್ಲೇ ಉಳಿದುಕೊಂಡಿದ್ದಾನೆ. ಈತ ಮಹಾಭ್ರಷ್ಟ. ಈ ಹಿಂದೆ ಪಿಎಸ್‌ಐ ಭೂ ಹಗರಣದಲ್ಲಿ ಉದ್ಯಮಿಗಳು, ಜನ ಸಾಮಾನ್ಯರು ಮತ್ತು ಪೊಲೀಸ್ ಅಧಿಕಾರಿಗಳಿಂದಲೇ ಹಣ ವಸೂಲಿ ಮಾಡಿದ್ದಾನೆ. ಈ ಸಂಬಂಧ ಆತನ ವಿರುದ್ಧದ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ. ಅಂತಹ ವ್ಯಕ್ತಿ ರಾಜಭವನದಲ್ಲಿ ತನಿಖೆ ನಡೆಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಪ್ರತಿಕ್ರಿಯೆ ನೀಡುವ ಅವಶ್ಯಕತೆ ಇಲ್ಲ: ಮುಖ್ಯಮಂತ್ರಿ ಹಾಗೂ ರಾಜ್ಯ ಸರಕಾರದ ವಿರುದ್ಧ ಗಂಭೀರ ಆರೋಪ ಮಾಡಿರುವ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ಕುಮಾರಸ್ವಾಮಿಯವರ ಎಲ್ಲ ಹೇಳಿಕೆಗಳು ಸುಳ್ಳಿನಿಂದ ಕೂಡಿದ್ದು, ಅವರ ಎಲ್ಲ ಮಾತಿಗೆ ಪ್ರತಿಕ್ರಿಯೆ ನೀಡುವುದು ಅವಶ್ಯಕತೆಯಿಲ್ಲ ಎಂದರು. ಬಿಜೆಪಿಯಲ್ಲಿಯೇ ಭ್ರಷ್ಟಾಚಾರಿಗಳಿದ್ದು, ಮೋದಿಯವರು ಅವರ ಮೇಲೆ ಮೊದಲು ಕ್ರಮ ಕೈಗೊಳ್ಳಬೇಕು. ಮೋದಿ ಹರಿಯಾಣದ ಪ್ರಚಾರ ಭಾಷಣದಲ್ಲಿ ಮುಡಾ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಆದರೆ ಮೋದಿಯವರು ಮಣಿಪುರದ ಹಿಂಸೆಯ ಬಗ್ಗೆ ಮಾತನಾಡುವುದಿಲ್ಲ. ಅಲ್ಲಿಗೆ ಭೇಟಿಯೂ ನೀಡಲಿಲ್ಲವೇಕೆ? ಎಂದು ಪ್ರಶ್ನಿಸಿದರು.

ಚಂದ್ರಶೇಖರ್ ವಿರುದ್ಧ ಎಚ್‌ಡಿಕೆ ಆರೋಪಗಳೇನು?

- ರಾಜ್ಯಪಾಲರ ರಹಸ್ಯ ಪತ್ರ ಖಾಸಗಿ ವಾಹಿನಿಗೆ ಸೋರಿಕೆ ಮಾಡಿದ್ದಾರೆ
- ಖಾಸಗಿ ಪಡೆ ಕಟ್ಟಿಕೊಂಡು ಅಧೀನ ಅಧಿಕಾರಿಗಳು, ಬಿಲ್ಡರ್‌ಗಳ ಸುಲಿಗೆ
- 2,000ಕ್ಕೂ ಹೆಚ್ಚು ಎಫ್‌ಐಆರ್ ಇರುವ ವ್ಯಕ್ತಿ ಜತೆ ಸೇರಿ ಹಣ ವಸೂಲಿ
- ರಾಜಕಾಲುವೆ ಮೇಲೆ 38 ಮಹಡಿ ನಿರ್ಮಾಣ
- ಅಧೀನ ಅಧಿಕಾರಿಗೆ ₹20 ಕೋಟಿ ಕೊಡುವಂತೆ ಬೇಡಿಕೆ

ಕುಮಾರಸ್ವಾಮಿಯವರು ತಮ್ಮ ಬಳಿಯಿರುವ ದಾಖಲೆಗಳನ್ನು ಬಿಡುಗಡೆ ಮಾಡಿದರೆ ಕಾಂಗ್ರೆಸ್ ಸರಕಾರದ ಏಳು ಜನ ಮಂತ್ರಿಗಳು ರಾಜೀನಾಮೆ ನೀಡಬೇಕಾಗುತ್ತದೆ ಎಂದಿದ್ದಾರೆ. ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ. ಬಿಡುಗಡೆ ಮಾಡಲು ಬೇಡ ಎಂದವರು ಯಾರು? - **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಹಿಜ್ಬುಲ್ಲಾ ಪ್ರಧಾನ ಕಚೇರಿ ಮೇಲೆ ಇಸ್ರೇಲ್ ಸತತ ರಾಕೆಟ್ ದಾಳಿ

ಹಿಜ್ಬುಲ್ಲಾ ಮುಖ್ಯಸ್ಥನ ಹತ್ಯೆ

ಟೆಲ್‌ಅವಿವ್: ಇಸ್ರೇಲ್ ಸೇನಾಪಡೆ ಬೈರೂತ್‌ನಲ್ಲಿ ಶುಕ್ರವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಹಿಜ್ಬುಲ್ಲಾ ಉಗ್ರ ಸಂಘಟನೆಯ ನಾಯಕ ಹಸನ್ ನಸ್ರಲ್ಲಾನನ್ನು ಕೊಂದಿದೆ ಎಂದು ಸೇನೆಯ ವಕ್ತಾರರು ತಿಳಿಸಿದ್ದಾರೆ.

ಬೈರೂತ್ ನಗರದ ದಕ್ಷಿಣ ಉಪನಗರದಲ್ಲಿ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ನಮ್ಮ ಸಂಘಟನೆಯ ಮುಖ್ಯಸ್ಥ ಹಾಗೂ ಸಂಸ್ಥಾಪಕ ಹಸನ್ ನಸ್ರಲ್ಲಾ ಮೃತಪಟ್ಟಿದ್ದಾರೆ ಎಂದು ಹಿಜ್ಬುಲ್ಲಾ ಸಂಘಟನೆ ಕೂಡ ಖಚಿತಪಡಿಸಿದೆ. ಅವರು (ಹಸನ್ ನಸ್ರಲ್ಲಾ) ಹುತಾತ್ಮರಾಗಿದ್ದಾರೆ. ಪ್ಯಾಲೇಸ್ತೀನ್ ಪರ ನಮ್ಮ ಶತ್ರುಗಳ ವಿರುದ್ಧ ಯುದ್ಧ ಮುಂದುವರಿಸುತ್ತೇವೆ ಎಂದು ಹಿಜ್ಬುಲ್ಲಾ ವಕ್ತಾರರು ಅಂತರ ರಾಷ್ಟ್ರೀಯ ಸುದ್ದಿ ಸಂಸ್ಥೆಗಳಿಗೆ ಖಚಿತಪಡಿಸಿದ್ದಾರೆ.

ಹಿಜ್ಬುಲ್ಲಾ ಮುಖ್ಯಸ್ಥನ ಸಾವಿನ ಬೆನ್ನಲ್ಲೇ ಮುಸ್ಲಿಂ ರಾಷ್ಟ್ರಗಳಿಂದ ತುರ್ತು ಸಭೆ ಕರೆಯಲಾಗಿದೆ. ಸೋಮವಾರದಿಂದ ಈವರೆಗೆ ಲೆಬನಾನ್‌ನಲ್ಲಿ ಇಸ್ರೇಲ್ ದಾಳಿಗೆ ಮಕ್ಕಳು ಸೇರಿದಂತೆ 720 ಜನರು ಸಾವಿಗೀಡಾಗಿದ್ದಾರೆ. ಇಸ್ರೇಲ್‌ನ ನೇರ ಎಚ್ಚರಿಕೆ ಸಂದೇಶ ಮತ್ತು ರಾಕೆಟ್ ದಾಳಿ ತೀವ್ರಗೊಳ್ಳುತ್ತಿದ್ದು, ಲೆಬನಾನ್‌ನ ದಕ್ಷಿಣ ಭಾಗದಿಂದ ಈ ವಾರದಲ್ಲೇ 90 ಸಾವಿರಕ್ಕೂ ಅಧಿಕ ಜನರು ಮನೆ ತೊರೆದು ಬೇರೆ ನಗರಗಳಿಗೆ ಸ್ಥಳಾಂತರ ಗೊಂಡಿದ್ದಾರೆ.

- ಶುಕ್ರವಾರದ ದಾಳಿಗೆ ಹಿಜ್ಬುಲ್ಲಾದ ಹಲವು ನಾಯಕರ ಸಾವು
- 'ಹೇಡಿ ಇಸ್ರೇಲ್' ಎಂದ ಹಮಾಸ್; ಇರಾಕ್ 3 ದಿನ ಶೋಕ
- 90 ಸಾವಿರಕ್ಕೂ ಅಧಿಕ ಜನರು ಮನೆ ತೊರೆದು ಬೇರೆ ನಗರಗಳಿಗೆ ಸ್ಥಳಾಂತರ

ಫನ್‌ತರಂಗ
- ರಘುಪತಿ ಶೃಂಗೇರಿ -

'ಪೌಡರ್' ಕನ್ನಡ ಚಲನಚಿತ್ರ ಚಿತ್ರಮಂದಿರದಲ್ಲಿ
ಸುದ್ದಿ

ಸಮಾಚಾರ ಸಣ್ಣದಲ್ಲ

ಸ್ನೇಹಿತರ ನಡುವೆ ಗಲಾಟೆ: ಒಬ್ಬನ ಕೊಲೆ

ನೆಲಮಂಗಲ: ಕಾರ್ಮಿಕರ ನಡುವೆ ಹಣದ ವಿಚಾರದಲ್ಲಿ ಗಲಾಟೆ ನಡೆದು ಇಬ್ಬರು ಪರಸ್ಪರ ಬಡಿದಾಡಿಕೊಂಡು ಹಲ್ಲೆ ಮಾಡಿದ ಪರಿಣಾಮ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ, ಬೆಂಗಳೂರು ಹೊರವಲಯ ನೆಲಮಂಗಲ ತಾಲೂಕಿನ ಮಹಿಮಾಪುರ ಬಳಿಯಲ್ಲಿರುವ ಶೆಡ್ ಬಳಿ ನಡೆದಿದೆ. ತಮಿಳುನಾಡು ಮೂಲದ 40 ವರ್ಷದ ರಾಜೀವ್ ಗಾಂಧಿ ಪೆರುಮಾಳ್ ಕೊಲೆಯಾದ ವ್ಯಕ್ತಿ. ಮಹಿಮಾಪುರ ಬಳಿಯಿರುವ ಶೆಡ್ ನಲ್ಲಿ ಕಲ್ಲು ಕೆಲಸ ಮಾಡುತ್ತಿದ್ದರು. ಇಬ್ಬರ ನಡುವೆ ಹಣಕಾಸಿನ ವಿಚಾರದಲ್ಲಿ ಗಲಾಟೆ ನಡೆದಿದೆ, ತೀವ್ರ ರಕ್ತಸ್ರಾವದಿಂದ ರಾಜೀವ್ ಗಾಂಧಿ ಪೆರುಮಾಳ್ ನನ್ನು ಆಸ್ಪತ್ರೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಇನ್ನೂ ಆತನ ಸ್ನೇಹಿತ 85 ಸಾವಿರ ರುಪಾಯಿ ವಿಚಾರವಾಗಿ ಒಂದೇ ರೂಮಿನಲ್ಲಿದ್ದ ಇಬ್ಬರು ಸ್ನೇಹಿತರ ನಡುವೆ ಗಲಾಟೆ ನಡೆದಿದೆ ಎನ್ನಲಾಗಿದ್ದು, ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಎಸ್.ಪಿ. ಸಿ.ಕೆ.ಬಾಬಾ, ಎಎಸ್ಪಿ ನಾಗೇಶ್, ಡಿವೈಎಸ್ಪಿ ರವಿ, ಪಿಐ ನರೇಂದ್ರ, ಬಾಬು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆ: ಸಮಸ್ಯೆ ಪರಿಹರಿಸಿ

ಬೆಂಗಳೂರು: ಐಎಎಸ್, ಕೆಎಎಸ್ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳ ಸಮಸ್ಯೆಗಳನ್ನು ಸರಕಾರ ಬಗೆಹರಿಸುವತ್ತ ಗಮನ ಹರಿಸಬೇಕು ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ ವಿನಯ್ ಕುಮಾರ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುತ್ತಿರುವ ಅಭ್ಯರ್ಥಿಗಳು ಸಾಕಷ್ಟು ಸಮಸ್ಯೆ ಅನುಭವಿಸುತ್ತಿದ್ದು, ಇದಕ್ಕೆ ಸರಕಾರ ಸ್ಪಂದಿಸಬೇಕು. ಮುಖ್ಯಮಂತ್ರಿಗಳು ಘೋಷಿಸಿದ ಮರುಪರೀಕ್ಷೆಯ ಬಗ್ಗೆ ಕೆಪಿಎಸ್‌ಸಿ ಅಧಿಕೃತವಾಗಿ ಘೋಷಿಸಿ ಖಾಯಂ ಕಾರ್ಯದರ್ಶಿ ನೇಮಿಸಬೇಕು. ಮರು ಪರೀಕ್ಷೆಯ ದಿನಾಂಕ ನಿಗದಿತ ಸಮಯದಲ್ಲಿ ತ್ವರಿತ ಬಿಡುಗಡೆ ಮಾಡಬೇ ಕಾಗಿದ್ದು, ಪರೀಕ್ಷೆಗಳ ವಾರ್ಷಿಕ ವೇಳಾಪಟ್ಟಿ ಕಾಲ ಕಾಲಕ್ಕೆ ಬಿಡುಗಡೆ ಮಾಡಬೇಕು. ಕನ್ನಡ ವ್ಯಾಕರಣಗಳಲ್ಲಿ ಲೋಪದೋಷವೆಸಗಿದ ಅಧಿಕಾರಿ ಗಳನ್ನು ಅಮಾನತುಗೊಳಿಸಿ ಪೂರ್ವಭಾವಿ ಪರೀಕ್ಷೆ ನಡೆದ 15 ದಿನದಲ್ಲಿ ಫಲಿತಾಂಶ ಘೋಷಿಸಬೇಕು ಎಂದರು.

ಸಕ್ಕರೆ ಕಾಯಿಲೆಗೆ ಚಿಕಿತ್ಸೆ ನೀಡಲು ಅಭಿಯಾನ

ಬೆಂಗಳೂರು: ಸಕ್ಕರೆ ಕಾಯಿಲೆ ಪತ್ತೆಗೆ ಮುಂದಾಗಿರುವ ಆರೋಗ್ಯ ಇಲಾಖೆ ಮನೆ ಮನೆ ಅಭಿಯಾನ ನಡೆಸಿ ಚಿಕಿತ್ಸೆ ನೀಡಲಾಗುತ್ತಿದೆ. ಸಕ್ಕರೆ ಕಾಯಿಲೆಗೆ ಶ್ರೀಮಂತರ ಕಾಯಿಲೆ ಎಂಬ ಹೆಸರು ಪಡೆದಿತ್ತು. ಆದರೆ ಇದೀಗ ಚಿತ್ರಣ ಬದಲಾಗಿದೆ. 10 ವಯಸ್ಸಿನ ಮಕ್ಕಳನ್ನೂ ಡಯಾಬಿಟಿಸ್ ಬಾಧಿಸುತ್ತಿದೆ. ಯುವಕರು ಡಯಾಬಿಟಿಸ್ ರೋಗಿಗಳಾಗುತ್ತಿದ್ದಾರೆ. ಬೆಂಗಳೂರು ಡಯಾಬಿಟಿಕ್ ನಗರ ಎಂಬ ಹೆಸರು ಪಡೆದುಕೊಳ್ಳುತ್ತಿದೆ. ಅರ್ಧಕ್ಕರ್ಧ ಬೆಂಗಳೂರಿಗರು ಈಗ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ. ಆರೋಗ್ಯ ಇಲಾಖೆ ಮನೆ ಮನೆ ಅಭಿಯಾನ ನಡೆಸಿ, ಚಿಕಿತ್ಸೆ ಕೊಡಲು ನಿರ್ಧರಿಸಿದೆ. ಬಿಬಿಎಂಪಿ ಈ ಹಿಂದೆ ಕೂಡ ಸಮೀಕ್ಷೆ ನಡೆಸಿತ್ತು. ಆ ಪ್ರಕಾರ ಬೆಂಗಳೂರಿನ ಶೇ 50.86 ರಷ್ಟು ಜನರು ಸಕ್ಕರೆ ಖಾಯಿಲೆಗೆ ತುತ್ತಾಗಿರುವುದು ಪತ್ತೆಯಾಗಿತ್ತು. ಇದೀಗ ಬಿಬಿಎಂಪಿಯ ನಂತರ ಆರೋಗ್ಯ ಇಲಾಖೆ ಮನೆ ಮನೆ ಸಮೀಕ್ಷೆಗೆ ಮುಂದಾಗಿದೆ. ಮನೆಯಲ್ಲಿ ಎಷ್ಟು ಜನರಿಗೆ ಸಕ್ಕರೆ ಕಾಯಿಲೆ ಇದೆ ಎಂದು ಪತ್ತೆ ಹಚ್ಚಲು ಮುಂದಾಗಿದೆ. ಕರೋನಾ ನಂತರದಲ್ಲಿ ಡಯಾಬಿಟಿಸ್ ಪ್ರಕರಣಗಳು ಹೆಚ್ಚಳಗೊಂಡಿವೆ. ಕರೋನಾ 1 ಮತ್ತು 2ನೇ ಅಲೆ ನಂತರ ಸಕ್ಕರೆ ಖಾಯಿಲೆ ಸಾಕಷ್ಟು ಜನರನ್ನು ಬಾಧಿಸಿದೆ. ಚಿಕ್ಕ ಮಕ್ಕಳಿಗೂ ಟೈಪ್ 1 ಮಧುಮೇಹ ಕಾಡುತ್ತಿದೆ. ಈ ಎಲ್ಲಾ ಕಾರಣಗಳಿಂದ ಸಕ್ಕರೆ ಕಾಯಿಲೆಗೆ ಬ್ರೇಕ್ ಹಾಕಲು ಆರೋಗ್ಯ ಇಲಾಖೆ ಮುಂದಾಗಿದೆ.

ದಾಳಿ ಮಾಡಿಸಿ ಹೈಡ್ರಾಮಾ: ಯುವತಿ ಸೇರಿ ನಾಲ್ವರ ಸೆರೆ

ಖಾಸಗಿ ಫೋಟೋ, ವಿಡಿಯೋ ಡಿಲೀಟ್‌ಗಾಗಿ ಸುಪಾರಿ | ಹಳೇ ಪ್ರೇಮಿಯ ಕತೆ ಹೇಳಿ ಬ್ರೇಕಪ್ ಆದ ಹೊಸ ಜೋಡಿ

ಬೆಂಗಳೂರು: ಕೇವಲ ಮೊಬೈಲ್‌ಗಾಗಿ ತನ್ನ ಪ್ರಿಯಕರನ ಮೇಲೆ ರಾಬರಿ ಮಾಡಿಸಿದ್ದ ಸಾಫ್ಟ್‌ವೇರ್ ಯುವತಿ ಸೇರಿ ಐವರು ಆರೋಪಿಗಳನ್ನು ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡು ಮೂಲದ ಬೆಂಗಳೂರಿನಲ್ಲಿ ಕೆಲಸ ಮಾಡುವ ಟೆಕ್ಕಿ ಶ್ರುತಿ ಸೇರಿ ಆರೋಪಿಗಳಾದ ಸುರೇಶ್ ಅಂಡ್ ಗ್ಯಾಂಗ್ ಅನ್ನು ಪೊಲೀಸರು ಬಂಧಿಸಿದ್ದಾರೆ. ಒಡಿಶಾ ಮೂಲದ ವಂಶಿಕೃಷ್ಣ ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾನೆ. ಶ್ರುತಿ ಹಾಗೂ ವಂಶಿಕೃಷ್ಣ ಇಬ್ಬರು ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಸರ್ಜಾಪುರದ ಐಟಿ ಕಂಪನಿ ಒಂದರಲ್ಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಇಬ್ಬರ ಮಧ್ಯೆ ಪರಿಚಯ ಸ್ನೇಹಕ್ಕೆ ತಿರುಗಿ ಪ್ರೀತಿಯಾಗಿ ಮಾರ್ಪಟ್ಟಿತ್ತು. ಮದುವೆ ಸಿದ್ದತೆಗಾಗಿ ಯುವಕ ಎರಡು ಮನೆಯವರಿಗೆ ಹೇಳಿದ್ದ. ಇನ್ನೇನು ಮದುವೆ ದಿನಾಂಕ ಗೊತ್ತು ಮಾಡಬೇಕು ಅಷ್ಟರಲ್ಲೇ ಪ್ರೀತಿ ಬ್ರೇಕ್ ಅಪ್ ಆಗಿದೆ. ಈ ಬ್ರೇಕ್ ಅಪ್‌ಗೂ ಬಲವಾದ ಕಾರಣವೂ ಇದೆ.

ಇಬ್ಬರ ಪ್ರೀತಿ ಬ್ರೇಕ್ ಅಪ್ ಆಗಲು ಮುಖ್ಯ ಕಾರಣ ಯುವತಿಯ ಹಳೇ ಪ್ರೇಮಿ. ಹಾಗಂದು ಹಳೆಯ ಪ್ರೇಮಿನೇ ಇಲ್ಲಿ ಬಂದು ಯಾರಿಗೂ ಏನು ಮಾಡಿಲ್ಲ, ರಾಬರೀನೂ ಮಾಡಿಲ್ಲ. ಹಳೆಯದನ್ನು ಏನನ್ನೂ ಮುಚ್ಚಿಡಬಾರದು ಎಂದು ತನ್ನ ಹಳೇ ಪ್ರೇಮಿ ಕುರಿತು ಯುವತಿ, ವಂಶಿ ಬಳಿ ಎಳೆ ಎಳೆಯಾಗಿ ಎಲ್ಲವನ್ನೂ ಬಿಚ್ಚಿಟ್ಟಿದ್ದಾಳೆ. ಇದರಿಂದ ಕೋಪ, ಬೇಸರ ಮಾಡಿಕೊಂಡ ವಂಶಿ, ತನ್ನ ಮನೆಯವರಿಗೆ ಇದನ್ನೆಲ್ಲ ತಿಳಿಸಿದ್ದಾನೆ. ಆ ಮೇಲೆ ಇಬ್ಬರು ಸಂಬಂಧದಲ್ಲಿ ಇರುವುದು ಬೇಡ, ಬೇರೆ ಬೇರೆಯಾಗೋಣ ಎಂದು ಯುವತಿಗೆ ತಿಳಿಸಿದ್ದಾನೆ. ಇದರಿಂದ ಇಬ್ಬರು ಒಪ್ಪಿಕೊಂಡೇ ಬ್ರೇಕ್ ಅಪ್ ಮಾಡಿಕೊಂಡು ದೂರವಾಗಿದ್ದರು. ಆದರೆ ವಂಶಿ ಮೊಬೈಲ್‌ನಲ್ಲಿ ಇಬ್ಬರ ನಡುವಿನ ಕೆಲವು ಖಾಸಗಿ ಚಿತ್ರಗಳು, ವಿಡಿಯೋಗಳು ಉಳಿದುಕೊಂಡಿದ್ದವು. ಆ ಚಿತ್ರ, ವಿಡಿಯೋಗಳು ಭವಿಷ್ಯದಲ್ಲಿ ತನಗೆ ತೊಂದರೆ ಆಗಬಹುದೆಂದು ಅವುಗಳನ್ನು ಡಿಲೀಟ್ ಮಾಡುವಂತೆ ಯುವತಿ ಹಲವು ಬಾರಿ ಹೇಳಿದ್ದಳು. ಆದರೆ ವಂಶಿ ಡಿಲೀಟ್ ಮಾಡಿರಲಿಲ್ಲ. ಅದಕ್ಕೆ ಏನು ಮಾಡಬೇಕು ಎಂದು ಗೊತ್ತಾಗದೆ ಯುವತಿ ಸುಮ್ಮನಿದ್ದು ಮನಸ್ಸಿನಲ್ಲೇ ಯೋಜನೆ ರೂಪಿಸುತ್ತಿದ್ದಳು.

ಇಬ್ಬರ ನಡುವೆ ಬ್ರೇಕ್ ಆದ ಬಳಿಕ ಯುವತಿ ತನ್ನ ಮನೆಗೆ ಪೈಂಟ್ ಮಾಡಲು ಕರೆಸಿಕೊಂಡಿದ್ದ ಯುವಕರಾದ ಸುರೇಶ್ ಆ್ಯಂಡ್ ಗ್ಯಾಂಗ್ ಅನ್ನ ಪರಿಚಯ ಮಾಡಿಕೊಂಡಿದ್ದಳು. ಈ ಯುವಕರನ್ನು ಪರಿಚಯ ಮಾಡಿಕೊಂಡ ಮೇಲೆ ತನ್ನ ಪ್ರಿಯಕರನ ಮೊಬೈಲ್ ಕಸಿದುಕೊಂಡು ಬಂದರೆ 1.50 ಲಕ್ಷ ರು. ದುಡ್ಡು ಕೊಡುವುದಾಗಿ ಹೇಳಿದ್ದಳು. ಅದರಂತೆ ಯುವಕರು ಇದಕ್ಕೆ ಒಪ್ಪಿಗೆ ಸೂಚಿಸಿದ್ದರು.

ಬಂಧಿತ ಆರೋಪಿಗಳು.

ಮೊಬೈಲ್ ಕಸಿದುಕೊಂಡು ಆರೋಪಿಗಳು ಪರಾರಿ: ಅಂದುಕೊಂಡಂತೆ ಸಂಚು ರೂಪುಗೊಂಡಿತ್ತು. ತನ್ನ ಯೋಜನೆಯಂತೆ ಸೆ.20 ರಂದು ಶ್ರುತಿ ವಂಶಿಗೆ ಕರೆ ಮಾಡಿ ಬರಲು ಹೇಳಿದ್ದಳು. ಹೀಗಾಗಿ ಬೆಳ್ಳಂದೂರಿನ ಭೋಗನಹಳ್ಳಿ ರಸ್ತೆಯಲ್ಲಿ ವಂಶಿ ಬೈಕ್‌ನಲ್ಲಿ ಬರುವಾಗ ಸುರೇಶ್ ಆ್ಯಂಡ್ ಗ್ಯಾಂಗ್ ಸ್ವಿಫ್ಟ್ ಡಿಸೈರ್ ಕಾರಿನಲ್ಲಿ ಬಂದು ಡಿಕ್ಕಿ ಮಾಡಿದ್ದರು. ಬಳಿಕ ಗಲಾಟೆ ತೆಗೆದು ತಲೆಗೆ ಹಾಗೂ ಮುಖಕ್ಕೆ ಪಂಚ್ ಮಾಡಿ, ವಂಶಿಯ ಮೊಬೈಲ್ ಕಸಿದುಕೊಂಡು ಆರೋಪಿಗಳು ಪರಾರಿಯಾಗಿದ್ದರು. ಅನುಮಾನ ಬರಬಾರದೆಂದು ಯುವತಿಯ ಫೋನ್ ಕಸಿದುಕೊಂಡು ಹೋಗಿದ್ದರು. ಈ ಬಗ್ಗೆ ಪೊಲೀಸರಿಗೆ ದೂರು ಕೊಡುವುದು ಬೇಡ ಎಂದು ಯುವತಿ ವಂಶಿಗೆ ಹೇಳಿದ್ದಳು. ಸುರೇಶ್ ಅಂಡ್ ಗ್ಯಾಂಗ್‌ಗೆ ಯುವತಿ ಒಂದೂವರೆ ಲಕ್ಷ ರು. ಕೊಟ್ಟು ಎರಡು ಮೊಬೈಲ್‌ಗಳನ್ನು ಪಡೆದಳು. ಇದರಲ್ಲಿ ತನ್ನ ಮೊಬೈಲ್ ಬಿಟ್ಟು ಪ್ರಿಯಕರನ ಮೊಬೈಲ್ ಅನ್ನು ಒಡೆದು ಹಾಕಿದಳು. ದೂರು ಕೊಡುವುದು ಬೇಡ ಎಂದು ಯುವತಿ ಎಷ್ಟೇ ಯಾಮಾರಿಸಿ ಹೇಳಿದರೂ ಕೇಳದ ವಂಶಿ ಕೊನೆಗೆ ಕಾರು ನಂಬರ್ ಸಮೇತ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡುತ್ತಾನೆ. ದೂರಿನಂತೆ ಪೊಲೀಸರು ತನಿಖೆ ಮಾಡಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ಮಾಡಿದಾಗ ಹಿಂದೆ ನಡೆದ ಎಲ್ಲ ಮಾಹಿತಿ ಪೊಲೀಸರ ಮುಂದೆ ಬಾಯಿಬಿಟ್ಟಿದ್ದಾರೆ. ಆಗ ಪ್ರಿಯತಮೆ ಶ್ರುತಿ ವಿಲನ್ ಎನ್ನುವುದು ಪೊಲೀಸರಿಗೆ ಗೊತ್ತಾಗಿದೆ. ಪೊಲೀಸರು ಸಾಫ್ಟ್‌ವೇರ್ ಉದ್ಯೋಗಿ ಶ್ರುತಿಯನ್ನೂ ಬಂಧಿಸಿದ್ದಾರೆ.

ದೇಶಾದ್ಯಂತ 122 ಪ್ರಕರಣಗಳಲ್ಲಿ ಬೇಕಾಗಿದ್ದ 10 ಮಂದಿ ಸೈಬರ್ ವಂಚಕರ ಬಂಧನ

ಬೆಂಗಳೂರು ಉತ್ತರ ಸೈಬರ್ ಪೊಲೀಸರ ಕಾರ್ಯಾಚರಣೆ

ಬೆಂಗಳೂರು: ದೇಶಾದ್ಯಂತ 122 ಪ್ರಕರಣಗಳಲ್ಲಿ ಬೇಕಾಗಿದ್ದ 10 ಮಂದಿ ಸೈಬರ್ ವಂಚಕರನ್ನು ಬೆಂಗಳೂರು ಉತ್ತರ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳು ಆನ್‌ಲೈನ್ ಟಾಸ್ಕ್ ಫ್ರಾಡ್ ಅಥವಾ ಆನ್‌ಲೈನ್ ಉದ್ಯೋಗ ವಂಚನೆ ಜಾಲದ ಮೂಲಕ ಜನರನ್ನು ವಂಚಿಸುತ್ತಿದ್ದರು. ಈ ವಂಚನೆ ಜಾಲದ ಕಿಂಗ್‌ಪಿನ್‌ಗಳು ಚೀನಾದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. 10 ಆರೋಪಿಗಳ ಪೈಕಿ ಮೂವರನ್ನು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲುಕ್ ಔಟ್ ಸುತ್ತೋಲೆ (ಎಲ್‌ಒಸಿ) ಮೂಲಕ ಬಂಧಿಸಲಾಗಿದೆ. ಆರೋಪಿಗಳು ಪೀಣ್ಯದ ನೆಲಗದರನಹಳ್ಳಿಯಲ್ಲಿರುವ ಕಚೇರಿ ಜಾಗದಲ್ಲಿ ಚಟುವಟಿಕೆಗಳಲ್ಲಿ ನಿರತರಾಗಿದ್ದರು.

ಮಹಿಳೆಯೊಬ್ಬರು ಸುಮಾರು 25 ಲಕ್ಷ ರೂಪಾಯಿ ಕಳೆದುಕೊಂಡ ನಂತರ, ಜುಲೈ 3 ರಂದು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದಾರೆ. ಪೊಲೀಸರು ಬಂಧಿತರಿಂದ 72 ಮೊಬೈಲ್ ಫೋನ್‌ಗಳು, 182 ಡೆಬಿಟ್ ಕಾರ್ಡ್‌ಗಳು, ವಿವಿಧ ಟೆಲಿಕಾಂ ಆಪರೇಟರ್‌ಗಳ 133 ಸಿಮ್ ಕಾರ್ಡ್‌ಗಳು, 127 ಬ್ಯಾಂಕ್ ಪಾಸ್ ಬುಕ್‌ಗಳು ಮತ್ತು 1.74 ಲಕ್ಷ ರು. ನಗದು ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ಸಂತ್ರಸ್ತರಿಗೆ ವಂಚಿಸಲು ಬಳಸಿದ ಖಾತೆಗಳಲ್ಲಿದ್ದ 7.34 ಲಕ್ಷ ರು. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

122 ಪ್ರಕರಣಗಳಲ್ಲಿ ಬೇಕಾಗಿದ್ದರು...: ಬಂಧಿತ ಆರೋಪಿಗಳನ್ನು ಸೈಯದ್ ಯಾಹ್ಯಾ, ಉಮರ್ ಫಾರೂಕ್, ಮೊಹಮ್ಮದ್ ಮಾಹೀನ್, ಮೊಹಮ್ಮದ್ ಮುಝುಮ್ಮಿಲ್, ತೇಜಸ್, ಚೇತನ್, ವಾಸಿಂ, ಸೈಯದ್ ಜೈದ್, ಸಾಹಿ ಅಬ್ದುಲ್ ಅನನ್ ಮತ್ತು ಓಂ ಪ್ರಕಾಶ್ ಎಂದು ಗುರುತಿಸಲಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ಅಂಕಿಅಂಶಗಳ ಪ್ರಕಾರ, ಆರೋಪಿಗಳು 122 ಪ್ರಕರಣಗಳಲ್ಲಿ ಬೇಕಾಗಿದ್ದಾರೆ.

ಬೆಂಗಳೂರಿನಲ್ಲಿ ಬ್ಯಾಂಕ್ ಖಾತೆಗಳ ಮೂಲಕ ವಹಿವಾಟು ನಡೆದಿರುವುದನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ಈ ಖಾತೆಗಳ ವಿವರಗಳನ್ನು ಆಧರಿಸಿ, ಏಳು ಆರೋಪಿಗಳನ್ನು ಮೊದಲು ಆರ್‌ಟಿ ನಗರ ಬಳಿ ಬಂಧಿಸಲಾಯಿತು. ಅವರು ಚೀನಾದ ಕಿಂಗ್‌ಪಿನ್‌ಗಳ ಆಜ್ಞೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದರು. ಚೀನಾಕ್ಕೆ ತೆರಳಿದ್ದ ಇತರ ಮೂವರು ಆರೋಪಿಗಳು ಸೆಪ್ಟೆಂಬರ್ 15ರಂದು ವಾಪಸ್ ಬಂದಾಗ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದ್ದು, ಪೊಲೀಸರು ಎಲ್ಲ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಪೀಣ್ಯದಲ್ಲಿರುವ ಆರೋಪಿಗಳ ಕಚೇರಿ ಮೇಲೂ ಪೊಲೀಸರು ದಾಳಿ ನಡೆಸಿ ಕೆಲ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಸದ್ಯ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಗಳ ವಿರುದ್ಧ ಆಂಧ್ರಪ್ರದೇಶ, ಒಡಿಶಾ, ದೆಹಲಿ, ಗುಜರಾತ್, ತಮಿಳುನಾಡು ಮತ್ತಿತರ ರಾಜ್ಯಗಳಲ್ಲಿ ಕೂಡ ಪ್ರಕರಣಗಳು ದಾಖಲಾಗಿವೆ.

ಸಾಮಾಜಿಕ ಮಾಧ್ಯಮಗಳಲ್ಲಿ ವಂಚನೆ

ಆರೋಪಿಗಳು ಸಾಮಾಜಿಕ ಮಾಧ್ಯಮದ ಮೂಲಕ ಸಂತ್ರಸ್ತರನ್ನು ಸಂಪರ್ಕಿಸಿ, ಆನ್‌ಲೈನ್‌ನಲ್ಲಿ ನೀಡಿದ ಟಾಸ್ಕ್ ಪೂರ್ಣಗೊಳಿಸಿದರೆ ಹಣ ಪಾವತಿ ಮಾಡುವುದಾಗಿ ಆಮಿಷವೊಡ್ಡುತ್ತಿದ್ದರು. ಆಸಕ್ತರಾದ ಸಂತ್ರಸ್ತರನ್ನು ಆರೋಪಿಗಳು ರಚಿಸಿದ ಟೆಲಿಗ್ರಾಂ ಗುಂಪುಗಳಿಗೆ ಸೇರಿಸಲಾಗಿತ್ತು. ಆರೋಪಿಗಳು ಮೊದಲು ಐಷಾರಾಮಿ ಹೋಟೆಲ್‌ಗಳ ವಿಮರ್ಶೆಗಾಗಿ 150 ರಿಂದ 200 ರು. ನೀಡುವ ಮೂಲಕ ಸಂತ್ರಸ್ತರ ವಿಶ್ವಾಸ ಗಳಿಸುತ್ತಾರೆ. ಅವರನ್ನು ಬಲೆಗೆ ಬೀಳಿಸಲು ಹೆಚ್ಚುವರಿ ಬೋನಸ್ ಸಹ ನೀಡಿದ್ದಾರೆ. ನಂತರ, ಹೆಚ್ಚಿನ ಲಾಭಕ್ಕಾಗಿ ಕ್ರಿಪ್ಟೋಕರೆನ್ಸಿ ವ್ಯಾಪಾರದಲ್ಲಿ ಹೂಡಿಕೆ ಮಾಡಲು ಸಂತ್ರಸ್ತರ ಬಳಿ ಸೂಚಿಸಲಾಯಿತು. ಬಾಗಲಗುಂಟೆಯ ಟಿ ದಾಸರಹಳ್ಳಿ ನಿವಾಸಿ ಮಹಿಳೆ 25 ಲಕ್ಷ ರೂಪಾಯಿ ಕಳೆದುಕೊಂಡಿದ್ದು, ಪ್ರಕರಣ ದಾಖಲಿಸಿದ್ದಾರೆ.

ಮುನಿರತ್ನ ಮನೆ ಮೇಲೆ ಎಸ್‌ಐಟಿ ದಾಳಿ

ಬೆಂಗಳೂರು: ಅತ್ಯಾಚಾರ, ಜಾತಿ ನಿಂದನೆ ಹಾಗೂ ಗುತ್ತಿಗೆದಾರನಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಬಿಜೆಪಿ ಶಾಸಕ ಮುನಿರತ್ನ ಮನೆ ಮೇಲೆ ವಿಶೇಷ ತನಿಖಾ ತಂಡದ ಅಧಿಕಾರಿಗಳು ಶನಿವಾರ ಬೆಳಗ್ಗೆ ದಾಳಿ ನಡೆಸಿದರು.

ಬೆಂಗಳೂರಿನ ವೈಯಾಲಿಕಾವಲ್ ನಿವಾಸದ ಮೇಲೆ ಎಸ್‌ಐಟಿ ಎಸಿಪಿ ಕವಿತಾ ನೇತೃತ್ವದಲ್ಲಿ ದಾಳಿ ನಡೆಸಿದ ಅಧಿಕಾರಿಗಳ ತಂಡ ದಾಖಲೆಗಳ ಪರಿಶೀಲನೆ ನಡೆಸಿದೆ. ಸದ್ಯ ಮೂರು ಪ್ರಕರಣಗಳ ಸಂಬಂಧ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ವೈಯಾಲಿಕಾವಲ್ ನಿವಾಸ ಸೇರಿದಂತೆ ಒಟ್ಟು 15 ಕಡೆಗಳಲ್ಲಿ ಎಸ್‌ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎಫ್‌ಎಸ್‌ಎಲ್ ತಂಡದ ಜತೆಗೆ ಎಸ್‌ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಗುತ್ತಿಗೆದಾರ ಚಲುವರಾಜು ಅವರಿಗೆ ಜೀವ ಬೆದರಿಕೆ ಹಾಕಿ, ಜಾತಿ ನಿಂದನೆ ಮಾಡಿದ ಆರೋಪದಲ್ಲಿ ಮೊದಲು ಮುನಿರತ್ನ ಬಂಧನವಾಗಿತ್ತು. ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿ ಪರಪ್ಪನ ಅಗ್ರಹಾರ ಜೈಲು ಸೇರಿದ್ದ ಅವರು ನಂತರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಅದಾದ ಮರುದಿನವೇ ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದರು. ಗುತ್ತಿಗೆದಾರ ಚಲುವರಾಜು ಎಂಬವರು ಶಾಸಕ ಮುನಿರತ್ನ ನನಗೆ ಕೊಲೆ ಬೆದರಿಕೆ, ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದಗೆ ದೂರು ನೀಡಿದ್ದರು. ಮತ್ತೊಂದು ಪ್ರಕರಣದಲ್ಲಿ ಮಹಿಳೆಯೊಬ್ಬರು ಮುನಿರತ್ ತಮ್ಮ ಮೇಲೆ ಅತ್ಯಾಚಾರ ಎಸಗಿ ಬ್ಲ್ಯಾಕ್ ಮೇಲ್ ಮಾಡಿದ್ದಾರೆ. ಹನಿಟ್ರ್ಯಾಪ್ ಕೂಡ ಮಾಡಿಸಿದ್ದಾರೆ ಎಂದು ಕಗ್ಗಲಿಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಮನವಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮ ಎತ್ತಿ ಹಿಡಿದಿದ್ದ ಹೈಕೋರ್ಟ್ ಆದೇಶವನ್ನು 'ರಾಜಕೀಯ ತೀರ್ಪು' ಎಂದು ವ್ಯಾಖ್ಯಾನಿಸಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಸಚಿವ ಜಮೀರ್ ಅಹ್ಮದ್ ಖಾನ್ ನ್ಯಾಯಾಂಗ ನಿಂದನೆ ಎಸಗಿದ್ದು, ಅವರ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಅನುಮತಿ ನೀಡಬೇಕು ಎಂದು ಕೋರಿ ರಾಜ್ಯ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಅವರಿಗೆ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಪತ್ರ ಬರೆದಿದ್ದಾರೆ.

ಚಾಮರಾಜಪೇಟೆ ಕಾಂಗ್ರೆಸ್ ಶಾಸಕರಾಗಿದ್ದ ಜಮೀರ್ ಅಹ್ಮದ್ ಖಾನ್ ವಿರುದ್ಧ ಕ್ರಿಮಿನಲ್ ಪ್ರಕ್ರಿಯೆ ಆರಂಭಿಸಲು ನ್ಯಾಯಾಂಗ ನಿಂದನೆ ಕಾಯಿದೆ 1971 ಸೆಕ್ಷನ್ 15(ಅ)(ಬಿ) ಅಡಿ ಒಪ್ಪಿಗೆ ನೀಡುವಂತೆ ಅಡ್ವೊಕೇಟ್ ಜನರಲ್‌ಗೆ ಮೂಲ ದಾವೆಯಲ್ಲಿ ಪ್ರತಿವಾದಿ ಆಗಿರುವ ಅಬ್ರಹಾಂ ಮನವಿ ಮಾಡಿದ್ದಾರೆ.

ಅಬ್ರಹಾಂ ಪತ್ರದಲ್ಲಿ ಏನಿದೆ?: ಸೆಪ್ಟೆಂಬರ್ 26ರಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸುವಾಗ ಜಮೀರ್ ಅವರು ಹೈಕೋರ್ಟ್ ತೀರ್ಪನ್ನು ರಾಜಕೀಯ ತೀರ್ಪು ಎಂದು ವ್ಯಾಖ್ಯಾನಿಸಿದ್ದಾರೆ. ಈ ಮೂಲಕ ಉದ್ದೇಶಪೂರ್ವಕವಾಗಿ ಜಮೀರ್ ಅವರು ನ್ಯಾಯಾಂಗದ ಘನತೆಗೆ ಚ್ಯುತಿ ಉಂಟು ಮಾಡಿದ್ದಾರೆ. ಅಲ್ಲದೇ, ಸಾರ್ವಜನಿಕರ ದೃಷ್ಟಿಯಲ್ಲಿ ನ್ಯಾಯಾಂಗದ ಘನತೆಗೆ ಧಕ್ಕೆ ಉಂಟು ಮಾಡಿದ್ದಾರೆ. ಈ ಸಂಬಂಧ ಜಮೀರ್ ಅವರು ಮಾಧ್ಯಮಗಳಿಗೆ ನೀಡಿರುವ ಪ್ರತಿಕ್ರಿಯೆ ಸಿಡಿಯಲ್ಲಿ ಅಡಕಗೊಳಿಸಲಾಗಿದೆ ಎಂದು ಅಬ್ರಹಾಂ ಪತ್ರದಲ್ಲಿ ವಿವರಿಸಿದ್ದಾರೆ.

ಆ ಮೂಲಕ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಪ್ರಾಮಾಣಿಕತೆಗೆ ಮಸಿ ಬಳಿಯುವ ಕೆಲಸ ಮಾಡಿದ್ದು, ಸಾರ್ವಜನಿಕರ ದೃಷ್ಟಿಯಲ್ಲಿ ಹೈಕೋರ್ಟ್ ಅನ್ನು ನಕಾರಾತ್ಮಕವಾಗಿ ಬಿಂಬಿಸುವ ಯತ್ನ ಮಾಡಿದ್ದಾರೆ. ನ್ಯಾಯಾಂಗ ನಿಂದನೆ ಕಾಯಿದೆಯ ಉದ್ದೇಶ ನ್ಯಾಯದಾನ ಮಾಡುವ ನ್ಯಾಯಾಲಯದ ಘನತೆಯನ್ನು ಎತ್ತಿ ಹಿಡಿಯುವುದಷ್ಟೇ ಅಲ್ಲ, ತೀರ್ಪು ನೀಡುವ ನ್ಯಾಯಮೂರ್ತಿಗಳ ಪ್ರಾಮಾಣಿಕತೆ, ಪಾವಿತ್ರ್ಯತೆ ಎತ್ತಿ ಹಿಡಿಯುವುದೂ ಆಗಿದೆ ಎಂದು ಪತ್ರದಲ್ಲಿ ಕೋರಿದ್ದಾರೆ.

ಕಾನೂನು ಪದವಿ ಮರು ಮೌಲ್ಯಮಾಪನ

ತಾರತಮ್ಯ ಆಗದಂತೆ ಅಂಕ ನೀಡಲು ಹೈಕೋರ್ಟ್ ಆದೇಶ

ಬೆಂಗಳೂರು: ಕಾನೂನು ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮರು ಮೌಲ್ಯಮಾಪನ ಮತ್ತು ಸವಾಲಿನ ಮೌಲ್ಯಮಾಪನ (ಚಾಲೆಂಜಿಂಗ್ ವ್ಯಾಲ್ಯುವೇಷನ್)ಅಂಕಗಳ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಆಗದಂತೆ ಕ್ರಮ ವಹಿಸಲು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಹೈಕೋರ್ಟ್ ಸುದ್ದಿಗಳು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಪರೀಕ್ಷಾ ಸುಗ್ರೀವಾಜ್ಞೆ 2014 ಅನ್ನು ರದ್ದು ಮಾಡಬೇಕು ಮತ್ತು ಸಂವಿಧಾನ ಕಾನೂನು-1 ವಿಷಯದಲ್ಲಿ ಒಂದು ಅಂಕ ಮತ್ತು ಅಪರಾಧ ಕಾನೂನು-1 ವಿಷಯದಲ್ಲಿ ಮೂರು ಅಂಕಗಳನ್ನು ಮಂಜೂರು ಮಾಡುವಂತೆ ಕೋರಿ ಬೆಂಗಳೂರಿನ ಬಿಎಂಎಸ್ ಕಾಲೇಜ್ ಆಫ್ ಲಾ ಮೊದಲ ವರ್ಷದ ಕಾನೂನು ಪದವಿ ಅಧ್ಯಯನ ಮಾಡುತ್ತಿರುವ ಚಿತ್ರದುರ್ಗದ ಯಲಗಟ್ಟೆ ಗೊಲ್ಲರಹಟ್ಟಿ ನಿವಾಸಿ ಜೆ.ಅರ್ಪಿತಾ ಅರ್ಜಿ ಸಲ್ಲಿಸಿದ್ದರು.

ನ್ಯಾಯಪೀಠ ಹೇಳಿದ್ದೇನು?: ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಮರು ಮೌಲ್ಯಮಾಪನಕ್ಕಾಗಿ (500) ಅರ್ಜಿ ಸಲ್ಲಿಸುವವರಿಗೆ ಶೇ. 5ರಷ್ಟು ಮತ್ತು ಸವಾಲಿನ ಮೌಲ್ಯಮಾಪನಕ್ಕೆ (2100) ಅರ್ಜಿ ಸಲ್ಲಿಸುವವರಿಗೆ ಶೇ. 20ರ ವರೆಗೂ ಅಂಕ ನೀಡುವ ಸಂಬಂಧದ ತಾರತಮ್ಯ ತೆಗೆದು ಹಾಕಬೇಕು. ಮರು ಮೌಲ್ಯಮಾಪನದಲ್ಲಿ ಪಡೆದುಕೊಂಡ ಸಂಪೂರ್ಣ ಅಂಕಗಳನ್ನು ಮಂಜೂರು ಮಾಡಬೇಕು ಎಂದು ನ್ಯಾಯಪೀಠ ಹೇಳಿದೆ.

ಜತೆಗೆ, ವಿದ್ಯಾರ್ಥಿಗಳಲ್ಲಿನ ತಾರತಮ್ಯಕ್ಕೆ ಕಾರಣವಾಗಿರುವ ರಾಜ್ಯ ಕಾನೂನು ವಿಶ್ವವಿದ್ಯಾಲಯ ಪರೀಕ್ಷಾ ಅಧಿಶಾಸನಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ಮುಂದಿನ ಎರಡು ವಾರಗಳಲ್ಲಿ ತಿದ್ದುಪಡಿ ಮಾಡಬೇಕು ಎಂದು ವಿಶ್ವವಿದ್ಯಾಲಯಕ್ಕೆ ನ್ಯಾಯಪೀಠ ನಿರ್ದೇಶನ ನೀಡಿ ಆದೇಶಿಸಿದೆ.

AFFIDAVIT FOR CHANGE OF NAME

I, Raghavendra Pawar V.G. son of K.V. Gopalakrishna Rao, residing at No.1003, 10th Floor, Block 4, Kommaghatta Phase BDA Apartment, Kengeri - 560062, have changed my name from Raghavendra Pawar to **Raghavendra Pawar V.G.** for personal cultural and familial reasons. Henceforth, I shall be recognized as Raghavendra Pawar V.G. This name will apply for all official, legal and personal matters, including my Driving License, financial records, and any other relevant documentation. I have signed the affidavit in this regard on 27th September 2024 sworn to before Advocate and Notary **Sri. Ravi** at Bengaluru, Karnataka.

PUBLIC NOTICE

This is to inform the general public that my clients intends to purchase the immovable property described in the schedule hereunder from its owner **Mr.R.Guruprasad,** S/o. R.Radhakrishnan, aged about 57 years, and **Mrs.G.Rohini,** W/o.R.Guruprasad, aged about 49 years, both are residing at No.207, 11th Floor, Shravanthi Gardens, 13th Main, 17th Cross, V Phase, J.P.Nagar, Bengaluru-560 078.

Any person/s having any claims/right/interest in respect of the schedule property may file their objections with the undersigned with documentary evidence ***within Fifteen days*** from the date of publication of this notice. If no claims are received within the stipulated period it shall be presumed that there is no claim in respect of the schedule property and my client will be proceeding to purchase the same.

SCHEDULE

All that piece and parcel of Bengaluru Development Authority approved residential **vacant site No.14 in Sy.No.66/1, situated at Kembathahalli Village, Uttarahalli Hobli, Bengaluru South Taluk, Bengaluru, measuring East to West 30 feet and North to South 50 feet, totally measuring 1500 sq.ft** bounded on the:-

EAST BY: Site No.15
WEST BY : Road
NORTH BY : Site No.13
SOUTH BY : Road

Sd/-
SYED JUNED AHMED, Advocate
No.20/1, 5th Floor, "Aashirwad Building:, 9th Main, 3rd Block, Jayanagar, Bangalore-560 011

ಆಟೋ-ಲಾರಿ ಮುಖಾಮುಖಿ ಅಪಘಾತ: ಯುವತಿಯ ಸಾವು

ಬೆಂಗಳೂರು: ನಗರದಲ್ಲಿ ಶನಿವಾರ ಬೆಳ್ಳಂಬೆಳಗ್ಗೆ ಭೀಕರ ಅಪಘಾತ ಸಂಭವಿಸಿದ್ದು, ಲಾರಿ-ಆಟೋ ಮುಖಾಮುಖಿ ಡಿಕ್ಕಿಯಾಗಿ ಯುವತಿಯೊಬ್ಬಳು ಮೃತಪಟ್ಟಿದ್ದಾಳೆ.

ಚಾಲಕನ ನಿದ್ರೆ ಮಂಪರಿಗೆ ಜೀವ ಬಿಟ್ಟಳು ಯುವತಿ

ಕಾಫಿ ಬೋರ್ಡ್ ಸಿಗ್ನಲ್ ಬಳಿ ಬೆಳಗಿನ ಜಾವ 4 ಗಂಟೆಗೆ ಅಪಘಾತ

ಶಾಲಿನಿ, ಮೃತ ದುರ್ದೈವಿ. ಬೆಂಗಳೂರಿನ ವಿಧಾನಸೌಧ ಕೂಗಳತೆಯ ಕಾಫಿ ಬೋರ್ಡ್ ಸಿಗ್ನಲ್ ಬಳಿ ಬೆಳಗಿನ ಜಾವ 4 ಗಂಟೆಗೆ ಅಪಘಾತ ಸಂಭವಿಸಿದೆ. ನಮ್ಮ ಯಾತ್ರಿ ಆ್ಯಪ್ ಮೂಲಕ ಆಟೋಚಾಲಕ ಇಮ್ರಾನ್ ಶಾಲಿನಿಯನ್ನು ಪಿಕಪ್ ಮಾಡಿದ್ದರು.

ಬೆನ್ಸನ್‌ಟೌನ್ ಚಿನ್ನಪ್ಪ ಗಾರ್ಡನ್‌ನಿಂದ ಮೆಜೆಸ್ಟಿಕ್‌ಗೆ ಶಾಲಿನಿಯನ್ನು ಡ್ರಾಪ್ ಮಾಡಲು ಆಟೋ ಬರುತ್ತಿತ್ತು. ಈ ವೇಳೆ ಸಿಗ್ನಲ್ ಜಂಪ್ ಮಾಡಿ ಆಟೋಗೆ ಲೋಡ್ ತುಂಬಿದ್ದ ಲಾರಿ ಡಿಕ್ಕಿ ಹೊಡೆದಿದೆ. ಅಪಘಾತದ ಬಳಿಕ ಲೋಡ್ ಸಮೇತ ಲಾರಿ ಬಿಟ್ಟು ಚಾಲಕ ಪರಾರಿಯಾಗಿದ್ದ. ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಕಬ್ಬನ್ ಪಾರ್ಕ್ ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಶಾಲಿನಿ ಮೃತದೇಹ ಮರಣೋತ್ತರ ಪರೀಕ್ಷೆಗಾಗಿ ಬೌರಿಂಗ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ನಿದ್ದೆ ಮಂಪರಿನಲ್ಲಿ ಅಪಘಾತ: ಅಪಘಾತದ ಬಳಿಕ ಕಾಲ್ಕಿತ್ತಿದ್ದ ಚಾಲಕನನ್ನು ಕಬ್ಬನ್ ಪಾರ್ಕ್ ಸಂಚಾರ ಪೊಲೀಸರು ಬಂಧಿಸಿದ್ದಾರೆ.

ವಿಚಾರಣೆ ವೇಳೆ ನಿದ್ದೆ ಮಂಪರಿನಲ್ಲಿ ಅಪಘಾತ ಆಯಿತು ಎಂದು ಹೇಳಿದ್ದಾನೆ. ಇನ್ನೂ ಮೃತ ಶಾಲಿನಿ ಕೇರಳ ಮೂಲದವಳಾಗಿದ್ದಾಳೆ. ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದಿದ್ದ ಶಾಲಿನಿ ಬೆಳಗ್ಗೆ ಮೆಜೆಸ್ಟಿಕ್‌ಗೆ ತೆರಳುವಾಗ ಅಪಘಾತ ನಡೆದಿದೆ. ಘಟನೆಯಲ್ಲಿ ಆಟೋ ಪೂರ್ತಿ ಛಿದ್ರಗೊಂಡಿತ್ತು.



ಶ್ರೀ. ಹೆಚ್. ಕಮಲಾನಾಥ್
07.08.1925 ರಿಂದ 29.09.2011

13ನೇ ವರ್ಷದ ಸ್ಮರಣೆ

ಸ್ಟ್ಯಾಂಡರ್ಡ್ ಬುಕ್ ಕಂಪನಿ
ಸ್ಟ್ಯಾಂಡರ್ಡ್ ಪ್ರೆಸ್
ಮಾಜಿ ಅಧ್ಯಕ್ಷರು
ಬೆಂಗಳೂರು ಗಾಯನ ಸಮಾಜ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ
ಕರ್ನಾಟಕ ಪ್ರಕಾಶಕರ ಮತ್ತು
ಪುಸ್ತಕ ವ್ಯಾಪಾರಿಗಳ ಸಂಘ

ಇಂತಿ ದುಃಖತಪ್ತ ಕುಟುಂಬವರ್ಗ

ತಾಜ್ ವೆಸ್ಟ್‌ಎಂಡ್ ಹೋಟೆಲ್‌ಗೆ ಬಾಂಬ್ ಹುಸಿ ಬೆದರಿಕೆ ಸಂದೇಶ

ಬೆಂಗಳೂರು: ನಗರದ ರೇಸ್‌ಕೋರ್ಸ್‌ರಸ್ತೆಯಲ್ಲಿರುವ ಪ್ರತಿಷ್ಠಿತ ತಾಜ್ ವೆಸ್ಟ್‌ಎಂಡ್ ಹೋಟೆಲ್‌ಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಇದೊಂದು ಹುಸಿಬಾಂಬ್ ಬೆದರಿಕೆಯಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಬಾಂಬ್ ಬೆದರಿಕೆ ಸಂದೇಶದ ಬಗ್ಗೆ ತಕ್ಷಣ ಎಚ್ಚೆತ್ತ ಹೋಟೆಲ್ ಸಿಬ್ಬಂದಿ ಹೈಗ್ರೌಂಡ್ಸ್ ಠಾಣೆ ಪೊಲೀಸರಿಗೆ ಮಾಹಿತಿ ರವಾನಿಸಿದರು. ಗಣ್ಯರು, ಕ್ರಿಕೆಟಿಗರು ಉಳಿದುಕೊಳ್ಳುವ ಹಾಗೂ ಹೆಚ್ಚಾಗಿ ಉದ್ಯಮಿಗಳು, ರಾಜಕಾರಣಿಗಳು ಸಭೆ ನಡೆಸುವ ಪ್ರತಿಷ್ಠಿತ ಹೋಟೆಲ್‌ಗೆ ಬೆದರಿಕೆಯೊಡ್ಡಿರುವುದನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಕೂಡಲೇ ಘಟನಾ ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಬಗ್ಗೆ ಮಾಹಿತಿ ನೀಡಿದ ಉಪ ಪೊಲೀಸ್ ಆಯುಕ್ತ(ಕೇಂದ್ರ) ಶೇಖರ್ ಎಚ್.ತೆಕ್ಕಣ್ಣವರ್, ಶನಿವಾರ ಬೆಳಗ್ಗೆ ತಾಜ್ ವೆಸ್ಟ್ ಎಂಡ್ ಹೋಟೆಲ್‌ನ ಇ-ಮೇಲ್‌ಗೆ ಕಿಡಿಗೇಡಿಗಳಿಂದ ಬಾಂಬ್ ಬೆದರಿಕೆ ಸಂದೇಶ ಬಂದಿದೆ.

ಇದನ್ನು ಆಧರಿಸಿ ಪರಿಶೀಲನೆ ನಡೆಸಿದಾಗ ಹೋಟೆಲ್‌ನಲ್ಲಿ ಯಾವುದೇ ಸ್ಫೋಟಕಗಳು ಪತ್ತೆಯಾಗಿಲ್ಲ, ಮೇಲ್ನೋಟಕ್ಕೆ ಇದೊಂದು ಹುಸಿಬಾಂಬ್ ಬೆದರಿಕೆ. ಈ ಬಗ್ಗೆ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತೇವೆ ಎಂದು ತಿಳಿಸಿದರು.

ಅಕ್ರಮ ಅಂಗಡಿ-ಮುಂಗಟ್ಟು ತೆರವು ಮಾಡಿದ ಬಿಡಿಎ

ಚಂದ್ರಾ ಲೇಔಟ್‌ನಲ್ಲಿ ಅಧಿಕಾರಿಗಳ ಕಾರ್ಯಾಚರಣೆ | 430 ಕೋಟಿ ರು. ಮೌಲ್ಯದ ಭೂಮಿ ಮರುವಶ

ಬೆಂಗಳೂರು: ನಾಗರಬಾವಿ ಸಮೀಪದ ಚಂದ್ರ ಲೇಔಟ್‌ನಲ್ಲಿ ಶನಿವಾರ ಬಿಡಿಎ ಕಾರ್ಯಾಚರಣೆ ನಡೆಸಿದ್ದು, 40ಕ್ಕೂ ಅಧಿಕ ಅಂಗಡಿ ಮುಂಗಟ್ಟುಗಳನ್ನು ನೆಲಕ್ಕುರುಳಿಸಲಾಗಿದೆ.

ಮಂಗಳವಾರದವರೆಗೆ ಸಮಯಾವಕಾಶ ವಿದೆ ಎಂದುಕೊಂಡಿದ್ದ ಅಂಗಡಿ ಮಾಲೀಕರುಗಳಿಗೆ ಬಿಡಿಎ ಭಾರೀ ಆಘಾತ ನೀಡಿದ್ದು, ಶನಿವಾರ ಮುಂಜಾನೆಯೇ ಅಕ್ರಮ ಅಂಗಡಿ-ಮಳಿಗೆಗಳನ್ನು ನೆಲಸಮ ಮಾಡಲಾಗಿದೆ. ಈ ಮೂಲಕ ಹಲವು ವರ್ಷಗಳ ಕಾಲ ಕೈತಪ್ಪಿಹೋಗಿದ್ದ ಭೂಮಿಯನ್ನು ಬಿಡಿಎ ಮತ್ತೆ ತನ್ನ ವಶಕ್ಕೆ ಪಡೆದುಕೊಂಡಿದೆ.

ನಾಗರಬಾವಿ ಸಮೀಪದ ಚಂದ್ರಲೇಔಟ್‌ನಲ್ಲಿ ಬಿಡಿಎ ಜೆಸಿಬಿಗಳು ಕಾರ್ಯಾಚರಣೆ ನಡೆಸಿದ್ದು, ಬಿಡಿಎ ಜಾಗದಲ್ಲಿದ್ದ 40ಕ್ಕೂ ಅಧಿಕ ಅಂಗಡಿ ಮುಂಗಟ್ಟುಗಳನ್ನು ಕ್ಷಣಮಾತ್ರದಲ್ಲಿ ಕೆಡವಲಾಗಿದ್ದು, ಬಂಡವಾಳ ಹಾಕಿ ಲಾಭದ ನಿರೀಕ್ಷೆಯಲ್ಲಿ ಅಂಗಡಿ ತೆಗೆದಿದ್ದವರು ಕಣ್ಣ ಮುಂದೆಯೇ ಕಟ್ಟಡಗಳು ಧ್ವಂಸವಾಗುತ್ತಿದ್ದರೂ ಏನೂ ಮಾಡಲಾಗದ ಸ್ಥಿತಿ ನಿರ್ಮಾಣವಾಗಿತ್ತು.

ಖಾಸಗಿ ವ್ಯಕ್ತಿಯ ವಶದಲ್ಲಿದ್ದ ಭೂಮಿ: 9 ಎಕರೆ 13 ಗುಂಟೆಯ ಬಿಡಿಎ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರು ರು ವಶದಲ್ಲಿಟ್ಟುಕೊಂಡಿದ್ದರು. ಕೋರ್ಟ್ ಅಂಗಳದಲ್ಲಿ ಹಲವು ವರ್ಷಗಳಿಂದ ಈ ಜಾಗ ವಿವಾದದಲ್ಲಿತ್ತು. ವಿವಾದದ ಭೂಮಿ ಬಿಡಿಎಗೆ ಸೇರಿದೆ ಎಂದು ಆದೇಶ ಬಂದಿದ್ದೆ ತಡ ಪೊಲೀಸರ ಜತೆ ಆಗಮಿಸಿದ ಬಿಡಿಎ ಅಧಿಕಾರಿಗಳು ಸರ್ವೆ ನಂಬರ್ 78ರಲ್ಲಿದ್ದ 9 ಎಕರೆ ಜಾಗದ 430 ಕೋಟಿ ರು. ಮೌಲ್ಯದ ಜಾಗ ತನ್ನ ತೆಕ್ಕೆಗೆ ಪಡೆದುಕೊಂಡಿದೆ. ಬಿಡಿಎ ಎಇ ರವಿಕುಮಾರ್, ಬಿಡಿಎ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯಾಚರಣೆಯನ್ನು ನಡೆಸಲಾಗಿದ್ದು, ಈ ಮೂಲಕ ಬಿಡಿಎ ಮತ್ತೆ ಜಾಗ ಪಡೆದುಕೊಂಡಿದೆ.

ಬಿಡಿಎ ಕಾರ್ಯಾಚರಣೆಯಿಂದ 40ಕ್ಕೂ ಹೆಚ್ಚಿನ ಅಂಗಡಿ-ಮುಂಗಟ್ಟುಗಳು ನೆಲಕ್ಕುರುಳಿದ್ದು, ತೆರವು ಮಾಡಲು ಮೊದಲೇ ನೋಟಿಸ್ ಕೊಟ್ಟಿದ್ದೇವೆ ಎನ್ನುವುದು ಬಿಡಿಎ ವಾದವಾಗಿದೆ. ಆದರೆ ವ್ಯಾಪಾರಿಗಳು ಮಾತ್ರ ಬಿಬಿಎಂಪಿ ಲೈಸೆನ್ಸ್, ಫುಡ್ ಲೈಸೆನ್ಸ್ ಎಲ್ಲಾ ಇದ್ದೂ ನಮಗೆ ಕೊಟ್ಟ ಕಾಲಾವಕಾಶಕ್ಕಿಂತ ಮೊದಲೇ ಧ್ವಂಸಗೊಳಿಸಲಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ನಾಗರಬಾವಿಯಲ್ಲಿ ಬಿಡಿಎ ಅಧಿಕಾರಿಗಳು ಕೈಗೊಂಡ ಅಕ್ರಮ ಅಂಗಡಿಗಳ ತೆರವು ಕಾರ್ಯಾಚರಣೆ.

ಸಮಾಚಾರ ಸಣ್ಣದಲ್ಲ

ಪ್ರಯೋಗಾಲಯಕ್ಕೆ ಚಾಲನೆ

ಬೆಂಗಳೂರು: ಜಾಗತಿಕ ತಂತ್ರಜ್ಞಾನದ ನಾಯಕ ಲೆನೊವೊ ಎಐ ಸರ್ವರ್ ಉತ್ಪಾದನೆ ಮತ್ತು ಅತ್ಯಾಧುನಿಕ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಪ್ರಯೋಗಾಲಯಕ್ಕೆ ಚಾಲನೆ ನೀಡಲಾಯಿತು. ಭಾರತದಲ್ಲಿ ಸರಕಾರದ 'ಮೇಡ್ ಇನ್ ಇಂಡಿಯಾ' ಮತ್ತು 'ಎಐ ಫಾರ್ ಆಲ್' ಧ್ಯೇಯೋದ್ದೇಶದ ಭಾಗವಾಗಿ ತಂತ್ರಜ್ಞಾನ ಆವಿಷ್ಕಾರ ಮತ್ತು ಉತ್ಪಾದನೆಗೆ ಪ್ರಮುಖ ಕೇಂದ್ರವಾಗಿಸುವ ಲೆನೊವೊದ ಬದ್ಧತೆಯನ್ನು ಸದೃಢಗೊಳಿಸಿದೆ. ತನ್ನ ಉತ್ಪಾದನಾ ಹೆಜ್ಜೆ ಗುರುತನ್ನು ವಿಸ್ತರಿಸುವುದಕ್ಕೆ ಪೂರಕವಾಗಿ ಲೆನೊವೊ ಭಾರತದ ಬೆಂಗಳೂರಿನಲ್ಲಿ ಹೊಸ ಮೂಲಸೌಕರ್ಯದ ಆರ್ ಅಂಡ್ ಡಿ ಲ್ಯಾಬ್ ಪ್ರಾರಂಭಿಸಿದ್ದು 18 ಪ್ರಸ್ತುತದ ಆರ್ ಅಂಡ್ ಡಿ ಲ್ಯಾಬ್ ಗಳ ಜಾಗತಿಕ ಜಾಲವನ್ನು ಸದೃಢಗೊಳಿಸುತ್ತಿದೆ. ಈ ಸೌಲಭ್ಯವು ಮೂಲಸೌಕರ್ಯ ಪರಿಹಾರಗಳಿಗೆ ಬದ್ಧವಾದ ವಿಶ್ವದ ನಾಲ್ಕು ಪ್ರಮುಖ ಪ್ರಯೋಗಾಲಯಗಳಲ್ಲಿ ಒಂದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊತಾಸ್ ಕಾಫಿ ಹೊಸ ಬ್ರ್ಯಾಂಡ್

ಬೆಂಗಳೂರು: ಕಾಫಿ ಪ್ರೇಮಿಗಳ ಕೊತಾಸ್ ಕಾಫಿ 75 ವರ್ಷ ಪೂರ್ಣಗೊಳಿಸಿರುವ ಹಿನ್ನೆಲೆ ಹೊಸ ಬ್ರ್ಯಾಂಡ್ ಐಡೆಂಟಿಟಿ ಮತ್ತು ಕೆಲವು ಹೊಸ ಉತ್ಪನ್ನಗಳನ್ನು ಪರಿಚಯಿಸಿದೆ. ಕಂಪನಿಯು ಮರು ವಿನ್ಯಾಸಗೊಳಿಸಿದ ನವೀಕೃತ ಪ್ಯಾಕೇಜಿಂಗ್, ಹೊಸ ಲೋಗೊ ಪರಿಚಯಿಸಿದ್ದು, ಗ್ರಾಹಕರಿಗೆ ಮತ್ತು ಹೊಸ ಮಾರುಕಟ್ಟೆಗಳಿಗೆ ಸಂಪರ್ಕ ಹೆಚ್ಚಿಸಲು ಪ್ರಯತ್ನಿಸುತ್ತಿದೆ. ತಮ್ಮ ಬ್ರ್ಯಾಂಡ್ ಐಡೆಂಟಿಟಿ ಸುಧಾರಿಸುವ ಮೂಲಕ, ಕೊತಾಸ್ ಕಾಫಿ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ತಾಣ ಉಳಿಸಿಕೊಂಡು, ಗುಣಮಟ್ಟ ಮತ್ತು ಪರಂಪರೆ ಕಾಪಾಡಿಕೊಳ್ಳಲು ಬದ್ಧವಾಗಿದೆ. ಕೊತಾಸ್ ಕಾಫಿಯ ಮುಖ್ಯಸ್ಥ ಸಿ.ಕೆ. ಶ್ರೀನಾಥನ್ ಮಾತನಾಡಿ, ಕೊತಾಸ್ ಕಾಫಿ ಎಂದಿಗೂ ನಮ್ಮ ಗ್ರಾಹಕರಿಗೆ ವಿಶಿಷ್ಟ ಕಾಫಿ ಅನುಭವವನ್ನು ನೀಡುವುದರಲ್ಲಿಯೇ ಹೆಸರಾಗಿದೆ. ವರ್ಷಗಳ ಕಾಲ, ನಾವು ನಮ್ಮ ಮೂಲ ಕಾಪಾಡಿಕೊಂಡಿದ್ದೇವೆ, ಆದರೆ ಆಧುನಿಕ ಶೈಲಿ ಮತ್ತು ಆಸಕ್ತಿಗಳಿಗೆ ತಕ್ಕಂತೆ ಬೆಳೆಯುತ್ತಾ ಬಂದಿದ್ದೇವೆ. ನಾವು 75 ವರ್ಷ ಆಚರಿಸುತ್ತಿರುವಾಗ, ನಮ್ಮ ಗುರಿ ನಮ್ಮ ಪರಂಪರೆ ಗೌರವಿಸುವುದಷ್ಟೇ ಅಲ್ಲ ಮುಂದಿನ ಮಾರುಕಟ್ಟೆಗಳಲ್ಲಿ ವಿಸ್ತರಿಸುವುದು ಎಂದರು.

ನಾಗಸಂದ್ರ- ಮಾದಾವರ ಮೆಟ್ರೊ ಶೀಘ್ರ ಆರಂಭ

ಬೆಂಗಳೂರು: ನಗರದ ಜನರ ಬಹುನಿರೀಕ್ಷಿತ ನಾಗಸಂದ್ರದಿಂದ ಮಾದಾವರದವರೆಗಿನ ಮೆಟ್ರೋ ಮಾರ್ಗದ ಕಾಮಗಾರಿ ಪೂರ್ಣಗೊಂಡಿದ್ದು, ಪ್ರಾಯೋಗಿಕ ಸಂಚಾರ ಯಶಸ್ವಿಯಾಗಿದೆ. ಪ್ರಸ್ತುತ ನಾಗಸಂದ್ರದಿಂದ ಮಾದಾವರದವರೆಗಿನ ವಿಸ್ತೃತ ಮಾರ್ಗ ಶೀಘ್ರವೇ ಉದ್ಘಾಟನೆಯಾಗಲಿದ್ದು, 3.7ಕಿ.ಮೀ ಅಂತರದ ನಾಗಸಂದ್ರದಿಂದ ಮಾದಾವರಗಿನ ವಿಸ್ತೃತ ಮಾರ್ಗವನ್ನು ರೈಲ್ವೆ ಸುರಕ್ಷತಾ ಆಯುಕ್ತರು ಅ.3 ಮತ್ತು 4ರಂದು ಪರಿಶೀಲನೆ ನಡೆಸಲಿದ್ದು, ಸಂಚಾರಕ್ಕೆ ಅನುಮತಿ ನೀಡಿದ ಬಳಿಕ ಲೋಕಾರ್ಪಣೆಯ ದಿನಾಂಕ ಘೋಷಣೆಯಾಗಲಿದೆ. ನಾಗಸಂದ್ರದಿಂದ ಮಾದಾವರದ ನಡುವಿನ ಮಾರ್ಗದಲ್ಲಿ ಮೂರು ನಿಲ್ದಾಣ ನಿರ್ಮಿಸಲಾಗಿದ್ದು, ಮಂಜುನಾಥನಗರ, ಚಿಕ್ಕಬಿದರಕಲ್ಲು ಮತ್ತು ಮಾದಾವರ. ಹಸಿರು ಮಾರ್ಗ ವಿಸ್ತರಣೆಯಿಂದ ನಗರದ ಪ್ರಮುಖ ಪ್ರದರ್ಶನ ಕೇಂದ್ರವಾದ ಬೆಂಗಳೂರು ಇಂಟರ್‌ನ್ಯಾಷನಲ್ ಎಕ್ಸಿಬಿಷನ್ ಸೆಂಟರ್‌ಗೆ ಸಂಪರ್ಕ ಹೊಂದಿದೆ.

ಪಿಯು ಪರೀಕ್ಷೆ-3 ತೇರ್ಗಡೆಗೂ ಸಿಇಟಿ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ-3ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸಿಇಟಿ ಎರಡನೇ ಮುಂದುವರಿದ ಸುತ್ತಿನಲ್ಲಿ ಸೀಟು ಹಂಚಿಕೆಗೆ ಅವಕಾಶ ಕಲ್ಪಿಸಲಾಗಿದ್ದು, ಸೆ.28ರಿಂದಲೇ ಆದ್ಯತಾ ಕ್ರಮದಲ್ಲಿ ಆಯ್ಕೆ ದಾಖಲಿಸಲು ವೆಬ್‌ಸೈಟ್ ಲಿಂಕ್ ಬಿಡುಗಡೆ ಮಾಡಲಾಗಿದೆ. ರಾಜ್ಯ ಪಠ್ಯಕ್ರಮದ ಫಲಿತಾಂಶದ ಅಂಕಗಳನ್ನು ನೇರವಾಗಿ ಪಡೆಯಲಾಗಿದೆ. ಸಿಬಿಎಸ್‌ಇ, ಐಸಿಎಸ್‌ಇ ಮೊದಲಾದ ಪಠ್ಯಕ್ರಮದಲ್ಲಿ 12ನೇ ತರಗತಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ತಮ್ಮ ಅಂಕಪಟ್ಟಿ ಮತ್ತು 2024ನೇ ಸಾಲಿನ ಸಿಇಟಿ ಪ್ರವೇಶ ಪತ್ರವನ್ನು ಸೆ.30ರ ಒಳಗೆ ಪ್ರಾಧಿಕಾರಕ್ಕೆ ಸಲ್ಲಿಸಿ, ಆಯ್ಕೆ ದಾಖಲಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ. ಮೊದಲ ಎರಡೂ ಸುತ್ತುಗಳಲ್ಲಿ ಆಯ್ಕೆ ದಾಖಲು ಮಾಡದವರು ಹಾಗೂ ಹಂಚಿಕೆಯಾದ ಸೀಟಿಗೆ ಯಾವುದೇ ಚಾಯ್ಸ್ ನೀಡದವರು ಹಾಗೂ ಇದುವರೆಗೂ ಯಾವುದೇ ಸೀಟು ಹಂಚಿಕೆಯಾಗದವರಿಗೂ ಆಯ್ಕೆ ದಾಖಲಿಸಲು ಸೆ. 30ರಿಂದ ಅ.4ರವರೆಗೆ ಅವಕಾಶ ನೀಡಲಾಗಿದೆ. ಮುಂದುವರಿದ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಅ.7ರಂದು ಮತ್ತು ಅಂತಿಮ ಫಲಿತಾಂಶವನ್ನು ಅ.8ರಂದು ಪ್ರಕಟಿಸಲಾಗುವುದು. ಶುಲ್ಕ ಪಾವತಿ, ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ಅ.9ರಿಂದ 14ರವರೆಗೆ ಅವಕಾಶ ನೀಡಲಾಗುವುದು. ಕಾಲೇಜಿಗೆ ವರದಿ ಮಾಡಿಕೊಳ್ಳಲು ಅ.15 ಕೊನೆ ದಿನ.

{ಬಸನಗೌಡ ಪಾಟೀಲ್ ಯತ್ನಾಳ್} ಶಾಸಕ

ವಾಲ್ಮೀಕಿ ನಿಗಮದ ಹಣ ಬಳ್ಳಾರಿ ಚುನಾವಣೆಗೆ ಬಳಸಲಾಗಿದೆ. ಇದರ ವಿರುದ್ಧ ಪಾದಯಾತ್ರೆಗೆ ಬಿಜೆಪಿ ಹೈಕಮಾಂಡ್ ಅನುಮತಿ ಕೇಳಿದ್ದೇವೆ. ಬೀದರ್‌ನ ಬಸವಕಲ್ಯಾಣದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸುವ ಯೋಚನೆ ಇದೆ. ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಮೂಲಕ ಬೆಂಗಳೂರು ತಲುಪಿ ಬೃಹತ್ ರ್‍ಯಾಲಿ ನಡೆಸುವ ವಿಚಾರವಿದೆ.

ರಾಜ್ಯ ಸರಕಾರದ ಮನವಿಯನ್ನು ಪುರಸ್ಕರಿಸಿದ ರಕ್ಷಣಾ ಇಲಾಖೆ | ಮೊದಲ ಹಂತದ 3.50 ಕಿಮೀಗೆ 35 ಕೋಟಿ ರು. ಟೆಂಡರ್ | ಬೆಂಗಳೂರಿನ ರಸ್ತೆಗಳು ಗುಂಡಿಮುಕ್ತವಾಗಿಲ್ಲ; ಆದರೆ ಈ ನಿಟ್ಟಿನಲ್ಲಿ ಕಾರ್ಯನಿರ್ವಹಣೆ

ಬೆಳ್ಳಂದೂರು ರಸ್ತೆ ನಿರ್ಮಾಣ: ಭೂಮಿ ನೀಡಲು ರಕ್ಷಣಾ ಇಲಾಖೆ ಒಪ್ಪಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಳ್ಳಂದೂರಿಗೆ ಸಂಚಾರ ಸಮಸ್ಯೆ ನಿರ್ವಹಣೆಗೆ ಅಗತ್ಯವಿದ್ದ ಭೂಮಿಯನ್ನು ನೀಡಲು ರಕ್ಷಣಾ ಇಲಾಖೆ ಒಪ್ಪಿಗೆ ನೀಡಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನ ಎಎಸ್‌ಸಿ ಸೆಂಟರ್ ಮತ್ತು ಕಾಲೇಜಿನ ಕಮಾಂಡೆಂಟ್ ಲೆಫ್ಟನೆಂಟ್ ಜನರಲ್ ಬಸಂತ್ ಕುಮಾರ್ ರೆಪ್ಸ್ ವಾಲ್ ಅವರೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋವರ್ ಆಗರಂನಿಂದ ಸರ್ಜಾಪುರವರೆಗೂ ರಸ್ತೆ ಅಗಲೀಕರಣಕ್ಕೆ 12.34 ಎಕರೆ ಜಮೀನನ್ನು ರಕ್ಷಣಾ ಇಲಾಖೆ ಬಿಬಿಎಂಪಿಗೆ ನೀಡಿದೆ. ಇನ್ನೂ 10.77 ಎಕರೆ ನೀಡಲು ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಎಂದರು.

ಎಂ.ಜಿ.ರಸ್ತೆಯಿಂದ ಬೆಳ್ಳಂದೂರು ಭಾಗಕ್ಕೆ ತೆರಳಲು ಸುಮಾರು 1 ಗಂಟೆ ಸಮಯ ಬೇಕಾಗಿತ್ತು. ಈ ರಸ್ತೆ ನಿರ್ಮಾಣವಾದ ನಂತರ 5-8 ನಿಮಿಷಗಳ ಅಂತರದಲ್ಲಿ ಕ್ರಮಿಸಬಹುದು. ಈ ಸಂಬಂಧ ನಾನು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರ ರಕ್ಷಣಾ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೆವು. ನಮ್ಮ ಮನವಿಗೆ ಕೇಂದ್ರ ರಕ್ಷಣಾ ಸಚಿವಾಲಯ ಸ್ಪಂದಿಸಿ, ಒಟ್ಟು 22 ಎಕರೆ ಜಾಗವನ್ನು ರಸ್ತೆಗಾಗಿ ಬಿಟ್ಟುಕೊಡಲು ತೀರ್ಮಾನಿಸಿ ಸಹಕಾರ ನೀಡಿದೆ ಎಂದರು.

ಈ ರಸ್ತೆ ನಿರ್ಮಾಣದ ಮೊದಲ ಹಂತದ 3.50 ಕಿ.ಮೀ ಕಾಮಗಾರಿಗೆ 35 ಕೋಟಿ ರು. ಮೊತ್ತದ ಟೆಂಡರ್ ಕರೆಯಲಾಗಿದೆ. ಟ್ರಿನಿಟಿ ಸರ್ಕಲ್, ಈಜಿಪುರ ಸೇರಿದಂತೆ ಒಂದಷ್ಟು ಕಡೆ ನೂತನ ರಸ್ತೆ ನಿರ್ಮಾಣಕ್ಕೆ ಇನ್ನು 10.77 ಎಕರೆ ಜಾಗವನ್ನು ರಕ್ಷಣಾ ಇಲಾಖೆ ನೀಡಬೇಕಿದೆ. ಇದರಿಂದ ಐಟಿ ಹಬ್‌ಗೆ ತೆರಳಲು ಇದ್ದ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಯಾಗಲಿದೆ ಎಂದರು.

ಈಗಾಗಲೇ ರಕ್ಷಣಾ ಇಲಾಖೆಯವರು 12.34 ಎಕರೆ ಜಾಗವನ್ನು ಬಿಬಿಎಂಪಿಗೆ ಹಸ್ತಾಂತರಿಸಿದ್ದಾರೆ. ಇದಕ್ಕಾಗಿ ನಮಗೆ ಸಹಕಾರ ಕೊಟ್ಟ ಲೆಫ್ಟನೆಂಟ್ ಜನರಲ್ ಬಸಂತ್ ಕುಮಾರ್ ರೆಪ್ಸ್ವಾಲ್ ಅವರು ಇದೇ 30 ರಂದು ನಿವೃತ್ತಿಯಾಗುತ್ತಿದ್ದು, ಅವರನ್ನು ನಮ್ಮ ಕಚೇರಿಗೆ ಆಹ್ವಾನಿಸಿ ಅಭಿನಂದಿಸಿದ್ದೇವೆ ಎಂದು ತಿಳಿಸಿದರು.



ಬೆಂಗಳೂರಿನ ಎಎಸ್ ಸಿ ಸೆಂರ್ಟ ಮತ್ತು ಕಾಲೇಜಿನ ಕಮಾಂಡೆಂಟ್ ಲೆಫ್ಟನೆಂಟ್ ಜನರಲ್ ಬಸಂತ್ ಕುಮಾರ್ ರೆಪ್ಸ್ವಾಲ್ ಅವರು ಡಿಸಿಎಂ ಡಿ. ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಶನಿವಾರ ಭೇಟಿ ಮಾಡಿ ಚರ್ಚಿಸಿದರು.

> ಬೆಂಗಳೂರಿನ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಗುಂಡಿ ಮುಚ್ಚಲಾಗಿದೆ ಎಂದು ನಾನು ಹೇಳುವುದಿಲ್ಲ. ನಾನು ಕೆಲವು ಭಾಗಗಳಲ್ಲಿ ರಸ್ತೆ ಗುಂಡಿ ನೋಡಿದ್ದೇನೆ. ಅಧಿಕಾರಿಗಳು ದಾಖಲೆ ಮಟ್ಟದಲ್ಲಿ ಕೆಲಸ ಮಾಡಿದ್ದಾರೆ. ನಾನು ಈ ಬಗ್ಗೆ ಈಗ ಏನು ಹೆಚ್ಚಿಗೆ ಹೇಳುವುದಿಲ್ಲ. ಮತ್ತೊಂದು ಸುತ್ತಿನ ಪರಿಶೀಲನೆ ಮಾಡಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.
> -**ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ಐಟಿ ಹಬ್‌ಗೆ ಹೋಗುವವರಿಗೆ ಸಹಕಾರಿ

ಬೆಂಗಳೂರಿನ ನಾಗರೀಕರಿಗೆ, ವಿಶೇಷವಾಗಿ ಐಟಿ ಹಬ್‌ಗೆ ತೆರಳುವವರಿಗೆ ಹಾಗೂ ಪೂರ್ವ ಬೆಂಗಳೂರಿಗರಿಗೆ ಈ ಯೋಜನೆಯಿಂದ ಸಾಕಷ್ಟು ಅನುಕೂಲವಾಗಲಿದೆ. ನಾನು ಬೆಂಗಳೂರು ನಗರಾಭಿವೃದ್ಧಿ ಇಲಾಖೆಯ ಜವಾಬ್ದಾರಿ ತೆಗೆದುಕೊಂಡ ನಂತರ ಬೆಳ್ಳಂದೂರು ಹಾಗೂ ಸುತ್ತಮುತ್ತಲ ಐಟಿ ಹಬ್ ಭಾಗದ ಜನರ ಸಮಸ್ಯೆ ಆಲಿಸಿದ್ದೆ. ಅಲ್ಲಿನ ಸಂಚಾರ ದಟ್ಟಣೆ ವಿಚಾರವಾಗಿ ದಿನನಿತ್ಯ 8-10 ಇ-ಮೇಲ್ ಗಳು ನನಗೇ ಬರುತ್ತಿದ್ದವು. ಈ ಹಿನ್ನೆಲೆಯಲ್ಲಿ ನಾನು ಹಾಗೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೆವು. ಈ ಸಮಸ್ಯೆಗೆ ಈಗ ಪರಿಹಾರ ಸಿಕ್ಕಿದಂತಾಗಿದೆ ಎಂದು ಹೇಳಿದರು.

ರಕ್ಷಣಾ ಇಲಾಖೆಗೆ ಪ್ರಸ್ತಾವನೆ

ಹೆಬ್ಬಾಳದ ಬಳಿಯ ಹೋಪ್ ಡೈರಿ ಫಾರ್ಮ್ ಬಳಿ ಟನಲ್ ರಸ್ತೆಯ ಪ್ರವೇಶಕ್ಕೆ ಜಾಗ ಅಗತ್ಯವಿದೆ. ಇದಕ್ಕೆ ಎರಡು ಎಕರೆ ಜಾಗ ಬಿಟ್ಟುಕೊಡಬೇಕು ಎಂಬ ಪ್ರಸ್ತಾವನೆ ನೀಡಲಿದ್ದೇವೆ ಎಂದು ಹೇಳಿದರು. ಈ ಜಾಗಗಳನ್ನು ರಕ್ಷಣಾ ಇಲಾಖೆಯಿಂದ ಪಡೆಯಲು ನಾನು ಬಹಳಷ್ಟು ಪ್ರಯತ್ನ ಮಾಡಿದ್ದೇನೆ, ಕಾಗದದ ಕೆಲಸ ಮಾಡಿದ್ದೇನೆ. ನಿರಂತರವಾಗಿ ರಕ್ಷಣಾ ಇಲಾಖೆ ಜತೆ ಸಂಪರ್ಕ ಇಟ್ಟುಕೊಂಡು ಮನವಿ ಮಾಡಿದ್ದೇನೆ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಕ್ಷಣಾ ಸಚಿವರು ಹಾಗೂ ಪ್ರಧಾನಮಂತ್ರಿಗಳನ್ನು ಭೇಟಿಮಾಡಿ ಮನವಿ ಸಲ್ಲಿಸಲಾಗಿತ್ತು ಎಂದು ಹೇಳಿದರು. ರಕ್ಷಣಾ ಇಲಾಖೆಯು ಭೂಮಿಗೆ ಪರ್ಯಾಯವಾಗಿ ಮೂಲಭೂತ ಸೌಕರ್ಯ ಕಲ್ಪಿಸಿಕೊಡುವಂತೆ ಕೇಳಿದ್ದು, ನಾವು ಅದನ್ನು ಮಾಡುತ್ತೇವೆ ಎಂದರು.

148ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ
4,071 ಕೋಟಿ, ಒಟ್ಟು 88 ಯೋಜನೆ, 10,585 ಉದ್ಯೋಗಾವಕಾಶ

4,071 ಕೋಟಿ ಹೂಡಿಕೆಗೆ ಸರಕಾರದ ಅನುಮೋದನೆ

ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲರ ಅಧ್ಯಕ್ಷತೆಯಲ್ಲಿ ನಡೆಯಿತು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್.ಸೆಲ್ವಕುಮಾರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಮಹೇಶ ಹಾಜರಿದ್ದರು.

ಬೆಂಗಳೂರು: 50 ಕೋಟಿ ರುಪಾಯಿಗೂ ಹೆಚ್ಚು ಬಂಡವಾಳ ಹೂಡಿಕೆಯ 14 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳು ಸೇರಿದಂತೆ ಒಟ್ಟು 88 ಯೋಜನೆಗಳಿಂದ 4,071.11 ಕೋಟಿ ಬಂಡವಾಳ ಹೂಡಿಕೆಯ ಹಾಗೂ 10,585 ಜನರಿಗೆ ಉದ್ಯೋಗವಕಾಶ ಲಭಿಸುವ ಯೋಜನೆಗಳಿಗೆ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಒಪ್ಪಿಗೆ ನೀಡಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಆನೇಕಲ್‌ನ ವೀರಸಂದ್ರ ಗ್ರಾಮದಲ್ಲಿ 485 ಕೋಟಿ ಹೂಡಿಕೆಯೊಂದಿಗೆ 1,000 ಮಂದಿಗೆ ಐಟಿ ಮತ್ತು ಐಟಿಇಎಸ್ ಕ್ಷೇತ್ರದಲ್ಲಿ ಉದ್ಯೋಗ ನೀಡುವ ಅರಾಟ್ ಒನ್ ವರ್ಲ್ಡ್ ಕಂಪನಿಗೆ ಅನುಮತಿ ನೀಡಿದೆ.

ಡೇರಿ ಕ್ಲಾಸಿಕ್ ಐಸ್ ಕ್ರೀಂ ಸಂಸ್ಥೆಯು, ಕಲಬುರಗಿ ಜಿಲ್ಲೆಯ ನಂದೂರು ಕಾಸರಟಗಿ ಕೈಗಾರಿಕಾ ಪ್ರದೇಶದಲ್ಲಿ 285 ಕೋಟಿ ವೆಚ್ಚದಲ್ಲಿ ಐಸ್ ಕ್ರೀಂ ಉತ್ಪಾದನಾ ಘಟಕ ಸ್ಥಾಪಿಸುತ್ತಿದ್ದು ಇದರಿಂದ 900 ಜನರಿಗೆ ಉದ್ಯೋಗ ಸಿಗಲಿದೆ. ಫ್ರೋಜನ್ ಡೆಸರ್ಟ್, ಕುಲ್ಫಿ ಇತ್ಯಾದಿ ಕೋಲ್ಡ್ ಸ್ಟೋರೇಜ್ ಸಹಿತ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಸಚಿವ ಪಾಟೀಲ ವಿವರಿಸಿದರು.

50 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯ 14 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ 2,031.76 ಕೋಟಿ ಬಂಡವಾಳ ಹೂಡಿಕೆಯಾಗಲಿದೆ ಹಾಗೂ 3,302 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ. 15 ಕೋಟಿಯಿಂದ 50 ಕೋಟಿ ಒಳಗಿನ ಬಂಡವಾಳ ಹೂಡಿಕೆಯ 68 ಹೊಸ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ 1,355.07 ಕೋಟಿ ಬಂಡವಾಳ ಹೂಡಿಕೆ ಹಾಗೂ 5,049 ಜನರಿಗೆ ಉದ್ಯೋಗವಕಾಶ ಸಿಗಲಿದೆ. ಹೆಚ್ಚುವರಿ ಬಂಡವಾಳ ಹೂಡಿಕೆಯ 6 ಯೋಜನೆಗೆ ಅನುಮೋದನೆ ನೀಡಿದ್ದು, ಇದರಿಂದ 684.28 ಕೋಟಿ ಬಂಡವಾಳ ಹರಿದುಬರಲಿದೆ ಹಾಗೂ ಅಂದಾಜು 2,234 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಬಾಡಿಗೆ ಮನೆ ನೀಡಲು ಮಾಲೀಕರಿಂದ ಕಟ್ಟುನಿಟ್ಟಿನ ನಿಯಮ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಬೆನ್ನಲ್ಲೇ ನಗರದಲ್ಲಿ ಮನೆ ಬಾಡಿಗೆ ನೀಡಲು ಮಾಲೀಕರು ಹಲವು ನಿಯಮಗಳನ್ನು ಹೇರಲು ಮುಂದಾಗಿದ್ದಾರೆ.

ವೈಯ್ಯಾಲಿಕಾವಲ್‌ನ ಮಹಾಲಕ್ಷ್ಮೀ ಪ್ರಕರಣದ ಬಳಿಕ ಬೆಂಗಳೂರಿನಲ್ಲಿ ಮನೆ ಮಾಲೀಕರಿಗೆ ಮನೆ ಯಾರಿಗೆ ಕೊಡಬೇಕು? ಯಾರಿಗೆ ಬೇಡ ಎನ್ನುವ ತಲೆನೋವು ಆರಂಭವಾಗಿದ್ದು, ಬ್ಯಾಚುಲರ್‌ಗಳಿಗೆ ಮನೆ ಕೊಡುವುದಿಲ್ಲ ಎಂದು ಮನೆ ಮಾಲೀಕರು ಹೇಳುತ್ತಿದ್ದಾರೆ. ಮನೆ ಮಾಲೀಕರಿಗೆ ಹೊರ ಜಿಲ್ಲೆ ಹಾಗೂ ಹೊರ ರಾಜ್ಯದವರನ್ನು ಹೇಗೆ ನಂಬಿ ಬಾಡಿಗೆ ಕೊಡುವುದು ಎನ್ನುವ ಭಯ ಆರಂಭವಾಗಿದ್ದು, ಈ ನಿಟ್ಟಿನಲ್ಲಿ ಕೆಲ ನಿಯಮಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಮಾಲೀಕರು ಹೇಳುವ ಎಲ್ಲ ನಿಯಮಗಳಿಗೆ ಒಪ್ಪಿದರೆ ಮಾತ್ರವೇ ಬಾಡಿಗೆಗೆ ಮನೆ ಸಿಗಲಿದೆ ಎಂದು ಹೇಳಲಾಗಿದೆ.

ನಗರದಲ್ಲಿ ಇಲ್ಲಿಯವರೆಗೆ ಮನೆ ಮಾಲೀಕರು ಯಾವುದೇ ಸೂಕ್ತ ದಾಖಲೆಗಳನ್ನು ಪಡೆಯದೆ, ಬಾಡಿಗೆಗೆ ಮನೆಗಳನ್ನು ನೀಡುತ್ತಿದ್ದರು. ಇದನ್ನೇ ಬಂಡವಾಳ ಮಾಡಿಕೊಳ್ಳುವ ಕೆಲವರು ಅಪರಾಧ ಕೃತ್ಯಗಳಲ್ಲಿ ತೊಡಗಿ, ಕೊನೆಗೆ ಹೇಳದೇ ಕೇಳದೆ ತಲೆಮರೆಸಿಕೊಳ್ಳುತ್ತಿದ್ದು, ಅವರನ್ನು ಪತ್ತೆ ಹಚ್ಚುವುದೇ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಹೀಗಾಗಿ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಬೇಕೆಂಬ ನಿಟ್ಟಿನಲ್ಲಿ ಮನೆ ಮಾಲೀಕರು ಬಾಡಿಗೆಗೆ ಬರುವವರಿಗೆ ಕಟ್ಟುನಿಟ್ಟಿನ ನಿಯಮಗಳನ್ನು ಹೇರಲು ಮುಂದಾಗಿದ್ದಾರೆ.

ಮನೆ ಮಾಲೀಕರ ಬೇಡಿಕೆಗಳು

- ಆಧಾರ್ ಕಾರ್ಡ್ ಕೊಡದೆ ಕೆಲವರು ಕಳ್ಳಾಟ ಆಡುವುದರಿಂದ ಕಡ್ಡಾಯ ಆಧಾರ್ ಕೊಡಬೇಕು
- ಆಧಾರ್ ನಕಲಿಯೋ ಅಸಲಿಯೋ ತಿಳಿಯಲು ಹೆಲ್ಪ್ ಡೆಸ್ಕ್ ತೆರೆಯಲು ಒತ್ತಾಯ
- ಆಧಾರ್ ಕಾರ್ಡ್ ಜತೆಗೆ ಪ್ಯಾನ್ ಕಾರ್ಡ್, ವೋಟರ್ ಐಡಿ ಎಲ್ಲಾ ಕೊಡಬೇಕು
- ಗಲ್ಲಿ ಗಲ್ಲಿಯಲ್ಲೂ, ರಸ್ತೆಯಲ್ಲಿ ಸ್ಥಳೀಯ ಆಡಳಿತ ಸಿಸಿಟಿವಿ ಅಳವಡಿಸ ಬೇಕು
- ಮನೆಯಲ್ಲಿ ಆರಂಭದಲ್ಲಿ ಎಷ್ಟು ಜನ ಇರುತ್ತಾರೋ ಅಷ್ಟೇ ಜನರು ಇರಬೇಕು
- ಬಾಡಿಗೆ ಮನೆಯಲ್ಲಿ ಯಾವುದೇ ರೀತಿ ಪಾರ್ಟಿ ಮಾಡಲು ಅವಕಾಶ ಇರುವುದಿಲ್ಲ

ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಗೆ ಹೈಟೆಕ್ ಸ್ಪರ್ಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ (ಐಜಿಐಸಿಎಚ್) ಇನ್ನಷ್ಟು ಹೈಟೆಕ್ ಸ್ವರೂಪ ಪಡೆಯಲಿದ್ದು, 100 ಕೋಟಿ ರೂ. ವೆಚ್ಚದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸದ್ಯದಲ್ಲೇ ಕಾರ್ಯಾರಂಭವಾಗಲಿದೆ.

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಮಕ್ಕಳ ರಕ್ತದ ಕ್ಯಾನ್ಸರ್ ಸೇರಿದಂತೆ ಕೆಲ ಅಪರೂಪದ ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವ ಮಕ್ಕಳ ರಕ್ತದ ಕ್ಯಾನ್ಸರ್ ಸೇರಿದಂತೆ ಕೆಲ ಅಪರೂಪದ ಕಾಯಿಲೆಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಒದಗಿಸಲು 100 ಕೋಟಿ ರು. ವೆಚ್ಚದಲ್ಲಿ ಈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಯೋಜನೆ ರೂಪಿಸಲಾಗಿದೆ.

ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಇದುವರೆಗೆ ಮಕ್ಕಳ ಅಪರೂಪದ ಕಾಯಿಲೆಗಳಿಗೆ ಕರ್ನಾಟಕದಲ್ಲಿ ಚಿಕಿತ್ಸೆ ಒದಗಿಸಲು ಸೂಕ್ತ ವ್ಯವಸ್ಥೆಗಳು, ಮೆಡಿಕಲ್ ಉಪಕರಣಗಳು, ತಜ್ಞ ವೈದ್ಯರ ಕೊರತೆ ಎದುರಾಗಿತ್ತು. ಹೀಗಾಗಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ಈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹಲವು ಬಗೆಯ ಆಧುನಿಕ ಚಿಕಿತ್ಸೆಗಳು ಲಭ್ಯವಿರಲಿವೆ. ಮೂತ್ರಪಿಂಡ ಹಾಗೂ ಲಿವರ್ ಸಮಸ್ಯೆ ಅನುಭವಿಸುತ್ತಿರುವ ಮಕ್ಕಳಿಗಾಗಿ ನಿರ್ಮಿಸಲಾಗುತ್ತಿರುವ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸಾ ಘಟಕವು ಹಲವು ವಿಶೇಷತೆ ಒಳಗೊಂಡಿದೆ. ಜತೆಗೆ, ಮಕ್ಕಳ ರಕ್ತದ ಕ್ಯಾನ್ಸರ್ ಸೇರಿದಂತೆ ಮಕ್ಕಳಿಗೆ ಸಂಬಂಧಿಸಿದ ಅಪರೂಪದ ಕಾಯಿಲೆಗಳಿಗೆ ಅಸ್ಥಿಮಜ್ಜೆ ಕಸಿ ಚಿಕಿತ್ಸೆಯು ಲಭ್ಯವಿರಲಿದೆ. ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಬ್ಲಾಕ್‌ನ ಕಾಮಗಾರಿ ಅಂತಿಮ ಹಂತದಲ್ಲಿದೆ. ಕೆಲ ತಿಂಗಳುಗಳಲ್ಲೇ ಮಕ್ಕಳ ಚಿಕಿತ್ಸೆಗೆ ಸಿದ್ಧವಾಗಲಿದೆ. 9 ಅಂತಸ್ತಿನ 500 ಹಾಸಿಗೆಗಳ ಕಟ್ಟಡ ಇದಾಗಿದ್ದು, ಈಗಾಗಲೇ 9 ಅಂತಸ್ತಿನವರೆಗಿನ ಕಾಮಗಾರಿ ಪೂರ್ಣಗೊಂಡಿದೆ. ದೇಶದ ಮೂಲೆ-ಮೂಲೆಗಳಿಂದ ಮಕ್ಕಳನ್ನು ಚಿಕಿತ್ಸೆಗಾಗಿ ಇಂದಿರಾ ಗಾಂಧಿ ಆಸ್ಪತ್ರೆಗೆ ಕರೆತರುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳು ಆಸ್ಪತ್ರೆಗೆ ಬಂದರೆ ಇಲ್ಲಿ ಹಾಸಿಗೆ ಕೊರತೆ ಹಾಗೂ ಕೆಲ ಚಿಕಿತ್ಸೆಗಳಿಗೆ ವ್ಯವಸ್ಥೆಗಳಿಲ್ಲದೇ ಸಮಸ್ಯೆ ಎದುರಾಗುತ್ತಿದ್ದವು. ಆದರೆ, ಇದೀಗ ಸೂಪರ್ ಸ್ಪೆಷಾಲಿಟಿ ಬ್ಲಾಕ್‌ನಿಂದ ಈ ಸಮಸ್ಯೆ ಬಗೆಹರಿಯಲಿವೆ.

ಅತ್ಯಾಧುನಿಕ ಸೌಲಭ್ಯಗಳು

ಸೂಪರ್ ಸ್ಪೆಷಾಲಿಟಿ ಬ್ಲಾಕ್‌ನಲ್ಲಿ ಹೊರ ರೋಗಿಗಳ ವಿಭಾಗ, ಪ್ರಯೋಗಾಲಯ, ಶಸ್ತ್ರಚಿಕಿತ್ಸಾ ಕೊಠಡಿಗಳು, ಸಾಮಾನ್ಯ ವಾರ್ಡ್, ತೀವ್ರ ನಿಗಾ ಘಟಕ, ನವಜಾತ ಶಿಶುಗಳ ನಿಗಾ ಘಟಕ ಸೇರಿದಂತೆ ಮಕ್ಕಳ ಚಿಕಿತ್ಸೆಗೆ ಬೇಕಾಗಿರುವ ಆಧುನಿಕ ವ್ಯವಸ್ಥೆ ಒದಗಿಸಲಾಗುತ್ತಿದೆ. ಇದೇ ಕಟ್ಟಡದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಫೀಟಲ್ ಮೆಡಿಕಲ್ ವಿಭಾಗದಲ್ಲಿ ಶಿಶುಗಳು ಗರ್ಭದಲ್ಲಿರುವಾಗಲೇ ಆರೋಗ್ಯ ಸಮಸ್ಯೆ ಬಗ್ಗೆ ಪರಿಶೀಲಿಸಿ ಯಾವುದಾದರೂ ಸಮಸ್ಯೆಯಿದ್ದರೆ ಗರ್ಭದಲ್ಲಿರುವಾಗಲೇ ಚಿಕಿತ್ಸೆ ಒದಗಿಸಲು ಅವಕಾಶಗಳಿವೆ. ಹಲವಾರು ಸವಲತ್ತುಗಳನ್ನೊಳಗೊಂಡ ಸುಧಾರಿತ ವೈದ್ಯಕೀಯ ಉಪಕರಣವಿರುವ ಪ್ರಯೋಗಾಲಯ ನಿರ್ಮಾಣವಾಗುತ್ತಿದೆ.

ಮಕ್ಕಳಿಗಾಗಿ ಇರುವ ಏಕೈಕ ಆರೋಗ್ಯ ಸಂಸ್ಥೆ

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು ವಿಶೇಷವಾಗಿ ಮಕ್ಕಳಿಗಾಗಿಯೇ ಇರುವ ರಾಜ್ಯದ ಏಕೈಕ ಆರೋಗ್ಯ ಸಂಸ್ಥೆ. ಉಚಿತ ಅಥವಾ ಅತ್ಯಲ್ಪ ಶುಲ್ಕ ಪಡೆದು ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಪ್ರತಿದಿನ ಸುಮಾರು 500 ರೋಗಿಗಳು ಚಿಕಿತ್ಸೆಗೆ ಬರುತ್ತಿದ್ದು, ಆ ಪೈಕಿ 70-80 ಮಕ್ಕಳು ಒಳರೋಗಿಗಳಾಗಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಶಿಶು ಶಸ್ತ್ರಚಿಕಿತ್ಸೆ, ಮಕ್ಕಳ ನರರೋಗ ಚಿಕಿತ್ಸೆ, ಮಕ್ಕಳ ಅಸ್ಥಿ ಚಿಕಿತ್ಸೆ, ಕ್ಲಿನಿಕಲ್ ಜೆನೆಟಿಕ್ಸ್, ಹೃದ್ರೋಗ ಶಾಸ್ತ್ರ ಸೇರಿದಂತೆ 22 ಬಗೆಯ ಚಿಕಿತ್ಸೆಗಳನ್ನು ಸಂಸ್ಥೆಯು ನೀಡುತ್ತಿದೆ. 10 ಒಳರೋಗಿ ವಿಭಾಗ ಹೊಂದಿದೆ. ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಎಸ್. ಸಂಜಯ್ ಅವರ ನೇತೃತ್ವದಲ್ಲಿ ಉತ್ತಮ ಆರೈಕೆ ಕೇಂದ್ರವಾಗಿ ಮುನ್ನಡೆಯುತ್ತಿದೆ.

- ಡಾ.ಕೆ.ಎಸ್.ಸಂಜಯ್ ಅವರ ನೇತೃತ್ವದಲ್ಲಿ ಆಸ್ಪತ್ರೆ ಉತ್ತಮ ಆರೈಕೆ ಕೇಂದ್ರವಾಗಿ ಮುನ್ನಡೆ
- ಸುಧಾರಿತ ವೈದ್ಯಕೀಯ ಉಪಕರಣವಿರುವ ಪ್ರಯೋಗಾಲಯ ನಿರ್ಮಾಣ
- ಹೃದ್ರೋಗ ಶಾಸ್ತ್ರ ಸೇರಿದಂತೆ 22 ಬಗೆಯ ಚಿಕಿತ್ಸೆಗಳು ಲಭ್ಯ
- ಅಂಗಾಂಗ ಕಸಿ ಶಸ್ತ್ರ ಚಿಕಿತ್ಸಾ ಘಟಕದಲ್ಲಿ ಹಲವು ವಿಶೇಷತೆ

ಗಾರ್ಡನ್ ಸಿಟಿ ಟ್ಯಾಗ್ ಮರುಪಡೆಯಲು ಸಿದ್ಧತೆ

ಬೆಂಗಳೂರು: ಬೆಂಗಳೂರಿಗೆ ಗಾರ್ಡನ್ ಸಿಟಿ ಎನ್ನುವ ಟ್ಯಾಗ್‌ನ್ನು ಮರುಪಡೆದುಕೊಳ್ಳುವ ನಿಟ್ಟಿನಲ್ಲಿ ಹಾಗೂ ಪ್ರಕೃತಿಯ ಕುರಿತು ಜವಾಬ್ದಾರಿ ಬೆಳೆಸಿಕೊಳ್ಳುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರ ಸೂಚನೆ ಬೆನ್ನಲ್ಲೇ ಪಾಲಿಕೆಯ ಅರಣ್ಯ ವಿಭಾಗವು ಹಸಿರೀಕರಣಕ್ಕೆ ಮುಂದಾಗಿದೆ.

ಬಿಬಿಎಂಪಿ ಅರಣ್ಯ ವಿಭಾಗವು 2024-25ನೇ ಸಾಲಿನಲ್ಲಿ 89,500 ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಸೆ.15 ರವರೆಗೆ ನಗರಾದ್ಯಂತ 80,000 ಸಸಿಗಳನ್ನು ನೆಡಲಾಗಿದೆ. ನಗರಕ್ಕಿದ್ದ ಗಾರ್ಡನ್ ಸಿಟಿ ಎಂಬ ಟ್ಯಾಗ್‌ನ್ನು ಮತ್ತೆ ಪಡೆಯುವ ಸಲುವಾಗಿ ಪಾಲಿಕೆ ಸಸಿ ನೆಡುವ ಅಭಿಯಾನ ಆರಂಭಿಸಿದ್ದು, ಹಸಿರೀಕರಣಕ್ಕಾಗಿ ಹೆಚ್ಚಿನ ಸಸಿಗಳನ್ನು ನೆಡುವಂತೆ ಬಿಬಿಎಂಪಿ ಉನ್ನತ ಅಧಿಕಾರಿಗಳಿಗೆ ಡಿಸಿಎಂ ಸೂಚಿಸಿದ್ದಾರೆ.

ಹೊರವಲಯದಲ್ಲಿ ಸಸಿ ನೆಡುವ ಕಾರ್ಯ

ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಯೊಬ್ಬರು ಮಾತನಾಡಿ, ಎಂಟು ವಲಯಗಳಲ್ಲಿ 77,790 ಸಸಿಗಳನ್ನು ನೆಟ್ಟಿದ್ದು, ಹೊರವಲಯದ ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿಯಲ್ಲಿ ಅತಿ ಹೆಚ್ಚು ಸಸಿ ನೆಡಲಾಗಿದೆ. ಮುಂದಿನ ದಿನಗಳಲ್ಲಿ ಇತರೆ ಪ್ರದೇಶಗಳಲ್ಲಿಯೂ ಸಸಿ ನೆಡುವ ಅಭಿಯಾನ ಮುಂದುವರಿಸಲಾಗುವುದು. ಈಗಾಗಲೇ ಗುತ್ತಿಗೆದಾರರು ಕೆರೆ ಬಫರ್ ವಲಯಗಳು, ಉದ್ಯಾನವನಗಳು ಮತ್ತು ಇತರ ಪ್ರದೇಶಗಳಲ್ಲಿ ಗಿಡ ನೆಡುವ ಸಲುವಾಗಿ ಹೊಂಡಗಳನ್ನು ಅಗೆಯಲು ಪ್ರಾರಂಭಿಸಿದ್ದಾರೆ. ಕಾಮಗಾರಿ ಪಡೆದ ಏಜೆನ್ಸಿ ಅಥವಾ ಗುತ್ತಿಗೆದಾರರು 2027ರ ವರೆಗೆ ಇವುಗಳ ನಿರ್ವಹಣೆಯ ಹೊಣೆ ಹೊರಬೇಕಾಗಿದ್ದು, ಗಿಡ ನೆಡುವ ಸಲುವಾಗಿ ಸೂಕ್ತವಾದಂತಹ ಭೂಮಿಯನ್ನು ಹುಡುಕುವುದೇ ದೊಡ್ಡ ಸಮಸ್ಯೆಯಾಗಿದೆ ಎಂದರು.

ಕರಕುಶಲ ವಸ್ತುಗಳ ಪ್ರದರ್ಶನ

ಬೆಂಗಳೂರು: ಕರಕುಶಲ ವಸ್ತುಗಳ ಮೇಳ ಅ.6 ರವರೆಗೆ ಚಿತ್ರಕಲಾ ಪರಿಷತ್ತಿನಲ್ಲಿ ಗ್ರ್ಯಾಂಡ್ ಫ್ಲೀ ಮಾರ್ಕೆಟ್ ಆಯೋಜಿಸಿದೆ. ಕಂಟೆಂಟ್ ಕ್ರಿಯೇಟರ್ ಮಿಲನ್ ಸಿಂಘಾಲ್ ಅವರು ಈ ಕರಕುಶಲ ವಸ್ತು ಪ್ರದರ್ಶನ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಈ ಪ್ರದರ್ಶನದಲ್ಲಿ 100ಕ್ಕೂ ಹೆಚ್ಚು ಮಳಿಗೆಗಳಿವೆ. ಕುಶಲಕರ್ಮಿಗಳು ತಾವು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಲು ಇದೊಂದು ಉತ್ತಮ ವೇದಿಕೆ. ಕುಶಲಕರ್ಮಿಗಳ ಸೃಜನಾತ್ಮಕತೆ ಇಲ್ಲಿ ಪ್ರದರ್ಶನ ಗೊಂಡಿದೆ ಎಂದರು. ದಸರಾ ಹಬ್ಬ ಸಮೀಪಿಸುತ್ತಿದ್ದು, ಹಬ್ಬದ ಖರೀದಿಗೆ ಈ ಪ್ರದರ್ಶನ ಉತ್ತಮ ವೇದಿಕೆಯಾಗಿದೆ. ನಾನು ಇಲ್ಲಿ ಬೇಕಾದ ವಸ್ತುಗಳನ್ನು ಖರೀದಿಸುತ್ತಿದ್ದು, ಎಲ್ಲರೂ ಬಂದು ಪ್ರದರ್ಶನ ವೀಕ್ಷಿಸಿ, ಉತ್ಪನ್ನಗಳನ್ನು ಖರೀದಿಸುವ ಮೂಲಕ ಕುಶಲಕರ್ಮಿಗಳನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಅ.2ರಂದು ಗಾಂಧಿ ನಡಿಗೆ: ಡಿಕೆಶಿ

ಬೆಂಗಳೂರು: ಮಹಾತ್ಮ ಗಾಂಧಿ ಬೆಳಗಾವಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿಕೊಂಡು 100 ವರ್ಷವಾಗಿರುವ ಹಿನ್ನೆಲೆ ಒಂದು ವರ್ಷಗಳ ಕಾಲ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಅ.2ರಂದು ರಾಜ್ಯಾದ್ಯಂತ ಗಾಂಧಿ ನಡಿಗೆ ಹಾಗೂ ಸ್ವಚ್ಛತೆಯ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಮೊದಲ ಭಾಗವಾಗಿ ಅ.2ರ ಗಾಂಧಿ ಜಯಂತಿಯಂದು 1 ಕಿ. ಮೀ. 'ಗಾಂಧಿ ನಡಿಗೆ' ಮತ್ತು 'ಸ್ವಚ್ಛತಾ ಪ್ರತಿಜ್ಞಾ ಸ್ವೀಕಾರ' ಅಭಿಯಾನ ಆಯೋಜಿಸಲಾಗಿದ್ದು, ರಾಜ್ಯಾದ್ಯಂತ ಜಿಲ್ಲಾ, ತಾಲೂಕು ಕೇಂದ್ರ ಹಾಗೂ ಪಾಲಿಕೆ ಮಟ್ಟದಲ್ಲಿ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರಿನಲ್ಲಿಯೂ ಬುಧವಾರ ಬೆಳಗ್ಗೆ 9 ಗಂಟೆಗೆ ಗಾಂಧಿ ಭವನದಿಂದ ವಿಧಾನಸೌಧದ ಗಾಂಧಿ ಪ್ರತಿಮೆವರೆಗೂ ನಡಿಗೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಪಕ್ಷಾತೀತವಾಗಿ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು ಎಂದರು. 500 ಶಾಲಾ ಮಕ್ಕಳಿಗೆ ಜೂಮ್ ಮೂಲಕ ಪ್ರತಿಜ್ಞಾ ವಿಧಿ

> ರಾಜ್ಯದಲ್ಲಿ ಸಾರ್ವಜನಿಕರು ಪ್ರತಿಜ್ಞಾ ವಿಧಿ ತೆಗೆದುಕೊಳ್ಳಲು ಒಂದು ಆ್ಯಪ್ ಸಿದ್ಧಪಡಿಸಲಾಗಿದ್ದು, ಈಗಾಗಲೇ 35 ಸಾವಿರ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಪ್ರತಿಜ್ಞಾ ವಿಧಿ ಪಡೆದವರಿಗೆ ಆನ್ ಲೈನ್ ನಲ್ಲೇ ಪ್ರಮಾಣಪತ್ರ ನೀಡಲಾಗುವುದು. ಇದು ಮೊದಲ ಹಂತದ ಕಾರ್ಯಕ್ರಮವಾಗಿದ್ದು, ಇಡೀ ವರ್ಷ ಬೇರೆ ಬೇರೆ ಕಾರ್ಯಕ್ರಮ ಮಾಡಲಾಗುವುದು.
> - **ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಇಬ್ಬರ ಜನ್ಮದಿನವೂ ಒಂದೇ ದಿನವಾಗಿರುವ ಕಾರಣ ಇಬ್ಬರ ಪ್ರತಿಮೆಗೂ ಮಾಲಾರ್ಪಣೆ ಮಾಡಲಾಗುವುದು. ನಂತರ ನಡಿಗೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಹಾಗೂ ಬೆಂಗಳೂರಿನ 500 ಶಾಲಾ, ಕಾಲೇಜು ಮಕ್ಕಳಿಗೆ ಜೂಮ್ ಮೂಲಕ ಪ್ರತಿಜ್ಞಾ ವಿಧಿ ಬೋಧನೆ ಮಾಡಲಾಗುವುದು.

ಕುಡಿಯುವ ನೀರಿನ ವ್ಯವಸ್ಥೆ ಕಾಮಗಾರಿ; ಸಂಚಾರ ನಿರ್ಬಂಧ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಜಲಮಂಡಳಿ ವತಿಯಿಂದ 1900 ಎಂಎಂ ಡಯಾ ಪೈಪ್ ಲೈನ್‌ಗಳ ಅಳವಡಿಕೆ ಕಾಮಗಾರಿ ನಡೆಯುತ್ತಿರುವ ಹಿನ್ನಲೆ ಕೆಲ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಬಿಬಿಎಂಪಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಕಾವೇರಿ ಐದನೇ ಹಂತದ ಯೋಜನೆಯ ಕಾಮಗಾರಿ ನಡೆಯುತ್ತಿದ್ದು, ಅಂತಿಮ ಹಂತ ತಲುಪಿದೆ. ಇತ್ತೀಚಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಕಾಮಗಾರಿಯ ಪರಿಶೀಲನೆ ನಡೆಸಿದ್ದರು. ಈಗ 110 ಹಳ್ಳಿಗಳಿಗೆ ಕುಡಿಯುವ ನೀರು ತಲುಪಿಸಲು ಉತ್ತರಹಳ್ಳಿ ರಸ್ತೆಯಲ್ಲಿ ಜಲಮಂಡಳಿ 1900 ಎಂಎಂ ಡಯಾ ಪೈಪ್ ಲೈನ್‌ಗಳನ್ನು ಅಳವಡಿಸುವ ಕಾಮಗಾರಿ ನಡೆಸುತ್ತಿರುವುದರಿಂದ ಉತ್ತರಹಳ್ಳಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆಯುಂಟಾಗಿದೆ. ಹೀಗಾಗಿ ಸುಗಮ ಸಂಚಾರ ದೃಷ್ಟಿಯಿಂದ ಬಿಜಿಎಸ್ ಜಂಕ್ಷನ್‌ನಿಂದ ಮಧು ಪೆಟ್ರೋಲ್ ಬಂಕ್ ಜಂಕ್ಷನ್ (ಪೂರ್ವದಿಂದ ಪಶ್ಚಿಮಕ್ಕೆ) ವರೆಗಿನ ರಸ್ತೆಯಲ್ಲಿ ಶುಕ್ರವಾರ ಸೆ.27ರಿಂದ ಒಂದು ತಿಂಗಳ ಕಾಲ ಎಲ್ಲ ಮಾದರಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ

ಬಿಜಿಎಸ್ ಜಂಕ್ಷನ್ ಕಡೆಯಿಂದ ಮಧು ಪೆಟ್ರೋಲ್ ಬಂಕ್ ಜಂಕ್ಷನ್ (ಮೈಸೂರು ರಸ್ತೆ) ಕಡೆಗೆ ಸಂಚರಿಸುವ ವಾಹನಗಳು ಬಿಜಿಎಸ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಮೂಕಾಂಬಿಕ ಸರ್ಕಲ್, ವೃಷಭಾವತಿ ಮೋರಿ ಬ್ರಿಡ್ಜ್ ಮೂಲಕ ಮೈಸೂರು ರಸ್ತೆಗೆ ಪ್ರವೇಶಿಸಬ ಹುದು. ಮೈಸೂರು ರಸ್ತೆಯಿಂದ ಉತ್ತರಹಳ್ಳಿಗೆ ಹೋಗುವ ವಾಹನಗಳು ಮೈಲಸಂದ್ರ ವಿಲೇಜ್ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ವಿಲೇಜ್ ಬ್ಯಾಕ್ ಗೇಟ್ ರಸ್ತೆ ಹಾಗೂ ಬಿಜಿಎಸ್ ಜಂಕ್ಷನ್ ಮೂಲಕ ಉತ್ತರಹಳ್ಳಿಗೆ ತಲುಪಬಹುದಾಗಿ ರುತ್ತದೆ. ನಗರದ ಕಡೆಯಿಂದ ಉತ್ತರಹಳ್ಳಿಗೆ ಹೋಗುವ ವಾಹನಗಳು ಮೈಲಸಂದ್ರ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಬಿಜಿಎಸ್ ಜಂಕ್ಷನ್ ಮೂಲಕ ಸಾಗಬಹುದು ಎಂದು ಬೆಂಗಳೂರು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಇದು ಸರಕಾರದ ಕಾರ್ಯಕ್ರಮ, ಗಾಂಧಿ ಅವರ ಆದರ್ಶವನ್ನು ಯುವ ಪೀಳಿಗೆಗೆ ತಲುಪಿಸಲು ಈ ಕಾರ್ಯಕ್ರಮ ರೂಪಿಸಿದೆ ಎಂದರು.

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಪಿ.ಸುಧೀಂದ್ರ ಅವರು ನೇಪಾಳಕ್ಕೆ ಭೇಟಿನೀಡಿ ಕಠ್ಮಂಡುವಿನಲ್ಲಿ ಹಂಗಾಮಿ ಪ್ರಧಾನಿ ಪ್ರಕಾಶ್ ಮಾನ್‌ಸಿಂಗ್‌ರೊಂದಿಗೆ ಸಮಾಲೋಚನೆ ನಡೆಸಿದರು.

ಸಮಾಚಾರ ಸಣ್ಣದಲ್ಲ

ಮಳೆ: 4 ಜಿಲ್ಲೆಗಳಿಗೆ ಯಲ್ಲೋ ಅಲರ್ಟ್

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆ ಮುಗಿಯಲು ಒಂದೆರಡು ದಿನ ಮಾತ್ರ ಬಾಕಿ ಇರುವ ನಡುವೆ ಮುಂದಿನ 24 ಗಂಟೆಗಳಿಗೆ ನಾಲ್ಕು ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ. ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ. ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಮುಂದಿನ 24 ಗಂಟೆಗಳ ಕಾಲ ಭಾರಿ ಮಳೆ ಬೀಳುವ ಸಂಭವ ಇರುವುದರಿಂದ ಯೆಲ್ಲೋ ಅಲರ್ಟ್ ನೀಡಲಾಗಿದ್ದು, ಮುಂದಿನ 24 ಗಂಟೆಗಳ ಕಾಲ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜ ನಗರ, ತುಮಕೂರು, ರಾಮನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಕರ್ನಾಟಕದ ಉಳಿದ ಜಿಲ್ಲೆಗಳಲ್ಲಿ ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ ಕರ್ನಾಟಕದ ಜಿಲ್ಲೆಗಳಲ್ಲಿ ಕೆಲವು ಸ್ಥಳಗಳಲ್ಲಿ ಹಗುರ ಸಾಧಾರಣ ಮಳೆಯಾಗಲಿದೆ. ಇನ್ನು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ಹಗುರ ಮಳೆಯಾಗುವ ಸಂಭವ ಹೆಚ್ಚಿದೆ ಎಂದು ಎಂದು ಹವಾಮಾನ ಇಲಾಖೆ ತಿಳಿಸಿದೆ. ಬೆಂಗಳೂರು ನಗರ ಮತ್ತು ಸುತ್ತಮುತ್ತಲೀನ ಪ್ರದೇಶಗಳಲ್ಲಿ ಮುಂದಿನ 24 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಸಾಧಾರಣ ಮಳೆ, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 29 ಡಿಗ್ರಿ ಮತ್ತು 20 ಡಿಗ್ರಿ ದಾಖಲಾಗಲಿದೆ ಎಂದು ಹೇಳಿದೆ.

ಸಿಎಂ ವಿರುದ್ಧ ಇಡಿಗೆ ದೂರು

ಬೆಂಗಳೂರು: ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಎಫ್‌ಐಆರ್ ಬೆನ್ನಲ್ಲೇ ಈಗ ಜಾರಿ ನಿರ್ದೇಶನಾಲಯ (ಇಡಿ) ಭೀತಿ ಎದುರಾಗಿದೆ. 59 ಕೋಟಿ ರು. ಮೌಲ್ಯದ 14 ಸೈಟುಗಳ ಹಗರಣದಲ್ಲಿ ತನಿಖೆ ನಡೆಸಬೇಕು ಎಂದು ಜಾರಿ ನಿರ್ದೇಶನಾಲಯಕ್ಕೆ ಇ-ಮೇಲ್ ಮೂಲಕ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರು ನೀಡಿದ್ದಾರೆ. ಬೆಂಗಳೂರಿನ ಇಡಿ ಜಂಟಿ ನಿರ್ದೇಶಕರಿಗೆ 16 ಪುಟಗಳ ದೂರಿನ ಅರ್ಜಿ ಬರೆದು ಇ-ಮೇಲ್ ಮೂಲಕ ಕಳಿಸಿರುವ ಸ್ನೇಹಮಹಿ ಕೃಷ್ಣ, ಸಿದ್ದರಾಮಯ್ಯ ವಿರುದ್ಧ ಅಕ್ರಮ ಹಣ ವರ್ಗಾವಣೆ ಕಾಯಿದೆ ಅಡಿಯಲ್ಲಿ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ. ಮುಡಾದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ಸಿಎಂ ಸಿದ್ದರಾಮಯ್ಯ ಅಧಿಕಾರ ದುರ್ಬಳಕೆ ಮಾಡಿಕೊಂಡು ಮುಡಾದಲ್ಲಿ ಪತ್ನಿಯ ಹೆಸರಿನಲ್ಲಿ 14 ನಿವೇಶನ ಪಡೆದಿದ್ದಾರೆ ಎಂದು ಸಹ ದೂರರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ಕಾರ್ಮಿಕನಿಂದ ಮ್ಯಾನೇಜರ್ ಹತ್ಯೆ

ಹುಣಸೂರು: ಕ್ಷುಲ್ಲಕ ಕಾರಣಕ್ಕೆ ಹಂದಿಫಾರ್ಮ್ ಕಾರ್ಮಿಕನೊಬ್ಬ ಕೇರಳ ಮೂಲದ ವ್ಯವಸ್ಥಾಪಕನನ್ನೇ ಚಾಕುವಿನಿಂದ ಇರಿದು ಕೊಲೆ ಮಾಡಿದ ಘಟನೆ ಶುಕ್ರವಾರ ತಡರಾತ್ರಿ ತಾಲೂಕಿನ ಹನಗೋಡಿಗೆ ಸಮೀಪದ ಹೆಬ್ಬಳ್ಳ ಗ್ರಾಮದಲ್ಲಿ ನಡೆದಿದೆ. ವಯನಾಡ್ ಜಿಲ್ಲೆಯ ಗಿರೀಶ್ ಅಬ್ರಹಾಂ(38)ಕೊಲೆಯಾದ ವ್ಯಕ್ತಿ. ಕೇರಳದವನೇ ಆದ ಶಂಷುದ್ದೀನ್ ಕೊಲೆ ಆರೋಪಿಯಾಗಿದ್ದು, ಆತನನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾಂಗ್ರೆಸ್ಸಿಗರಿಂದ ನಿರ್ಮಲಾ ರಾಜೀನಾಮೆಗೆ ಆಗ್ರಹ | ಕೇಂದ್ರ ಸಚಿವರ ವಿರುದ್ಧ ಆರೋಪ ಪಟ್ಟಿ ಬಿಡುಗಡೆ

ಮುಡಾ ಪ್ರಕರಣಕ್ಕೆ ನಿರ್ಮಲಾ ಪ್ರಕರಣ ಪ್ರತ್ಯಸ್ತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿದ್ದ ಬಿಜೆಪಿಗರ ವಿರುದ್ಧ ಇದೀಗ ಕಾಂಗ್ರೆಸಿಗರು ನಿರ್ಮಲಾ ಸೀತಾರಾಮನ್ ವಿರುದ್ಧ ದಾಖಲಾಗಿರುವ ಪ್ರಕರಣವನ್ನು 'ಪ್ರತ್ಯಾಸ್ತ್ರ'ದ ರೀತಿ ಬಳಸಲು ಮುಂದಾಗಿದೆ.

ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದ ಮೇರೆಗೆ ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್, ಇಡಿ ಅಧಿಕಾರಿಗಳು ಸೇರಿದಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯಾಧ್ಯಕ್ಷ ವಿಜಯೇಂದ್ರ, ನಳೀನ್‌ಕುಮಾರ್ ಕಟೀಲ್ ಸೇರಿದಂತೆ ಅನೇಕರ ವಿರುದ್ಧ ದೂರು ದಾಖಲಾಗಿದೆ. ಇದೀಗ ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸಿದ್ದಾರೆ.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿಗಳ ರಾಜೀನಾಮೆ ಕೇಳುತ್ತಿರುವ ಬಿಜೆಪಿಗರು ಚುನಾವಣಾ ಬಾಂಡ್ ವಿಷಯದಲ್ಲಿ ಮಾಡಿರುವುದೇನು? ಸಿಎಂ ರಾಜೀನಾಮೆಯನ್ನು ಕೇಳುವ ಮೊದಲು ಅವರ ಪಕ್ಷದ ಸಚಿವರಿಂದ ರಾಜೀನಾಮೆ ಕೇಳಲಿ ಎಂದು ಕಾಂಗ್ರೆಸ್ ನಾಯಕರು ಒತ್ತಾಯಿಸುತ್ತಿದ್ದಾರೆ.

ಸಿದ್ದರಾಮಯ್ಯ ಪ್ರಕರಣದಲ್ಲಿ ಎಫ್‌ಐಆರ್ ದಾಖಲಾಗುತ್ತಿದ್ದಂತೆ ರಾಜೀನಾಮೆಗೆ ಆಗ್ರಹಿಸಿದ್ದ ಬಿಜೆಪಿಗರು ಇದೀಗ, ನಿರ್ಮಲಾ ಅವರ ಪ್ರಕರಣದಲ್ಲಿ ಇದೊಂದು ರಾಜಕೀಯ ಷಡ್ಯಂತ್ರ ಎನ್ನುವ ಮಾತುಗಳನ್ನು ಆಡುತ್ತಿದ್ದಾರೆ. ಎರಡು ನಾಲಿಗೆಯ ಬಿಜೆಪಿಗೆ ಇನ್ನು ಮುಂದೆ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ನೈತಿಕತೆಯಿಲ್ಲ ಎಂದು ನಾಯಕರು ಟೀಕಿಸಿದ್ದಾರೆ.

ಬೆಂಗಳೂರಿನಲ್ಲಿ ಶನಿವಾರ ಬಿಜೆಪಿ ವಿರುದ್ಧ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಸಲಾಯಿತು.

ಕೆಪಿಸಿಸಿಯಿಂದ ಪ್ರತಿಭಟನೆ: ಈ ನಡುವೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನೋಹರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ರಾಜಕೀಯ ಷಡ್ಯಂತ್ರ ಮಾಡುತ್ತಿರುವ ಬಿಜೆಪಿ ಜೆಡಿಎಸ್‌ನ ಕೆಲವು ಭ್ರಷ್ಟಾಚಾರಿಗಳು ಸಿದ್ದರಾಮಯ್ಯನವರ ರಾಜೀನಾಮೆ ನೀಡಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಆದರೆ ಈಗ ಕೋಟ್ಯಂತರ ಅಕ್ರಮ ಚುನಾವಣಾ ಬಾಂಡ್ ಹಗರಣದಲ್ಲಿ ಭಾಗಿಯಾಗಿರುವ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ರಾಜೀನಾಮೆಗೆ ಯಾಕೆ ನೀವು ಒತ್ತಾಯಿಸುವುದಿಲ್ಲ ಎಂಬುದರ ಬಗ್ಗೆ ಬಿಜೆಪಿ ಜೆಡಿಎಸ್ ಜನತೆಗೆ ತಿಳಿಸಬೇಕು ಎಂದು ಆಗ್ರಹಿಸಿದರು. ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಕೂಡ ಈ ಹಗರಣದಲ್ಲಿ ಆರೋಪಿಯಾಗಿದ್ದಾರೆ. ಸಾರ್ವಜನಿಕರ ಹಣವನ್ನು ಲೂಟಿ ಮಾಡಿ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕೇಂದ್ರ ಸರಕಾರದ ಮಂತ್ರಿಗಳು ವಾಮಮಾರ್ಗದಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿರುವುದು ಈಗ ದೇಶದ ಜನತೆಗೆ ತಿಳಿದಿದೆ. ಇವರ ವಿರುದ್ಧ ಪ್ರಧಾನಿ ನರೇಂದ್ರಮೋದಿ ಕ್ರಮ ಕೈಗೊಳ್ಳುತ್ತಾರಾ? ಎಂದು ಪ್ರಶ್ನಿಸಿದರು.

ನಿರ್ಮಲ ಸೀತಾರಾಮನ್ ಆರೋಪಿಯಾಗಿರುವ ಹಿನ್ನೆಲೆಯಲ್ಲಿ ಪ್ರಧಾನಿಯವರು ಸಹ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು, ಭ್ರಷ್ಟಾಚಾರ ಎಂದರೆ ಬಿಜೆಪಿ ಬಿಜೆಪಿ ಎಂದರೆ ಭ್ರಷ್ಟಾಚಾರ ಆಡಳಿತ ಪಕ್ಷದ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರೆಸುವ ಬಿಜೆಪಿ ನಾಯಕರು ಈಗ ರಾಜೀನಾಮೆ ಕೇಳುವ ನೈತಿಕತೆಯನ್ನು ಕಳೆದುಕೊಂಡಿದ್ದಾರೆ.

ಕೇಂದ್ರದ ಸಚಿವರ ವಿರುದ್ಧ ಪ್ರಕರಣ ಮುನ್ನೆಲೆ

ರಾಜ್ಯ ಕಾಂಗ್ರೆಸಿಗರು ಪ್ರಧಾನಿ ನರೇಂದ್ರ ಮೋದಿ ಸಂಪುಟದಲ್ಲಿರುವ ಯಾವೆಲ್ಲ ಸಚಿವರ ವಿರುದ್ಧ ಭ್ರಷ್ಟಾಚಾರದ ಆರೋಪಗಳಿವೆ ಎನ್ನುವುದನ್ನು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಪಡಿಸುವ ಕಾರ್ಯ ಮಾಡುತ್ತಿದ್ದಾರೆ. ಕೇಂದ್ರ ಸಚಿವ ಕುಮಾರಸ್ವಾಮಿ ಸೇರಿದಂತೆ 28 ಸಚಿವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳಿದ್ದು ಇವುಗಳಲ್ಲಿ ಎಫ್‌ಐಆರ್ ದಾಖಲಾಗಿದೆ. ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸುವ ಮೊದಲು ಬಿಜೆಪಿಗರು ತಮ್ಮ ಸಂಪುಟ ಸಚಿವರ ರಾಜೀನಾಮೆಗೆ ಆಗ್ರಹಿಸಬೇಕು ಎಂದು ಟೀಕಿಸಿದ್ದಾರೆ.

ದಾಖಲೆ ಬಿಡುಗಡೆ ಮಾಡದಂತೆ ತಡೆದವರು ಯಾರು: ಡಿಕೆಶಿ

ದಾಖಲೆ ಬಿಡುಗಡೆ ಮಾಡಿ

ಬೆಂಗಳೂರು: ಶೀಘ್ರದಲ್ಲಿಯೇ ವಿವಿಧ ಸಚಿವರ ವಿರುದ್ಧದ ಅಕ್ರಮಗಳ ದಾಖಲೆ ಬಿಡುಗಡೆ ಮಾಡುವುದಾಗಿ ಹೇಳಿದ್ದ ಎಚ್.ಡಿ. ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿ ರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕುಮಾರಸ್ವಾಮಿಯವರಿಗೆ ಅವರ ಬಳಿ ಇರುವ ದಾಖಲೆಗಳನ್ನು ಬಿಡುಗಡೆ ಮಾಡಬೇಡಿ ಎಂದು ಅವರನ್ನು ಹಿಡಿದುಕೊಂಡವರು ಯಾರು? ಎಂದು ಸವಾಲು ಹಾಕಿದ್ದಾರೆ. ಸಾತನೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ನನ್ನ ಬಳಿ ಇರುವ ದಾಖಲೆಗಳನ್ನು ಬಿಡುಗಡೆ ಮಾಡಿದರೆ ಕಾಂಗ್ರೆಸ್ ಸರಕಾರದ ಏಳು ಮಂತ್ರಿಗಳು ರಾಜೀನಾಮೆ ನೀಡಬೇಕಾಗುತ್ತದೆ ಎಂದಿದ್ದಾರೆ. ದಾಖಲೆಗಳಿದ್ದರೆ ಅದನ್ನು ಬಿಡುಗಡೆ ಮಾಡಲಿ. ಬೇಡ ಎಂದವರು ಯಾರು ಎಂದರು.

ಸಿಎಂಗೆ ಕಾಂಗ್ರೆಸ್ ಬೆಂಬಲ ಅಚಲ: ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಲಿ ಎಂದು ಬಿಜೆಪಿ ಒತ್ತಾಯ ಮಾಡುತ್ತಿದೆ. ಕುಮಾರ ಸ್ವಾಮಿಯವರು ಮೌನವಾಗಿದ್ದಾರೆ ಎನ್ನುವ ಮಾತುಗಳಿವೆ. ಆದರೆ ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ನಮ್ಮ ಪಕ್ಷ ಸಿದ್ದರಾಮಯ್ಯ ಅವರ ಬೆಂಬಲಕ್ಕಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಇದರ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದಾರೆ. ನಮಗೆ ಬಿಜೆಪಿ ಮತ್ತು ದಳ ಎರಡೂ ಒಂದೇ ಎಂದರು.

ಕನಕಪುರದಲ್ಲಿ ಜೆಡಿಎಸ್ ಸದಸ್ಯತ್ವ ಅಭಿಯಾನ ಬಗ್ಗೆ ಪ್ರತಿಕ್ರಿಯಿಸಿ, ಅವರ ಕೆಲಸ ಅವರು ಮಾಡಲಿ. ಜನರು ಬಿಜೆಪಿ ಅಥವಾ ಜೆಡಿಎಸ್ ಯಾವುದಕ್ಕೆ ಸದಸ್ಯರಾಗುತ್ತಾರೆ? ಅವರ ಸದಸ್ಯತ್ವ ಅಭಿಯಾನವನ್ನು ನಾವು ಬೇಡ ಎನ್ನಲು ಆಗುತ್ತದೆಯೇ? ಅವರ ಪಕ್ಷವನ್ನು ಅವರು ಬಿಗಿ ಮಾಡಿಕೊಳ್ಳಲಿ. ನಾವು ಮಾಡಿದಂತೆ ಅವರು ಮಾಡುತ್ತಿದ್ದಾರೆ. ಇದರಿಂದ ರಾಜಕೀಯವಾಗಿ ಯಾರು ಗೌಪ್ಯವಾಗಿರುತ್ತಾರೆ ಅವರು ಹೊರಗೆ ಬರುತ್ತಾರೆ ಎಂದು ಹೇಳಿದರು.

ಮಾಜಿ ಸಂಸದ ಪ್ರತಾಪಸಿಂಹ ಎಚ್ಚರಿಕೆ ಹಿನ್ನೆಲೆಯಲ್ಲಿ ಕ್ರಮ | ನಿಷೇಧಾಜ್ಞೆ ಜಾರಿ

ಮಹಿಷ ಮಂಡಲೋತ್ಸವಕ್ಕೆ ತಡೆ

ಮೈಸೂರು: ಉದ್ದೇಶಿತ ಮಹಿಷ ಮಂಡಲೋತ್ಸವ

ಹಾಗೂ ಮಹಿಷ ದಸರಾ ಆಚರಣೆ ಹಿನ್ನೆಲೆಯಲ್ಲಿ ಪರಿಸ್ಥಿತಿ ನಿಯಂತ್ರಿಸುವ ಸಲುವಾಗಿ ಶನಿವಾರ ಮಧ್ಯ ರಾತ್ರಿಯಿಂದ ಸೋಮವಾರ ಮಧ್ಯ ರಾತ್ರಿವರೆಗೆ ಮೈಸೂರಿನಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಸೆಪ್ಟೆಂಬರ್ 29 ರಂದು ಬೆಳಗ್ಗೆ 8.30 ಗಂಟೆಗೆ ಚಾಮುಂಡಿಬೆಟ್ಟದಲ್ಲಿನ ಮಹಿಷಾಸುರನ ಪ್ರತಿಮೆಗೆ ಪುಷ್ಪಾರ್ಚನೆ ಕಾರ್ಯಕ್ರಮ ಮತ್ತು ಬೆಳಗ್ಗೆ 10.30ಕ್ಕೆ ನಗರದ ಪುರಭವನದ ಹೊರ ಆವರಣದಲ್ಲಿ ಮಹಿಷ ಮಂಡಲೊತ್ಸವ ಹಮ್ಮಿಕೊಳ್ಳಲಾಗಿತ್ತು.

ಇದನ್ನು ವಿರೋಧಿಸಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ , ಕಾರ್ಯಕ್ರಮ ತಡೆಯುವ ಸಂಬಂಧ ತಾವು ಯಾವುದೇ ಹೋರಾಟಕ್ಕೂ ಸಿದ್ದ ಎಂದು ಕರೆ ನೀಡಿದ ಹಿನ್ನೆಲೆಯಲ್ಲಿ ಎಚ್ಚೆತ್ತ ಪೊಲೀಸರು ಕಾನೂನು ಮತ್ತು ಸುವ್ಯಸ್ಥೆ ಕಾಪಾಡುವ ನಿಟ್ಟಿನಲ್ಲಿ ಮೈಸೂರು ನಗರದ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಚಾಮುಂಡಿ ಬೆಟ್ಟ ಸೇರಿದಂತೆ (ಟೌನ್‌ಹಾಲ್ ಒಳ ಅವರಣ ಹೊರತುಪಡಿಸಿ) ಸೆ.28ರ ಮಧ್ಯರಾತ್ರಿ 12 ಗಂಟೆಯಿಂದ ಸೆ.30 ರ ಬೆಳಗ್ಗೆ 6 ಗಂಟೆಯವರೆಗೆ ಮಹಿಷ ಮಂಡಲೋತ್ಸವ / ಮಹಿಷ ದಸರಾ ಆಚರಿಸದಂತೆ ನಿರ್ಬಂಧ ಹೇರಿದ್ದಾರೆ. ಅದರಂತೆ ಪ್ರತಿಭಟನಾ ರ‍್ಯಾಲಿ, ಘೋಷಣೆ, ಪಟಾಕಿ ಸಿಡಿಸಿ ಸಂಭ್ರಮಾಚರಣೆ, ಸಭೆ, ಸಮಾರಂಭ , ಫ್ಲೆಕ್ಸ್, ಬ್ಯಾನರ್, ಧ್ವನಿವರ್ಧಕ , ಜನರು ಗುಂಪುಗೂಡುವುದನ್ನು ನಿಷೇಧಿಸಲಾಗಿದೆ.

ಯಾವುದೇ ಸಂಘಟನೆ ಅಥವಾ ಸಾರ್ವಜನಿಕರು ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಹಾಗೂ ಸಭೆ-ಸಮಾರಂಭ ಮೆರವಣಿಗೆ, ಪ್ರತಿಭಟನೆ, ರ‍್ಯಾಲಿ ನಡೆಸಲು ಪ್ರಯತ್ನಿಸಿದಲ್ಲಿ ಅಲ್ಲಿ ಸೇರಿರುವ ಜನರ ಕೂಟವನ್ನು ಅಕ್ರಮ ಕೂಟವೆಂದು ಪರಿಗಣಿಸಿ, ಆದೇಶ ಉಲ್ಲಂಘನೆ ಕುರಿತಂತೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

> ಯಾರಿಗೂ ಯಾವುದೇ ರೀತಿಯ ತೊಂದರೆಯಾಗದಂತೆ ಯಾರು ಬೇಕಾದರೂ ಅವರ ಧಾರ್ಮಿಕ ಆಚರಣೆ ಮಾಡಿಕೊಳ್ಳಬಹುದು. ಆದರೆ, ಕಾನೂನು ಸುವ್ಯವಸ್ಥೆಗೆ ಸಮಸ್ಯೆ ಆಗಬಾರದು ಅಷ್ಟೆ. ಇಂತಹದನ್ನು ಮಾಡಿ, ಮಾಡಬೇಡಿ ಎಂದು ಹೇಳಲು ನಾವು ಯಾರು?. ಭಾರತದ ನಾಗರೀಕತೆಯಲ್ಲೇ ನೀರು, ಕಲ್ಲು, ಮಣ್ಣನ್ನು ಪೂಜೆ ಮಾಡುವ ಸಂಸ್ಕೃತಿ ಇದೆ. ಅವರವರ ಧಾರ್ಮಿಕ ನಂಬಿಕೆ ಅವರವರದ್ದು. ನೀವು ಮಾಡಲೇ ಬೇಡಿ ಎಂದು ವಿರೋಧ ಮಾಡುವುದಕ್ಕೆ ಯಾರಿಗೂ ಹಕ್ಕಿಲ್ಲ. ಎಲ್ಲಾ ಪರಿಸ್ಥಿತಿಯನ್ನು ಪೊಲೀಸರು ಸಮರ್ಥವಾಗಿ ನಿಭಾಯಿಸುತ್ತಾರೆ.
> -**ಡಾ.ಎಚ್.ಸಿ.ಮಹದೇವಪ್ಪ**, ಸಚಿವ

ಪಿಡಿಒ ನೇಮಕಾತಿಗಾಗಿ ಗ್ರಾಪಂ ಮುಂದೆ ಏಕಾಂಗಿಯಾಗಿ ಮೌನ ಪ್ರತಿಭಟನೆ

ಚಿಕ್ಕಮಗಳೂರು: ಗ್ರಾಮ ಪಂಚಾಯಿತಿಗೆ ಪಿಡಿಒ ನೇಮಕ ಮಾಡುವಂತೆ ಆಗ್ರಹಿಸಿ, ವ್ಯಕ್ತಿಯೊಬ್ಬರು ಪಂಚಾಯಿತಿ ಮುಂದೆ ಏಕಾಂಗಿಯಾಗಿ ಮೌನ ಪ್ರತಿಭಟನೆ ನಡೆಸಿರುವ ಘಟನೆ ಚಿಕ್ಕಮಗಳೂರು ಜಿಲ್ಲೆಯ ತರುವೆ ಗ್ರಾಮದಿಂದ ವರದಿಯಾಗಿದೆ. ಗ್ರಾಮಸ್ಥ ಸಂಜಯ್ ಎಂಬುವರು ಗ್ರಾ.ಪಂ. ವ್ಯಾಪ್ತಿಯಲ್ಲಿ ಪಿಡಿಒ ಇಲ್ಲದೇ ಯಾವುದೇ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ. 15ನೇ ಹಣಕಾಸು ಯೋಜನೆಯಡಿ ಹಣವಿದ್ದರೂ ಯಾವುದೇ ಕೆಲಸ ಆಗುತ್ತಿಲ್ಲ. ಇರುವ ಪಿಡಿಒ ವಾರಕ್ಕೆ ಒಂದು ಅಥವಾ ಎರಡು ಬಾರಿ ಬಂದು ಹೋಗುತ್ತಾರೆ. ಇದರಿಂದ ಗ್ರಾಮ ಪಂಚಾ ಯಿತಿ ವ್ಯಾಪ್ತಿಯ ಕೆಲಸ ಕಾರ್ಯಗಳು ಹಾಗೇ ಉಳಿದಿವೆ. ಹಾಗಾಗಿ, ಕಾಯಂ ಪಿಡಿಒ ಅವರನ್ನ ನೇಮಕ ಮಾಡುವಂತೆ ಆಗ್ರಹಿಸಿ ಧರಣಿ ನಡೆಸಿದ್ದಾರೆ.

ಎಡಿಜಿಪಿ ಹೆಸರಿನಲ್ಲಿ ಬೆದರಿಸಿ ಹಣ ಕಿತ್ತ ಆರೋಪಿ

ಸ್ವಾಮೀಜಿಗೆ 1 ಕೋಟಿ ರು. ವಂಚನೆ

ಬಾಗಲಕೋಟೆ: ಎಡಿಜಿಪಿ ಹೆಸರಿನಲ್ಲಿ ಸ್ವಾಮೀಜಿಯೊಬ್ಬರಿಗೂ 1 ಕೋಟಿ ರು. ಬ್ಲಾಕ್‌ಮೇಲ್ ಮಾಡಿರುವ ಘಟನೆ ಜಿಲ್ಲೆಯಲ್ಲಿ ನಡೆದಿದೆ. ಪರಮಹಂಸ ಪರಮ ರಾಮಾರೂಢ ಸ್ವಾಮೀಜಿ ಮೋಸಕ್ಕೆ ಒಳಗಾದವರು. ಸ್ವಾಮೀಜಿಯವರಿಗೆ ಪ್ರಕಾಶ ಮುಧೋಳ ಎಂಬಾತ ಕರೆ ಮಾಡಿ ತಾನು ಡಿಎಸ್ಪಿ ಎಂದು ಹೇಳಿಕೊಂಡು, ನಿಮ್ಮ ಬಗ್ಗೆ ಗೃಹ ಸಚಿವರಿಗೆ ಅನೇಕ ದೂರುಗಳು ಬಂದಿವೆ. ಎಡಿಜಿಪಿಯವರಿಗೆ ಹಣ ನೀಡದಿದ್ದರೆ ನಿನ್ನ ಮಾನ ಹರಾಜು ಹಾಕುತ್ತೇವೆ ಎಂದು ಹೆದರಿಸಿದ್ದಾನೆ.


ಪರಮಹಂಸ ಪರಮ ರಾಮಾರೂಢ ಶ್ರೀ

ಪ್ರಕಾಶ ಮುಧೋಳ

ನಂತರ ಮತ್ತೊಬ್ಬ ವ್ಯಕ್ತಿ ಎಡಿಜಿಪಿ ಹೆಸರಿನಲ್ಲಿ ಕರೆ ಮಾಡಿ ಬೆದರಿಕೆ ಹಾಕಿದ್ದರಿಂದ ಗಾಬರಿಗೊಂಡ ಸ್ವಾಮೀಜಿ ಮೊದಲು 61 ಲಕ್ಷ ರು. ನಂತರ 29 ಲಕ್ಷ ರು. ಸೇರಿ 1 ಕೋಟಿ ರು. ನೀಡಿದ್ದಾರೆ.

ಇದಾದ ನಂತರವೂ ಆರೋಪಿಗಳು ಮತ್ತೆ ಹಣಕ್ಕೆ ಪೀಡಿಸಿದಾಗ ಸ್ವಾಮೀಜಿ ಬಾಗಲಕೋಟೆಯ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕಾಶ ಮುಧೋಳ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಜೆಡಿಎಸ್ ಅಭ್ಯರ್ಥಿ: ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ವಶದಲ್ಲಿದ್ದಾನೆ ಎನ್ನಲಾಗುತ್ತಿರುವ ಪ್ರಕಾಶ ಮುಧೋಳ್ ಬೆಳಗಾವಿ ಜಿಲ್ಲೆಯ ರಾಮದುರ್ಗ ವಿಧಾನಸಭಾ ಕ್ಷೇತ್ರದಿಂದ 2023ರಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದ. ಆತನ ವಿರುದ್ಧ ಹಲವೆಡೆ ಅನೇಕ ಪ್ರಕರಣಗಳು ದಾಖಲಾಗಿರುವ ಮಾಹಿತಿ ಇದೆ.

ಎಚ್‌ಡಿಕೆ ಸಿಎಂ ಮಾಡಿದ್ದು ಯಾರು?

ಧಾರವಾಡ: ರಾಜ್ಯ ಸರ್ಕಾರಕ್ಕೆ ನಾವು ಯಾವುದೇ ತೊಂದರೆ ಮಾಡುವುದಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಪಷ್ಟಪಡಿಸಿದ್ದಾರೆ. ಆಪರೇಷನ್ ಕಮಲ ಕುರಿತ ಆರೋಪಗಳಿಗೆ ಪ್ರತಿಕ್ರಿಯಿಸಿದ ಅವರು, ನಾವು ಯಾವ ಶಾಸಕರಿಗೂ 100 ಕೋಟಿ ರು. ಆಮಿಷ ಒಡ್ಡಿಲ್ಲ 65 ಶಾಸಕರನ್ನು ತೆಗೆದುಕೊಂಡರೆ ಮಾತ್ರ ಸರ್ಕಾರ ರಚನೆ ಸಾಧ್ಯ. ಹಾಗಾದರೆ 65 ಶಾಸಕರಿಗೆ 6,500 ಕೋಟಿ ರು. ಆಗಲಿದೆ. ಹುಚ್ಚು ಹುಚ್ಚಾಗಿ ಮಾತನಾಡಿದರೆ ಹೇಗೆ ಎಂದರು. ಎಚ್‌ಡಿ ಕುಮಾರಸ್ವಾಮಿ ಜಾಮೀನಿನ ಮೇಲೆ ಇರುವ ಬಗ್ಗೆ ಹಲವು ಬಾರಿ ಹೇಳಿದ್ದೇನೆ. ಕುಮಾರಸ್ವಾಮಿ ವಿರುದ್ಧ ಕೇಸ್ ದಾಖಲಾಗಿರುವುದು 2008ರಲ್ಲಿ. 2013-18ರ ಅವಧಿಯಲ್ಲಿ ಸಿದ್ದರಾಮಯ್ಯ ಸಿಎಂ ಆಗಿರಲಿಲ್ವಾ? ಎಂದು ಜೋಶಿ ಪ್ರಶ್ನಿಸಿದರು.

ಮೋದಿ ಬ್ರ್ಯಾಂಡ್ ಕಳಚಿದ ಬಾಂಡ್

← ಮೊದಲಪುಟದಿಂದ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಎ1 ಆರೋಪಿಯಾಗಿದ್ದು, ಇಡಿ ಅಧಿಕಾರಿಗಳು ಎ2, ಕೇಂದ್ರ ಬಿಜೆಪಿ ಪದಾಧಿಕಾರಿಗಳು ಎ3, ನಳಿನ್ ಕುಮಾರ್ ಕಟೀಲ್ ಎ4, ಬಿ.ವೈ.ವಿಜಯೇಂದ್ರ ಎ5 ಹಾಗೂ ರಾಜ್ಯ ಬಿಜೆಪಿ ಪದಾಧಿಕಾರಿಗಳು ಎ6 ಆರೋಪಿಗಳಾಗಿದ್ದಾರೆ. ಐಪಿಸಿ ಸೆಕ್ಷನ್ 384 (ಸುಲಿಗೆ), 120ಬಿ (ಅಪರಾಧಿಕ ಒಳಸಂಚು), 34 (ಸಮಾನ ಉದ್ದೇಶ) ಮೇಲೆ ಕೇಸ್ ದಾಖಲಾಗಿದೆ.

ಸುಪ್ರೀಂ ಕೆಂಗಣ್ಣು

ಚುನಾವಣಾ ಬಾಂಡ್‌ಗಳ ವಿರುದ್ಧ ಬಂದಿದ್ದ ಟೀಕೆಗಳು, ಆರೋಪಗಳ ಸಂಬಂಧ ಕೆಲ ಸಂಘ ಸಂಸ್ಥೆ ಗಳು ಹಾಗೂ ಸಾರ್ವಜನಿಕವಾಗಿ ಸಲ್ಲಿಕೆಯಾಗಿದ್ದ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ಬಾಂಡ್‌ಗಳನ್ನು ನಿಲ್ಲಿಸುವಂತೆ ಭಾರತೀಯ ಸ್ಟೇಟ್ ಬ್ಯಾಂಕ್‌ಗೆ ಸೂಚಿಸಿತ್ತು. ಅಲ್ಲದೆ, ಈವರೆಗೆ ಬಾಂಡ್‌ಗಳ ಹೆಸರಿನಲ್ಲಿ ಯಾವ ಯಾವ ಪಕ್ಷಕ್ಕೆ ಎಷ್ಟೆಷ್ಟು ಹಣ ಹೋಗಿದೆ ಎಂಬುದರ ಸಂಪೂರ್ಣ ಮಾಹಿತಿ ನೀಡುವಂತೆ ಸೂಚಿಸಿತ್ತು. ಅಲ್ಲದೆ, ದೇಣಿಗೆದಾರರ ಮಾಹಿತಿ ಗೌಪ್ಯವಾಗಿರಿಸುವುದು ಮಾಹಿತಿ ಹಕ್ಕು ಕಾಯಿದೆಯ ಉಲ್ಲಂಘನೆಯಾಗಿದೆ ಹಾಗೂ ಸಂವಿಧಾನದ 19 (1) (ಎ) ಅನುಚ್ಛೇದದಲ್ಲಿ ಹೇಳಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ ಎಂದು ಹೇಳಿ ಬಾಂಡ್ ವಿತರಿಸದಂತೆ ಆದೇಶಿತ್ತ ಲ್ಲದೆ ದತ್ತಾಂಶ(ಡೇಟಾ) ನೀಡುವಂತೆ ಎಸ್‌ಬಿಐಗೆ ಎಚ್ಚರಿಸಿತ್ತು.

ಎಸ್‌ಬಿಐ ಡೇಟಾ ಹೇಳಿದ್ದೇನು?: ಎಸ್‌ಬಿಐ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ದತ್ತಾಂಶದ ಪ್ರಕಾರ, 2018ರಿಂದ 2022ರವರೆಗೆ ದೇಶಾದ್ಯಂತ ಒಟ್ಟು 9,208 ಚುನಾವಣಾ ಬಾಂಡ್‌ಗಳನ್ನು ಖರೀದಿಸಲಾಗಿತ್ತು. ಇಷ್ಟು ಮೊತ್ತದಲ್ಲಿ ಶೇ.58ರಷ್ಟು ದೇಣಿಗೆಯು ಬಿಜೆಪಿಗೆ ಹರಿದು ಬಂದಿರುವುದು ದತ್ತಾಂಶದಲ್ಲಿತ್ತು.

ಮಾಹಿತಿ ಬಹಿರಂಗ: ರಾಜಕೀಯ ಪಕ್ಷಗಳು ಪಡೆದ ದೇಣಿಗೆ ವಿವರಗಳ ಪರಿಷ್ಕೃತ ಮಾಹಿತಿಯನ್ನು ಕೇಂದ್ರ ಚುನಾವಣಾ ಆಯೋಗ ಮುಚ್ಚಿದ ಲಕೋಟೆಯಲ್ಲಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿತ್ತು. ಮಾರ್ಚ್ 15ರ ಸುಪ್ರೀಂ ಕೋರ್ಟ್ ಆದೇಶದ ಅನುಸಾರ ಕೋರ್ಟ್ ರಿಜಿಸ್ಟ್ರಿ ಭೌತಿಕ ಪ್ರತಿಗಳನ್ನು ಡಿಜಿಟೈಸ್ ಮಾಡಿದ ದಾಖಲೆಯೊಂದಿಗೆ ಹಿಂದಿರುಗಿ ಸಿದೆ. ಕೇಂದ್ರ ಚುನಾವಣಾ ಆಯೋಗ ಆನಂತರ ತನ್ನ ವೆಬ್‌ಸೈಟಿನಲ್ಲಿ ಡಿಜಿಟೈಸ್ ಮಾಡಿ ಸ್ವೀಕರಿಸಿದ ದತ್ತಾಂಶ ಅಪ್‌ಲೋಡ್ ಮಾಡಿದೆ.

ದೇಣಿಗೆಯಲ್ಲಿ ವಿವರ ಉಲ್ಲೇಖಿಸಬೇಕಾಗಿಲ್ಲ: ಚುನಾವಣಾ ಬಾಂಡ್ ಎನ್ನುವುದನ್ನು ಧಾರಕರ ದಾಖಲೆಗಳು (ಬಿಯರರ್ ಇನ್ಸ್ಟ್ರುಮೆಂಟ್) ಎಂದು 2018ರಲ್ಲಿ ಕೇಂದ್ರ ಹಣಕಾಸು ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಿತ್ತು. ಧಾರಕ ದಾಖಲೆ ಎಂದರೆ, ಈ ಬಾಂಡ್‌ನ ದಾಖಲೆಗಳು ಯಾರ ಬಳಿ ಇರುತ್ತದೆಯೋ ಅವುಗಳ ಮಾಲೀಕರು ಅವರೇ ಆಗಿರುತ್ತಾರೆ. ಹೇಗೆಂದರೆ, ಯಾವುದೇ ಕಂಪನಿಯ ಷೇರುಗಳನ್ನು ಕೊಂಡಾಗ ನೀಡಲಾಗುವ ಷೇರು ವ್ಯವಹಾರದ ದಾಖಲೆ ಧಾರಕ ದಾಖಲೆಗಳು ಎಂದು ಪರಿಗಣಿಸಲಾಗುತ್ತದೆ. ಅವುಗಳನ್ನು ಯಾರು ಹೊಂದಿರುತ್ತಾರೋ ಅವರೇ ಮಾಲೀಕರು ಎಂದು ಪರಿಗಣಿಸಲಾಗುತ್ತದೆ. ಇಂತಹ ದಾಖಲೆಗಳಲ್ಲಿ ದೇಣಿಗೆ ನೀಡಿದವರ ವಿವರಗಳನ್ನು ಉಲ್ಲೇಖಿಸಬೇಕಿಲ್ಲ.

ಪ್ರಾದೇಶಿಕ ಪಕ್ಷಗಳ ವಿವರ: ಡಿಎಂಕೆ 656 ಕೋಟಿ ರು. ದೇಣಿಕೆ ಪಡೆದಿದೆ. ಜೆಡಿಎಸ್ 89.75 ಕೋಟಿ ರು., ವೈಎಸ್‌ಆರ್ ಕಾಂಗ್ರೆಸ್ 442.8 ಕೋಟಿ ರು., ಟಿಡಿಪಿ 181.35 ಕೋಟಿ ರು., ಶಿವಸೇನೆ 60.4 ಕೋಟಿ ರು., ಆರ್‌ಜೆಡಿ 56 ಕೋಟಿ ರು., ಎಸ್ಪಿ 14.05 ಕೋಟಿ ರು., ಅಕಾಲಿದಳ 7.26 ಕೋಟಿ ರು. ಎಐಎಡಿಎಂಕೆ 6.05 ಕೋಟಿ ರು., ನ್ಯಾಷನಲ್ ಕಾನ್ಫರೆನ್ಸ್ 50 ಲಕ್ಷ ರು. ದೇಣಿಗೆ ಪಡೆದಿವೆ.

ಹುಬ್ಬಳ್ಳಿಯಲ್ಲಿ ಸಿಬ್ಬಂದಿ ಸೇರಿ 26 ಜನರ ಬಂಧನ

ಕಾರ್ಮಿಕ ಇಲಾಖೆಯಲ್ಲಿ 101 ಲ್ಯಾಪ್‌ಟಾಪ್ ಕಳವು

ಹುಬ್ಬಳ್ಳಿ: ಹುಬ್ಬಳ್ಳಿ -ಧಾರವಾಡದ ಕಾರ್ಮಿಕ ಇಲಾಖೆಯಲ್ಲಿ ನಡೆದಿದ್ದ 50 ಲಕ್ಷ ರು. ಮೌಲ್ಯದ 101 ಲ್ಯಾಪ್‌ಟಾಪ್ ಕಳ್ಳತನ ಪ್ರಕರಣದಲ್ಲಿ, 26 ಆರೋಪಿಗಳನ್ನು ಹಳೇ ಹುಬ್ಬಳ್ಳಿ ಪೊಲೀಸರು ಬಂಧಿಸಿ, ಲ್ಯಾಪ್‌ಟಾಪ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ಬಗ್ಗೆ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ ಎನ್ ಶಶಿಕುಮಾರ್ ಮಾತನಾಡಿ, ಹಾವೇರಿ ಜಿಲ್ಲೆಯ ಕೂಲಿ ಕಾರ್ಮಿಕರ ಮಕ್ಕಳಿಗೆ ವಿತರಿಸಲು ಸೆಪ್ಟೆಂಬರ್ ನಲ್ಲಿ ಬೆಳಗಾವಿಯಿಂದ ತಂದು ಕಾರ್ಮಿಕ ಇಲಾಖೆಯಲ್ಲಿ ಇಡಲಾಗಿತ್ತು. ಆಗಸ್ಟ್ ನಲ್ಲಿ ಪರಿಶೀಲನೆ ಮಾಡಿದಾಗ ಕಳುವಾಗಿದ್ದು ಬೆಳಕಿಗೆ ಬಂದಿದೆ. 55 ಲಕ್ಷ ಮೌಲ್ಯದ ಎಚ್.ಪಿ ಕಂಪನಿಯ ಲ್ಯಾಪ್‌ಟಾಪ್‌ಗಳಾಗಿದ್ದವು. ತನಿಖೆ ಕೈಗೊಂಡು ಅನುಮಾನಾಸ್ಪದ ವ್ಯಕ್ತಿಗಳ ವಿಚಾರಣೆ ನಡೆಸಲಾಗಿದ್ದು, ಕಾರ್ಮಿಕ ಇಲಾಖೆಯ ದೀಪಕ್ ಮತ್ತು ಕೃಷ್ಣ ಕಳ್ಳತನ ಮಾಡಿದ್ದು ಗೊತ್ತಾಗಿದೆ. ಎಸಡಿಎ ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ 4 ಸಿಬ್ಬಂದಿ ಈ ಕೃತ್ಯದಲ್ಲಿ ಭಾಗಿಯಾಗಿದ್ದು, 6 ತಿಂಗಳು ಅವಧಿಯಲ್ಲಿ 101 ಲ್ಯಾಪ್‌ಟಾಪ್‌ಗಳನ್ನು ಕದ್ದಿದ್ದಾರೆ ಎಂದಿದ್ದಾರೆ.

ಕಿಟಕಿಯಿಂದ ಇಳಿದು ಕಳವು: ಕಚೇರಿಯಲ್ಲಿಟ್ಟ ಲ್ಯಾಪ್‌ಟಾಪ್‌ಗಳನ್ನು ಕಿಟಕಿಯಿಂದ ಇಳಿದು ಕದಿಯಲಾಗಿದೆ. ಇವುಗಳನ್ನು ಆರೋಪಿಗಳು ಹಂತ ಹಂತವಾಗಿ ಮಾರಾಟ ಮಾಡಿದ್ದಾರೆ. ಕಾರ್ಮಿಕ ಇಲಾಖೆಯ ಆರು ಸಿಬ್ಬಂದಿ ಸೇರಿ, 26 ಜನರನ್ನು ಬಂಧಿಸಲಾಗಿದೆ. ಕದ್ದ ಲ್ಯಾಪ್‌ಟಾಪ್ ಖರೀದಿಸಿದ್ದ 20 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಸದ್ಯ 83 ಲ್ಯಾಪ್‌ಟಾಪ್, ಎರಡು ಆಟೋ, ಎರಡು ಬೈಕ್ ಹಾಗೂ ಒಂದು ಕಾರನ್ನು ವಶಕ್ಕೆ ಪಡೆದಿದ್ದೇವೆ. ಹಿರಿಯ ಅಧಿಕಾರಿಗಳ ಕೈವಾಡ ಈ ಕೃತ್ಯದಲ್ಲಿ ಕಂಡು ಬಂದಿಲ್ಲ. ಉಳಿದ ಲ್ಯಾಪ್ ಟಾಪ್‌ಗಳನ್ನು ವಶಕ್ಕೆ ಪಡೆಯಲಾಗುವುದು ಎಂದು ಹುಬ್ಬಳ್ಳಿಯಲ್ಲಿ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಹೇಳಿದರು.

ನಾಳೆಯಿಂದ ಸಾಮೂಹಿಕ ರಜೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ಎಲ್ಲ ಗ್ರಾಮ ಆಡಳಿತಾಧಿಕಾರಿಗಳು ಸೆ. 30ರಿಂದ ಒಂದು ತಿಂಗಳು ಸಾಮೂಹಿಕ ರಜೆ ಹಾಕಿ, ಪ್ರತಿಭಟನೆ ನಡೆಸಲು ಸಿದ್ದತೆ ನಡೆಸಿದ್ದಾರೆ. ಕಂದಾಯ ಇಲಾಖೆಗೆ ಸೇರಿದ್ದರೂ, ಅನ್ಯ ಇಲಾಖೆಗಳ ಕಾರ್ಯದೊತ್ತಡವೇ ಹೆಚ್ಚಾಗಿದೆ. ಎಂದಿನ ಕೆಲಸದ ಜತೆಗೆ 17 ಆ್ಯಪ್‌ಗಳಲ್ಲಿ ವಿವಿಧ ದತ್ತಾಂಶಗಳನ್ನು ನಮೂದಿಸುವ ಕೆಲಸ ನೀಡಲಾಗಿದೆ. ಅಗತ್ಯ ಮೂಲಸೌಕರ್ಯವೂ ಇಲ್ಲ. ಈ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಲು ಪ್ರತಿಭಟಿಸಲಾಗುತ್ತದೆ ಎಂದು ಗ್ರಾಮ ಆಡಳಿತಾಧಿಕಾರಿಗಳ ಸಂಘ ತಿಳಿಸಿದೆ.ಸೆ. 26, 27ರಂದು ರಾಜ್ಯಾದ್ಯಂತ ತಾಲ್ಲೂಕು ಕಚೇರಿಗಳ ಎದುರು, 28ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗಿದೆ. 29ರಂದೂ ಪ್ರತಿಭಟನೆ ನಡೆಸಲಿದ್ದು, 30ರಿಂದ ಒಂದು ತಿಂಗಳು ಸಾಮೂಹಿಕವಾಗಿ ರಜೆ ಹಾಕಲು ನಿರ್ಧರಿಸಲಾಗಿದೆ' ಎಂದು ಸಂಘ ತಿಳಿಸಿದೆ.

ಕರ್ನಾಟಕ ಸರ್ಕಾರ

ಪುರಸಭಾಕಾರ್ಯಾಲಯ, ಹರಪನಹಳ್ಳಿ-583131. ವಿಜಯನಗರಜಿಲ್ಲೆ. ದೂರವಾಣಿ ಸಂಖ್ಯೆ:08398-280258, ಫ್ಯಾಕ್ಸ್: 08398-280581
Email: itstaff_ulb_harapanahalli@yahoo.com. Website: harapanahallitown.mrc.gov.in

ಕ್ರ.ಸಂ/ಪುಸ.ಹಹಳ್ಳಿ/ಕಂ.ಶಾ/ಮಳಿಗೆ/ಸಿಆರ್/02/2024-25 ದಿನಾಂಕ :23.09.2024

: ಸಾರ್ವಜನಿಕ ಇ-ಹರಾಜು ಪಕಟಣೆ:

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಪುರಸಭೆಯ ವಾಣಿಜ್ಯ ಮಳಿಗೆಗಳನ್ನು ಸರ್ಕಾರಿ ಸುತ್ತೋಲೆ ಸಂಖ್ಯೆ: ನಅಇ/301/ಜಿಇಎಲ್/2017 ದಿನಾಂಕ:19.07.2019 ರ ಮಾರ್ಗ ಸೂಚಿಯಂತೆ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು, ವಿಜಯನಗರರವರ ನಡವಳಿಗಳ ಸಂಖ್ಯೆ: ಜಿನಕೋವಿ/ವಾ.ಮಳಿಗೆಗಳು/ಹಹಳ್ಳಿ/ಇ-133869/2023-24 ದಿ:23.08.2024 ಆದೇಶದಂತೆ 12 ವರ್ಷ ಲೀಜ್ ಅವಧಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ಇ-ಹರಾಜು ಮಾಡಲು ನಿಗಧಿಪಡಿಸಿದ್ದು, ಸದರಿ ಇ-ಹರಾಜಿನಲ್ಲಿ ಭಾಗವಹಿಸುವ ಆಸಕ್ತರು ಇ-ಹರಾಜಿನಲ್ಲಿ ಭಾಗವಹಿಸಲು ನಿಗಧಿಪಡಿಸಿದ ಈ ಕೆಳಕಾಣಿಸಿದ ವಿವಿಧ ಬ್ಲಾಕ್‌ಗಳ ಮುಂದೆ ಸೂಚಿಸಲಾದ ಮಳಿಗೆಗಳಿಗೆ ನಿಗಧಿಪಡಿಸಿದ ಠೇವಣಿ ಮೊತ್ತಕ್ಕೆ ಇ.ಎಂ.ಡಿ ಮತ್ತು ಪುರಸಭೆಗೆ ಪಾವತಿಸಬೇಕಾದ ಹಿಂದಿನ ಬಾಡಿಗೆದಾರರು ಬಾಕಿ ಉಳಿಸಿಕೊಂಡಲ್ಲಿ ಸದರಿ ಮೊತ್ತವನ್ನು ಪಾವತಿಸಿ ಬೇಬಾಕಿ ಪ್ರಮಾಣ ಪತ್ರವನ್ನು ಪಡೆದು ಇ-ಹರಾಜು ಪ್ರಾರಂಭಗೊಳ್ಳುವ ಒಳಗಾಗಿ ಪುರಸಭೆಯ ವೆಬ್‌ಸೈಟ್ ಲಿಂಕ್ https://kppp.karnataka.gov.in/ ನಲ್ಲಿ ಬಿಡ್ ಸಲ್ಲಿಸತಕ್ಕದ್ದು. ಹೆಚ್ಚಿನ ಷರತ್ತು ಹಾಗೂ ವಿವರಗಳನ್ನು ಕಛೇರಿಯ ವೆಬ್‌ಸೈಟ್ www.harapanahallitown.mrc.gov.in ಮತ್ತು https://kppp.karnataka.gov.in/ ಮೂಲಕ ಮತ್ತು ದೂರವಾಣಿ ಸಂಖ್ಯೆ: 08398-280258 ಮತ್ತು ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು

ಇ-ಹರಾಜು ಪ್ರಕಟಣೆ ದಿನಾಂಕ ಮತ್ತು ವೇಳೆಯ ವಿವಿರ

Last Date and Time For Submit the Query **07/10/2024.** Date and Time To Confirm Participation of Interest in Auction **08/10/2024.** Start Date and Time Of Evaluation **09/10/2024.** Live Bidding/Auction **14/10/2024.** Delta time for Bidding **5 Min**

ಕ್ರ.ಸಂ	ಮಳಿಗೆಗಳ ವಿವರ	ಮಳಿಗೆ ಸಂಖ್ಯೆ	ನಿಗಧಿ ಪಡಿಸಿದ ಠೇವಣಿ ಮೊತ್ತ	ನಿಗಧಿಪಡಿಸಿದ ಬಾಡಿಗೆ	ಮೀಸಲಾತಿ	Indent No
1	10ನೇ ಹಣಕಾಸು ಯೋಜನೆ	01	100500.00	5600.00	ಪರಿಶಿಷ್ಟ ಜಾತಿ	DMA/2024-25/AUCTION1414
2		02	100500.00	5600.00	ಸಾಮಾನ್ಯ	DMA/2024-25/AUCTION1415
3		03	100500.00	5600.00	ಸಾಮಾನ್ಯ	DMA/2024-25/AUCTION1416
4		04	100500.00	5600.00	ಸಾಮಾನ್ಯ	DMA/2024-25/AUCTION1417
5		05	100500.00	5600.00	ಸಾಮಾನ್ಯ	DMA/2024-25/AUCTION1418
6	ಐ.ಡಿ.ಎಸ್.ಎಂ.ಟಿ. 'ಎ' ಬ್ಲಾಕ್	01	100500.00	5400.00	ಸಾಮಾನ್ಯ	DMA/2024-25/AUCTION1419
7		03	100500.00	5400.00	ಸಾಮಾನ್ಯ	DMA/2024-25/AUCTION1420
8		05	100500.00	5400.00	ಪರಿಶಿಷ್ಟ ಪಂಗಡ	DMA/2024-25/AUCTION1421
9		06	100500.00	5400.00	ಸಾಮಾನ್ಯ	DMA/2024-25/AUCTION1422
10		07	100500.00	5400.00	ಸಾಮಾನ್ಯ	DMA/2024-25/AUCTION1423
11		09	100500.00	5400.00	ಪರಿಶಿಷ್ಟ ಜಾತಿ	DMA/2024-25/AUCTION1424
12		10	100500.00	5400.00	ಸಾಮಾನ್ಯ	DMA/2024-25/AUCTION1425
13		11	100500.00	5400.00	ಸಾಮಾನ್ಯ	DMA/2024-25/AUCTION1426
14	ಐ.ಡಿ.ಎಸ್.ಎಂ.ಟಿ. 'ಬಿ' ಬ್ಲಾಕ್	02	100500.00	5400.00	ಸಾಮಾನ್ಯ	DMA/2024-25/AUCTION1427
15		05	100500.00	5400.00	ಸಾಮಾನ್ಯ	DMA/2024-25/AUCTION1428
16		06	100500.00	5400.00	ಸಾಮಾನ್ಯ	DMA/2024-25/AUCTION1429
17		07	100500.00	5400.00	ಸಾಮಾನ್ಯ	DMA/2024-25/AUCTION1430
18		08	100500.00	5400.00	ಸಾಮಾನ್ಯ	DMA/2024-25/AUCTION1431
19		10	100500.00	5400.00	ಸಾಮಾನ್ಯ	DMA/2024-25/AUCTION1432
20		11	100500.00	5400.00	ಸಾಮಾನ್ಯ	DMA/2024-25/AUCTION1433
21	ಐ.ಡಿ.ಎಸ್.ಎಂ.ಟಿ. 'ಡಿ' ಬ್ಲಾಕ್	07	100500.00	5500.00	ಪರಿಶಿಷ್ಟ ಜಾತಿ	DMA/2024-25/AUCTION1434
22		08	100500.00	5500.00	ಸಾಮಾನ್ಯ	DMA/2024-25/AUCTION1435
23		09	100500.00	5500.00	ಸಾಮಾನ್ಯ	DMA/2024-25/AUCTION1436
24		10	100500.00	5500.00	ಪರಿಶಿಷ್ಟ ಜಾತಿ	DMA/2024-25/AUCTION1437
25		11	100500.00	5500.00	ಸಾಮಾನ್ಯ	DMA/2024-25/AUCTION1438
26		12	100500.00	5500.00	ಸಾಮಾನ್ಯ	DMA/2024-25/AUCTION1439
27		13	100500.00	5500.00	ಸಾಮಾನ್ಯ	DMA/2024-25/AUCTION1440
28		14	100500.00	5500.00	ಸಾಮಾನ್ಯ	DMA/2024-25/AUCTION1441
29		15	100500.00	5500.00	ಸಾಮಾನ್ಯ	DMA/2024-25/AUCTION1442
30		16	100500.00	5500.00	ಸಾಮಾನ್ಯ	DMA/2024-25/AUCTION1443
31		17	100500.00	5500.00	ಪರಿಶಿಷ್ಟ ಜಾತಿ	DMA/2024-25/AUCTION1444

ವಿಶೇಷ ಸೂಚನೆ:- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ದೃಢೀಕೃತ ಜಾತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಮೀಸಲಿಟ್ಟಿರುವ ಮಳಿಗೆಗಳ ಹರಾಜಿನಲ್ಲಿಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಮಾತ್ರ ಭಾಗವಹಿಸಬೇಕು ಹಾಗೂ ಅಂಗವಿಕಲ(ವಿಕಲಚೇತನ) ಅಭ್ಯರ್ಥಿಗಳಿಗೆ ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಪೂರೈಸುವುದು ಕಡ್ಡಾಯವಾಗಿರುತ್ತದೆ. ಅಂಗವಿಕಲ(ವಿಕಲಚೇತನ) ಅಭ್ಯರ್ಥಿಗಳಿಗೆ ಮಿಸಲಿರಿಸಿದ ಮಳಿಗೆಗಳಿಗೆ ಲಾಟರಿ ಮೂಲಕ ಮಳಿಗೆ ಹರಾಜು ಮಾಡಲಾಗುವುದು. ಇತರರಿಗೆ ಅವಕಾಶವಿರುವುದಿಲ್ಲ. ಎಲ್ಲಾ ಷರತ್ತುಗಳಿಗೆ ಇವರಿಗೂ ಯಥಾವತ್ತಾಗಿ ಅನ್ವಯಿಸುತ್ತದೆ.

ಸಹಿ/-ಆಡಳಿತಾಧಿಕಾರಿ, ಪುರಸಭೆ,ಹರಪನಹಳ್ಳಿ ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/289 ಸಹಿ/-ಮುಖ್ಯಾಧಿಕಾರಿ, ಪುರಸಭೆ,ಹರಪನಹಳ್ಳಿ

ಟ್ವೀಟು-ಖಾರಾ

ಬಿಜೆಪಿ, ಕರ್ನಾಟಕ

ಅಧಿಕಾರ ಇಲ್ಲದಿದ್ದಾಗ ಸಿದ್ದರಾಮಯ್ಯ ಅವರಿಗೆ ರಾಜ್ಯಪಾಲರ ಕಾರ್ಯವ್ಯಾಪ್ತಿ , ಅಧಿಕಾರ ಎಲ್ಲವೂ ನೆನಪಿತ್ತು. ಆದರೆ ಅಧಿಕಾರಕ್ಕೆ ಬಂದು, ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತು ಭ್ರಷ್ಟಾಚಾರ , ಅಕ್ರಮದ ಸುಳಿಯಲ್ಲಿ ಸಿಲುಕಿದಾಗ ರಾಜ್ಯಪಾಲರ ನಡೆ ರಾಜಕೀಯದಂತೆ ಕಂಡುಬರುತ್ತಿರುವುದು ವಿಪರ್ಯಾಸ.

ಕೃಷ್ಣ, ಬೆಂಗಳೂರು

ಸಿದ್ದರಾಮಯ್ಯನವರು ರಾಜೀನಾಮೆ ನೀಡುವುದಿಲ್ಲ, ಅದು ಮುಗಿದ ಅಧ್ಯಾಯ. ಬಿಜೆಪಿ-ದಳ ಒಟ್ಟುಗೂಡಿ ಮೂವರು ಏಜೆಂಟರಿಗೆ ಅಪಾರ ಹಣ ನೀಡಿ ಆಡಿದ ಬೃಹನ್ನಳೆ ನಾಟಕ ಈಗ ಜನತೆಗೆ ತಿಳಿದಿದೆ.

ಸಮಾಚಾರ ಸಣ್ಣದಲ್ಲ

ಜಿಂಕೆ ಮಾಂಸ ಮಾರಾಟ: ಆರೋಪಿಗಳು ಪರಾರಿ

ಕನಕಪುರ: ಅರಣ್ಯದಲ್ಲಿ ಜಿಂಕೆಗಳ ಅಕ್ರಮ ಬೇಟೆಯಾಡಿ ಮಾಂಸ ಮಾರಾಟಕ್ಕೆ ಯತ್ನಿಸಿದ ಆರೋಪಿಗಳು ಪೊಲೀಸರ ಕೈಗೆ ಸಿಗದೆ ತಪ್ಪಿಸಿಕೊಂಡಿದ್ದಾರೆ. ಉಯ್ಯಂಬಳ್ಳಿ ಹೋಬಳಿ ನಲ್ಲಹಳ್ಳಿ ಗ್ರಾಮದ ತೋಟದ ಮನೆಯಲ್ಲಿ ಜಿಂಕೆ ಮಾಂಸವನ್ನು ತುಂಡರಿಸಿ ಬೇರ್ಪಡಿಸುತ್ತಿದ್ದಾಗ ದಾಳಿ ನಡೆಸಿದ ಅರಣ್ಯ ಅಧಿಕಾರಿಗಳು ಜಿಂಕೆಮಾಂಸವನ್ನು ವಶಪಡಿಸಿಕೊಂಡಿದ್ದಾರೆ. ದಾಳಿ ವೇಳೆ ಪರಾರಿಯಾದ ಆರೋಪಿಗಳನ್ನು ನಿವಾಸಿ ಪ್ರದೀಪ್ , ಮಣಿಕಂಠ , ಸತೀಶ್ ಮತ್ತು ಶಶಿಕುಮಾರ್ ಅಲಿಯಾಸ್ ಚಂದ್ರಣ್ಣ ಎಂದು ಗುರುತಿಸಲಾಗಿದೆ. ಮೂರು ಜಿಂಕೆಯ ಮಾಂಸ, ಬೇಟೆಯಾಡಲು ಬಳಸಿದ್ದ ವಸ್ತುಗಳನ್ನು ವಶಕ್ಕೆ ಪಡೆದಿದ್ದು, ಆರೋಪಿಗಳ ವಿರುದ್ಧ ಅರಣ್ಯ ಕಾಯ್ದೆ ಅಡಿ ಪ್ರಕರಣ ದಾಖಲಿಸಿ, ಶೋಧನೆ ಆರಂಭಿಸಲಾಗಿದೆ. ಪ್ರಭಾರ ವಲಯ ಅರಣ್ಯ ಅಧಿಕಾರಿ ರವಿ.ಸಿ, ಉಪವಲಯ ಅರಣ್ಯ ಅಧಿಕಾರಿ ಮತ್ತು ಸ್ವಾಮಿ ನಾಯಕ್ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ರಾಮನಗರ: ಕೊನೆಗೂ ಸೆರೆಸಿಕ್ಕ ಚಿರತೆ

ರಾಮನಗರ: ತಾಲ್ಲೂಕಿನ ಬನ್ನಿಕುಪ್ಪೆ ಗ್ರಾಮದಲ್ಲಿ ಇತ್ತೀಚೆಗೆ ಸಾಕುಪ್ರಾಣಿಗಳನ್ನು ಕೊಂದು ಆತಂಕ ಸೃಷ್ಟಿಸಿದ್ದ ಚಿರತೆ ಕಡೆಗೂ ಸೆರೆಯಾಗಿದೆ. ಅರಣ್ಯ ಇಲಾಖೆ ಇಟ್ಟಿದ್ದ ಬೋನಿನಲ್ಲಿ ಚಿರತೆ ಶುಕ್ರವಾರ ಸೆರೆಯಾಗಿದೆ. ಇದರೊಂದಿಗೆ ಗ್ರಾಮಸ್ಥರ ಆತಂಕ ನಿವಾರಣೆಯಾಗಿದೆ. ಈ ಚಿರತೆ ಒಂದು ವರ್ಷ ವಯಸ್ಸಿನದು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಸಂಜೆ ಹಾಗೂ ನಸುಕಿನಲ್ಲಿ ಬನ್ನಿಕುಪ್ಪೆ ಹೊರವಲಯದಲ್ಲಿ ಓಡಾಡುತ್ತಿದ್ದ ಚಿರತೆ, ಮನೆಗಳಿಗೆ ನುಗ್ಗಿ ಕುರಿ, ಕರು, ಮೇಕೆ, ಕೋಳಿ ಹಾಗೂ ಸಾಕುನಾಯಿಗಳ ಮೇಲೆ ದಾಳಿ ನಡೆಸಿ ಹೊತ್ತೊಯ್ದು ತಿಂದುಹಾಕಿತ್ತು. ಅದರ ಹಾವಳಿಗೆ ಬೇಸತ್ತಿದ್ದ ಗ್ರಾಮಸ್ಥರು ಚಿರತೆಯನ್ನು ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದರು. ಅದರಂತೆ, ಅರಣ್ಯ ಸಿಬ್ಬಂದಿ ಇಟ್ಟಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದೆ.ಗ್ರಾಮಕ್ಕೆ ಭೇಟಿನೀಡಿದ ಸಿಬ್ಬಂದಿ ಪಂಜರಲ್ಲಿದ್ದ ಚಿರತೆಯನ್ನು ತೆಗೆದುಕೊಂಡು ಹೋಗಿ ರಾತ್ರಿ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ನಾನು ಸಿಎಂ ಆದರೆ ಪೊಲೀಸರ ಕೈಗೆ ಎಕೆ 47

ಬೈಲಹೊಂಗಲ: ನಾನು ಮುಖ್ಯಮಂತ್ರಿಯಾದರೆ ಎಲ್ಲ ಪೊಲೀಸರ ಕೈಯಲ್ಲಿ ಎಕೆ 47 ಗನ್ ಕೊಡುತ್ತೇನೆ. ದೇಶ ವಿರೋಧಿ ಚಟುವಟಿಕೆ ಮಾಡುವವರಿಗೆ ಅವರು ಮಾತನಾಡುವ ಮೊದಲು ಗುಂಡು ಹೊಡೆಯಲಾ ಗುವುದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಘೋಷಿಸಿದರು. ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ ಹಿಂದೂ ಮಹಾಗಣಪತಿ ಉತ್ಸವ ಸಮಿತಿ ವತಿಯಿಂದ ನಡೆದ ಹಿಂದೂ ಮಹಾಗಣಪತಿ ವಿಸರ್ಜನೆ ಹಾಗೂ ಬೃಹತ್ ಶೋಭಾಯಾತ್ರೆಯಲ್ಲಿ ಯತ್ನಾಳ್ ಮಾತನಾಡಿದರು. ಭಾರತದಲ್ಲಿ ಹಿಂದೂ ಗಳು ಸುರಕ್ಷಿತವಾಗಿ ಜೀವನ ಸಾಗಿಸಬೇಕಾದರೆ ನಾವೆಲ್ಲರೂ ಒಂದಾಗಿ ಬಲಿಷ್ಠರಾಗಬೇಕಿದೆ ಎಂದ ಅವರು, ಎಲ್ಲರೂ ಜಾತಿ ಬಿಟ್ಟು ಒಂದಾಗಿ ಹಿಂದೂ ಸಮಾಜ ಕಟ್ಟಿರಿ ಎಂದು ಕರೆನೀಡಿದರು.

ವಿರಾಮ
ಪ್ರತಿ ಭಾನುವಾರ

{ **ಕೆ.ಎಸ್.ಈಶ್ವರಪ್ಪ** } ಮಾಜಿ ಡಿಸಿಎಂ

ಸಿಎಂ ಸಿದ್ದರಾಮಯ್ಯನವರೇ, ನಿಮಗೊಂದು ಕಾನೂನು ನಮಗೊಂದು ಕಾನೂನು ಇದೆಯೇ. ಈ ದೇಶದಲ್ಲಿ ನಿಮಗೂ ಅದೇ ಕಾನೂನು, ನನಗೂ ಅದೇ ಕಾನೂನು. ನನ್ನ ವಿರುದ್ಧ ತನಿಖೆ ನಡೆದು ನಾನು ತಪ್ಪಿತಸ್ಥನಲ್ಲ ಎಂದು ಹೊರಗೆ ಬಂದೆ. ನೀವು ಹಾಗೆಯೇ ತನಿಖೆ ಎದುರಿಸಿ. ತಪ್ಪಿತಸ್ಥರಲ್ಲದಿದ್ದರೆ ತಪ್ಪಿತಸ್ಥರಲ್ಲ ಎಂದು ಹೊರಗೆ ಬನ್ನಿ.

ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ, ಗ್ಯಾರಂಟಿ ಫಲಾನುಭವಿಗಳ ಜತೆ ಸಂವಾದ | ಸರಕಾರದ ಯೋಜನೆಗಳ ಬಗ್ಗೆ ಅನುಭವ ಹಂಚಿಕೊಂಡ ಸಾರ್ವಜನಿಕರು | ವಿರೋಧಿಗಳ ಅಪಪ್ರಚಾರಕ್ಕೆ ಸೋಲು-ಮುಖ್ಯಮಂತ್ರಿ

ಅಂಬೇಡ್ಕರ್ ಚಿಂತನೆಗಳೇ ಗ್ಯಾರಂಟಿ ಜಾರಿಗೆ ಸ್ಫೂರ್ತಿ: ಸಿಎಂ ಭಾವುಕ ನುಡಿ

ಮೈಸೂರು: ತಮ್ಮ ತವರು ಮೈಸೂರು ಪ್ರವಾಸದಲ್ಲಿರುವ ಸಿಎಂ ಸಿದ್ದರಾಮಯ್ಯ ಕಳೆದೆರಡು ದಿನಗಳಿಂದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಶನಿವಾರ ಮಾನಸ ಗಂಗೋತ್ರಿಯಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ನಡೆಸಿದ ಸಂವಾದದ ವೇಳೆ ತಮ್ಮ ಯೋಜನೆಗಳು ಯಶಸ್ವಿಯಾಗಿ ಜನರಿಗೆ ತಲುಪಿರುವುದನ್ನು ಕೇಳಿ ಅವರು ಭಾವುಕರಾದರು. ಯೋಜನೆಗಳ ಜಾರಿಯ ಹಿನ್ನೆಲೆ ಮತ್ತು ತಮ್ಮ ಸಾಮಾಜಿಕ ಕಳಕಳಿಗೆ ಸಂಬಂಧಿಸಿದಂತೆ ಮುಕ್ತವಾಗಿ ಮಾತನಾಡಿದ ಸಿಎಂ, ಸರಕಾರದ ಭಾಗ್ಯ ಮತ್ತು ಗ್ಯಾರಂಟಿ ಯೋಜನೆಗಳ ವಿರುದ್ಧ ವಿರೋಧಿಗಳ ಅಪಪ್ರಚಾರಕ್ಕೆ ತಿರುಗೇಟು ನೀಡಿದರು.

ನಮ್ಮ ಭಾಗ್ಯಗಳನ್ನು, ಗ್ಯಾರಂಟಿಗಳನ್ನು ವಿರೋಧಿಗಳು ಆಡಿಕೊಂಡರು. ಈಗಲೂ ಅಪ ಪ್ರಚಾರ ಮಾಡುತ್ತಿದ್ದಾರೆ. ಆದರೆ ನಾನು ಹೋದಲ್ಲಿ ಬಂದಲ್ಲಿ ಗ್ಯಾರಂಟಿಗಳ ಫಲಾನುಭವಿಗಳು ನಮ್ಮ ಸರ್ಕಾರಕ್ಕೆ ಧನ್ಯತೆ ಅರ್ಪಿಸುತ್ತಿದ್ದಾರೆ ಎಂದು ತಮ್ಮ ಚಿಂತನೆಗಳು ಜನರ ಬದುಕನ್ನು ಹಸನುಗೊಳಿಸಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಬಡವರ ಉಳಿಸಿದ ನರೇಗಾ, ಅನ್ನಭಾಗ್ಯ: ನರೇಗಾ ಮತ್ತು ಅನ್ನಭಾಗ್ಯ ಯೋಜನೆಗಳು ಕೊರೋನಾ ಸಂದರ್ಭದಲ್ಲಿ ಬಡವರನ್ನು, ಕೆಳ ಮಧ್ಯಮ ವರ್ಗದವರನ್ನು ಬದುಕಿಸಿತು. ಹೀಗಾಗಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಹೆಚ್ಚೆಚ್ಚು ಮಾತಾಡಬೇಕು. ಅನ್ನಭಾಗ್ಯದ ಮೇಲೆ ಅನ್ನ ಅಂತಲೇ ಸಿನಿಮಾ ಬಂದಿದೆ. ನಾನೂ ಸಿನಿಮಾ ನೋಡಿದೆ, ನೀವೊಮ್ಮೆ ನೋಡಿ ಎಂದು ನೆರೆದ ಜನರಿಗೆ ತಿಳಿಸಿದರು.

ಆರ್ಥಿಕ ಚೈತನ್ಯ: ಜಾತಿ ಕಾರಣಕ್ಕಾಗಿ ಸಮಾಜದಲ್ಲಿ ಆರ್ಥಿಕ ಅಸಮಾನತೆ ಸೃಷ್ಟಿ ಆಯಿತು. ಆದ್ದರಿಂದ ಎಲ್ಲರಿಗೂ ಆರ್ಥಿಕ ಶಕ್ತಿ ಕೊಡುವ ಕಾರಣಕ್ಕೆ 2013-18 ರ ವರೆಗೆ ಹಲವು ಕಾರ್ಯಕ್ರಮಗಳನ್ನು ಜಾರಿ ಮಾಡಿದೆವು. ಹಾಗೆಯೇ ಎರಡನೇ ಬಾರಿ ಮುಖ್ಯಮಂತ್ರಿ ಆದಾಗಲೂ ಗ್ಯಾರಂಟಿಗಳ ಮೂಲಕ ಆರ್ಥಿಕ ಶಕ್ತಿ ನೀಡಿದೆವು ಎಂದರು.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ನಡೆದ ಸಮಾರಂಭದಲ್ಲಿ ಗ್ಯಾರಂಟಿ ಯೋಜನೆ ಕುರಿತ ಕೃತಿಯನ್ನು ಸಿಎಂ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಸಚಿವ ಎಚ್.ಸಿ.ಮಹದೇವಪ್ಪ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಇತರರು ಇದ್ದರು.

ಬಾಬಾಸಾಹೇಬರೇ ಪ್ರೇರಣೆ

1949 ನವೆಂಬರ್ 25 ರಂದು ಸಂವಿಧಾನ ಜಾರಿ ಸಭೆಯಲ್ಲಿ ಬಾಬಾಸಾಹೇಬರು ಮಾಡಿದ ಭಾಷಣ ನನ್ನ ಗ್ಯಾರಂಟಿಗಳಿಗೆ ಸ್ಫೂರ್ತಿ. ಅವಕಾಶಗಳಿಂದ ವಂಚಿತರಾಗಿರುವವರಿಗೆ ಸಮಾನ ಅವಕಾಶಗಳು ಸಿಕ್ಕಾಗ ಸಮ ಸಮಾಜ ನಿರ್ಮಾಣ ಸಾಧ್ಯ. ಬಸವಾದಿ ಶರಣರು, ಬುದ್ಧ ಕೂಡ ಸಮ ಸಮಾಜದ ಬಗ್ಗೆ ಹೇಳಿದ್ದಾರೆ. ಕೇವಲ ಭಾಷಣಗಳಿಂದ ಸಮ ಸಮಾಜದ ಆಶಯ ಈಡೇರಲ್ಲ. ಈ ಕಾರಣಕ್ಕೇ ಮೊದಲ ಬಾರಿ ಮುಖ್ಯಮಂತ್ರಿ ಆದಾಗಲೂ ಹಲವು ಭಾಗ್ಯಗಳನ್ನು ಜಾರಿ ಮಾಡಿದ್ದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಿಸಿದರು. ಇದೇ ವೇಳೆ, ಗ್ಯಾರಂಟಿ ಅನುಷ್ಠಾನದ ಬಗ್ಗೆ ಡಾ. ಶ್ರೀನಿವಾಸ ಮಣಗಳ್ಳಿ ರಚಿಸಿದ ಕೃತಿಯನ್ನು ಮುಖ್ಯಮಂತ್ರಿಯವರು ಬಿಡುಗಡೆ ಮಾಡಿದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಹಾಗೂ ಇತರ ಗಣ್ಯರು ಪಾಲ್ಗೊಂಡಿದ್ದರು.

ಹೊಟ್ಟೆ ತುಂಬ ಹಿಟ್ಟು - ಬಾಯಿ ತುಂಬ ಅನ್ನ ಎಂದು ನನ್ನಮ್ಮ ಹೇಳುತ್ತಿದ್ದರು. ನಮಗೆ ಬಾಲ್ಯದಲ್ಲಿ ಮೊದಲು ಹೊಟ್ಟೆತುಂಬುವಷ್ಟು ಮುದ್ದೆ ಹಾಕಿ, ನಂತರ ಸ್ವಲ್ಪ ಅನ್ನ ಕೊಡೋರು. ಅನ್ನ ಉಣ್ಣಬೇಕಾದರೆ ಹಬ್ಬ ಹರಿದಿನಗಳು ಬರಬೇಕಿತ್ತು. ಬಡವರ ಮನೆ ಮಕ್ಕಳಿಗೆ ಹುಷಾರಿಲ್ಲ ಅಂದ್ರೆ ತುತ್ತು ಅನ್ನಕ್ಕಾಗಿ ಅನ್ನ ಮಾಡೋರ ಮನೆ ಮುಂದೆ ಕೈಯ್ಯೊಡ್ಡಿ ನಿಲ್ಲಬೇಕಾದ ಸ್ಥಿತಿ ಇತ್ತು. ಇವನ್ನೆಲ್ಲಾ ಕಣ್ಣಾರೆ ಕಂಡಿದ್ದ ನಾನು ನಾಡಿನ ಯಾರೊಬ್ಬರೂ ತುತ್ತು ಅನ್ನಕ್ಕಾಗಿ ಕೈವೊಡ್ಡಬಾರದೆಂದು ತೀರ್ಮಾನಿಸಿ ಅನ್ನ ಭಾಗ್ಯ ಜಾರಿಗೆ ಕೊಟ್ಟಿದ್ದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿ ಭ್ರಷ್ಟರ ಮೇಲೆ ಮೋದಿ ಕ್ರಮ ಕೈಗೊಳ್ಳಲಿ: ಸಿಎಂ ಸವಾಲು

ಮೈಸೂರು: ಬಿಜೆಪಿಯಲ್ಲೇ ಬಹಳ ಭ್ರಷ್ಟಾಚಾರಿಗಳಿದ್ದು, ಪ್ರಧಾನಿ ಅವರ ಮೇಲೆ ಪ್ರಧಾನಿ ಮೋದಿ ಮೊದಲು ಕ್ರಮ ಕೈಗೊಳ್ಳಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಮಿಕವಾಗಿ ಹೇಳಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೋದಿಯವರು ಮಣಿಪುರದ ಹಿಂಸೆಯ ಬಗ್ಗೆ ಮಾತನಾಡುವುದಿಲ್ಲ ಅಲ್ಲಿಗೆ ಭೇಟಿ ಕೂಡಾ ನೀಡಲಿಲ್ಲ ಏಕೆ ಎಂದು ಪ್ರಶ್ನಿಸಿದರು. ಕುಮಾರ ಸ್ವಾಮಿ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಕುಮಾರ ಸ್ವಾಮಿಯವರ ಎಲ್ಲಾ ಹೇಳಿಕೆಗಳು ಸುಳ್ಳಿನಿಂದ ಕೂಡಿದೆ, ಅವರ ಎಲ್ಲ ಹೇಳಿಕೆಗೆ ಪ್ರತಿಕ್ರಿಯೆ ನೀಡುವ ಅವಶ್ಯಕತೆಯಿಲ್ಲ ಎಂದರು.

ಲೋಕಾಯುಕ್ತ ಪೊಲೀಸ್ ಅಲರ್ಟ್

ಸಿಎಂ ಸಿದ್ದರಾಮಯ್ಯ ವಿರುದ್ಧ ಎಫ್ ಐ ಆರ್ ದಾಖಲು ಮಾಡಿರುವ ಮೈಸೂರು ಲೋಕಾಯುಕ್ತ ಪೊಲೀಸರು' ಈ ಸಂಬಂಧ ತನಿಖೆಗಾಗಿ ನಾಲ್ಕು ತಂಡಗಳ ರಚನೆ ಮಾಡಲಾಗಿದೆ.

ಲೋಕಾಯುಕ್ತ ಎಸ್ಪಿ ಉದೇಶ್, ಡಿವೈಎಸ್ಪಿ ಎಸ್ ಮಾಲತೀಶ್ , ಚಾಮರಾಜನಗರ ಡಿವೈಎಸ್ಪಿ ಮ್ಯಾಥ್ಯೂ ಥಾಮಸ್ ಹಾಗೂ ಇನ್ಸ್‌ಪೆಕ್ಟರ್ ಅವರನ್ನು ಒಳಗೊಂಡ ತನಿಖಾ ತಂಡ ರಚನೆ ಮಾಡಲಾಗಿದೆ ಎಂದು ಗೊತ್ತಾಗಿದೆ.

ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೊತೆ ಶನಿವಾರ ತುರ್ತು ಸಭೆ ನಡೆಸಿದ ಎಸ್ಪಿ ಉದೇಶ್, ದಾಖಲೆಗಳ ಪರಿಶೀಲನೆ ನಡೆಸಿದರು. ಕೋರ್ಟ್ ನಿಂದ ನೀಡಿರುವ ದಾಖಲೆಗಳು ಹಾಗೂ ದೂರಿನಲ್ಲಿ ಅಡಕವಾಗಿರುವ ದಾಖಲೆಗಳ ಪರಿಶೀಲನೆ ನಡೆಸಿದ ಅಧಿಕಾರಿಗಳ ತಂಡ ಮುಂದಿನ ಒಂದೆರಡು ದಿನಗಳ ಕಾಲ ದಾಖಲೆಗಳ ಸಂಪೂರ್ಣ ಪರಿಶೀಲನೆ ನಡೆಸಲಿದೆ ಎಂದು ಹೇಳಲಾಗಿದೆ.

ಸಿಎಂ ಭೇಟಿಯಾದ ಪೊನ್ನಣ್ಣ, ಬೈರತಿ ಸುರೇಶ್

ಮೈಸೂರಿನಲ್ಲಿ ವಾಸ್ತವ್ಯ ಹೂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಸಚಿವ ಬೈರತಿ ಸುರೇಶ್ ಹಾಗೂ ಸಿಎಂ

ಕಾನೂನು ಸಲಹೆಗಾರ ಪೊನ್ನಣ್ಣ ಭೇಟಿ ನೀಡಿ ಸಿದ್ದರಾಮಯ್ಯ ಅವರೊಂದಿಗೆ ಕೆಲ ಹೊತ್ತು ಚರ್ಚೆ ನಡೆಸಿದರು.

ತಮ್ಮ ಹಾಗೂ ಕುಟುಂಬ ಸದಸ್ಯರ ವಿರುದ್ಧ ಎಫ್ಐಆರ್ ಸಂಬಂಧ ಕಾನೂನು ಹೋರಾಟದ ಬಗ್ಗೆ ಚರ್ಚೆಯಾಗಿದೆ ಎನ್ನಲಾಗಿದೆ.

ವಿಶ್ರಾಂತಿ ಮೊರೆಹೋದ ಸಚಿವ ಬೈರತಿ

ನನಗೆ ತಲೆನೋವು, ಅದಕ್ಕೆ ಮಡಿಕೇರಿ ಕಡೆ ಹೋಗುತ್ತಿದ್ದೇನೆ ಎಂದು ಸಚಿವ ಬೈರತಿ ಸುರೇಶ್ ಹೇಳಿದ್ದಾರೆ. ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನನಗೆ ಮುಡಾ ತಲೆನೋವು ಏನು ಅಲ್ಲ, ಹೀಗೇ ಇರ್ತಾವಲ್ಲ ಸಮಸ್ಯೆಗಳು, ಹೀಗಾಗಿ ರಿಲ್ಯಾಕ್ಸ್ ಗಾಗಿ ಹೋಗುತ್ತಿದ್ದೇನೆ. ನಮಗೆ ಮುಡಾ ಪ್ರಕರಣ ತಲೆನೋವು ಎಂದು ಅನ್ನಿಸಿಲ್ಲ ಎಂದರು. ಸಿಎಂ ವಿರುದ್ಧ ಎಫ್ಐಆರ್ ಹಾಕಿರುವುದು ನಿರೀಕ್ಷಿತ. ನಮಗೆ ಗೊತ್ತಿತ್ತು.ಅದನ್ನು ನಾವು ಕಾನೂನಾತ್ಮಕವಾಗಿ ಎದುರಿಸುತ್ತೇವೆ. ನಾನು ಅದರ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರ ಜೊತೆ ಚರ್ಚೆಯೇ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

ಮುಡಾದಲ್ಲಿ ನನ್ನ ಅವಧಿಯಲ್ಲಿ ಯಾವ ಹಗರಣವೂ ನಡೆದಿಲ್ಲ. ನನ್ನಿಂದಲೇ ಸಿಎಂಗೆ ಸಮಸ್ಯೆ ಆಗಿದೆ ಎನ್ನುವುದರಲ್ಲಿ ಅರ್ಥವಿಲ್ಲ. ಹಗರಣ ನಡೆದ ಕಾಲಾವಧಿ ಯಾವುದು ನೋಡಿಕೊಳ್ಳಿ. ನನ್ನನ್ನೇಕೆ ಇದರಲ್ಲಿ ಎಳೆಯುತ್ತೀರಾ ಎಂದು ಅವರು ಪ್ರಶ್ನಿಸಿದರು.

ಮಂಗಳೂರು ಬಳಿ ಘಟನೆ, ಪ್ರಯಾಣಿಕ ಪಾರು

ಹೆದ್ದಾರಿಯಲ್ಲಿ ಭಸ್ಮವಾದ ಬಿಎಂಡಬ್ಲ್ಯೂ

ಮಂಗಳೂರು: ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಬಿಎಂಡಬ್ಲ್ಯೂ ಕಾರಿಗೆ ದಿಢೀರನೇ ಬೆಂಕಿ ಹೊತ್ತಿ ಉರಿದ ಘಟನೆ ಅಡ್ಯಾರ್ ಸಹ್ಯಾದ್ರಿ ಕಾಲೇಜು ಬಳಿ ಶನಿವಾರ ಸಂಭವಿಸಿದೆ. ಈ ದುರ್ಘಟನೆಯಲ್ಲಿ ಕಾರು ಸಂಪೂರ್ಣ ಸುಟ್ಟು ಭಸ್ಮವಾಗಿದೆ.

ಶನಿವಾರ ಮಧ್ಯಾಹ್ನದ ಬಿ.ಸಿ.ರೋಡ್‌ನ ಗುರುದೀಪ್ ಎಂಬುವರು ಕಾರಿನಲ್ಲಿ ತೆರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಬೆಂಕಿ ಹೊತ್ತಿಕೊಳ್ಳುತ್ತಿದ್ದಂತೆ ಎಚ್ಚೆತ್ತ ಗುರುದೀಪ್ ಕಾರನ್ನು ನಿಲ್ಲಿಸಿ ಹೊರಬಂದು ಜೀವ ಉಳಿಸಿಕೊಂಡಿದ್ದಾರೆ.

ಒಂದು ಮೂಲದ ಪ್ರಕಾರ ಗುರುದೀಪ್ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಾರು ನಿಲ್ಲಿಸಿ ಕೆಳಗೆ ಇಳಿದಿದ್ದಾಗ ಬೆಂಕಿ ಅನಾಹುತ ಸಂಭವಿಸಿದೆ. ಇದಕ್ಕೆ ಕಾರಣ ತಿಳಿದುಬಂದಿಲ್ಲ.

ಚನ್ನಗಿರಿಯಲ್ಲಿ 10 ಸಾವಿರ ಲಂಚಕ್ಕೆ ಬೇಡಿಕೆಯಿಟ್ಟಿದ್ದ ಅಧಿಕಾರಿಗಳು

ಲೋಕಾಯುಕ್ತ ಬಲೆಗೆ ಬಿದ್ದ ಎಂಜಿನಿಯರ್‌ಗಳು

ಚನ್ನಗಿರಿ: ಬಿಲ್ ಮಂಜೂರು ಮಾಡಲು ಗುತ್ತಿಗೆದಾರನಿಂದ 10 ಸಾವಿರ ಲಂಚ ಪಡೆಯುವಾಗ ಇಬ್ಬರು ಇಂಜಿನಿಯರ್‌ಗಳು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಗ್ರಾಪಂ ಮೇಲ್ಛಾವಣಿ ನಿರ್ಮಾಣ ಕಾಮಗಾರಿ ಹಾಗೂ ಸರ್ಕಾರಿ ಶಾಲೆಯ ಶೌಚಾಲಯದ ಕಾಮಗಾರಿ ಮಾಡಿದ್ದ ಸಿವಿಲ್ ಗುತ್ತಿಗೆದಾರನಿಗೆ ಬಿಲ್ ಮಂಜೂರು ಮಾಡಲು 20,800 ರು. ಲಂಚ ಕೇಳಿ, 10 ಸಾವಿರ ರು. ಲಂಚದ ಹಣ ಪಡೆಯುತ್ತಿದ್ದ ವೇಳೆ ಚನ್ನಗಿರಿ ಉಪ ವಿಭಾಗದ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ ಕಿರಿಯ ಅಭಿಯಂತರ ಹಾಗೂ ಸಹಾಯಕ ಕಾರ್ಯ ಪಾಲಕ ಅಭಿಯಂತರ ಲೋಕಾಯುಕ್ತರ ಹಣ ಸಮೇತ ಸಿಕ್ಕಿ ಬಿದ್ದಿದ್ದಾರೆ.

ಚನ್ನಗಿರಿ ಪಂಚಾಯತ್ ರಾಜ್ ಎಂಜಿನಿಯರಿಂಗ್ ಉಪ ವಿಭಾಗದ ಕಿರಿಯ ಅಭಿಯಂತರ ಬಿ. ಬಸವರಾಜ ಹಾಗೂ ಸಹಾಯಕ ಕಾರ್ಯ ಪಾಲಕ ಅಭಿಯಂತರ ಕೆ.ಎಸ್.ಸತೀಶ ನಾಯ್ಕ ಲೋಕಾಯುಕ್ತ ಗಾಳಕ್ಕೆ ಸಿಕ್ಕಿಬಿದ್ದ ಆರೋಪಿಗಳು. ಶಿವಮೊಗ್ಗ ಜಿಲ್ಲೆ ಹೊಸನಗರದ ಸಿವಿಲ್ ಗುತ್ತಿಗೆದಾರ ಎಸ್.ಸುನಿಲ್ ನೀಡಿದ್ದ ದೂರಿನ ಮೇರೆಗೆ ಲಂಚ ಪಡೆಯುತ್ತಿದ್ದ ವೇಳೆ ಬಸವರಾಜ ಹಾಗೂ ಸತೀಶ ನಾಯ್ಕನನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕಾಮಗಾರಿ ಬಿಲ್ ಪಾವತಿಗೆ ಲಂಚದ ಬೇಡಿಕೆ

ಹಾರೋನಹಳ್ಳಿ ಗ್ರಾಪಂ ಮೇಲ್ಛಾವಣಿ ನಿರ್ಮಾಣದ ಕಾಮಗಾರಿ, ಹೊಸಹಳ್ಳಿ ಸರ್ಕಾರಿ ಶಾಲೆ ಶೌಚಾಲಯ ನಿರ್ಮಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟ್‌ನಿಂದ ಟೆಂಡರ್ ಕರೆದಿದ್ದು, ಕಾಮಗಾರಿ ನಿರ್ವಹಿಸಲಾಗಿದೆ. ಗ್ರಾಪಂ ಕಾಮಗಾರಿ ಪೂರ್ಣಗೊಳಿಸಿದ್ದ ಗುತ್ತಿಗೆದಾರ ಸುನಿಲ್ ಹೊಸಹಳ್ಳಿ ಸರ್ಕಾರಿ ಶಾಲೆಯ ಶೌಚಾಲಯ ನಿರ್ಮಾಣದ ಕಾಮಗಾರಿಯ ಬಿಲ್ ಮಂಜೂರಾತಿಗಾಗಿ ಕಿರಿಯ ಅಭಿಯಂತರ ಬಿ. ಬಸವರಾಜ, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಎಸ್.ಸತೀಶ ನಾಯ್ಕ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಲೋಕಾಯುಕ್ತ ಅಧೀಕ್ಷಕ ಎಂ.ಎಸ್.ಕೌಲಾಪುರೆ ನೇತೃತ್ವದಲ್ಲಿ ಡಿವೈಎಸ್ಪಿ ಕಲಾವತಿ, ನಿರೀಕ್ಷಕರಾದ ಸಿ.ಮಧುಸೂದನ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಯಿತು. ಆರೋಪಿಗಳನ್ನು ವಶಕ್ಕೆ ಪಡೆದ ಲೋಕಾಯುಕ್ತ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕುಶಾಲನಗರದ ಕ್ಯಾಮೆರಾ ಕಾರ್ಯಾಗಾರದಲ್ಲಿ ವಿಶ್ವೇಶ್ವರ ಭಟ್ ಅಭಿಮತ

ವೃತ್ತಿಪರ ಛಾಯಾಗ್ರಾಹಕರ ಹೊಣೆಗಾರಿಕೆ ಹೆಚ್ಚು

ಕುಶಾಲನಗರ: ಜೀವನದಲ್ಲಿ ಯಾರೂ ಕಾಣದ ದೃಶ್ಯಗಳನ್ನು ಛಾಯಾಗ್ರಾಹಕರ ಕ್ಯಾಮೆರಾ ಕಣ್ಣುಗಳು ಗ್ರಹಿಸುತ್ತವೆ ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಭಿಪ್ರಾಯ ಪಟ್ಟಿದ್ದಾರೆ.

ಅವರು ಕುಶಾಲನಗರದಲ್ಲಿ ಕೊಡಗು ಜಿಲ್ಲಾ ಛಾಯಾಚಿತ್ರ ಗ್ರಾಹಕರ ಕ್ಷೇಮಾಭಿವೃದ್ಧಿ ಸಂಘ ಸೋನಿ ಕ್ಯಾಮೆರಾ ಕಾರ್ಯಾಗಾರ ಮತ್ತು ಛಾಯಾ ಕುಟುಂಬ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಫೋಟೋಗಳ ಅವಲಂಬನೆ ಸಂಖ್ಯೆ ಅಧಿಕವಾಗಿದೆ ಎಂದ ಅವರು ವೃತ್ತಿಪರ ಛಾಯಾಗ್ರಾಹಕರಿಗೆ ಹೆಚ್ಚಿನ ಹೊಣೆಗಾರಿಕೆ ಮತ್ತು ಜವಾಬ್ದಾರಿ ಇದೆ ಎಂದರು.

ಒಂದು ಚಿತ್ರ ಸಾವಿರ ಪದಗಳಿಗೆ ಸಮ

ಪ್ರಸಕ್ತ ದಿನಗಳಲ್ಲಿ ಛಾಯಾಗ್ರಾಹಕರಿಗೆ ಪೂರಕವಾದ ತಂತ್ರಜ್ಞಾನ ಬಂದಿದ್ದು ಅದರ ಸದುಪಯೋಗವನ್ನು ಪಡೆಯುವಂತಾಗಬೇಕು ಎಂದರು. ಚಿತ್ರವೊಂದು ವ್ಯಕ್ತಿಯ ಜೀವನವನ್ನು ಜೀವಂತವಾಗಿ ಇರುವಂತೆ ಮಾಡಲು ಸಾಧ್ಯ. ಕ್ಯಾಮೆರಾಗೆ ಎಲ್ಲವನ್ನೂ ಗ್ರಹಿಸುವ ಶಕ್ತಿ ಇದೆ ಎಂದು ವಿಶ್ವೇಶ್ವರ ಭಟ್ ಹೇಳಿದರು. ಒಂದು ಚಿತ್ರ ಸಾವಿರ ಪದಗಳಿಗೆ ಸಮ ಎಂದು ಹೇಳಿದ ವಿಶ್ವೇಶ್ವರ ಭಟ್, ಸುದ್ದಿಯ ಬಹುತೇಕ ವಿವರಗಳು ಛಾಯಾಚಿತ್ರಗಳಲ್ಲಿ ಲಭ್ಯವಾಗುತ್ತದೆ ಎಂದರು.

ಕುಶಾಲನಗರದಲ್ಲಿ ಕೊಡಗು ಜಿಲ್ಲಾ ಛಾಯಾಚಿತ್ರ ಗ್ರಾಹಕರ ಕ್ಷೇಮಾಭಿವೃದ್ಧಿ ಸಂಘ ಸೋನಿ ಕ್ಯಾಮೆರಾ ಕಾರ್ಯಾಗಾರ ಮತ್ತು ಛಾಯಾ ಕುಟುಂಬ ಸಮ್ಮಿಲನ ಕಾರ್ಯಕ್ರಮವನ್ನು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಉದ್ಘಾಟಿಸಿದರು.

ಛಾಯಾಗ್ರಾಹಕನಿಗೆ ಸಮಯಪ್ರಜ್ಞೆ ಅಗತ್ಯ

ಛಾಯಾಗ್ರಾಹಕನಿಗೆ ಸಮಯಪ್ರಜ್ಞೆ ಅಗತ್ಯ, ಛಾಯಾಗ್ರಾಹಕರು ಇತಿಹಾಸಕಾರರಂತೆ ಕೆಲಸ ನಿರ್ವಹಿಸಬೇಕಾಗಿದೆ. ವೃತ್ತಿಕೌಶಲ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಬೇಕು ಎಂದ ಭಟ್, ಪ್ರಸಕ್ತ ದಿನಗಳಲ್ಲಿ ಅಂತ್ಯಸಂಸ್ಕಾರ ಕಾರ್ಯಕ್ರಮಗಳಿಗೆ ತೆರಳುವ ಸಂದರ್ಭದಲ್ಲಿ ಕೂಡ ಕ್ಯಾಮೆರಗಳನ್ನು ಎದುರಿಸುವ ನಿಟ್ಟಿನಲ್ಲಿ ಮೇಕಪ್ ಮಾಡುವ ಪ್ರಮೇಯ ಸೃಷ್ಟಿಯಾಗಿದೆ. ಕೆಲವೆಡೆ ಹೆಣಕ್ಕೆ ಸಿಂಗಾರ ಕೂಡ ನಡೆಯುತ್ತಿರುವ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಕ್ಯಾಮರಾ ವೃತ್ತಿ ಜೀವನ ಹೊಂದಿದವರು ಒಗ್ಗಟ್ಟು ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಎಂದರು.

ಛಾಯಾಗ್ರಾಹಕರಿಗೆ ವೃತ್ತಿಭದ್ರತೆ ಬೇಕು

ಕುಶಾಲನಗರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ ಆರ್ ಶರವಣಕುಮಾರ್ ಮಾತನಾಡಿ ವೃತ್ತಿ ಬದುಕಿಗೆ ಭದ್ರತೆಯ ಅಗತ್ಯವಿದೆ. ಮೊಬೈಲ್ ಪೈಪೋಟಿ ನಡುವೆ ಛಾಯಾಗ್ರಹಕರ ಸಂಖ್ಯೆ ನಶಿಸುವ ಆತಂಕ ಕೂಡ ಕಂಡುಬರುತ್ತದೆ ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಕೋರಿದರು.

ಇದೇ ಸಂದರ್ಭ ಸಭಾಂಗಣದಲ್ಲಿ ಗುಡ್ಡೆಮನೆ ವಿಶ್ವಕುಮಾರ್ ಅವರಿಂದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಕೊಡಗು ಜಿಲ್ಲಾ ಛಾಯಾಚಿತ್ರಗ್ರಾಹಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಆವರ್ತಿ ಆರ್ ಮಹದೇವಪ್ಪ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕುಶಾಲನಗರ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಜಯವರ್ಧನ್, ಮೂಕಾಳೇರ ಲಕ್ಷ್ಮಣ್, ಮಡಿಕೇರಿ ಸೋಮವಾರಪೇಟೆ ಪೊನ್ನಂಪೇಟೆ ಕುಶಲನಗರ ವಿರಾಜಪೇಟೆ ವ್ಯಾಪ್ತಿಯ ಅಧ್ಯಕ್ಷರು ಮತ್ತು ಸಂಘದ ನಿರ್ದೇಶಕರು, ಜಿಲ್ಲಾ ಆಡಳಿತ ಮಂಡಳಿ ಪದಾಧಿಕಾರಿಗಳು ಇದ್ದರು.

ಅಪೂರ್ವ ಪ್ರಾರ್ಥಿಸಿ, ಡೇವಿಡ್ ಸೋಲೋಮನ್ ಸ್ವಾಗತಿಸಿದರು. ನೀಡುತ್ತಾ ಶಿಕ್ಷಕ ಊ. ರ ನಾಗೇಶ್ ಕಾರ್ಯಕ್ರಮ ನಿರೂಪಿಸಿದರು. ವೇದಿಕೆ ಕಾರ್ಯಕ್ರಮದ ನಂತರ ಛಾಯಾಚಿತ್ರಗ್ರಾಹಕ ಕುಟುಂಬ ಸದಸ್ಯರಿಗೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

ಚಾಮರಾಜನಗರ ನ್ಯಾಯಾಲಯದಲ್ಲಿ ಹೇಳಿಕೆ ದಾಖಲು

ಸಾಲ ವಂಚನೆ ಪ್ರಕರಣ: ಕೋರ್ಟ್ ವಿಚಾರಣೆಗೆ ಸ್ನೇಹಮಯಿ ಕೃಷ್ಣ ಹಾಜರು

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲೆ ಲೋಕಾಯುಕ್ತಕ್ಕೆ ದೂರು ನೀಡಿದ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ವಂಚನೆ ಪ್ರಕರಣ ಸಂಬಂಧ ವಿರುದ್ಧ ಚಾಮರಾಜನಗರದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿದ್ದರು. ಮೂರು ವರ್ಷಗಳ ಹಿಂದೆ ಕೃಷ್ಣ ವಿರುದ್ಧ ಈ ವಂಚನೆ ಪ್ರಕರಣ ದಾಖಲಾಗಿತ್ತು.

ಪ್ರಕರಣದ ವಿವರ

ಕರುಣಾಕರ್ ಎಂಬುವರಿಂದ ಮೂರು ಲಕ್ಷ ರು. ಸಾಲ ಪಡೆದಿದ್ದ ಸ್ನೇಹಮಯಿ ಕೃಷ್ಣ, ಪ್ರಾಮಿಸರಿ ನೋಟ್ ಬರೆದುಕೊಟ್ಟಿದ್ದರು. ಆದರೆ ಸಾಲ ಹಿಂತಿರುಗಿಸದೆ ವಂಚನೆ ಎಸಗಿದ್ದಾರೆಂದು ದೂರು ದಾಖಲಿಸಲಾಗಿದ್ದು ಕಳೆದ ಮೂರು ವರ್ಷಗಳಿಂದ ವಿಚಾರಣೆ ನಡೆಯುತ್ತಿದೆ. ಮೊದಲು ಸ್ವಲ್ಪ ಸಾಲ ಪಡೆದು ಬಡ್ಡಿ ಸಮೇತ ತೀರಿಸಿ ವಿಶ್ವಾಸ ಗಿಟ್ಟಿಸಿದ ಸ್ನೇಹಮಯಿ ಕೃಷ್ಣ ಬಳಿಕ ಮತ್ತೆ ಸಾಲ ಪಡೆದು ಹಿಂದಿರುಗಿಸಿಲ್ಲ. ಚೆಕ್ ಅಥವಾ ಆರ್‌ಟಿಜಿಎಸ್ ಮೂಲಕ ಹಣ ಪಡೆಯದೆ ನಗದು ರೂಪದಲ್ಲಿ ಪಡೆದಿದ್ದಾರೆ. ಇದೀಗ ನನ್ನ ವಿರುದ್ಧವೇ ಪರವಾನಗಿ ಇಲ್ಲದೆ ಫೈನಾನ್ಸ್ ಮಾಡುತ್ತಿರುವುದಾಗಿ ದೂರು ನೀಡಿದ್ದಾರೆ' ಎಂದು ಕರುಣಾಕರ ತಿಳಿಸಿದರು.

ಕೆಲವರು ನೈತಿಕವಾಗಿ ಕುಗ್ಗಿಸುವ ಯತ್ನ ಮಾಡುತ್ತಿದ್ದಾರೆ. ನನ್ನ ವಿರುದ್ಧ 22 ಪ್ರಕರಣ ದಾಖಲಾಗಿದ್ದು 9 ಪ್ರಕರಣಗಳು ಬೋಗಸ್ , 8 ಪ್ರಕರಣಗಳಲ್ಲಿ ನಿರಪರಾಧಿ ಎಂದು ಸಾಬೀತಾಗಿದೆ. 3 ಪ್ರಕರಣಗಳ ವಿಚಾರಣೆ ನಡೆಯುತ್ತಿದೆ.

-ಸ್ನೇಹಮಯಿ ಕೃಷ್ಣ

ಸಾಲ ಪಡೆದಿದ್ದು 50 ಸಾವಿರ ರು. ಮಾತ್ರ

ಆದರೆ ತಮ್ಮ ವಿರುದ್ಧದ ಆರೋಪವನ್ನು ಸ್ನೇಹಮಯಿ ಕೃಷ್ಣ ತಳ್ಳಿಹಾಕಿದ್ದಾರೆ. ಕರುಣಾಕರ ಬಳಿ ಸಾಲವಾಗಿ ಪಡೆದಿದ್ದು 50,000 ರು. ಮಾತ್ರ. ಆದರೂ, 3 ಲಕ್ಷ ಸಾಲ ಪಡೆದಿರುವುದಾಗಿ ಪ್ರಾಮಿಸರಿ ನೋಟ್ ಬರೆಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಪಡೆದ ಸಾಲಕ್ಕೆ ಬಡ್ಡಿ ಕಟ್ಟುತ್ತಾ ಬಂದಿದ್ದು ನ್ಯಾಯಾಧೀಶರ ಮುಂದೆಯೂ ಹೇಳಿಕೆ ದಾಖಲಿಸಿದ್ದೇನೆ. ಶೀಘ್ರ ಸತ್ಯಾಂಶ ಹೊರಬೀಳಲಿದೆ ಅವರು ಸ್ಪಷ್ಟಪಡಿಸಿದರು.

ಸಿಎಂ ಸಿದ್ದರಾಮಯ್ಯಗೆ ಬಿಜೆಪಿ ಶಾಸಕ ಯತ್ನಾಳ ಒತ್ತಾಯ

ರಾಜೀನಾಮೆ ನೀಡಿ ರಾಜ್ಯಕ್ಕೆ ಮಾದರಿಯಾಗಿ

ವಿಜಯಪುರ: ಮುಡಾ ಹಗರಣದಲ್ಲಿ ಆರೋಪಕ್ಕೆ ಒಳಗಾಗಿರುವ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಿ ರಾಜ್ಯಕ್ಕೆ ಹೊಸ ಆದರ್ಶವಾಗಲಿ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಲಹೆ ಮಾಡಿದ್ದಾರೆ.

ನಗರದ ಮಳೆಹಾನಿ ಪ್ರದೇಶಗಳಿಗೆ ಶನಿವಾರ ಭೇಟಿನೀಡಿದ್ದ ವೇಳೆ ಪ್ರತಿಕ್ರಿಯೆ ನೀಡಿದ ಯತ್ನಾಳ್, ಈ ಹಿಂದೆ ಬೊಫೋರ್ಸ್ ವಿಚಾರದಲ್ಲಿ ಎಲ್.ಕೆ. ಅಡ್ವಾಣಿ ಹೆಸರು ಕೇಳಿ ಬಂದಿತ್ತು. 50 ಲಕ್ಷ ರು. ಆರೋಪ ಬಂದಿತ್ತು. ಎಲ್.ಕೆ.ಎ. ಎಂದು ಜೈನ್ ಡೈರಿಯಲ್ಲಿ ಬರೆಯಲಾಗಿತ್ತು. ಈ ಆರೋಪಕ್ಕೆ ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಆರೋಪದಿಂದ ಮುಕ್ತವಾಗುವವರೆಗೆ ಸಂಸತ್ ಪ್ರವೇಶ ಮಾಡುವುದಿಲ್ಲ ಎಂದು ನಿರ್ಧಾರ ಮಾಡಿದ್ದರು, ಅದು ಆದರ್ಶ. ಅದೇ ರೀತಿ ರಾಜೀನಾಮೆ ನೀಡುವ ಮೂಲಕ ಸಿಎಂ ಸಿದ್ದರಾಮಯ್ಯ ರಾಜ್ಯಕ್ಕೆ ಹೊಸ ಆದರ್ಶವಾಗಬೇಕು ಎಂದು ಒತ್ತಾಯಿಸಿದರು.

ರಾಜೀನಾಮೆ ನೀಡದಿದ್ದರೆ ತನಿಖೆ ಮೇಲೆ ಪರಿಣಾಮ

ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡದಿದ್ದರೆ ತನಿಖೆ ಮೇಲೆ ಪರಿಣಾಮ ಬೀರುತ್ತದೆ. ವರ್ಗಾವಣೆ ಅಥವಾ ಅಮಾನತುಗೊಳಗಾಗುವ ಭಯದಲ್ಲಿ ಅಧಿಕಾರಿಗಳು ಪಾರದರ್ಶಕ ಹಾಗೂ ನಿಷ್ಪಕ್ಷಪಾತ ತನಿಖೆ ಮಾಡಲಾಗಲ್ಲ. ಹೀಗಾಗಿ ಮುಖ್ಯಮಂತ್ರಿ ರಾಜೀನಾಮೆ ನೀಡಿದರೆ ನಿಷ್ಪಕ್ಷಪಾತವಾದ ತನಿಖೆ ಸಾಧ್ಯ ಎಂದು ಯತ್ನಾಳ್ ವಿಶ್ಲೇಷಿಸಿದರು.

ಮುಡಾ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಗೌರವಯುತವಾಗಿ ರಾಜೀನಾಮೆ ನೀಡಬೇಕು. ಅವರು ಕಳ್ಳರಿದ್ದಾರೆ ಇವರು ಕಳ್ಳರಿದ್ದಾರೆ, ಅವರು ತಿನ್ನುತ್ತಾರೆ ಇವರು ತಿನ್ನುತ್ತಾರೆ ಎಂದು ನಾವು ತಿನ್ನೋದು ಬೇಡ. ರಾಜಕೀಯದಲ್ಲಿ ನೀವು ಸ್ವಚ್ಛವಾಗಿರಿ.

-ಬಸನಗೌಡ ಪಾಟೀಲ್ ಯತ್ನಾಳ್, ಬಿಜೆಪಿ ಶಾಸಕ

ಬಿಜೆಪಿಗೆ ಹೆಚ್ಚು ದೇಣಿಗೆ; ಕಾಂಗ್ರೆಸ್‌ಗೆ ತಾಪ

ಚುನಾವಣಾ ಬಾಂಡ್ ವಿಚಾರದಲ್ಲಿ ಪ್ರಧಾನಿ ಮೋದಿ ಏಕೆ ರಾಜೀನಾಮೆ ನೀಡಿಲ್ಲ ಎಂಬ ಕಾಂಗ್ರೆಸ್ ನಾಯಕರ ಆರೋಪಕ್ಕೆ, ಲಾಲು ಪ್ರಸಾದ್ ಯಾದವ, ಅಖಿಲೇಶ್, ಬಿಜೆಪಿ, ಕಾಂಗ್ರೆಸ್ ಎಲ್ಲರೂ ತೆಗೆದುಕೊಂಡಿದ್ದಾರೆ. ಚುನಾವಣಾ ಬಾಂಡ್ ಯಾರೂ ತೆಗೆದುಕೊಳ್ಳಬಾರದೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈಗ ಬಾಂಡ್ ತೆಗೆದುಕೊಳ್ಳುತ್ತಿಲ್ಲ. ಬಿಜೆಪಿಗೆ ಹೆಚ್ಚು ಹಣ ಕೊಟ್ಟಿರುವ ಕಾರಣ ಅವರಿಗೆ ತಾಪವಾಗಿದೆ ಎಂದು ಕಾಂಗ್ರೆಸ್ ವಿರುದ್ಧ ಬಸನಗೌಡ ಪಾಟೀಲ್ ಯತ್ನಾಳ ಕಿಡಿಕಾರಿದರು. ಮಾಜಿ ಡಿಸಿಎಂ ಈಶ್ವರಪ್ಪರನ್ನು ಮರಳಿ ಬಿಜೆಪಿಗೆ ಸೇರಿಸಿಕೊಳ್ಳುವಂತೆ ನಾವು ಸಭೆ ಮಾಡಿಲ್ಲ. ಅವರನ್ನು ವಾಪಸ್ ಬಿಜೆಪಿಗೆ ಸೇರಿಸಿಕೊಳ್ಳಬೇಕೆಂಬುದು ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟದ್ದು. ರಾಜ್ಯದಲ್ಲಿ ಹಿಂದೂ ಸಮಾಜದವರ ಮೇಲೆ ಸರ್ಕಾರದ ರಕ್ಷಣೆ ಇಲ್ಲ. ಗಣಪತಿ ಮೂರ್ತಿಯ ಮೇಲೆ ಕಲ್ಲು ಹೊಡೆಯುವವರು ಅವರೇ, ಆರೋಪಿಗಳಾಗುವುದು ಹಿಂದೂಗಳು ಅವರು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೂ ಯಾಕ ಬರಲಿಲ್ಲ ಈಜಲು ಹೋದಾಂವಾ...!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಕೆಲ ತಿಂಗಳ ಹಿಂದೆ Who killed Harold Holt ಎಂಬ ಸಾಕ್ಷ್ಯಚಿತ್ರವನ್ನು ನೋಡಿದೆ. ಹೆರಾಲ್ಡ್ ಹೋಲ್ಟ್‌ನನ್ನು ಕೊಂದವರಾರು, ಅವನು ಸತ್ತಿದ್ದು ಹೇಗೆ ಎಂಬುದು ಮಾತ್ರ ಕೊನೆಗೂ ತಿಳಿಯಲಿಲ್ಲ. ಆ ಸಾಕ್ಷ್ಯಚಿತ್ರವನ್ನು ನೋಡಿದ ಬಳಿಕ ಅವನ ಸಾವಿನ ಬಗೆಗಿನ ಗೊಂದಲಗಳು ಮತ್ತಷ್ಟು ಹೆಚ್ಚಾದವು.

ಹೆರಾಲ್ಡ್ ಹೋಲ್ಟ್ ಬಗ್ಗೆ ನಿಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ, ಇರಲಿ. ಈತ ಆಸ್ಟ್ರೇಲಿಯಾದ ಪ್ರಧಾನಿಯಾಗಿದ್ದವ. 1966ರಲ್ಲಿ 22 ತಿಂಗಳ ಕಾಲ ಪ್ರಧಾನಿಯಾಗಿ ಅಧಿಕಾರದಲ್ಲಿದ್ದ. ಹೋಲ್ಟ್‌ನಿಗೆ ಈಜುವುದೆಂದರೆ ಬಲು ಇಷ್ಟ. ಪ್ರತಿದಿನ ಕನಿಷ್ಠ ಅರ್ಧಗಂಟೆಯಾದರೂ ಈಜುತ್ತಿದ್ದ. ಆಗಾಗ ಸಮುದ್ರಕ್ಕೆ ಹೋಗಿ ಈಜುತ್ತಿದ್ದ. 1967ರ ಡಿಸೆಂಬರ್ 17ರಂದು ತನ್ನ ಪ್ರೇಯಸಿ, ಅವಳ ಮಗಳು, ಅವಳ ಲವರ್ ಜತೆಗೆ ಪೋರ್ಟ್‌ಸೀಯಲ್ಲಿರುವ ಚೆವಿಟ್ ಬೀಚ್‌ಗೆ ಈಜಲು ಹೋದ. ಸಮುದ್ರಕ್ಕಿಳಿದು ಐದು-ಹತ್ತು ನಿಮಿಷವೂ ಆಗಿರಲಿಲ್ಲ, ನಾಪತ್ತೆಯಾಗಿಬಿಟ್ಟ. ನೋಡ ನೋಡುತ್ತಿದ್ದಂತೆ ಕಣ್ಮರೆಯಾದ ಪ್ರಧಾನಿಯ ಜತೆಗಿದ್ದವರು ಬಹುಶಃ ಪ್ರಧಾನಿ ಮುಳುಕು ಹಾಕಿದ್ದಿರಬಹುದು ಎಂದು ಭಾವಿಸಿದರು. ಹತ್ತು ಹದಿನೈದು ನಿಮಿಷವಾದರೂ ಮೇಲೆ ಬರದಿದ್ದರಿಂದ ಗಾಬರಿಗೊಂಡು ಕಿರುಚಲಾರಂಭಿಸಿದರು.

ತಕ್ಷಣ ಹೈ ಅಲರ್ಟ್ ಘೋಷಿಸಲಾಯಿತು. ರಾಯಲ್ ಆಸ್ಟ್ರೇಲಿಯನ್ ನೇವಿ, ರಾಯಲ್ ಆಸ್ಟ್ರೇಲಿಯನ್ ಏರ್‌ಫೋರ್ಸ್, ನೌಕಾ ಪಡೆಯ ಪರಿಣತ ಮುಳುಕು ಹಾಕುವವರು ಸತತ 48 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದರೂ ಪ್ರಧಾನಿ ಪತ್ತೆಯಾಗಲಿಲ್ಲ. ಡಿಸೆಂಬರ್ 19ರಂದು ಆಸ್ಟ್ರೇಲಿಯನ್ ಸರಕಾರ ಪ್ರಧಾನಿ ಹೋಲ್ಟ್ ಮುಳುಗಿ ಸತ್ತಿರಬಹುದೆಂದು ಘೋಷಿಸಿತು. ಆತನಿಗೆ ಹೃದಯಾಘಾತವಾಯಿತಾ? ಶಾರ್ಕ್, ತಿಮಿಂಗಿಲ ಅವನನ್ನು ನುಂಗಿತಾ? ಬಿರುಸಾದ ಅಲೆಗಳ ಹೊಡೆತಕ್ಕೆ ಆತ ಕೊಚ್ಚಿ ಹೋದನಾ? ಯಾವುದೂ ಗೊತ್ತೇ ಆಗಲಿಲ್ಲ.

ಆತನ ಮೃತದೇಹವೇನಾದರೂ ಸಿಕ್ಕಿದ್ದಿದ್ದರೆ ಸಾವಿಗೆ ಕಾರಣವಾದರೂ ತಿಳಿಯುತ್ತಿತ್ತು. ಅದೂ ಸಿಗಲಿಲ್ಲ. ಹೀಗಾಗಿ ಹೋಲ್ಟ್ ನಿಧನ ನಿಗೂಢವಾಗಿಯೇ ಇದೆ. ಕಾಲಕಾಲಕ್ಕೆ ಹೋಲ್ಟ್‌ನ ಭೂತ ಕಾಣಿಸಿಕೊಳ್ಳುತ್ತದೆ. ಆತನ ಸಾವಿಗೆ ಹೊಸ ಹೊಸ ಕಾರಣಗಳು, ಥಿಯರಿಗಳು ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಹೋಲ್ಟ್‌ನ ಸಾವಿನ ಕುರಿತು ಐವತ್ತಕ್ಕೂ ಹೆಚ್ಚಿನ ಪುಸ್ತಕಗಳು ಪ್ರಕಟವಾಗಿವೆ. ಆದರೆ ಅವೆಲ್ಲವೂ ಊಹಾಪೋಹ ಅಥವಾ ಸುಂದರ ಕಲ್ಪನೆಗಳಾಗಿರಬಹುದೇ ಹೊರತು ಸತ್ಯಾಂಶ ಮಾತ್ರ ಸಮುದ್ರದ ಆಳದಲ್ಲಿಯೇ ಇದೆ.

ಇತ್ತೀಚೆಗೆ ಪತ್ತೇದಾರಿ ಲೇಖಕ ಆಂಥೋನಿ ಗ್ರೇ ಎಂಬಾತ ಹೋಲ್ಟ್ ಸಾವಿನ ಬಗ್ಗೆ ಹೊಸ ಥಿಯರಿ ಬರೆದಿದ್ದ. ಹೋಲ್ಟ್ ಚೀನಾದ ಬೇಹುಗಾರನಾಗಿದ್ದ. ಚೀನಾ ಜತೆ ಕೈಜೋಡಿಸಿ ರಹಸ್ಯ ಮಾಹಿತಿ ರವಾನಿಸುತ್ತಿದ್ದ. ಹೋಲ್ಟ್ ಈಜಲು ಹೋಗುವುದನ್ನು ಮೊದಲೇ ತಿಳಿದಿದ್ದ ಚೀನಾದ ನೌಕಾಪಡೆಯ ಸಬ್‌ಮರಿನ್‌ಗಳು ಆತನನ್ನು ಎತ್ತಿಹಾಕಿಕೊಂಡು ಹೋಗಿರಬಹುದೆಂದು ಬರೆದಿದ್ದ. ಒಂದು ದೇಶದ ಪ್ರಧಾನಿ ಈಜಲು ಹೋದಾಗ ಸಾಯುವುದೆಂದರೇನು? ಮುಳುಗಿ ಸತ್ತರೂ ಆತನ ಕಳೇಬರ ಸಿಗದಿರುವುದೆಂದರೇನು? ಮಾನವ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ಹಾಗೂ ಸುದೀರ್ಘ ಅವಧಿಯ ಶೋಧ (manhunt)ಎಂದು ಕರೆಯಿಸಿಕೊಂಡರೂ, ಆತನ ನಿಧನದ ಅಂತಪಾರು ಇಲ್ಲಿ ತನಕ ಗೊತ್ತಾಗಿಲ್ಲ. ಇದೂ ಒಂದು ರೀತಿಯಲ್ಲಿ ನೇತಾಜಿ ಸಾವಿನಂತೆ ನಿಗೂಢ.

ಹೋಲ್ಟ್ ಸತ್ತು ಎಷ್ಟೊಂದು ವರ್ಷಗಳಾದವು, ಆದರೂ ಕಾರಣ ಮಾತ್ರ ತಿಳಿದಿಲ್ಲ. ಯಾವುದೇ ಹೊಸ ಥಿಯರಿ ಹೊಸೆದರೂ ಜನ ಕುತೂಹಲದಿಂದ ಓದುತ್ತಾರೆ. ಆತನ ಸಾವಿನ ಕುರಿತು ಹತ್ತಕ್ಕೂ ಹೆಚ್ಚು ಸಿನಿಮಾಗಳು ಬಂದಿವೆ. ನಾಳೆ ಮತ್ತೊಂದು ಹೊಸ ಸಿನಿಮಾವಾಗಲೀ, ಪುಸ್ತಕವಾಗಲೀ ಬಂದರೂ ಮೊದಲಿನ ಕುತೂಹಲದಿಂದಲೇ ನೋಡುತ್ತಾರೆ, ಓದುತ್ತಾರೆ. ಬರಹಗಾರರಿಗೆ, ಸಿನಿಮಾ ನಿರ್ದೇಶಕರಿಗೆ ಹೋಲ್ಟ್ ಯಾವತ್ತೂ ಉತ್ತಮ ವಸ್ತು. ಹೋಲ್ಟ್ ನಿಧನನಾದ ಬೀಚ್‌ನಲ್ಲಿ ಅವನ ವಿಗ್ರಹದ ಕೆಳಗೆ ಹೀಗೆ ಬರೆಯಲಾಗಿದೆ. 'In memory of Harold Holt, Prime Minister of Australia who loved the sea and disappeared here abouts on 17 december 1967'.

ಇಂದಿಗೂ ಸರಕಾರಿ ದಾಖಲೆಗಳಲ್ಲಿ ಆತ ಕಣ್ಮರೆ (disappear) ಆಗಿದ್ದಾನೆಂದಿದೆಯೇ ಹೊರತು, ಸತ್ತಿದ್ದಾನೆ ಎಂದಿಲ್ಲ. ಆತ ಕಣ್ಮರೆಯಾಗುವಾಗ 59 ವರ್ಷವಾಗಿತ್ತು. ತನ್ನ 27ನೇ ವಯಸ್ಸಿನಲ್ಲಿಯೇ ಸಂಸದನಾಗಿ ಆಯ್ಕೆಯಾಗಿದ್ದ. ಹೋಲ್ಟ್ 32 ವರ್ಷಗಳ ಕಾಲ ಪಾರ್ಲಿಮೆಂಟ್ ಸದಸ್ಯನಾಗಿದ್ದ. ಒಂದಂತೂ ಸತ್ಯ. ಹೋಲ್ಟ್ ಹೀಗೆ ಸತ್ತಿರಬಹುದೆಂದು ಯಾರಾದರೂ ಒಂದು ಥಿಯರಿ ಸುತ್ತಿದರೆ ಇಡೀ ಆಸ್ಟ್ರೇಲಿಯಾ ಅದನ್ನು ಕೇಳುತ್ತದೆ. ನಂಬುವುದು, ಬಿಡುವುದು ಬೇರೆ. 'ಈಜಲು ಹೋದ ಪ್ರಧಾನಿ ಇಷ್ಟು ವರ್ಷವಾದರೂ ವಾಪಸ್ ಬಂದಿಲ್ಲ' ಎಂಬುದಷ್ಟೇ ಸತ್ಯ.

ನೋಡಿಯೇ ಜಂತಿ ಸವೆಸಿದವರು

ನಾನು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿರುವ ದಿನಗಳಲ್ಲಿ ಹುಬ್ಬಳ್ಳಿಯ ಕೊಪ್ಪಿಕರ್ ರಸ್ತೆಯಲ್ಲಿರುವ 'ಸಂಯುಕ್ತ ಕರ್ನಾಟಕ' ಆಫೀಸಿಗೆ ಆಗಾಗ ಹೋಗುತ್ತಿದ್ದೆ. 'ಸಂಯುಕ್ತ ಕರ್ನಾಟಕ'ದ ಒಂದು ಬಾಜೂಗೆ 'ಕಸ್ತೂರಿ' ಮಾಸಪತ್ರಿಕೆಯ ಕಚೇರಿಯಿತ್ತು. ಅದು ಹತ್ತು ಅಡಿ ಅಗಲ, ಇಪ್ಪತ್ತು ಅಡಿ ಉದ್ದದ ಹಳೆ ಕಾಲದ ಅಂಕಣದ ಮನೆಯಂತಿರುವ ಪುಟ್ಟ ಕಚೇರಿ. ಅಲ್ಲಿ ಪಾ.ವೆಂ.ಆಚಾರ್ಯರು, ಮಾಧವ ಮಹಿಷಿ ಹಾಗೂ ಗೋಪಾಲ ವಾಜಪೇಯಿ ಅವರು ಕುಳಿತಿರುತ್ತಿದ್ದರು. ನನಗೆ ಮೂವರ ಜತೆಗೂ ಪರಿಚಯ, ಒಡನಾಟವಿತ್ತು. ಈ ಮೂವರು ಬರೆಯುತ್ತಿದ್ದ ಲೇಖನಗಳನ್ನು ಓದುತ್ತಿದ್ದುದರಿಂದ ಅವರ ಬಗ್ಗೆ ಗೌರವ ಭಾವ. 'ಪಾವೆಂ' ಬರೆಯುತ್ತಿದ್ದ 'ಪದಾರ್ಥ ಚಿಂತಾಮಣಿ' ಅಂಕಣವನ್ನು ನನ್ನ ಅಜ್ಜನಿಗೆ ತಪ್ಪದೇ ಓದಿ ಹೇಳಬೇಕಾಗುತ್ತಿತ್ತು. ನನಗೆ ಏಳನೇ ವಯಸ್ಸಾದಂದಿನಿಂದ ಹದಿನಾರರವರೆಗೆ 'ಕಸ್ತೂರಿ'ಯ ಪ್ರತಿಯೊಂದು ಸಂಚಿಕೆಯನ್ನು ಆರಂಭದಿಂದ ಕೊನೆಯತನಕ



ನನ್ನ ಅಜ್ಜನಿಗೆ ಓದಿ ಹೇಳುತ್ತಿದ್ದೆ. ಅನಂತರ 'ಕಸ್ತೂರಿ' ನನ್ನ ಓದಿನ ಭಾಗವೇ ಆಯಿತು. ಹೀಗಾಗಿ 'ಕಸ್ತೂರಿ'ಯನ್ನು ರೂಪಿಸುತ್ತಿದ್ದ ಈ ಮೂವರ ಬಗ್ಗೆ ವಿಶೇಷ ಆದರ.

'ಕಸ್ತೂರಿ' ಕಚೇರಿಗೆ ಹೋದರೆ ಆ ಮೂವರೂ ಪ್ರೀತಿಯಿಂದ ಮಾತಾಡಿಸುತ್ತಿದ್ದರು. ಆದರೆ ಈ ಮೂವರು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದುದನ್ನು ನಾನು ನೋಡಿರಲಿಲ್ಲ. ಈ ಬಗ್ಗೆ ಅವೆಷ್ಟೋ ವರ್ಷಗಳ ನಂತರ ಗೋಪಾಲ ವಾಜಪೇಯಿ ಅವರಲ್ಲಿ ಕೇಳಿದಾಗ, 'ಹೌದು, ನಿಮ್ಮ ಗ್ರಹಿಕೆ ಸರಿಯಾಗಿದೆ. ನಾವು ಮೂವರು ಎದುರಾಬದುರು ಹೆಚ್ಚಾಗಿ ಮಾತಾಡಿಕೊಳ್ಳುತ್ತಿರಲಿಲ್ಲ. ಬೆನ್ನ ಹಿಂದೆ ಮಾತಾಡಿಕೊಳ್ಳುತ್ತಿದ್ದೆವು' ಎಂದು ತಮಾಷೆಯಾಗಿ ಹೇಳಿದ್ದರು.

ನಾನು ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ಓದುವಾಗ ಮಾಧವ ಮಹಿಷಿ ಅವರ ಜತೆ ಹೆಚ್ಚಿನ ಒಡನಾಟ ಬಂತು. ಅಷ್ಟೊತ್ತಿಗೆ 'ಪಾವೆಂ' ನಿವೃತ್ತರಾಗಿದ್ದರು. ಮಹಿಷಿ ಹಾಗೂ ವಾಜಪೇಯಿ ಮಾತ್ರ ಕುಳಿತಿರುತ್ತಿದ್ದರು. ಇಡೀ ದಿನ 'ಕಸ್ತೂರಿ' ಕಚೇರಿಯಲ್ಲಿದ್ದರೂ, ಇವರಿಬ್ಬರಲ್ಲಿ ನಡೆಯುತ್ತಿದ್ದುದು ಮೌನ ಸಂಭಾಷಣೆಯೇ. ಕಾಟಾಚಾರಕ್ಕೂ ಮಾತಾಡುತ್ತಿರಲಿಲ್ಲ. ಆದರೆ ಪತ್ರಿಕೆ ಮಾತ್ರ ಸರಿಯಾದ ಕಾಲಕ್ಕೆ ಚೆಂದವಾಗಿಯೇ ಹೊರಬರುತ್ತಿತ್ತು. ಅದಕ್ಕೆ ಅವರ ನಡುವೆ ದಟ್ಟವಾಗಿ ಹಾಸಿದ್ದ ಆ ಮೌನವೇ ಕಾರಣವಿದ್ದಿರಬಹುದಾ ಎಂಬುದು ನಿಗೂಢವೇ. 'ಕಸ್ತೂರಿ' ಕಚೇರಿಯಲ್ಲಿ ಈ 'ಮೌನ ಪರಂಪರೆ' ಆರಂಭದಿಂದ ನಡೆದುಕೊಂಡು ಬಂದಿರುವುದಕ್ಕೆ ಪಕ್ಕದ 'ಸಂಯುಕ್ತ ಕರ್ನಾಟಕ'ದ ಸಿಬ್ಬಂದಿಯೇ ಸಾಕ್ಷಿ. ನಾನು 'ಸಂಯುಕ್ತ ಕರ್ನಾಟಕ' ಸೇರುವ ಹೊತ್ತಿಗೆ 'ಕಸ್ತೂರಿ' ಕಚೇರಿ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಸ್ಥಳಾಂತರವಾಗಿತ್ತು.

ಪ್ರತಿಸಲ ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ'ಕ್ಕೆ ಹೋದಾಗ 'ಕಸ್ತೂರಿ' ಕಡೆ ಮುಖ ಹಾಕಿದರೆ ಆ ಮೌನವೇ ಸ್ವಾಗತಿಸುತ್ತಿತ್ತು. ಆಫೀಸಿನಲ್ಲಿದ್ದ ಪಾವೆಂ, ಮಹಿಷಿ ಹಾಗೂ ವಾಜಪೇಯಿ ಮೇಲಿನ ಜಂತಿ ನೋಡುತ್ತಾ ಸುಮ್ಮನೆ ಕುಳಿತು ಏನೋ ಯೋಚನೆಯಲ್ಲಿ ಮಗ್ನರಾಗಿರುತ್ತಿದ್ದರು. ಇದು ನನ್ನೊಬ್ಬನದೇ ಅನುಭವವಲ್ಲ. 'ಸಂಯುಕ್ತ ಕರ್ನಾಟಕ'ದ ಹಿರಿಯ ಪತ್ರಕರ್ತರೂ ಈ 'ಜಂತಿ ವೀಕ್ಷಣೆ'ಯ ಬಗ್ಗೆ ಆಡಿಕೊಂಡು ನಗುತ್ತಿದ್ದರು. 'ಕಸ್ತೂರಿ' ಕಚೇರಿಯ ಐದಾರು ಜಂತಿಗಳು ಕಪ್ಪಾಗಿ ಸವೆದು ಹೋಗಿದ್ದವು. ಗೋಡೆ ಸುಣ್ಣ ಬಣ್ಣ ಕಾಣದೇ ಬಹಳ ವರ್ಷಗಳೇ ಆಗಿದ್ದವು. ಅಲ್ಲಿನ ಮೇಜುಗಳು, ಕುರ್ಚಿಗಳು ಬೆವರಿನಿಂದ ಕಪ್ಪಾಗಿ ಹೋಗಿದ್ದವು. ಕಚೇರಿಯ ಜಂತಿ ಸವೆದಿದ್ದಕ್ಕೆ ಕಾರಣವೇನಿದ್ದಿರಬಹುದೆಂದು ಒಮ್ಮೆ 'ಸಂಯುಕ್ತ ಕರ್ನಾಟಕ'ದ ಕಚೇರಿಯಲ್ಲಿ ದೊಡ್ಡ ಚರ್ಚೆಯೇ ನಡೆದಿತ್ತು. ಕೊನೆಯಲ್ಲಿ ಗೊತ್ತಾಗಿದ್ದೇನೆಂದರೆ ಪಾವೆಂ, ಮಹಿಷಿ, ವಾಜಪೇಯಿ ಹತ್ತಾರು ವರ್ಷಗಳ ಕಾಲ ಸುಮ್ಮನೆ ಕುಳಿತು ದಿಟ್ಟಿಸಿ ನೋಡಿದ್ದೇ ಆ ಜಂತಿ ಸವೆದು ಹೋಗಲು ಕಾರಣ!

ಕಣ್ಣಿಲ್ಲದವರು ಅದೃಷ್ಟಹೀನರಾ?

ಆಕರ್ಷಕ ಯುವತಿಯೊಬ್ಬಳು ಕೈಯಲ್ಲಿ ಕೋಲು ಹಿಡಿದು, ತಡವುತ್ತಾ ನಿಧಾನವಾಗಿ ಬಸ್ ಹತ್ತಿದಳು. ಡ್ರೈವರ್‌ಗೆ ಹಣ ಕೊಟ್ಟು, ಕೈಯಿಂದ ತಡವುತ್ತಾ ಮುಂದೆ ನಡೆದು, ಅಲ್ಲೇ ಹತ್ತಿರದಲ್ಲಿ ಖಾಲಿಯಿದ್ದ ಸೀಟಿನ ಮೇಲೆ ಕುಳಿತಳು. ಬ್ರೀಫ್ ಕೇಸನ್ನು ತೊಡೆಯ ಮೇಲಿರಿಸಿಕೊಂಡು, ಕೋಲನ್ನು ಕಾಲಿನ ಪಕ್ಕದಲ್ಲಿಟ್ಟುಕೊಂಡಳು. ಅಲ್ಲಿದ್ದ ಪ್ರಯಾಣಿಕರೆಲ್ಲರೂ 'ಅಯ್ಯೋ ಪಾಪ' ಎಂಬಂತೆ ನೋಡಿದರು. 34 ವರ್ಷದ ಸುಸಾನ್‌ಳಿಗೆ ದೃಷ್ಟಿ ಹೋಗಿ ಒಂದು ವರ್ಷವಾಗುತ್ತಾ ಬಂತು. ಯಾವುದೋ ರೋಗಕ್ಕೆ ಇನ್ಯಾವುದೋ ಚಿಕಿತ್ಸೆ ಕೊಟ್ಟಿದ್ದರಿಂದ ಆಕೆ ದೃಷ್ಟಿ ಕಳೆದುಕೊಂಡಳು. ಇದ್ದಕ್ಕಿದ್ದಂತೆ ವಿಧಿ ಅವಳನ್ನು ಕತ್ತಲೆಯ, ಹತಾಶೆಯ, ಖಿನ್ನತೆಯ, ಕೀಳರಿಮೆಯ ಲೋಕಕ್ಕೆ ದೂಡಿಬಿಟ್ಟಿತ್ತು. ಈಗ ಅವಳ ಪಾಲಿನ ಏಕೈಕ ಆಶಾಕಿರಣವೆಂದರೆ ಪತಿ ಮಾರ್ಕ್.

ಮಾರ್ಕ್ ಏರ್‌ಫೋರ್ಸ್‌ನಲ್ಲಿ ಅಧಿಕಾರಿ. ಆತ ಹೆಂಡತಿಯನ್ನು ಬಹಳ ಪ್ರೀತಿಸುತ್ತಿದ್ದ. ದೃಷ್ಟಿ ಕಳೆದುಕೊಂಡಾಗ ಅವಳು ಖಿನ್ನತೆಗೆ ಜಾರುತ್ತಿರುವುದು ಮಾರ್ಕ್‌ನ ಗಮನಕ್ಕೆ ಬಂತು. ಹೇಗಾದರೂ ಸರಿ, ಹೆಂಡತಿ ಮತ್ತೆ ಮೊದಲಿನಂತಾಗಬೇಕು, ಕಣ್ಣಿಲ್ಲ ಎಂಬುದು ಕೊರತೆಯಾಗದೆ ಆಕೆ ಮೊದಲಿನಷ್ಟೇ ಆತ್ಮವಿಶ್ವಾಸದಿಂದ ತನ್ನ ಕೆಲಸಗಳೆಲ್ಲವನ್ನು ತಾನೇ ಮಾಡುವಂತಾಗಬೇಕು ಎಂದು ಮಾರ್ಕ್ ನಿರ್ಧರಿಸಿದ. ಕೊನೆಗೊಂದು ದಿನ ಸುಸಾನ್ ಮರಳಿ ಕೆಲಸಕ್ಕೆ ಹೋಗಲು ತಯಾರಾದಳು. ಆದರೆ ಕಚೇರಿಗೆ ಹೇಗೆ ಹೋಗುವುದು? ಮೊದಲು ಆಕೆ ಬಸ್‌ನಲ್ಲಿ ಹೋಗುತ್ತಿದ್ದಳು. ಆದರೀಗ ಅವಳಿಗೆ ಒಬ್ಬಳೇ ಮನೆಯಿಂದ ಹೊರಗೆ ಹೋಗಲು ಹೆದರಿಕೆಯಾಗುತ್ತಿದೆ. ಸಿಟಿಯ ಒಂದು ತುದಿಯಲ್ಲಿ ಅವನ ಕಚೇರಿಯಿದ್ದರೆ, ಇನ್ನೊಂದು ತುದಿಯಲ್ಲಿ ಸುಸಾನ್‌ಳ ಆಫೀಸಿತ್ತು. ಮೊದಲೆಲ್ಲ ಮಾರ್ಕ್ ಅವಳನ್ನು ಕಾರಿನಲ್ಲಿ ಆಫೀಸಿನವರೆಗೆ ಬಿಟ್ಟು ಹೋಗುತ್ತಿದ್ದ. ಆಕೆಗೂ ಇದು ಅನುಕೂಲ ಹಾಗೂ ನೆಮ್ಮದಿಯೆನಿಸಿತು. ಮಾರ್ಕ್‌ಗೆ ಹೆಂಡತಿಯನ್ನು ಜೋಪಾನವಾಗಿ ಕಚೇರಿ ಸೇರಿಸಿದ ಸಮಾಧಾನ. ಆದರೆ ದಿನ ಕಳೆದಂತೆ ಇದ್ಯಾಕೋ ಸರಿ ಹೋಗುತ್ತಿಲ್ಲ ಎಂದು ಮಾರ್ಕ್‌ಗೆ ಅನ್ನಿಸತೊಡಗಿತು. ಸುಸಾನ್ ಒಬ್ಬಳೇ ಬಸ್‌ನಲ್ಲಿ ಓಡಾಡುವಂತಾಗಬೇಕು ಎಂದು ಮನಸ್ಸಿನಲ್ಲೇ ಅಂದುಕೊಂಡ. ಅದನ್ನು ಅವಳ ಬಳಿ ಹೇಳಿದ. ಆಕೆಗೆ ದೊಡ್ಡ ಶಾಕ್! ಅದು ಹೇಗೆ ತನ್ನ ಗಂಡ ಹೀಗೆ ಹೇಳಲು ಸಾಧ್ಯ? 'ನಾನು ಕುರುಡಿ! ನಾನು ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬುದು ನನಗೆ ಹೇಗೆ ಗೊತ್ತಾಗಬೇಕು? ನೀನು ನನ್ನನ್ನು ಬಿಡುವ ಯೋಚನೆ ಮಾಡುತ್ತಿದ್ದೀಯ?' ಎಂದು ಸಿಟ್ಟಿನಲ್ಲಿ ಅರಚಿದಳು.

ಅದನ್ನು ಕೇಳಿ ಮಾರ್ಕ್‌ಗೆ ತುಂಬಾ ಬೇಸರವಾಯಿತು. ಆದರೆ ಏನು ಮಾಡಬೇಕು ಎಂಬುದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಒಬ್ಬಳೇ ತಿರುಗಾಡಲು ಅಭ್ಯಾಸವಾಗುವವರೆಗೆ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ತಾನೂ ಆಕೆಯೊಂದಿಗೆ ಬಸ್‌ನಲ್ಲಿ ಬರುವುದಾಗಿ ಹೇಳಿ ಸುಸಾನ್‌ಳನ್ನು ಒಪ್ಪಿಸಿದ. ಹಾಗೆಯೇ ನಡೆದುಕೊಂಡ ಕೂಡ. ಎರಡು ವಾರಗಳ ಕಾಲ ಮಾರ್ಕ್ ತನ್ನ ಮಿಲಿಟರಿ ಸಮವಸ್ತ್ರದಲ್ಲಿ ಸುಸಾನ್ ಜತೆ ಬಸ್‌ನಲ್ಲಿ ಕಚೇರಿಗೆ ಹೋಗಿ ಮತ್ತೆ ಸಂಜೆ ವಾಪಸ್ ಬರುವಾಗಲೂ ಜತೆಯಾದ. ಇತರೆ ಇಂದ್ರಿಯಗಳನ್ನು ಅದರಲ್ಲೂ ಮುಖ್ಯವಾಗಿ ಶಬ್ದಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ತಾನೆಲ್ಲಿದ್ದೇನೆ ಎಂದು ಅರಿತುಕೊಂಡು ಸುತ್ತಲಿನ ಪರಿಸರಕ್ಕೆ ಹೇಗೆ ಹೊಂದಿಕೊಳ್ಳಬೇಕು ಎಂಬುದೆಲ್ಲವನ್ನು ಆಕೆಗೆ ಕಲಿಸಿದ. ಆಕೆಗೆ ನೆರವಾಗಬಲ್ಲ ಕೆಲ ಡ್ರೈವರ್‌ಗಳನ್ನೂ ಆಕೆಗೆ ಪರಿಚಯ ಮಾಡಿಕೊಟ್ಟ.

ಸುಸಾನ್ ಏಕಾಂಗಿಯಾಗಿ ಬಸ್‌ನಲ್ಲಿ ಓಡಾಡುವುದಕ್ಕೆ ಕೊನೆಗೂ ಧೈರ್ಯ ಮಾಡಿದಳು. ಸೋಮವಾರ ಬೆಳಗ್ಗೆ ಬಂತು. ಮನೆಯಿಂದ ಹೊರಡುವುದಕ್ಕೆ ಮುಂಚೆ ಸ್ವಲ್ಪ ದಿನಗಳ ಬಸ್ ಫ್ರೆಂಡ್, ಜೀವಮಾನದ ಬೆಸ್ಟ್‌ಫ್ರೆಂಡ್ ಮಾರ್ಕ್‌ನನ್ನು ಆಲಿಂಗಿಸಿದಳು. ಆತನ ತಾಳ್ಮೆ, ತ್ಯಾಗ, ಪ್ರೀತಿ, ನಿಯತ್ತನ್ನು ನೆನೆದು ಆಕೆಗೆ ಕೃತಜ್ಞತೆಯ ಕಣ್ಣೀರು ಬಂತು. ಎಷ್ಟೋ ದಿನಗಳ ನಂತರ ಅವತ್ತು ಇಬ್ಬರೂ ತಂತಮ್ಮ ದಾರಿ ಹಿಡಿದು ಹೊರಟರು. ಮಂಗಳವಾರ, ಬುಧವಾರ, ಗುರುವಾರ... ಹೀಗೆ ದಿನಗಳು, ಆಕೆಯ ಬಸ್ ಪ್ರಯಾಣ ಎರಡೂ ಸುಸೂತ್ರವಾಗಿ ಸಾಗಿದವು. ತನಗೇ ಆಶ್ಚರ್ಯವಾಗುವಂತೆ ಅವಳು ಒಬ್ಬಳೇ ಓಡಾಡುವುದನ್ನು ಅಭ್ಯಾಸ ಮಾಡಿಕೊಂಡಳು. ಶುಕ್ರವಾರ ಬೆಳಗ್ಗೆ ಸುಸಾನ್ ಎಂದಿನಂತೆ ಕೆಲಸಕ್ಕೆ ಹೊರಟು, ಬಸ್ ಏರಿದಳು. ಕಚೇರಿಯಿದ್ದ ಸ್ಥಳ ತಲುಪಿ ಇನ್ನೇನು ಬಸ್ ಇಳಿಯಬೇಕು ಎಂದುಕೊಳ್ಳುತ್ತಿರುವಾಗ ಡ್ರೈವರ್, 'ಲೇಡಿ, ನನಗೆ ನಿನ್ನನ್ನು ನೋಡಿದರೆ ಹೊಟ್ಟೆಕಿಚ್ಚಾಗುತ್ತದೆ' ಎಂದ. ಈ ಡ್ರೈವರ್ ತನ್ನೊಂದಿಗೆ ಮಾತಾಡುತ್ತಿರುವುದು ಹೌದೋ, ಅಲ್ಲವೋ ಎಂದು ಆಕೆಗೆ ಅನುಮಾನವಾಯ್ತು. ಅಷ್ಟಕ್ಕೂ ಈ ಜಗತ್ತಿನಲ್ಲಿ ಯಾರಾದರು ಕುರುಡಿಯನ್ನು ನೋಡಿ ಹೊಟ್ಟೆಕಿಚ್ಚು ಪಡುವವರಿದ್ದಾರೆಯೇ ಎಂದು ಆಶ್ಚರ್ಯಪಟ್ಟಳು.

'ನನ್ನನ್ನು ನೋಡಿ ಅಸೂಯೆ ಪಟ್ಟುಕೊಳ್ಳುತ್ತಿದ್ದೀರಾ?' ಎಂದು ಅನುಮಾನದಿಂದಲೇ ಡ್ರೈವರ್‌ನನ್ನು ಕೇಳಿದಳು.

'ಹೌದು, ನಿನಗೆ ಸಿಗುತ್ತಿರುವ ಕಾಳಜಿ, ರಕ್ಷಣೆ ಎಲ್ಲರಿಗೂ ಸಿಗುವುದಿಲ್ಲ' ಎಂದ ಆ ಡ್ರೈವರ್. ಸುಸಾನ್‌ಳಿಗೆ ಅರ್ಥವಾಗಲಿಲ್ಲ. 'ನೀವೇನು ಹೇಳುತ್ತಿದ್ದೀರಿ ನನಗೆ ಅರ್ಥವಾಗುತ್ತಿಲ್ಲ' ಎಂದಳು.

'ಕಳೆದ ಒಂದು ವಾರದಿಂದ ನಾನು ನೋಡುತ್ತಿದ್ದೇನೆ. ಒಬ್ಬ ಸುಂದರಕಾಯದ, ಮಿಲಿಟರಿ ಸಮವಸ್ತ್ರ ಧರಿಸಿದ ಸಭ್ಯ ವ್ಯಕ್ತಿ ನಿಮ್ಮನ್ನು ಹಿಂಬಾಲಿಸುತ್ತಿದ್ದಾನೆ. ನೀವು ಬಸ್‌ನಿಂದ ಇಳಿದು, ಸುರಕ್ಷಿತವಾಗಿ ರಸ್ತೆ ದಾಟಿ ನಿಮ್ಮ ಆಫೀಸ್ ತಲುಪುವವರೆಗೂ ಆತ ನಿಮ್ಮನ್ನು ಗಮನಿಸುತ್ತಿರುತ್ತಾನೆ. ಕೊನೆಗೆ ನಿಮಗೊಂದು ಸೆಲ್ಯೂಟ್ ಹೊಡೆದು ವಾಪಸಾಗುತ್ತಾನೆ. ನೀವು ಬಹಳ ಅದೃಷ್ಟವಂತೆ' ಅಂದ ಆ ಡ್ರೈವರ್. ಸುಸಾನ್‌ಳ ಕಣ್ಣುಗಳಿಂದ ಆನಂದಬಾಷ್ಪ ಹರಿಯಿತು. ಆಕೆಗೆ ಮಾರ್ಕ್‌ನನ್ನು ಕಣ್ಣಿನಿಂದ ನೋಡಲಾಗದಿದ್ದರೂ, ಆತ ಜತೆಗಿದ್ದಂತೆ ಭಾಸವಾಗುತ್ತಿತ್ತು. ಡ್ರೈವರ್ ಹೇಳಿದಂತೆಯೇ ಅವಳು ಅದೃಷ್ಟವಂತೆ, ಎಲ್ಲರಿಗಿಂತಲೂ ಹೆಚ್ಚು ಅದೃಷ್ಟವಂತೆ. ಮಾರ್ಕ್ ಅವಳಿಗೆ ಕಣ್ಣಿನ ದೃಷ್ಟಿಗಿಂತಲೂ ಶಕ್ತಿಶಾಲಿಯಾದ ಬಹುಮಾನ, ಕತ್ತಲೆಯಲ್ಲೂ ಬೆಳಕು ಮೂಡಿಸುವ ಪ್ರೀತಿಯನ್ನು ಕಾಣಲು ಕಣ್ಣುಗಳೇ ಬೇಡ ಎಂಬ ನಂಬಿಕೆಯ ಬಹುಮಾನವನ್ನು ನೀಡಿದ್ದ.

ಸ್ನೇಹಿತೆಯೊಬ್ಬಳು ಕಳುಹಿಸಿದ ಈ ಕತೆಯನ್ನು ಯಾಕೋ ನಿಮಗೆ ಹೇಳಬೇಕೆನಿಸಿತು.

ಸೋಲುವುದೆಂದರೆ ಅಲರ್ಜಿ

ಬಹಳ ಜನರಿಗೆ ಗೊತ್ತಿಲ್ಲ, ಧೀರೂಭಾಯಿ ಅಂಬಾನಿ ತನ್ನ ಬಿಜಿನೆಸ್‌ನ ಆರಂಭಿಕ ದಿನಗಳಲ್ಲಿ ಚಂಪಕ್‌ಲಾಲ್ ದಮಾನಿ ಎಂಬುವವನನ್ನು ಪಾಲುದಾರನನ್ನಾಗಿಟ್ಟುಕೊಂಡಿದ್ದರು. ಅದೊಂದು ಜಂಟಿ ಉದ್ಯಮ ಹಾಗೂ ಇಬ್ಬರೂ ಸಮಪ್ರಮಾಣದ ಪಾಲುದಾರರು. ಆದರೆ ಅವರಿಬ್ಬರಲ್ಲಿ ಸಾಮ್ಯತೆ ಇರಲಿಲ್ಲ. ದಮಾನಿ ಬಹಳ ನಾಜೂಕಿನ, ಅಳುಕಿನ ವ್ಯವಹಾರಸ್ಥ. ಯಾವುದೇ ರಿಸ್ಕ್ ತೆಗೆದುಕೊಳ್ಳಲು ಸಿದ್ಧನಿರಲಿಲ್ಲ. ಆದರೆ ಅಂಬಾನಿ ಹಾಗಲ್ಲ, ದಮಾನಿಗೆ ಸರೀ ವಿರುದ್ಧ. ಈ ಬಿಜಿನೆಸ್‌ನಲ್ಲಿ ಬಹಳ ಹಣವಿದೆ ಎಂದೆನಿಸಿದರೆ ಅದನ್ನು ಗಳಿಸಲು ಎಂಥ ರಿಸ್ಕನ್ನಾದರೂ ಸ್ವೀಕರಿಸಲು ಸಿದ್ಧ. ಒಮ್ಮೆ ಅಂಬಾನಿ ಯಾರ್ನ್ ಮೇಲೆ ಬೃಹತ್ ಹಣವನ್ನು ಹೂಡಿದರು. ಸದ್ಯದಲ್ಲಿಯೇ ಅದರ ಬೇಡಿಕೆ ಹೆಚ್ಚಾಗಿ ವಿಪರೀತ ಲಾಭವಾಗುತ್ತದೆಂಬುದು ಅವರ ಎಣಿಕೆಯಾಗಿತ್ತು.

ಆದರೆ ಅಂಬಾನಿ ನಿರ್ಧಾರದಿಂದ ದಮಾನಿಗೆ ತೀವ್ರ ಅಸಮಾಧಾನವಾಯಿತು. ಯಾರ್ನ್ ಮೇಲೆ ತೊಡಗಿಸಿದ ಷೇರುಗಳನ್ನು ಮಾರುವಂತೆ ಒತ್ತಾಯ ಮಾಡಿದರು. ಅಂಬಾನಿ ಹೇಳುವಷ್ಟು ಹೇಳಿದರು, ದಮಾನಿ ಕೇಳಲಿಲ್ಲ. ಬೇರೆ ದಾರಿಯಿಲ್ಲದೆ ಆ ಎಲ್ಲ ಷೇರುಗಳನ್ನು ಮಾರಲು ಒಪ್ಪಿದರು. ಆಗ ಅಂಬಾನಿ ಒಂದು ಉಪಾಯ ಹೂಡಿದರು. ಆ ಎಲ್ಲ ಷೇರುಗಳನ್ನು ಬೇರೆಯವರ ಹೆಸರಿನಲ್ಲಿ ತಾವೇ ಖರೀದಿಸಿದರು. ಕೆಲವೇ ದಿನಗಳಲ್ಲಿ ಯಾರ್ನ್ ಬೆಲೆ ವಿಪರೀತ ಏರಿತು. ಅಂಬಾನಿ ಲೆಕ್ಕಾಚಾರ ಫಲಿಸಿತು. ಈ ಒಂದು ನಿರ್ಧಾರದಿಂದ ಅಂಬಾನಿಗೆ ಭಾರಿ ಲಾಭ ಬಂತು. ಆಗ ಅಂಬಾನಿ ದಮಾನಿಯನ್ನು ಕರೆದು, 'ಈ ಲಾಭವನ್ನು ನಾನು ನಿನ್ನೊಂದಿಗೆ ಹಂಚಿಕೊಳ್ಳಲು ಸಿದ್ಧ. ಆದರೆ ಇನ್ನು ಮುಂದೆ ನಾನು ತೆಗೆದುಕೊಳ್ಳುವ ಕ್ರಮವನ್ನು ನೀನು ಪ್ರಶ್ನಿಸಬಾರದು, ಮಧ್ಯೆ ಪ್ರವೇಶಿಸಕೂಡದು' ಎಂದರು.

ದಮಾನಿ ಮಹಾ ಅಂಜುಬುರುಕ. ನಷ್ಟವಾದರೆ ಗತಿಯೇನು ಎಂದು ಹೆದರಿದ. ಇಂಥ ಮನುಷ್ಯನ ಜತೆ ಪಾಲುದಾರಿಕೆ ಸಾಧ್ಯವೇ ಇಲ್ಲವೆಂದು ಅಂಬಾನಿ ಅದನ್ನು ಕಡಿದುಕೊಂಡರು. ಅದಾದ ಬಳಿಕ ಯಾರೂ ಚಂಪಕ್‌ಲಾಲ್ ದಮಾನಿಯ ಹೆಸರನ್ನು ಕೇಳಲಿಲ್ಲ!

ದಾವಲ್ ಭಾಟಿಯಾ ಬರೆದ He swan with sharks for an Icecream ಎಂಬ ಪುಸ್ತಕವನ್ನು ನಾನು ಇತ್ತೀಚೆಗೆ ಓದುತ್ತಿದ್ದೆ. ಆ ಪುಸ್ತಕದ ಶೀರ್ಷಿಕೆಯೇ ಆಕರ್ಷಕವಾಗಿದೆ. ಆ ಶೀರ್ಷಿಕೆಗೆ ಪ್ರೇರಣೆಯೇ ಧೀರೂಭಾಯಿ ಅಂಬಾನಿ. ಒಮ್ಮೆ ಅಂಬಾನಿ ಹಡಗಿನಲ್ಲಿ ಹೋಗುತ್ತಿದ್ದರಂತೆ. ಪಕ್ಕದಲ್ಲಿ ಏಳೆಂಟು ಮಂದಿ ಪೈಕಿ ಒಬ್ಬ 'ಯಾರಾದರೂ ಅಲ್ಲಿ ಕಾಣುವ ದಡದ ತನಕ ಈಜಿ ವಾಪಸ್ ಬಂದಿದ್ದೇ ಆದಲ್ಲಿ ಅವರಿಗೆ ಐಸ್‌ಕ್ರೀಮ್ ಕೊಡಿಸುತ್ತೇನೆ' ಎಂದಿದ್ದು ಅಂಬಾನಿ ಕಿವಿಗೆ ಬಿತ್ತು. ಅಂಬಾನಿ ಅವನ ಬಳಿ ಬಂದು, 'ನಾನು ಈ ಬೆಟ್‌ನಲ್ಲಿ ಭಾಗವಹಿಸಬಹುದಾ?' ಎಂದು ಕೇಳಿದ್ದಕ್ಕೆ ಆಗಬಹುದೆಂಬಂತೆ ತಲೆಯಾಡಿಸಿದ. ಆದರೆ ಅಲ್ಲಿ ಅಪಾಯಕಾರಿ ಶಾರ್ಕ್ ಮೀನುಗಳಿವೆ ಎಂಬುದನ್ನು ಹೇಳಲಿಲ್ಲ. ಅಂಬಾನಿಗೆ ಅದು ಗೊತ್ತಿರಲಿಲ್ಲ. ಹಿಂದೆ-ಮುಂದೆ ನೋಡದೆ ಅಂಬಾನಿ ನೀರಿಗೆ ಜಿಗಿದೇಬಿಟ್ಟರು!

ಶಾರ್ಕ್ ತುಂಬಿದ ಆ ನೀರಿನಲ್ಲಿ ಸ್ವಲ್ಪವೂ ಹೆದರದೇ ದಡ ತಲುಪಿ ಪುನಃ ಹಡಗಿಗೆ ಬಂದರು. ಒಂದು ಐಸ್‌ಕ್ರೀಮ್‌ಗಾಗಿ ಅಂಬಾನಿ ಈ ಸಾಹಸಕ್ಕೆ ಮುಂದಾದರಾ? ಖಂಡಿತವಾಗಿಯೂ ಊಹುಂ- ಅಲ್ಲವೇ ಅಲ್ಲ. ಅಂಬಾನಿಗೆ ಆ ಬೆಟ್‌ನಲ್ಲಿ ಗೆಲ್ಲುವುದು ಮುಖ್ಯವಾಗಿತ್ತೇ ಹೊರತು ಐಸ್‌ಕ್ರೀಮ್ ತಿನ್ನುವುದಾಗಿರಲಿಲ್ಲ. ಅವರು ಐಸ್‌ಕ್ರೀಮ್‌ಗಾಗಿ ಪ್ರಾಣ ಕಳೆದುಕೊಳ್ಳುವುದಷ್ಟು ಹುಂಬರಾಗಿರಲಿಲ್ಲ, ಆದರೆ ಜಿದ್ದಿನಲ್ಲಿ ಪೈಪೋಟಿಯಲ್ಲಿ ಪ್ರಾಣವನ್ನೇ ಒತ್ತೆಯಿಡಲು ಸಿದ್ಧರಿದ್ದರು. ಗೆಲ್ಲುವುದೇ ಮುಖ್ಯವಾಗಿತ್ತು. ಅಂಬಾನಿಗೆ ಜೀವನದಲ್ಲಿ ಕೊನೆ ಉಸಿರಿರುವ ತನಕ ತಮ್ಮ ವ್ಯವಹಾರದಲ್ಲಿ ಇಂಥದೇ ಧೈರ್ಯ, ದಾಢಸಿತನವನ್ನು ಪ್ರದರ್ಶಿಸಿದ್ದರಿಂದಲೇ ರಿಲಾಯನ್ಸ್ ಕಂಪನಿ ಭಾರತದಲ್ಲೇ ನಂಬರ್ 1 ಸಂಸ್ಥೆಯಾಯಿತು. ಪಾನಿಪೂರಿ ಮಾರುತ್ತಿದ್ದ ವ್ಯಕ್ತಿ ಲಕ್ಷಾಂತರ ಜನರಿಗೆ ನೌಕರಿ ಕೊಡುವ ತನಕ ಬೆಳೆದರು. ದೇಶದ ಅತ್ಯಂತ ಶ್ರೀಮಂತರಾದರು! ಮೋಸ ಮಾಡಿದರೆ ಇಷ್ಟೆಲ್ಲ ಹಣ ಗಳಿಸಲಾಗುವುದಿಲ್ಲ.

ಮಾತ್ರೆಗಳ ಲೆಕ್ಕವನ್ನು ಮಾತ್ರೆಗಳ ಲೆಕ್ಕದಿಂದಲೇ ಬಿಡಿಸಿದವರು!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅರವಿಂದ ಸಿಗದಾಳು, ಮೇಲುಕೊಪ್ಪ- ಇವರ ಪತ್ರದಿಂದಲೇ ಆರಂಭಿಸೋಣ. ಇಲ್ಲ, ಲೇಖನದ ಆರಂಭಕ್ಕೆ 'ಅ' ಅಕ್ಷರ ಸರಿಯಾಗುತ್ತದೆ ಎಂಬ ಕಾರಣದಿಂದಲ್ಲ. ಹಾಗೆ ನೋಡಿದರೆ ನಾನಿಂದು ಯಾವ ಎರಡು ಪತ್ರಗಳನ್ನು ಹೈಲೈಟ್ ಮಾಡಬೇಕೆಂದಿದ್ದೇನೋ ಅವು ಅನುಕ್ರಮವಾಗಿ ಅರ್ಚನಾ ಹೆಬ್ಬಾರ್ ಮತ್ತು ಅಕ್ಷಯ ಮರಾಠೆ ಎಂಬ ಓದುಗರಿಂದ ಬಂದಂಥವು. ಎರಡೂ 'ಅ' ಅಕ್ಷರದಿಂದ ಆರಂಭವಾಗುವ ಹೆಸರುಗಳೇ. ಆದರೆ ಪೀಠಿಕೆಗೆ ಅರವಿಂದರ ಈ ಪತ್ರವೇ ಬಹುಯೋಗ್ಯ ಅನಿಸಿತು. ಕಳೆದ ವಾರದ ಅಂಕಣದಲ್ಲಿ ಕೇಳಿದ್ದ ಮಾತ್ರೆಗಳ ಜಾಣ್ಮೆಲೆಕ್ಕಕ್ಕೆ ಅವರು ಸರಿಯುತ್ತರ ಬರೆದ ತಮಾಷೆ ರೀತಿಯನ್ನು ಆನಂದಿಸಿ: ''ವಾರ್ಧಕ್ಯದಲ್ಲಿ ಕೈ ನಡುಗುವಾಗ ಇಂಥ ಅಚಾತುರ್ಯ ಆಗುವುದು ಸಹಜ. 'ಬಿ' ವಿಟಮಿನ್‌ನ ಮಾತ್ರೆ ಬಾಟ್ಲಿಯಿಂದ ಒಂದರ ಬದಲಿಗೆ ಎರಡು ಬಿತ್ತು ಅಂತ ಡೋಂಟ್‌ವರಿ ಮಾಡ್ಕೋಬೇಡಿ! ಇನ್ನೊಂದು 'ಎ' ವಿಟಮಿನ್ ಮಾತ್ರೆಯನ್ನು ಅಂಗೈಯಲ್ಲಿ ತೆಗೆದುಕೊಳ್ಳಿ. ಈಗ ನಿಮ್ಮ ಕೈಯಲ್ಲಿ ಎರಡು ವಿಟಮಿನ್ 'ಎ', ಎರಡು ವಿಟಮಿನ್ 'ಬಿ' ಮಾತ್ರೆಗಳಾಯ್ತು. ಅಂದರೆ ಮೂರು ಮಾತ್ರೆಗಳಿದ್ದುದು ನಾಲ್ಕಾಯ್ತು. ಭಾಮಿನಿ ಷಟ್ಪದಿಯಲ್ಲಿ ಮೊದಲು ಮೂರು ಇದ್ದ ಮಾತ್ರೆ ಎರಡನೆಯ ಪದಕ್ಕೆ ನಾಲ್ಕಾಗುವ ಹಾಗೆ! ಈಗ ನಿಮ್ಮ ಭಾಮಿನಿಯನ್ನು ಕರೆಯಿರಿ. ಭಾಮಿನಿ ಮನೆಯಲ್ಲಿ ಇಲ್ಲದಿದ್ರೆ ಹಿರಿಮಗಳು ಕುಸುಮಳನ್ನೋ, ಕೊನೆಯ ಮಗಳು ಪರಿವರ್ಧಿನಿಯನ್ನೋ ಕರೆದರೂ ಆದೀತು. ಒಟ್ಟಿನಲ್ಲಿ ಯಾರಾದರೂ ಒಬ್ಬರನ್ನು ಕರೆಯಿರಿ (ಮಗ 'ಶರ'ತ್ ಅನು'ಭೋಗ'ದಲ್ಲಿದ್ದ ಮನೆಯ ಲೀಸ್ ಅಗ್ರಿಮೆಂಟನ್ನು ರಿನ್ಯುಯಲ್ ಮಾಡುವುದಕ್ಕೆ ಹೋಗಿದ್ದಾನೆ ಅಂತ ಯಾರೋ ಹೇಳಿದ್ರಪ!). ಈಗ ಪ್ರತಿ ಮಾತ್ರೆಯನ್ನು ಎರಡು ಭಾಗಗಳಾಗಿ ಸಿಗಿದು, ಭಾಮಿನಿಯ ಎಡ ಕೈಯಲ್ಲಿ ಒಂದು ಭಾಗ, ಬಲ ಕೈಯಲ್ಲಿ ಒಂದು ಭಾಗ ಇಡುತ್ತಾ ಹೋಗಿ. ಶಬ್ದ ಆಗದಂತೆ, ಮಾತ್ರೆ ಅರ್ಧರ್ಧ ಮಾಡಿದ ಮೇಲೆ, ಎದುರಿನ ಅರ್ಧಾಂಗಿಯ ಎಡ ಕೈಯಲ್ಲಿ ಇರುವ ನಾಲ್ಕು ಅರ್ಧ ಗುಳಿಗೆಗಳನ್ನು ನುಂಗಿ ಅರ್ಧ ಲೋಟ ನೀರು ಕುಡಿಯಿರಿ. ಬಲಗೈಯಲ್ಲಿ ಉಳಿದಿರುವ ನಾಲ್ಕರ್ಧ ಮಾತ್ರೆಯನ್ನು ಒಂದು ಷಟ್ಪದಿ ಬರೆಯುವಷ್ಟು ಅಳತೆಯ ಶುದ್ಧ ಕಾಗದದಲ್ಲಿ ಸುತ್ತಿ ಇಟ್ಟು, ಮರುದಿನ ರಾತ್ರಿ ಮರೆಯದೇ, ಎಚ್ಚರಿಕೆಯಿಂದ ನುಂಗಿ ನೀರು ಕುಡಿದು ನಿರಾಳವಾಗಿ ನಿದ್ರಿಸಿ''.

ಸೂಕ್ಷ್ಮವಾಗಿ ಗಮನಿಸಿದಿರಾ? ಇದರಲ್ಲಿ ಜಾಣ್ಮೆಲೆಕ್ಕಕ್ಕೆ ಪಕ್ಕಾ ಪರ್ಫೆಕ್ಟ್ ಉತ್ತರವಂತೂ ಇದ್ದೇಇದೆ; ಜತೆಯಲ್ಲೇ ಕನ್ನಡದ ಆರು ಷಟ್ಪದಿ ಥರಗಳ- ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕ- ಹೆಸರುಗಳೂ ಅಡಕವಾಗಿವೆ! ಕಳೆದ ವಾರದ ಅಂಕಣದಲ್ಲಿ ಬರೆದಿದ್ದಂತೆ ಅವು ಇನ್ನೊಂದು ಅರ್ಥದಲ್ಲಿ ಮಾತ್ರೆಗಳ ಲೆಕ್ಕಾಚಾರದವೇ ತಾನೆ? ಹಾಗೆ ಎಲ್ಲ ಮಾತ್ರೆಗಳನ್ನೂ ಸಮನ್ವಯಗೊಳಿಸಿ ನವಿರು ಹಾಸ್ಯದ ಸಕ್ಕರೆ ಲೇಪ ಕೊಟ್ಟು ಪ್ರಸ್ತುತಪಡಿಸಿದ ರೀತಿಯಂತೂ 'ಭಲೇ!' ಎನ್ನುವಂತಿದೆ. ಆದ್ದರಿಂದಲೇ ಇದನ್ನು ಪೀಠಿಕೆಗೆ ಆಯ್ದುಕೊಂಡೆ. ಆದರೆ ಇನ್ನೂ ಹೆಚ್ಚು ಭಲೇ ಎನಿಸುವ ಎರಡು ಪತ್ರಗಳಿವೆ, ಇನ್ನೊಂಚೂರು ಬಿಲ್ಡಪ್ ಕೊಟ್ಟು ಅವುಗಳನ್ನು ಆಮೇಲೆ ನೋಡೋಣ. ಮೊದಲಿಗೆ ಸರಿಯುತ್ತರ ಬರೆದು ತಿಳಿಸಿದವರೆಲ್ಲರ ಹೆಸರುಗಳು ಇಲ್ಲಿ ದಾಖಲಾಗಬೇಕು. ಇದು ನಿಮಗೆ ರೇಡಿಯೊದಲ್ಲಿ ಮೆಚ್ಚಿನ ಚಿತ್ರಗೀತೆ ಪ್ರಸಾರಕ್ಕೆ ಕೋರಿಕೆ ಸಲ್ಲಿಸಿದವರ ಪಟ್ಟಿಯಂತೆ, ವಿವಿಧಭಾರತಿಯಲ್ಲಿ ಕೇಳಿಬರುವ 'ಝುಮ್ರಿತಲೈಯಾ ಸೇ...' ಯಾದಿಯಂತೆ ಕಂಡುಬಂದರೂ ಪರವಾಗಿಲ್ಲ, ಹೊನ್ನಾವರದಿಂದ ಮಂಜುನಾಥ ಭಟ್, ಮೈಸೂರಿನಿಂದ ರಕ್ಷಿತ್ ಕುಮಾರ್, ಬೆಂಗಳೂರಿನಿಂದ ಗಣೇಶ ರೆಡ್ಡಿ, ನಗರದಿಂದ ಅಶ್ವಿನಿ ವಿಜಯ್ ಶೇಟ್, ವರ್ಜೀನಿಯಾ (ಅಮೆರಿಕ)ದಿಂದ ನಳಿನಿ ಮಯ್ಯ, ಬೆಂಗಳೂರಿನಿಂದ ಇಂದಿರಾ ಜಾನಕಿ, ಮಂಗಳೂರಿನಿಂದ ಜ್ಯೋತಿ ರಾಜೇಶ್, ಮುಂಬೈನಿಂದ ಪುರುಷೋತ್ತಮ ಜೋಶಿ, ಬೆಂಗಳೂರಿನಿಂದ ಕೇಶವಮೂರ್ತಿ ಕುಲಕರ್ಣಿ, ಪುತ್ತೂರಿನಿಂದ ರೇವತಿ ಯು.ಎಂ, ಶಿವಮೊಗ್ಗದಿಂದ ರಾಧಾಮಣಿ ಮತ್ತು ಪ್ರಣತಿ (ಅಮ್ಮ-ಮಗಳು), ಬೆಂಗಳೂರಿನಿಂದ ಸೀತಾ ವ್ಯಾಸಮುದ್ರಿ, ಬಳ್ಳಾರಿಯಿಂದ ಶ್ರೀನಿವಾಸ ದೇವಳೇ, ಮುಂಬೈನಿಂದ ಉಮಾ ರಾವ್, ಬೆಂಗಳೂರಿನಿಂದ ಅಶೋಕ ಎಚ್.ಎಸ್, ಪುರುಷೋತ್ತಮ ಭಟ್ಟ ಪೆಲ್ತಾಜೆ, ಮೈಸೂರಿನಿಂದ ನಾಗೇಂದ್ರ, ಮತ್ತು ಚಿತ್ರದುರ್ಗದಿಂದ ಡಾ. ಅಜೇಯ ಶರ್ಮ(ತಂದೆ ಡಾ. ಉಮೇಶ ಬಾಬು ಮೂಲಕ). ಮಾತ್ರೆಗಳ ಲೆಕ್ಕಕ್ಕೆ ಸರಿಯುತ್ತರ ಕಂಡುಕೊಂಡ ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು.

ಇನ್ನು, ಉತ್ತರ ಕಂಡುಕೊಳ್ಳಲಾಗಲಿಲ್ಲ ಎಂಬುದನ್ನೂ ರಂಜನೀಯವಾಗಿ ಬರೆದ ಒಂದಿಬ್ಬರ ಪ್ರತಿಕ್ರಿಯೆಗಳು: ''ಗುಳಿಗೆ ರಸಘುಳಿಗೆ ಹರಟೆ ಮತ್ತೊಂದು ಲೆಕ್ಕ ಮಿದುಳಿಗೆ ಎಂಬ ಲೇಖನ ಓದುತ್ತಾ ಸಾಗುವಾಗ ಎಂದಿನಂತೆಯೇ ನಗು ತರಿಸಿತು. ಕೊನೆಯಲ್ಲಿ ಪ್ರಶ್ನೆಯೊಂದನ್ನು ನೀಡಿ ಆ ನಗೆಯ ಹಾದಿಯಲ್ಲಿ ರಸ್ತೆ ಉಬ್ಬು ಸೃಜಿಸಿದಿರಿ. ಆ ರಸ್ತೆ ಉಬ್ಬನ್ನು ದಾಟುವುದು ಹೇಗೆ ಎಂಬ ಚಿಂತೆಯಲ್ಲೇ ನಾನೊಂದು ಗುಳಿಗೆ ನುಂಗಿದ್ದಾಯ್ತು! ಮುಂದಿನ ಅಂಕಣದಲ್ಲಿ ಆ ಉಬ್ಬನ್ನು ತಾವೇ ದಾಟಿಸುವಿರಿ ಎಂಬ ನಂಬಿಕೆ ನನ್ನದು. ಅನ್ಯ ಓದುಗರು ತಾವೇ ದಾಟಿದ್ದರೆ ಅವರಿಗೆ ನನ್ನ ಅಭಿನಂದನೆಗಳು''- ಪತ್ತಂಗಿ ಎಸ್.ಮುರಳಿ, ಬೆಂಗಳೂರು ಮತ್ತು, ''ನಿಮ್ಮ ಪ್ರಶ್ನೆಯನ್ನು ಕುರಿತು ಮೂರು ದಿನಗಳಿಂದ ಯೋಚಿಸುತ್ತಿದ್ದೇನೆ. ಪರಿಣಾಮವಾಗಿ ನನ್ನ ತಲೆಯ ಮೇಲಿನ ಕೂದಲುಗಳ ಸಂಖ್ಯೆ ದಿನೇ ದಿನೆ ಕಡಿಮೆ ಆಗುತ್ತಿದೆ. ಆದ್ದರಿಂದ, ಕೂದಲುಗಳ ಹಿತದೃಷ್ಟಿಯಿಂದ ಯೋಚಿಸುವುದನ್ನು ನಿಲ್ಲಿಸುತ್ತಿದ್ದೇನೆ ಮತ್ತು ಪ್ರಶ್ನೆಯನ್ನು ಕೇಳಿದವರಿಗೆ ಗೌರವಪೂರ್ವಕವಾಗಿ ಮರಳಿಸುತ್ತಿದ್ದೇನೆ. ಉತ್ತರದ ನಿರೀಕ್ಷೆಯಲ್ಲಿ, ನಿಮ್ಮ ದಡ್ಡ ಶಿಷ್ಯ''- ಭಾವುರಾವ್ ಕುಲಕರ್ಣಿ, ಸಿಂಧನೂರು. ಹಾಗೆಯೇ, ಜಾಣ್ಮೆಲೆಕ್ಕದ ಪ್ರಸ್ತಾವವೇ ಇಲ್ಲದಿದ್ದರೂ ಪ್ರತಿಕ್ರಿಯೆಯಲ್ಲಿ ಏನೋ ಒಂದು ಸ್ವಾರಸ್ಯಕರ ಮಾಹಿತಿಯನ್ನೋ ಮಂದಹಾಸ ತರಿಸುವ ಮಾತನ್ನೋ ಹಂಚಿಕೊಂಡವರು: ''ನಂಜನಗೂಡು ಗುಂಡ್ಲು ಪಂಡಿತರಿಂದ ತಯಾರಾಗುತ್ತಿದ್ದ ಒಂದು ಗುಳಿಗೆಯ ಹೆಸರು ಶ್ರೀಕರ ಸುಖಕರ ಭೇದಿ ಮಾತ್ರೆ ಅಂತ ಇರುತ್ತಿತ್ತು!''- ಡಾ.ಎಸ್.ನರಸಿಂಹನ್, ವಿರಾಜಪೇಟೆ; ''ಹರಪನಹಳ್ಳಿ ಗುಳಿಗೆ ಒಂದೇ ಘಳಿಗೆ ಅಂತ ನಮ್ಮಕಡೆಯ ಗಾದೆಮಾತು. ಗುಳಿಗೆ ಜಾಸ್ತಿ ಆದರೆ ಇದೇ ಆಗುವುದು''- ರಮೇಶ ತಾಡಪತ್ರಿ; ''ಮನುಷ್ಯನಿಗೆ ಮಾತ್ರೆ ತಿನ್ನಬೇಕಾದ ಪರಿಸ್ಥಿತಿ ಬರುವುದನ್ನೇ ಗುಳಿಕ ಕಾಲ ಎನ್ನಬಹುದು, ಅದೂ ಅತಿಯಾದಾಗ ಬರುವುದು ಯಮಗಂಡ ಕಾಲವೋ ಏನೋ!''- ಅನ್ನಪೂರ್ಣಾ ದೈತೋಟ; ''ಗುಳಿಗೆ ಪುರಾಣವನ್ನೋದುವಾಗ ಬೀಚಿಯವರ ವಿಡಂಬನಾತ್ಮಕ ಬರಹಗಳ 'ಮಾತ್ರೆಗಳು' ಪುಸ್ತಕ ನೆನಪಾಯಿತು'' ಎಂದು ಬರೆದ ಆರ್. ಮೂರ್ತಿ (ಮೈಸೂರು), ಮಂಗಲಾ ಗುಂಡಪ್ಪ (ಬೆಂಗಳೂರು) ಮತ್ತು ವೀಣಾ ಹೆಗಡೆ (ಶಿರಸಿ) ಇವರ ಪ್ರತಿಕ್ರಿಯೆಗಳೂ ಇವರೆಲ್ಲರ ಓದಿನ ವಿಸ್ತಾರ-ವೈವಿಧ್ಯಗಳ ಮೆಚ್ಚುಗೆಗಾಗಿ ಉಲ್ಲೇಖಾರ್ಹವೇ.

ಪುಣೆಯಿಂದ ಶ್ರೇಯಾ ಆಪ್ಟೆ ಅವರ ಪ್ರತಿಕ್ರಿಯೆ ಇನ್ನೊಂದು ತೆರನಾದ ತಮಾಷೆಯದು. ಅಗ್ದೀ ಉತ್ತರಕರ್ನಾಟಕ ಭಾಷೆಯಲ್ಲಿ ಬರವಣಿಗೆ: ''ಸರ್ರ... ನೀವು ಗುಳಿಗಿ ವಿಷಯದಾಗ ಇಷ್ಟೆಲ್ಲಾ ಬರದೀರ್ರಿ... ಆದ್ರ ಜಳಕದ ಗುಳಿಗಿ ಬಗ್ಗೆ ಏನೂ ಹೇಳಲೇ ಇಲ್ರೀಪಾ... ಹಾಂಗ್ ಹೆಂಗ್ ಆದೀತ್ರೀಪಾ... ನಾನೂ ಲಗ್ನಾ ಮಾಡ್ಕೊಂಡು ಗಂಡನ ಮನೀಗೆ ಬಂದಾಗ ನನಗೂ ಗಂಡನ ಕಡೆಯಿಂದ ಗೊತ್ತಾಗಿದ್ದು ನೋಡ್ರಿ, ಹಿಂಗ ಒಂದು ಜಳಕದ ಗುಳಿಗಿ ಅಂತಿರತದ ಅಂತ... ಸಣ್ಣ ಹುಡುಗೂರು ಜಳಕ ಮಾಡಲಿಕ್ಕೆ ಬ್ಯಾಸರ ಆದ್ ದಿನ, 'ಅವ್ವ ನಾನಿವತ್ತು ಜಳಕದ್ ಗುಳಿಗಿ ತೊಗೊಂಡ್ಬಿಟ್ಟೀನವ್ವ, ಜಳಕ ಮಾಡಂಗಿಲ್ಲ' ಅಂತ ಓಡಿ ಹೋಗೋರಂತ. ಅಂದ್ರೆ ಏನಂತ ಅವತ್ತು ಜಳಕಕ್ಕ ಸುಟ್ಟಿ. ಬರೇ ಆಡೋದು ಒಂದೇ. ನಮ್ ಮನ್ಯಾಗ ನನ್ ಗಂಡಾನೂ ಇಷ್ಟು ದೊಡ್ಡವನಾದ್ರೂ, ರವಿವಾರ ಬಂತಂದ್ರ, ಮುಂಜಾನೆ ಜಳಕದ್ ಗುಳಿಗಿ, ಸಂಜೀಮುಂದ ಜಳಕ... ಇದೇ ಪದ್ಧತಿ ಇನ್ನೂ ತನ ನಡದೇತಿ ನೋಡ್ರಿಪಾ... ಮೊದ ಮೊದಲು ಎಲ್ಲಾ ಹೇಳಿ ಹೇಳಿ ನನಗೂ ಬ್ಯಾಸರ ಆತು. ಈಗ ಬಿಟ್ಟಿಬಿಟ್ಟಿನಿ 'ನೋಡ್ರಿಪ ಏನಾರಾ ಮಾಡಿಕೋರಿ' ಅಂತೀನಿ. ಇಷ್ಟಕ್ಕೂ ಈ ಜಳಕದ ಗುಳಿಗಿ ಅಂದ್ರೆ ಏನು ಅಂತ ಕೇಳ್ತೀರೇನು... ಅದು ನಾವು ಸಣ್ಣವರಿದ್ದಾಗ ತಿಂತಿದ್ವಲ್ಲ ಶುಂಠಿ ಪೆಪ್ಪರಮಿಂಟ... ಅದ... ರೀಪಾ!''.

''ಅಜ್ಜನಿಗೆ ಊಟದ ಬಳಿಕ ಮಾತ್ರೆ, ಜತೆಗೆ ಬಿಸಿನೀರಿನ ಲೋಟ ತಂದುಕೊಡುವ ಜಾಣ ಮೊಮ್ಮಕ್ಕಳ ಚಿತ್ರಣ ಸಿಗಬೇಕಾದರೆ ನೀವು ಯಾವುದಾದರೂ ಅವಿಭಕ್ತ ಕುಟುಂಬಕ್ಕೆ ಭೇಟಿ ಕೊಡಬೇಕು'' ಎಂದು ಅಂಕಣದಲ್ಲಿದ್ದ ವಾಕ್ಯವನ್ನು ರಿಲೇಟ್ ಮಾಡಿಕೊಳ್ಳುತ್ತ



''ನನ್ನ ತಮ್ಮನ ಮಗ ಧ್ರುವ ಎರಡು ವರ್ಷದವನು, ಗುಳಿಗೆ ಅನ್ನಲು ಬಾರದೆ ಗುಗ್ಗಳಿ ಎನ್ನುತ್ತಾನೆ. ನಾಷ್ಟಾ ಆದ ಮೇಲೆ ತನ್ನ ಅಜ್ಜ (ನನ್ನ ಅಪ್ಪ)ನಿಗೆ ಗುಗ್ಗಳಿ ತಗೋ ಅಂತ ಹೇಳುತ್ತಾನೆ'' ಎಂದು ಬರೆದಿದ್ದಾರೆ ಹುಬ್ಬಳ್ಳಿಯಿಂದ ವಾಣಿ ಹುಗ್ಗಿ. ಅಂತೆಯೇ ಪುತ್ತೂರಿನಿಂದ ಎ.ಪಿ ಉಮಾಶಂಕರಿ: ''ನನ್ನ ಮಗಳು ಸುಮಾರು ಮೂರು ವರುಷದವಳಿದ್ದಾಗ ತನ್ನ ಅಜ್ಜನಿಗೆ ಮಾತ್ರೆ ಕೊಡುವ ಅವಳ ಚುರುಕುತನ, ಜವಾಬ್ದಾರಿ ತನ್ನದೇ ಎನ್ನುವ ನಡೆಯೇ ಕಣ್ಣಿಗೆ ಕಟ್ಟಿತು. ಚಂದ್ರಪ್ರಭಾ ವಟಿ, ಯೋಗರಾಜ ಗುಗ್ಗುಳು ಎಂದೇನೋ ಮಾತ್ರೆಯ ಹೆಸರು ಮಾವನವರು ಹೇಳುತ್ತಿದ್ದ ನೆನಪು. ಅದನ್ನು ಗುದ್ದಿ ಪುಡಿ ಮಾಡಿ ತಿನ್ನಲು ಇದ್ದದ್ದು. ಅಜ್ಜನ ಬೆಳಗ್ಗಿನ ತಿಂಡಿ ಆಗುವುದನ್ನೇ ಕಾಯುತ್ತಾ ಕುಟ್ಟಾಣಿ ತಂದು ಇಟ್ಟು, ಅಜ್ಜನ ಮಾತ್ರೆ ಗುದ್ದಬೇಕಷ್ಟೆ, ಗುದ್ದುವ ಮಾತ್ರೆ ಗುದ್ದಬೇಕಷ್ಟೆ. ರಾಗವಾಗಿ ಹೇಳುತ್ತಾ ಅಜ್ಜ ಅದನ್ನು ಪುಡಿ ಮಾಡುವಾಗ ತಾನೂ ಕೈಡಿದು ತನ್ನಿಂದಲೇ ಆಗಬೇಕಷ್ಟೇ ಎನ್ನುವಂತೆ ಮಾಡುತ್ತಿದ್ದುದು ಎಲ್ಲರಿಗೂ ನಗು ತರಿಸುತ್ತಿತ್ತು. ಮಕ್ಕಳಾಟ ಎಷ್ಟು ಚಂದ ಬಂದು ನೋಡಬಾರದೇ ಎನ್ನುವಂತೆ ಕಾಣುತ್ತಿತ್ತು. ಹೆತ್ತವರಿಗೆ... ಮುದ್ದು ಎಂಬ ಮಾತು ಇರುವುದು ಹೌದಾದರೂ''.

ಹಾಗೆಯೇ, ಅಲೋಪತಿ ಮಾತ್ರೆಗಳ 'ನ್' ಕಾರಾಂತ ಹೆಸರುಗಳನ್ನು ತಮಿಳು ನಾಮಧೇಯಗಳಿಗೆ ಹೋಲಿಸಿದ್ದನ್ನು ಡೋಂಕಾಸ್ಟರ್ (ಯುನೈಟೆಡ್ ಕಿಂಗ್‌ಡಮ್)ದಲ್ಲಿರುವ ಡಾ.ಶ್ರೀವತ್ಸ ದೇಸಾಯಿ ವಿಶೇಷವಾಗಿ ಗಮನಿಸಿದ್ದಾರೆ, ರಿಲೇಟ್ ಮಾಡ್ಕೊಂಡಿದ್ದಾರೆ. ಅವರೆನ್ನುತ್ತಾರೆ: ''ತಮಿಳರ 'ಅನ್' ಕಾರ (ಅಹಂಕಾರ ಅಲ್ಲದಿದ್ದರೂ) ನನಗೂ ತೊಂದರೆ ಕೊಟ್ಟಿದೆ. ನಾನು ತಮಿಳುನಾಡಿನ ಊಟಿಯಲ್ಲಿ ಜೀವನದ ಪ್ರಥಮ 12 ವರ್ಷ ಕಳೆದೆ. ಶಾಲೆ ಶುರುವಾದದ್ದೂ ಅಲ್ಲಿಯೇ. ನಮ್ಮನ್ನು ಯಾರು ಶಾಲೆಗೆ ಕರೆದುಕೊಂಡು ಹೋಗಿ ಹೆಸರುಹಚ್ಚಿದರೋ ನಮ್ಮ ತಂದೆಯಂತೂ ಅಲ್ಲ, ಇಲ್ಲದಿದ್ದರೆ ನಾವು ಮೂವರು ಅಣ್ಣತಮ್ಮಂದಿರು (ಆನಂದ, ವಸಂತ, ಶ್ರೀವತ್ಸ) ಅನುಕ್ರಮವಾಗಿ ಆನಂದನ್, ವಸಂತನ್, ಶ್ರೀವತ್ಸನ್ ಆಗುತ್ತಿರಲಿಲ್ಲ. ತಮಿಳು ಶಾಲೆಯಲ್ಲಿ ಅವರು ಟಾಕು-ಮಸಿಯಲ್ಲಿ ನಮ್ಮ ಹೆಸರನ್ನು ನೋಂದಾಯಿಸಿಕೊಂಡದ್ದು ಹೇಗೋ ಏನೋ! ಕೊನೆಯ ಅಕ್ಷರಗಳೆಲ್ಲ ತಿರುಚಿಕೊಂಡು 'ಅನ್' ಆಗಿವೆಯೆಂದು ನಮಗೆ ಗೊತ್ತಾದದ್ದು ಧಾರವಾಡಕ್ಕೆ ಉಳಿದ ಅರ್ಧ ಶಿಕ್ಷಣಕ್ಕೆ ಬಂದಾಗ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್‌ನಲ್ಲಿ ನೋಡಿಯೇ! ಅದರಲ್ಲೂ ನನ್ನ ಹೆಸರು ಶ್ರೀವತ್ಸನ್ ಅಂತ! ಅಯ್ಯೋ ಗ್ರಹಚಾರವೇ! ನನಗೆ ಬರ್ತ್ ಸರ್ಟಿಫಿಕೇಟಿಲ್ಲದೆ ಪರದಾಡಿದೆ. ಸ್ಕೂಲ್ ಲೀವಿಂಗ್ ಸರ್ಟಿಫಿಕೇಟೇ ಗತಿ. ಅದರಲ್ಲಿ ಜನ್ಮದಿನಾಂಕ ಸರಿಯಿತ್ತು. ಹೆಸರು ತಪ್ಪಾಗಿತ್ತು. ಯಾವುದೇ ಬದಲಾವಣೆ ಮಾಡುವುದಕ್ಕೆ- ಒಂದು ಚುಕ್ಕಿ ತೆಗೆಯುವುದಿರಲಿ, ಗೆರೆ ಸೇರಿಸುವುದಿರಲಿ, ಯಾವುದಕ್ಕೂ- ತನಗೆ ಅಧಿಕಾರವಿಲ್ಲ ಅಂತ ನಮ್ಮ ಹಠಮಾರಿ ಹೆಡ್‌ಮಾಸ್ಟರ್! ನಮ್ಮ ತಂದೆಗೋ ಯಾವುದಕ್ಕೂ ಸಮಯವಿಲ್ಲ, ಲೇಖನ ಬರೆಯೋದು ಬಿಟ್ಟು. ಒಂದು ಅಂಕಣ ಬರೆಯುತ್ತಿದ್ದರು, ಊಟಿಗೆ ಮೊದಲು ಮದ್ರಾಸ್‌ದಲ್ಲಿದ್ದಾಗ- ನರವಾಹನಪುರಿಯಿಂದ ಅಂತ. ಆಮೇಲೆ ನಿಂತುಹೋಯಿತು ನಾಮ್ ಔರ್ ನಿಶಾನ್ ಇಲ್ಲದಂತೆ (ಆನಂದ ರಾಮರ ಗುಳಿಗೆ ಕಾಲಂ ಮುಚ್ಚಿದಂತೆ)! ಕೊನೆಗೆ ಪುಸಲಾಯಿಸಿ ಅವರನ್ನು ಗಾಡಿ ಮಾಡಿ (ಟಾಂಗಾ, ಮದ್ರಾಸದಂತೆ ನರವಾಹನ ಅಲ್ಲ, ನರ ಎಳೆಯುವ ರಿಕ್ಷಾ) ತಹಸೀಲದಾರ ಆಫೀಸಿಗೆ ಎಳೆದುಕೊಂಡು ಹೋಗಿ ಅಫಿಡವಿಟ್ ಸಲ್ಲಿಸಿ, ಪಾಸ್‌ಪೋರ್ಟ್ ಮಾಡಿಸಿ ಫಾರಿನ್‌ಗೆ ಬಂದೆ! ನನಗೆ ತಮಿಳು ಕೊಟ್ಟ ತ್ರಾಸು ಇದು. ಆ ದೇ.ಭ.ಮಾಸ್ತರರ ಅನೆಸ್ತಿ ಅನ್ನುವ 'ಬೇನೆ'ಗೆ ಒಂದು ಗುಳಿಗೆ ಇದ್ದಿದ್ದರೆ ಸುಲಭವಾಗುತ್ತಿತ್ತು. ಲಂಚವನ್ನೂ ತೆಗೆದುಕೊಳ್ಳುತ್ತಿದ್ದಿಲ್ಲ ಆಗಿನ ಕಾಲದ ಗಾಂಧಿಯನ್ ಹೆಡ್‌ಮಾಸ್ಟರ್!''.

ಸರಿ, ಈಗ ನಾವು ಮತ್ತೊಮ್ಮೆ ಮಾತ್ರೆಗಳ ಜಾಣ್ಮೆಲೆಕ್ಕಕ್ಕೆ ಮರಳೋಣ. ಸರಿಯುತ್ತರ ಏನೆಂದು ನಿಮಗೆ ಈ ಅಂಕಣದ ಆರಂಭದಲ್ಲಿಯೇ ಗೊತ್ತಾಗಿದೆ. ಜತೆಗೆ ಕನ್ನಡ ಷಟ್ಪದಿಗಳ ಉಲ್ಲೇಖವೂ ಬಂದಿದೆ. ಅಂಥದೊಂದು ಷಟ್ಪದಿಯಲ್ಲೇ ಜಾಣ್ಮೆಲೆಕ್ಕದ ಸರಿಯುತ್ತರ ಬರೆದರೆ ಹೇಗಿರುತ್ತದೆ? ಮಾತ್ರೆಗಳ ಲೆಕ್ಕವನ್ನು ಮಾತ್ರೆಗಳ ಲೆಕ್ಕದಿಂದಲೇ ಬಿಡಿಸಿದಂತಾಗುತ್ತದೆ! ಅದನ್ನೇ ಮಾಡಿದ್ದಾರೆ ಬೆಂಗಳೂರಿನ (ಮೂಲತಃ ಹೊನ್ನಾವರದ) ಅರ್ಚನಾ ಹೆಬ್ಬಾರ್. ಛಂದೋಬದ್ಧ ಪದ್ಯಗಳನ್ನು ಹೊಸೆಯುವುದು ಇವರಿಗೆ ನೀರು ಕುಡಿದಷ್ಟು- ಅಲ್ಲ, ಹತ್ತಿಯಿಂದ ಬತ್ತಿ ಹೊಸೆದಷ್ಟು ಸುಲಭ. ಮಾತ್ರೆಗಳ ಜಾಣ್ಮೆಲೆಕ್ಕಕ್ಕೆ ಮಗ ಸರಿಯುತ್ತರ ಹೇಳಿದನಂತೆ, ಅದನ್ನವರು ಮೂರು-ನಾಲ್ಕರಂತೆ ಮಾತ್ರೆಗಳ ಲೆಕ್ಕ ಹಾಕಿ ಚಂದದ ಭಾಮಿನೀ ಷಟ್ಪದಿಯಲ್ಲಿ ನಿರೂಪಿಸಿದ್ದಾರೆ, ಹೀಗೆ: 'ಸರಳವಿದೆಯೆಂದೀಗ ಮಗ ತಾ-। ನೊರೆದ ನನ್ನೀ ಪ್ರಶ್ನೆಗುತ್ತರ। ತೆರೆದು ವಿಟಮಿನ್ನೇಯ ಡಬ್ಬಿಯ ಮಾತ್ರೆಯಿನ್ನೊಂದೇ। ಕರದೊಳಗೆ ತೆಗೆಯುತ್ತ ಸೇರಿಸಿ। ಸರಿಯ ಭಾಗವ ಮಾಡಿ ನಾಲ್ಕನು। ಸರಸಿ ನಾಲ್ಕರ್ಧಗಳ ನಾಳೆಗೆ ತಿಂದು ನಾಲ್ಕರ್ಧ॥'. ಇದನ್ನು ಚಪ್ಪರಿಸುವಷ್ಟರಲ್ಲಿ ಬೆಂಗಳೂರಿನಿಂದಲೇ ಅಕ್ಷಯ ಮರಾಠೆಯವರು ತಾವೇನೂ ಕಮ್ಮಿಯಿಲ್ಲವೆಂದು ಮಾತ್ರೆಗಳ ಎರಡು ಸ್ಟ್ರಿಪ್ಸ್ ಕಳಿಸಿದರು, ಎರಡು ಭೋಗ ಷಟ್ಪದಿಗಳ ರೂಪದಲ್ಲಿ. ಭೋಗ ಷಟ್ಪದಿ ಅಂದ್ರೆ, ಗೊತ್ತಲ್ಲ, 'ತಿರುಕನೋರ್ವನೂರ ಮುಂದೆ' ಪದ್ಯದಂತೆ ಹಾಡಲಿಕ್ಕಾಗುವಂಥದು: ''ಆರು ಭಾಗಗಳನು ಮಾಡಿ। ಮೂರು ಮಾತ್ರೆಗಳನು ಭರದಿ। ಬೇರೆಬೇರೆ ಗುಂಪುಗಳಲಿ ಪಾಲುಮಾಡಿರಿ। ಆರಿಸಿಟ್ಟ ಬಾಟ್ಲಿಯಿಂದ। ಸೇರಿಸೆರಡು ಭಾಗಗಳನು। ದಾರಿಯರ್ಧ ನಡೆದೆವೆಂದು ನೀವು ತಿಳಿಯಿರಿ ॥1॥ ಬದುಕು ಚೆಂದವಾಗಲಿಕ್ಕೆ। ಮೊದಲ ದಿನದ ಸಂಜೆಯಲ್ಲಿ। ಮೊದಲ ಗುಂಪಿನಿಂದ ನಾಕು ಮಾತ್ರೆ ತಿನ್ನಿರಿ। ಚದುರತನದಿ ಯೋಚಿಸಲ್ಕೆ। ಕೆದರಿಹೋದ ಚಣವು ಕೂಡ। ಮುದವ ಕೊಡುವ ಜಾಣ್ಮೆಲೆಕ್ಕವಾಯಿತೆನ್ನಿರಿ ॥2॥''. ಛಂದಸ್ಸನ್ನು ಪಾಲಿಸುತ್ತ ಬರೆದ ಪದ್ಯಗಳಿಗಿರುವ ಇಂಥ ಸಹಜಸೌಂದರ್ಯ, ಗೇಯತೆ, ಬಾಳ್ವಿಕೆಗಳು ಈಗಿನ ಕಾಲದ ಮುಕ್ತಛಂದದ (ಎಮ್ಮೆ ಉಚ್ಚೆಹೊಯ್ದಂತೆ ಎಂದು ಹೋಲಿಸಬಹುದಾದ) ಕತೆಗಳಿಗೆ ಇರುವುದಿಲ್ಲ ಎಂದು ಅವನ್ನು ಕೆತ್ತುವವರಿಗೆ ಅದೇಕೆ ಅರ್ಥವಾಗುವುದಿಲ್ಲವೋ?

ಛಂದೋಬದ್ಧ ಪದ್ಯಕೃಷಿಯ ಇನ್ನೊಬ್ಬ ರೈತ ಬೆಂಗಳೂರಿನ ಮೃತ್ಯುಂಜಯ ತೇಜಸ್ವಿ. ಇವರು ಜಾಣ್ಮೆಲೆಕ್ಕಕ್ಕೆ ಸರಿಯುತ್ತರವನ್ನೇನೋ ಸಾದಾ ಗದ್ಯದಲ್ಲೇ ಬರೆದು ಕಳಿಸಿದ್ದಾರೆ, ಆದರೆ ಮಾತ್ರೆಗಳ ಬಗ್ಗೆ ಇಂಟರೆಸ್ಟಿಂಗ್ ವಿಚಾರವೊಂದನ್ನು ಛಂದದ ಪದ್ಯದಲ್ಲಿ ವಿವರಿಸಿದ್ದಾರೆ. ಸಾಮಾನ್ಯವಾಗಿ ಮಾತ್ರೆಗಳ ಒಂದು ಸ್ಟ್ರಿಪ್‌ನಲ್ಲಿ 10 ಮಾತ್ರೆಗಳಿರುವುದೇಕೆ? ಎಂಬ ಕುತೂಹಲಕಾರಿ ಪ್ರಶ್ನೆಗೆ ಒಂದು ತಮಾಷೆ ಕಲ್ಪನೆಯ ಉತ್ತರ. ಪಂಚಚಾಮರ ವೃತ್ತ ಛಂದಸ್ಸಿನಲ್ಲಿ ಶುದ್ಧ ಕನ್ನಡದಲ್ಲಿ ನಿರೂಪಣೆ. ಇದನ್ನು 'ಮುದಾಕರಾತ್ತ ಮೋದಕಂ ಸದಾ ವಿಮುಕ್ತಿಸಾಧಕಂ...' ಸ್ತೋತ್ರದಂತೆ ಹಾಡಿಕೊಳ್ಳಲಿಕ್ಕೂ ಆಗುತ್ತದೆ. 'ರಾವಣನಿಗೆ ತಲೆನೋವು' ಎಂದು ಶೀರ್ಷಿಕೆ. ಪದ್ಯ ಹೀಗಿದೆ: 'ತಮಾಷೆಯೊಂದ ಬೆಜ್ಜನೊಬ್ಬ ಪೇಳ್ದ ಗೊತ್ತೆ ತಮ್ಮನೇ। ಬೆಮರ್ದ ಮಂಡೆ ನೋಯಲೊಮ್ಮೆ ಲಂಕೆಯಾಳ್ವ ರಾವಣ। ಗಮಾರನೊಬ್ಬನಾಗವಂಗೆ ಹತ್ತು ಮಾತ್ರೆ ಕೊಟ್ಟನೈ। ಸುಮಾರಿಗಂದಿನಿಂದ ಬಂತು ಹತ್ತು ಮಾತ್ರೆ ಪೊಟ್ಟಣ॥'. ಇದರ ಪ್ರತಿಸಾಲಿನಲ್ಲೂ ಲಘು-ಗುರು-ಲಘು-ಗುರು... ಮಾತ್ರೆಗಳ ಆವರ್ತನ. ಬೆಜ್ಜ ಅಂದರೆ ವೈದ್ಯ, ಡಾಕ್ಟರ್.

ಕ್ರಿಯೇಟಿವಿಟಿ ಎಂದರೆ ಇದು! ನನಗಿಂಥವು ತುಂಬ ಇಷ್ಟ. 2016 ಜನವರಿ 17ರಂದು 'ತಿಳಿರುತೋರಣ' ಅಂಕಣದ ಮೊತ್ತಮೊದಲ ಕಂತಿನಲ್ಲಿ ಹೀಗೆ ಬರೆದಿದ್ದೆ: ''ನನ್ನದೊಂದು ಅಚಲ ವಿಶ್ವಾಸ ಏನೆಂದರೆ, ಈ ಪ್ರಪಂಚದಲ್ಲಿ ಪ್ರತಿಯೊಬ್ಬರಲ್ಲೂ ಏನೋ ಒಂದು ಪ್ರತಿಭೆ ಇರುತ್ತದೆ, ಯಾವುದೋ ವಿಷಯದ ತಿಳಿವಳಿಕೆ ಇರುತ್ತದೆ. ಏನನ್ನೋ ಸಾಧಿಸುವ ಪ್ರಚ್ಛನ್ನ ಶಕ್ತಿ ಇರುತ್ತದೆ. ಅದು ಪ್ರಕಟವಾಗಲಿಕ್ಕೆ ಅವಕಾಶ ಸಿಗಬೇಕು ಅಷ್ಟೇ. ಅಂತೆಯೇ, ನನ್ನ ಬರಹವನ್ನು ಓದುವವರಿಗೆ ನನಗಿಂತ ಹೆಚ್ಚು ಜ್ಞಾನಾನುಭವ ಇರುತ್ತದೆ. ನಾನು ಪ್ರಸ್ತಾವಿಸುವ ವಿಚಾರಗಳಿಗೆ ಸಂಬಂಧಿಸಿದಂತೆ ಪೂರಕ ಮಾಹಿತಿಯನ್ನು, ತಮ್ಮತಮ್ಮ ಅನುಭವದ ಬುತ್ತಿಯಿಂದ ರುಚಿವರ್ಧಕವನ್ನು ಒದಗಿಸುವ ಶಕ್ತಿ-ಆಸಕ್ತಿಗಳು ಇರುತ್ತವೆ. ಇದು ನನ್ನ ದೃಢವಾದ ನಂಬಿಕೆ. ಹಾಗಾಗಿ ಈ ಅಂಕಣವೂ ದ್ವಿಮುಖಸಂಚಾರದ ರಸ್ತೆಯಾದರೆ ನನಗೆ ತುಂಬ ಖುಷಿ. ನಿಮ್ಮ ಪ್ರತಿಕ್ರಿಯೆಗಳನ್ನು, ನೀವು ಒದಗಿಸುವ ಪೂರಕ ಅಂಶಗಳನ್ನು ನಾನು ತುಂಬುಹೃದಯದಿಂದ ಸ್ವಾಗತಿಸುತ್ತೇನೆ, ಅಳವಡಿಸಿಕೊಳ್ಳುತ್ತೇನೆ. ಒಂದೊಂದನ್ನೂ ಚಿಗುರೆಲೆ ಹಸುರೆಲೆ ಎಂದುಕೊಂಡು ತೋರಣ ಕಟ್ಟಲು ಬಳಸುತ್ತೇನೆ''. ಇಂದು 'ತಿಳಿರುತೋರಣ' ಅಂಕಣದ 450ನೆಯ ಕಂತಿನಲ್ಲಿ ಇದನ್ನು ಸೋದಾಹರಣವಾಗಿ ಶತಪ್ರತಿಶತ ಸಾಬೀತುಪಡಿಸಿರುವುದಕ್ಕೆ ಸಂತೋಷವಾಗುತ್ತಿದೆ. ನಿಮ್ಮೆಲ್ಲರ ಅಕ್ಷರಪ್ರೀತಿ, ಓದಿನ ಆಸಕ್ತಿ ಮತ್ತು ಪ್ರತಿಕ್ರಿಯೆ ಬರೆದುಕಳುಹಿಸುವ ಉತ್ಸಾಹಗಳು ಹೀಗೆಯೇ ಇರಲಿ.

ಮನೆಯ ಜಗಳವನ್ನು ಊರ ಬಾಗಿಲಿಗೆ ತರಕೂಡದು

ಭಾರತದೊಳಗಿನ ಹುಳುಕುಗಳ ಕುರಿತು ವಿದೇಶಗಳಲ್ಲಿ ಮಾತಾಡುವ ಚಾಳಿಯನ್ನು ರೂಢಿಸಿಕೊಂಡಿರುವವರು ರಾಹುಲ್ ಮಾತ್ರವೇ ಅಲ್ಲ; ಇಂಥ ಅತಿಬುದ್ಧಿವಂತರ ಪಡೆ ಭಾರತದಲ್ಲಿ ಹಿಂದೆಯೂ ಇತ್ತು, ಈಗಲೂ ಇದೆ. ಭಾರತದ ಬಡತನ, ಕೊಳೆಗೇರಿಗಳು, ಜಾತಿವ್ಯವಸ್ಥೆ ಕುರಿತು ತಪ್ಪಾಗಿ ಅರ್ಥೈಸುವುದು ಕೆಲವರಿಗೆ ಹವ್ಯಾಸವಾಗಿಬಿಟ್ಟಂತೆ ಕಾಣುತ್ತದೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ತುರ್ತು ಪರಿಸ್ಥಿತಿಯ ಹೇರಿಕೆಯ ನಂತರ ನಡೆದ ಚುನಾವಣೆಯಲ್ಲಿ ಮೊರಾರ್ಜಿ ದೇಸಾಯಿಯವರ ನೇತೃತ್ವದ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಇಂದಿರಾ ಗಾಂಧಿಯವರನ್ನು ಬಂಧಿಸಿ ಜೈಲಿಗೆ ಕಳಿಸಲಾಗಿತ್ತು. ಅವರು ಜೈಲಿನಿಂದ ಬಿಡುಗಡೆಯಾದ ನಂತರ ಬ್ರಿಟನ್ ಪ್ರವಾಸದಲ್ಲಿದ್ದಾಗ ಅಲ್ಲಿನ ಪತ್ರಕರ್ತರೊಬ್ಬರು, ''ಭಾರತದ ಜೈಲುಗಳ ಪರಿಸ್ಥಿತಿ ಹೇಗಿದೆ? ನಿಮ್ಮ ಜೈಲುವಾಸದ ಅನುಭವ ಹೇಗಿತ್ತು?'' ಎಂದು ಕೇಳಿದರು. ಆಗ ಇಂದಿರಾ, ''ನನ್ನ ದೇಶದ ಕುರಿತು ನನ್ನಿಂದ ಕೆಟ್ಟ ಅಭಿಪ್ರಾಯವನ್ನು ನಿರೀಕ್ಷಿಸಬೇಡಿ'' ಎಂದು ನೇರವಾಗಿ ಉತ್ತರಿಸಿ, ಭಾರತದ ಕುರಿತು ನಕಾರಾತ್ಮಕ ಪ್ರತಿಕ್ರಿಯೆಯನ್ನು ಬಯಸಿದ್ದ ಆ ಪತ್ರಕರ್ತರಿಗೆ ನಿರಾಶೆ ಉಂಟುಮಾಡಿದ್ದರು. ಕೆಲ ವರ್ಷದ ಹಿಂದಿನ ತಮ್ಮ ವಿದೇಶ ಪ್ರವಾಸವೊಂದರಲ್ಲಿ ಭಾರತದ ಬಗ್ಗೆ ಎಂದಿನಂತೆ ಕೆಟ್ಟದಾಗಿ ಮಾತನಾಡಿದ್ದ ರಾಹುಲ್ ಗಾಂಧಿಯವರಿಗೆ ಅಲ್ಲಿನ ಹಿರಿಯ ಪತ್ರಕರ್ತರೊಬ್ಬರು ಈ ವಿಷಯವನ್ನು ತಿಳಿಸುತ್ತಾ, ''ನೀವು ನಿಮ್ಮ ಅಜ್ಜಿಯ ಆದರ್ಶದಿಂದಲಾದರೂ ಪಾಠ ಕಲಿಯುತ್ತೀರಿ ಎಂದು ಭಾವಿಸುತ್ತೇನೆ'' ಎಂದು ನಯವಾಗಿ ತಿಳಿಸಿ, ರಾಹುಲ್ ಕಕ್ಕಾಬಿಕ್ಕಿಯಾಗುವಂತೆ ಮಾಡಿದ್ದರು. ರಾಹುಲರ ಇತ್ತೀಚಿನ ಅಮೆರಿಕ ಭೇಟಿಯವರೆಗಿನ ಬಹುತೇಕ ವಿದೇಶ ಪ್ರವಾಸಗಳಲ್ಲಿ ಅವರಾಡಿದ ಭಾರತ-ವಿರೋಧಿ ಮಾತುಗಳನ್ನು ಕೇಳಿದಾಗ, ಅವರು ಪಾಠ ಕಲಿತಂತೇನೂ ಕಾಣುತ್ತಿಲ್ಲ ಬಿಡಿ!

ಹೀಗೆ, ಭಾರತದೊಳಗಿನ ಹುಳುಕುಗಳ ಕುರಿತು ವಿದೇಶಗಳಲ್ಲಿ ಮಾತಾಡುವ ಚಾಳಿಯನ್ನು ರೂಢಿಸಿಕೊಂಡಿರುವವರು ರಾಹುಲ್ ಮಾತ್ರವೇ ಅಲ್ಲ; ದೇಶದ ಕುರಿತು ಅವಹೇಳನಕಾರಿಯಾಗಿ ವಕ್ತವ್ಯ ನೀಡುವ ಅತಿಬುದ್ಧಿವಂತರ ಪಡೆ ಭಾರತದಲ್ಲಿ ಹಿಂದೆಯೂ ಇತ್ತು, ಈಗಲೂ ಇದೆ. ಭಾರತದ ಬಡತನ, ಕೊಳೆಗೇರಿಗಳು, ಜಾತಿವ್ಯವಸ್ಥೆ, ಧರ್ಮ ಅಸಹಿಷ್ಣುತೆ, ಕೋಮುವಾದ ಮತ್ತು ಇಲ್ಲಿನ ಪ್ರಾಚೀನ ನಂಬಿಕೆಗಳ ಕುರಿತು ತಪ್ಪಾಗಿ ಅರ್ಥೈಸಿ, ಸಿನಿಮಾಗಳನ್ನು ಮಾಡಿ ಪ್ರಶಸ್ತಿ ಗಳಿಸಿಕೊಳ್ಳುವುದು ಅಥವಾ ಅಲ್ಲಿನ ಮಾಧ್ಯಮ ಸಂವಾದಗಳಲ್ಲಿ ಕುಳಿತು ಕಥೆ ಹೇಳುವುದು ಕೆಲವರಿಗೆ ಹವ್ಯಾಸವಾಗಿಬಿಟ್ಟಂತೆ ಕಾಣುತ್ತದೆ. ಇದು ಇಂಥವರ ಮನಸ್ಥಿತಿಯ ಮತ್ತು ಸಂಸ್ಕಾರದ ಸಮಸ್ಯೆಯೇ ಹೊರತು ಮತ್ತೇನಲ್ಲ. ಭಾರತ ಅಂತಲ್ಲ, ಎಲ್ಲ ದೇಶಗಳಲ್ಲೂ ಹುಳುಕು-ಕೊಳಕು ಇದ್ದೇ ಇರುತ್ತವೆ; ಆದರೆ ಅವನ್ನು ಎಲ್ಲಿ ಹೇಳಬೇಕೆನ್ನುವುದು ಪ್ರಶ್ನೆ. ಇಂಥ ನ್ಯೂನತೆಗಳ ಕುರಿತು ಅವರವರ ದೇಶದಲ್ಲಿ ಪ್ರಚುರಪಡಿಸಿ, ಜನಾಭಿಪ್ರಾಯ ಮೂಡಿಸಿ ಆಳುಗರ ಗಮನ ಸೆಳೆದು ಸರಿಪಡಿಸಿಕೊಳ್ಳಬೇಕಿರುವುದು ಸರಿಯಾದ ಮಾರ್ಗ. ಅದನ್ನು ಬಿಟ್ಟು, ಭಾರತದ ಜನನಾಯಕನೊಬ್ಬ ಅಮೆರಿಕದ ನೆಲದಲ್ಲಿ ನಿಂತು, ''ಭಾರತದ ಆದಿವಾಸಿಗಳು ಮುಖ್ಯವಾಹಿನಿಯಲ್ಲಿ ಇನ್ನೂ ಸ್ಥಾನ ಪಡೆದಿಲ್ಲ; 'ಮಿಸ್ ಇಂಡಿಯಾ' ಪಟ್ಟಿಯಲ್ಲಿ ಹಿಂದುಳಿದ ವರ್ಗದವರು ಕಾಣಸಿಗುವುದಿಲ್ಲ'' ಎಂದರೆ, ಪಾಪ! ಅಮೆರಿಕದವರು ಅಥವಾ ಅಮೆರಿಕದಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯರು ಏನು ಮಾಡಲಾದೀತು ಹೇಳಿ? ನಮ್ಮ ಮನೆಯ ಜಗಳವನ್ನು ಪಕ್ಕದ ಮನೆಯವರ ಮುಂದೆ ಹೇಳಿಕೊಂಡು ಅತ್ತರೆ, ನಮ್ಮ ಮನೆಯ ಮರ್ಯಾದೆ ಬೀದಿಪಾಲಾಗುವುದಲ್ಲದೆ, ಪಕ್ಕದ ಮನೆಯವರು ಅದನ್ನು ದುರುಪಯೋಗಪಡಿಸಿಕೊಳ್ಳುವ ಸಂಭವವಿರುತ್ತದೆ ಎಂಬ ಕನಿಷ್ಠ ಜ್ಞಾನವಾದರೂ ಇಂಥವರಿಗೆ ಇರಬೇಕಲ್ಲವೇ? ದೇಶದ ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ವಲಯಗಳಲ್ಲಿ ನೂರಾರು ಕೊರತೆಗಳಿದ್ದರೂ, ಹೇಳುವ ಮನಸ್ಸಿದ್ದರೆ ಒಳ್ಳೆಯ ಸಾವಿರಾರು ವಿಷಯಗಳೂ ಇರುತ್ತವೆ. ವಿದೇಶಗಳಲ್ಲಿ ನಾವು ಹೇಳಬೇಕಾದ್ದು ನಮ್ಮ ಸಾಹಸ-ಸಾಧನೆಗಳ ಕಥೆಯನ್ನು ಮಾತ್ರ; ಅದರಿಂದ ಹೇಳುವವನಿಗೂ, ಅವನ ದೇಶಕ್ಕೂ ಗೌರವ.

ಹಾಗೆ, ಆಧುನಿಕ ಭಾರತದ ಸಾಧನೆಗಳ ಕುರಿತು ಅಂಕಿ-ಅಂಶಗಳೊಂದಿಗೆ, ಅಭಿಮಾನ-ಹೆಮ್ಮೆಗಳಿಂದ ವಿದೇಶಿ ವೇದಿಕೆಗಳಲ್ಲಿ ನಿರರ್ಗಳವಾಗಿ ಹೇಳುವ ಪಾಲ್ಕಿ ಶರ್ಮಾ ಉಪಾಧ್ಯಾಯರಂಥವರೂ ದೇಶದಲ್ಲಿರುವುದು ಸಮಾಧಾನದ ಸಂಗತಿ. ದೇಶದ ವಸ್ತುನಿಷ್ಠ ಪತ್ರಕರ್ತರಲ್ಲೊಬ್ಬರಾದ ಈಕೆ ಪ್ರತಿಷ್ಠಿತ 'ಆಕ್ಸ್‌ಫರ್ಡ್ ಯೂನಿಯನ್' ಚರ್ಚೆಯೊಂದರಲ್ಲಿ ಪಾಲ್ಗೊಂಡು, ಬದಲಾಗುತ್ತಿರುವ ಭಾರತದ ವರ್ತಮಾನ ಮತ್ತು ಭವಿಷ್ಯದ ದಿಕ್ಕನ್ನು ಬದಲಾಯಿಸುವ ನಿರ್ಧಾರಗಳ ಕುರಿತು ತಮ್ಮ ಭಾಷಣದಲ್ಲಿ ಪ್ರಖರವಾಗಿ ಪ್ರಸ್ತಾಪಿಸಿರುವುದು ಪ್ರಧಾನಿ ಮೋದಿಯವರೂ ಸೇರಿದಂತೆ ಅನೇಕ ದೇಶಪ್ರೇಮಿಗಳ ಪ್ರಶಂಸೆಗೆ ಪಾತ್ರವಾಗಿದೆ.

ಹಣಕಾಸು ವಲಯದ ಬೆಳವಣಿಗೆ, ಡಿಜಿಟಲ್ ಕ್ರಾಂತಿ, ಜಾಗತಿಕ ರಾಜತಾಂತ್ರಿಕತೆಯ ಗಮನಾರ್ಹ ಪ್ರಗತಿ ಮುಂತಾದ ಸಕಾರಾತ್ಮಕ ವಿಷಯಗಳನ್ನು ಶರ್ಮಾ ಅವರು ಅಲ್ಲಿ ಅಭಿಮಾನದಿಂದ ಚರ್ಚಿಸುತ್ತಾರೆ, ವಿಶ್ವವೇದಿಕೆಯಲ್ಲಿ ಹೆಚ್ಚಿದ ಭಾರತದ ವಿಶ್ವಾಸಾರ್ಹತೆಯನ್ನು ಎತ್ತಿ ತೋರಿಸುತ್ತಾರೆ, ದೇಶದ ಮುಂದಿರುವ ಸವಾಲುಗಳು ಮತ್ತು ಅವಕಾಶಗಳನ್ನೂ ಸಮರ್ಥವಾಗಿ ವ್ಯಾಖ್ಯಾನಿಸುತ್ತಾರೆ. 2014ರಿಂದೀಚೆಗೆ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಭಾರತವು 'ವಿಶ್ವಗುರು' ಪಟ್ಟಕ್ಕೇರುತ್ತಿದೆ ಮತ್ತು ತನ್ನ ಉತ್ಕರ್ಷವನ್ನು ಬಯಸುತ್ತಿದೆ ಎನ್ನುತ್ತಾರೆ, ಭಾರತದ ಪ್ರಗತಿಯ ಸ್ಪಷ್ಟ ಚಿತ್ರಣವನ್ನು ಚಿತ್ರಿಸುತ್ತಾರೆ. ರಸ್ತೆಬದಿಯ ವ್ಯಾಪಾರಿಗಳು ಡಿಜಿಟಲ್ ಪಾವತಿಗಳಿಗಾಗಿ 'ಕ್ಯೂಆರ್ ಕೋಡ್'ಗಳನ್ನು ಬಳಸುವುದರಿಂದ ಮೊದಲ್ಗೊಂಡು ಇತರ ಅಭಿವೃದ್ಧಿ ಸಾಧನೆಗಳನ್ನು ಆಳವಾಗಿ ಅವಲೋಕಿಸುತ್ತಾ, ಭಾರತದ ಬೆಳವಣಿಗೆಯ ನಿರ್ಣಾಯಕ ಅಂಶಗಳನ್ನು ಎತ್ತಿ ತೋರಿಸುತ್ತಾರೆ. ''ಡಿಜಿಟಲ್ ಪಾವತಿಗಳ ವ್ಯಾಪಕ ಅಳವಡಿಕೆಯು ಆರ್ಥಿಕ ಸೇರ್ಪಡೆಯಲ್ಲಿ ಭಾರತ ಸಾಧಿಸಿದ ಗಮನಾರ್ಹ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ; ಮೊಬೈಲ್ ಬ್ಯಾಂಕಿಂಗ್ ಲಕ್ಷಾಂತರ ಜನರಿಗೆ ಲಭ್ಯವಾಗುವುದರೊಂದಿಗೆ, ಬೀದಿಬದಿಯ ವ್ಯಾಪಾರಿಗಳೂ ಈಗ ಔಪಚಾರಿಕ ಆರ್ಥಿಕತೆಯ ಭಾಗವಾಗಿದ್ದಾರೆ. ದೇಶದಲ್ಲಿನ ಇಂಟರ್‌ನೆಟ್ ಕ್ರಾಂತಿಯು ಬಳಕೆದಾರರ ಸಂಖ್ಯೆಯನ್ನು ಕೇವಲ 10 ವರ್ಷಗಳಲ್ಲಿ ಶೇ.15ರಿಂದ 48ಕ್ಕೆ ಏರಿಸಿದ್ದು, ಇದು ನಾಗರಿಕ ಮಾಹಿತಿ ಮತ್ತು ಸೇವೆಗಳನ್ನು ಅಭೂತಪೂರ್ವವಾಗಿ ಸಶಕ್ತಗೊಳಿಸುತ್ತದೆ'' ಎಂದು ಶರ್ಮಾ ಹೇಳುತ್ತಾರೆ. ಮಾತ್ರವಲ್ಲದೆ, ವಿಮಾನ ನಿಲ್ದಾಣ, ಸಂಚಾರ ಮತ್ತು ಮೂಲಸೌಕರ್ಯಗಳಲ್ಲಿನ ಅಭಿವೃದ್ಧಿಯ ಹೆಚ್ಚಳವು, ಬೆಳೆಯುತ್ತಿರುವ ಭಾರತದ ಸಂಪರ್ಕ ಮತ್ತು ನಗರ-ಗ್ರಾಮೀಣ ಪ್ರದೇಶಗಳ ಅಂತರವನ್ನು ತಗ್ಗಿಸುವುದರ ದ್ಯೋತಕವಾಗಿದೆ ಎನ್ನುತ್ತಾರೆ. ಈ ಪ್ರಗತಿಗಳು ಜಾಗತಿಕವಾಗಿ ಭಾರತದ ಗುರುತನ್ನು ಹೇಗೆ ಮರುರೂಪಿಸುತ್ತಿವೆ, ಜಾಗತಿಕ ನಾಯಕತ್ವಕ್ಕೆ ಸಿದ್ಧವಾಗಿರುವ ಆತ್ಮವಿಶ್ವಾಸ ಮತ್ತು ಸ್ಥಿತಿಸ್ಥಾಪಕ ರಾಷ್ಟ್ರವಾಗಿ ಭಾರತ ಹೇಗೆ ರೂಪಾಂತರಗೊಳ್ಳುತ್ತಿದೆ ಎಂದು ಬಿಡಿಸಿ ಬಿಡಿಸಿ ಹೇಳುತ್ತಾರೆ. ಪಾಲ್ಕಿ ಶರ್ಮಾರ ಈ ಭಾಷಣವು ಭಾರತದ ಗಡಿಗಳನ್ನು ಮೀರಿ ದೇಶವು ಪ್ರತಿನಿಧಿಸುವ ಹಲವು ಪ್ರಮುಖ ವಿಷಯಗಳನ್ನು ಎತ್ತಿ ತೋರಿಸಿದೆ. ಅವರು, ''ಭಾರತದ ಬೆಳವಣಿಗೆಯ ವಿಧಾನವು ಆರ್ಥಿಕ ಸೂಚಕಗಳಿಗಷ್ಟೇ ಸೀಮಿತವಾಗಿಲ್ಲ, ಅದು ಪ್ರತಿ ವ್ಯಕ್ತಿ ಮತ್ತು ಸಮುದಾಯಗಳನ್ನು ಸಬಲೀಕರಿಸುವ ಬಗ್ಗೆ ಗುರಿಯಿಟ್ಟಿದೆ. ಹಣಕಾಸು ಸೇವೆಗಳು ಮತ್ತು ಡಿಜಿಟಲ್ ಸಾಧನಗಳಿಗೆ ಸರ್ವರಿಗೂ ಅವಕಾಶ ನೀಡುವ ಮೂಲಕ ಭಾರತವು ತನ್ನ ನಾಗರಿಕರಿಗೆ ರಾಷ್ಟ್ರದ ಪ್ರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುವುಮಾಡಿಕೊಡುತ್ತಿದೆ'' ಎನ್ನುತ್ತಾರೆ. ಸಂಪ್ರದಾಯ ಮತ್ತು ಆಧುನಿಕತೆಯನ್ನು ಸಮೀಕರಿಸಿ, ಭಾರತದ ಅಭಿವೃದ್ಧಿಯ ಪಯಣದಲ್ಲಿ ಸಂಪ್ರದಾಯವನ್ನು ಆಧುನಿಕತೆಯೊಂದಿಗೆ ಸಮತೋಲನಗೊಳಿಸುವುದಕ್ಕಿರುವ ಮಹತ್ವವನ್ನು ಒತ್ತಿಹೇಳುತ್ತಾರೆ. ತಾಂತ್ರಿಕ ಪ್ರಗತಿಯನ್ನು ಅಪ್ಪುವಾಗ ದೇಶವು ತನ್ನ ಸಾಂಸ್ಕೃತಿಕ ಪರಂಪರೆಯನ್ನು ಮರೆಯಬಾರದು ಮತ್ತು ವೈವಿಧ್ಯವನ್ನು ಹೇಗೆ ಒಂದು ಶಕ್ತಿಯಾಗಿ ಬಳಸಿಕೊಳ್ಳುತ್ತಿದ್ದೇವೆ ಎಂಬುದನ್ನು ಸುಂದರವಾಗಿ ವಿವರಿಸುತ್ತಾರೆ. ಭಾರತದ ರಾಜತಾಂತ್ರಿಕ ಪ್ರಯತ್ನಗಳನ್ನು ಶ್ಲಾಘಿಸುತ್ತಾ, ''ಜಗತ್ತಿನ ಪಾಶ್ಚಿಮಾತ್ಯ ಮತ್ತು ದಕ್ಷಿಣ ಭಾಗದ ಎರಡೂ ದೇಶಗಳೊಂದಿಗೆ ಬಲವಾದ ಸಂಬಂಧವನ್ನು ಕಾಪಾಡಿಕೊಳ್ಳುವ ಭಾರತದ ಸಾಮರ್ಥ್ಯವು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿನ ವಿಚಕ್ಷಣತೆಗೆ ಮತ್ತು ಅದರ ಸೂಕ್ಷ್ಮ ಕಾರ್ಯವಿಧಾನಕ್ಕೆ ಉದಾಹರಣೆಯಾಗಿದೆ'' ಎನ್ನುತ್ತಾರೆ. ಬದ್ಧವೈರಿಗಳಾದ ಅಮೆರಿಕ ಮತ್ತು ರಷ್ಯಾ ಎರಡೂ ದೇಶಗಳೊಂದಿಗೆ ಸೌಹಾರ್ದ ಸಂಬಂಧವನ್ನು ಸಾಧಿಸಿರುವುದು ಸಣ್ಣ ವಿಷಯವಲ್ಲ. ಇತ್ತೀಚಿನ ರಷ್ಯಾ-ಉಕ್ರೇನ್ ಯುದ್ಧದ ಸಂದರ್ಭದಲ್ಲಿ ತಟಸ್ಥ ನಿಲುವನ್ನು ತಳೆದಿದ್ದ ಭಾರತವನ್ನು ಈಗ ಎರಡೂ ದೇಶಗಳು ಸಂಧಾನಕ್ಕಾಗಿ ಪ್ರಾರ್ಥಿಸುತ್ತಿರುವುದು, ನಮ್ಮ ದೇಶದ ನಾಯಕತ್ವದ ಮೇಲೆ ಅವು ಇಟ್ಟಿರುವ ವಿಶ್ವಾಸವನ್ನು ತೋರಿಸುತ್ತವೆ ಎಂದು ಅಭಿಪ್ರಾಯಪಡುತ್ತಾರೆ.

ಆಧುನಿಕ ಭಾರತದ ಸಾಧನೆಗಳನ್ನು ಹೊಗಳುವುದರ ಜತೆಜತೆಗೆ, ಮೋದಿ ನೇತೃತ್ವದ ಆಡಳಿತವು ಎದುರಿಸುತ್ತಿರುವ ಟೀಕೆಗಳನ್ನು, ವಿಶೇಷವಾಗಿ ಕೃಷಿ ಕ್ಷೇತ್ರ, ಧಾರ್ಮಿಕ ಉದ್ವಿಗ್ನತೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿನ ಸವಾಲುಗಳನ್ನು ಶರ್ಮಾ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾರೆ. ''ಭಾರತೀಯರು ಡಿಜಿಟಲ್ ಸಾಧನಗಳನ್ನು ಅಳವಡಿಸಿಕೊಳ್ಳುವ, ಸವಾಲುಗಳನ್ನು ಜಯಿಸುವ ಮತ್ತು ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುವ ಕಥೆಗಳು, ರಾಷ್ಟ್ರದ ಶಾಶ್ವತ ಶಕ್ತಿ ಮತ್ತು ಸ್ಫೂರ್ತಿಗೆ ಉದಾಹರಣೆಯಾಗಿವೆ; ಭಾರತವು ಸತತವಾಗಿ ವಿಕಸನಗೊಳ್ಳುತ್ತಲೇ ಇರುವಾಗ, ಭರವಸೆ ಮತ್ತು ಪ್ರಗತಿಯನ್ನು ಪ್ರೇರೇಪಿಸುವ ಸಾಧನೆಗಳನ್ನು ಸಂಭ್ರಮಿಸುತ್ತಿರುವ ಈ ಹೊತ್ತಿನಲ್ಲಿ ಅದು ತನ್ನ ನ್ಯೂನತೆಗಳನ್ನೂ ಪರಿಹರಿಸಿಕೊಳ್ಳಬೇಕಿದೆ'' ಎನ್ನುತ್ತಾ ತಮ್ಮ ಭಾಷಣವನ್ನು ಮುಗಿಸುತ್ತಾರೆ. ಅಂತೂ, ವಿದೇಶಿ ನೆಲದಲ್ಲಿ ನಿಂತು ಭಾರತದ ಬಗ್ಗೆ ಮಾತನಾಡುವಾಗ, ರಾಜಕೀಯ ಸಿದ್ಧಾಂತ, ಭಾಷೆ, ಜಾತಿ, ಧರ್ಮಗಳ ನೆಲೆಗಟ್ಟನ್ನು ಮೀರಿ, ದೇಶದ ಕುರಿತು ಹೆಮ್ಮೆಯಿಂದ ಹೇಳಲಿಕ್ಕಿರುವುದನ್ನು ಮತ್ತು ಹೇಳಲೇಬೇಕಾಗಿರುವುದನ್ನು ಹೇಗೆ ಪ್ರಸ್ತುತಪಡಿಸಬೇಕು ಎಂಬುದಕ್ಕೆ ಪಾಲ್ಕಿ ಶರ್ಮಾರ ಭಾಷಣ ದೇಶದೊಳಗಣ ಕುಹಕಿಗಳಿಗೆ ಮಾದರಿಯಾಗಬೇಕಿದೆ.

130 ವರ್ಷಗಳ ಹಿಂದೆ ಶಿಕಾಗೋದಲ್ಲಿ ನಡೆದ ವಿಶ್ವದ ಸರ್ವಧರ್ಮಗಳ ಸಂಸತ್ತಿನಲ್ಲಿ ಮಾಡಿದ ಅದ್ಭುತ ಭಾಷಣದಿಂದಾಗಿ ಸ್ವಾಮಿ ವಿವೇಕಾನಂದರು ಇಂದು ವಿಶ್ವಖ್ಯಾತರಾಗಿದ್ದಾರೆ ಎಂಬುದು ತಿಳಿದ ವಿಷಯವೇ. ತಮ್ಮ ಆ ಸಣ್ಣ ಭಾಷಣದಲ್ಲಿ ಅವರು ನಿಜವಾದ ಭಾರತೀಯ ಸಂಸ್ಕೃತಿಯನ್ನೂ, ಸನಾತನ ಹಿಂದೂಧರ್ಮವನ್ನೂ ಅಮೆರಿಕಕ್ಕೆ ಹೆಮ್ಮೆಯಿಂದ ಪರಿಚಯಿಸಿದ್ದರು. ಹಾಗಾಗಿ ವಿವೇಕಾನಂದರನ್ನು, ಭಾರತದ ಪ್ರಾಚೀನ ವೇದಾಂತ ಮತ್ತು ಯೋಗವನ್ನು ಪಾಶ್ಚಾತ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ಪರಿಚಯಿಸಿದವರಲ್ಲಿ ಪ್ರಮುಖರು ಎಂದು ಇಂದಿಗೂ ಪರಿಗಣಿಸಲಾಗುತ್ತದೆ ಮತ್ತು ಹಿಂದೂಧರ್ಮದ 'ಪ್ರೊಫೈಲ್' ಅನ್ನು ವಿಶ್ವಮಟ್ಟಕ್ಕೆ ಏರಿಸಿದ ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ವಿವೇಕಾನಂದರು ಆ ಸಮ್ಮೇಳನದಲ್ಲಿ, ''ದೂರದ ದೇಶಗಳಿಂದ ಈ ಸಮ್ಮೇಳನಕ್ಕೆ ಬಂದಿರುವ ಅನೇಕ ಪ್ರತಿನಿಧಿಗಳು, ತಮ್ಮ ದೇಶದ ಸಹಿಷ್ಣುತೆಯ ಕಲ್ಪನೆಯನ್ನು ಬೇರೆ ಬೇರೆ ದೇಶಗಳಿಗೆ ಕೊಂಡೊಯ್ಯುವ ಗೌರವವನ್ನು ಪಡೆದಿರಬಹುದು; ಆದರೆ, ಜಗತ್ತಿಗೆ ಸಹಿಷ್ಣುತೆ ಮತ್ತು ಸಾರ್ವತ್ರಿಕ ಸ್ವೀಕಾರದ ಮನೋಭಾವ ಎರಡನ್ನೂ ಕಲಿಸಿದ ದೇಶಕ್ಕೆ ಮತ್ತು ಧರ್ಮಕ್ಕೆ ಸೇರಿದವನು ನಾನು ಎಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇನೆ'' ಎನ್ನುತ್ತಾ, ''ನಾವು ಸಾರ್ವತ್ರಿಕ ಸಹಿಷ್ಣುತೆಯನ್ನಷ್ಟೇ ಪಾಲಿಸದೇ, ಎಲ್ಲಾ ಧರ್ಮಗಳನ್ನೂ ಸತ್ಯವೆಂದು ಒಪ್ಪಿಕೊಳ್ಳುವ ಜನಾಂಗಕ್ಕೆ ಸೇರಿದವರಾಗಿದ್ದೇವೆ'' ಎಂದು ಎದೆಯುಬ್ಬಿಸಿ ಹೇಳುತ್ತಾರೆ. ''ಎಲ್ಲಾ ಧರ್ಮಗಳ ಮತ್ತು ಭೂಮಿಯ ಮೇಲಿನ ಎಲ್ಲಾ ರಾಷ್ಟ್ರಗಳ ನಿರಾಶ್ರಿತರಿಗೆ ಅತ್ಯಂತ ಪ್ರಾಂಜಲ ಮನಸ್ಸಿನಿಂದ ಆಶ್ರಯ ನೀಡಿದ ರಾಷ್ಟ್ರಕ್ಕೆ ಸೇರಿದವನು ನಾನು ಎಂದು ಹೆಮ್ಮೆಪಡುತ್ತೇನೆ. ರೋಮನ್ ದಬ್ಬಾಳಿಕೆಯಿಂದ ನಮ್ಮ ಪವಿತ್ರ ದೇವಾಲಯವು ಛಿದ್ರಗೊಂಡ ವರ್ಷವೇ ದಕ್ಷಿಣ ಭಾರತಕ್ಕೆ ಬಂದು ನಮ್ಮೊಂದಿಗೆ ಆಶ್ರಯ ಪಡೆದ ಇಸ್ರೇಲಿಗರ ಅತ್ಯಂತ ಪವಿತ್ರ ಅವಶೇಷಗಳನ್ನು ನಮ್ಮ ಮಡಿಲಲ್ಲಿ ಇಂದಿಗೂ ಒಟ್ಟುಗೂಡಿಸಿಕೊಂಡಿದ್ದೇವೆ; ಭವ್ಯವಾದ ಜೊರಾಸ್ಟ್ರಿಯನ್ ಅವಶೇಷಗಳಿಗೆ ಆಶ್ರಯ ನೀಡಿ ಪೋಷಿಸುತ್ತಿರುವ ಧರ್ಮಕ್ಕೆ ಸೇರಿದವನು ನಾನು ಎನ್ನಲು ಹೆಮ್ಮೆಪಡುತ್ತೇನೆ'' ಎನ್ನುತ್ತಾರೆ. ವಿದೇಶದಲ್ಲಿ ನಿಂತು ದೇಶದ ಕೀರ್ತಿಪತಾಕೆ ಹಾರಿಸಿ, ಭಾರತದ ಕಡೆಗೆ ಜಗತ್ತಿನ ಗಮನ ತಿರುಗುವಂತೆ ಮಾಡಿದ ಅವರ ಭಾಷಣವು ಇಂದಿನ ಛಿದ್ರಾಕಾಂಕ್ಷಿಗಳಿಗೆ ಒಂದು ಪಾಠವಾಗಬೇಕಿದೆ. ಸ್ವಾಮಿ ವಿವೇಕಾನಂದರ ಕಾಲದಲ್ಲಿನ ಭಾರತವು ಬ್ರಿಟಿಷರ ಆಳ್ವಿಕೆಯಲ್ಲಿ ದಾಸ್ಯದಲ್ಲಿ ದಿನದೂಡುತ್ತಿತ್ತು, ಆಗ ಎಲ್ಲವೂ ಸರಿಯಿರಲಿಲ್ಲ. ಹಾಗೆ ನೋಡಿದರೆ, ಭಾರತವು ಒಂದು ಏಕೀಕೃತ ದೇಶವಾಗಿ ಜಗತ್ತಿಗೆ ಕಾಣಿಸುತ್ತಿರಲಿಲ್ಲ. ಆದಾಗ್ಯೂ ವಿವೇಕಾನಂದರು, ತಮ್ಮ ಮಾತೃಭೂಮಿಯ ಇತಿಹಾಸ, ಸಂಸ್ಕೃತಿಯ ಕುರಿತು ಹೆಮ್ಮೆಯಿಂದ ಹೇಳಲೇಬೇಕಾದ ಸತ್ಯಗಳನ್ನಷ್ಟೇ ಹೇಳಿ ತಮ್ಮ ಗೌರವವನ್ನು ಹೆಚ್ಚಿಸಿಕೊಂಡಿದ್ದರ ಜತೆಗೆ ಜಗತ್ತಿನ ಸಮ್ಮುಖದಲ್ಲಿ ದೇಶದ ಘನತೆಯನ್ನೂ ನೂರ್ಮಡಿಗೊಳಿಸಿದ್ದರು. ಇಂದು, ಸ್ವತಂತ್ರ ಭಾರತದ ಸವಲತ್ತುಗಳನ್ನು ಅನುಭವಿಸುತ್ತಿರುವ ನಾವು, ಅನ್ಯದೇಶದ ನೆಲದಲ್ಲಿ ನಿಂತು ಅಪಪ್ರಚಾರಕ್ಕೆ ತೊಡಗಿದರೆ, ಉಂಡಮನೆಯ ಗಳುವನ್ನು ಎಣಿಸಿದಂತಾಗುವುದಿಲ್ಲವೇ?

ಎಲ್ಲಕ್ಕೂ ಮಿಗಿಲಾಗಿ, ಕಾರಣಾಂತರದಿಂದ ವಿದೇಶದಲ್ಲಿ ನೆಲೆಸಿದ್ದರೂ ಮಾತೃಭೂಮಿಯ ಜತೆಗೆ ಕರುಳುಬಳ್ಳಿಯ ಬಾಂಧವ್ಯ ಹೊಂದಿರುವ ಅಲ್ಲಿನ ಭಾರತೀಯ ಮೂಲದ ಜನರು, ಭಾರತದಿಂದ ಬರುವ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಧುರೀಣರುಗಳಿಂದ ದೇಶದ ಕುರಿತು ಒಳ್ಳೆಯ ಮಾತನ್ನು ಕೇಳಲು ಇಚ್ಛಿಸುತ್ತಾರೆ. ಅಮೆರಿಕ ಮುಂತಾದ ದೇಶಗಳಲ್ಲಿ, ಭಾರತದ ಯಶೋಗಾಥೆಗಳನ್ನು ಸಾರುವ ಪ್ರಧಾನಿ ಮೋದಿಯವರ ಭಾಷಣಗಳನ್ನು ಕೇಳಲು ಸಾವಿರಾರು ಸಂಖ್ಯೆಯಲ್ಲಿ ಜನ ಸೇರುವುದು ಇದಕ್ಕೆ ಪ್ರತ್ಯಕ್ಷ ಸಾಕ್ಷಿ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬೆಟ್ಟಗಳೇ ಬಡಿದಾಡಿಕೊಳ್ಳುವುದಿಲ್ಲ, ಹೀಗಿರುವಾಗ...!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಹಬ್ಬದ ನಿಮಿತ್ತ ಹುಟ್ಟೂರು ಯಗಟಿಗೆ ರೈಲಿನಲ್ಲಿ ಹೊರಟಿದ್ದೆ. ಎಲ್ಲ ಬೋಗಿಗಳೂ ತುಂಬಿ ತುಳುಕುತ್ತಿದ್ದವು, ಹೀಗಾಗಿ ಯಾವುದೋ ಬೋಗಿಯೊಳಗೆ ತೂರಿಕೊಂಡು ಸಿಕ್ಕ ಕಂಪಾರ್ಟ್‌ಮೆಂಟಿನಲ್ಲಿ ಸೀಟು ಹಿಡಿಯಬೇಕಾಗಿ ಬಂತು. ಅದರಲ್ಲಿದ್ದವರೆಲ್ಲಾ ಪರಸ್ಪರ ಪರಿಚಯಸ್ಥರೇ ಅನಿಸುತ್ತೆ, ಹೀಗಾಗಿ ಹಾಡು-ಹರಟೆ-ತಮಾಷೆ ಸಾಗಿದ್ದವು. ಈ ಮಧ್ಯೆ ಯಾರೋ ರೇಡಿಯೋದ ಕಿವಿ ಹಿಂಡುತ್ತಿದ್ದಂತೆ, ''ಬರೆದೆ ನೀನು ನಿನ್ನ ಹೆಸರ ನನ್ನ ಬಾಳ ಪುಟದಲಿ, ಬಂದು ನಿಂತೆ ಹೇಗೋ ಏನೋ ನನ್ನ ಮನದ ಗುಡಿಯಲಿ'' ಎಂಬ ಗೀತೆ ಹೊಮ್ಮತೊಡಗಿತು. ಅದು ಕಲ್ಪನಾ-ಗಂಗಾಧರ್ ಅಭಿನಯದ 'ಸೀತಾ' ಎಂಬ ಚಲನಚಿತ್ರದ ಹಾಡು. ಆರ್.ಎನ್.ಜಯಗೋಪಾಲ್ ಸಾಹಿತ್ಯ, ಜಾನಕಿಯಮ್ಮನ ಕಂಠ, ಕೇಳಬೇಕೇ? ಮಧ್ಯವಯಸ್ಕರೊಬ್ಬರು ಅದಕ್ಕೆ ತಲೆದೂಗುತ್ತಾ, ''ನೀವೇನೇ ಹೇಳಿ, ನಮ್ ಆರ್.ಎನ್.ಜಯಗೋಪಾಲ್ ಹಾಡಂದ್ರೆ, ಹಾಡು, ಅದು ಯಾವುದೇ ಕವಿತೆಗಿಂತ ಕಮ್ಮಿ ಇರೋಲ್ಲ..'' ಎಂದು ಷರಾ ಬರೆದರು. ಅವರ ಮಾತಿನ್ನೂ ಮುಗಿದಿರಲಿಲ್ಲ, ಎದುರಿಗಿದ್ದ ಮತ್ತೊಬ್ಬರು, ''ಯೇ, ಸುಮ್ನಿರ್ರಿ ರೀ... ಅದರ ಸಾಹಿತ್ಯ ಹಿಂದಿ ಹಾಡಿನ ನಕಲು. ರಾಜೇಶ್ ಖನ್ನಾ-ಶರ್ಮಿಳಾ ಟ್ಯಾಗೋರ್ ಅಭಿನಯದ 'ಆರಾಧನಾ' ಚಿತ್ರದ 'ಕೋರಾ ಕಾಗಜ್ ಥಾ ಯೇ ಮನ್ ಮೇರಾ, ಲಿಖ್ ದಿಯಾ ನಾಮ್ ಉಸ್ ಪೇ ತೇರಾ' ಅನ್ನೋ ಹಾಡನ್ನೇ ನಿಮ್ ಜಯಗೋಪಾಲ್ ಸಾಹೇಬ್ರು, ಪದಗಳನ್ನು ಒಂದಿಷ್ಟು ಆಚೀಚೆ ಮಾಡಿ 'ಬರೆದೆ ನೀನು ನಿನ್ನ ಹೆಸರ ನನ್ನ ಬಾಳ ಪುಟದಲಿ' ಅಂತ ಬರೆದಿದ್ದಾರೆ'' ಎಂದು ಕಿಚಾಯಿಸಿದರು. ಹೀಗೆಂದವರು, ಮತ್ತೊಬ್ಬ ಚಲನಚಿತ್ರ ಗೀತಸಾಹಿತಿ ಗೀತಪ್ರಿಯರ ಅಭಿಮಾನಿ. ತಗಳ್ಳಿ ಶುರುವಾಯ್ತಲ್ಲ ಅವರಿಬ್ಬರ ಕಿತ್ತಾಟ! ಕಿಚಾಯಿಸಿಕೊಂಡ ವ್ಯಕ್ತಿ ಸುಮ್ಮನೆ ಕೂರುವ ಜಾಯಮಾನದವರಾಗಿರಲಿಲ್ಲ; ತಮ್ಮಭಿಮಾನದ ಆರ್.ಎನ್. ಜಯಗೋಪಾಲ್‌ರನ್ನು ಗೇಲಿಮಾಡಿದ್ದಕ್ಕೆ ಅವರು, ''ಓಹೋಹೊ ಸಾಕು ಸುಮ್ನಿರ್ರಿ ರೀ, ನಿಮ್ ಗೀತಪ್ರಿಯ ಅವರದ್ದೂ ಒಂದು ಸಾಹಿತ್ಯವಾ? 'ಬೆಸುಗೆ' ಚಿತ್ರದಲ್ಲಿ 'ಬೆಸುಗೆ ಬೆಸುಗೆ ಬೆಸುಗೆ ಬೆಸುಗೆ, ಜೀವನವೆಲ್ಲಾ ಸುಂದರ ಬೆಸುಗೆ' ಅನ್ನೋ ಹಾಡು ಬರೆದಿದ್ದಾರಲ್ಲಾ ಅವರು? ಅದರಲ್ಲಿ 'ಬೆಸುಗೆ' ಅನ್ನೋ ಪದ ಎಷ್ಟು ಸಲ ಬರುತ್ತೆ ಅಂತ ಲೆಕ್ಕ ಹಾಕೋದ್ರೊಳಗೆ ನಮ್ ಮಿದುಳಿನ ನರಗಳ 'ಬೆಸುಗೆ' ಬಿಟ್ಕೊಂಡು ಹೋಗಿರುತ್ತೆ...'' ಎಂದು ತಮ್ಮೆದುರಿದ್ದವರ ಕಾಲೆಳೆದರು! ಹೀಗೆ ಒಂದಾದ ಮೇಲೊಂದು ಗೀತೆಗಳ ಕುರಿತಾಗಿ ಅವರ ಕಿತ್ತಾಟ ಮುಂದುವರಿಯಿತು...

ನನ್ನ ಮನವೇಕೋ ಫ್ಲ್ಯಾಷ್‌ಬ್ಯಾಕ್‌ಗೆ ತೆರಳಿ 'ಮಾಂಗಲ್ಯ ಭಾಗ್ಯ' ಚಿತ್ರದ ಘಟನೆಯೊಂದನ್ನು ಮೆಲುಕುಹಾಕಿತು. ರಾಜನ್-ನಾಗೇಂದ್ರ ಸಂಗೀತ ನಿರ್ದೇಶನವಿದ್ದ ಈ ಚಿತ್ರದ ಗೀತೆಗಳೆಲ್ಲವೂ ಸೂಪರ್‌ಹಿಟ್! ಅದರಲ್ಲೂ, ''ಆಸೆಯ ಭಾವ, ಒಲವಿನ ಜೀವ, ಒಂದಾಗಿ ಬಂದಿದೆ; ಹೊಸಬಗೆ ಗುಂಗಿನ ನಿಶೆ ತಾನೇರಿದಂತಿದೆ'' ಎಂಬ ಹಾಡಂತೂ ಆಗ ಬೆಂಗಳೂರು-ಭದ್ರಾವತಿ ಆಕಾಶವಾಣಿ ಕೇಂದ್ರಗಳ 'ಚಿತ್ರರಂಜಿನಿ' ಎಂಬ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮದಲ್ಲಿ ಮತ್ತೆ ಮತ್ತೆ ಕೇಳಿಬರುತ್ತಿತ್ತು. ಆಗೆಲ್ಲಾ ಚಲನಚಿತ್ರಗಳ ಗೀತಸಾಹಿತಿ ಎಂದರೆ ಜನರು ಸಹಜವಾಗೇ ನೆನಪಿಸಿಕೊಳ್ಳುತ್ತಿದ್ದುದು ಚಿ.ಉದಯಶಂಕರ್ ಅವರನ್ನು. ಹೀಗಾಗಿ, ಉದಯಶಂಕರ್ ಯಾವುದಾದರೂ ಕಾರ್ಯಕ್ರಮದಲ್ಲಿ ನೇರವಾಗಿ ಸಿಕ್ಕಾಗಲೋ, ಫೋನ್ ಅಥವಾ ಪತ್ರದ ಮೂಲಕವೋ ಅಭಿಮಾನಿಗಳು ''ಆಸೆಯ ಭಾವ, ಒಲವಿನ ಜೀವ'' ಹಾಡಿನ ಕುರಿತಾಗಿ ಉಲ್ಲೇಖಿಸಿ ''ತುಂಬಾ ಚೆನ್ನಾಗಿ ಬರೆದಿದ್ದೀರಿ'' ಎಂದು ಶ್ಲಾಘಿಸುತ್ತಿದ್ದರು. ತಮಾಷೆಯೆಂದರೆ ಆ ಹಾಡನ್ನು ಬರೆದವರು ಮತ್ತೊಬ್ಬ ಸಾಹಿತಿ ವಿಜಯನಾರಸಿಂಹ. ಈ ಸಂಗತಿಯನ್ನು ಉದಯಶಂಕರ್ ಸಾಕಷ್ಟು ಅಭಿಮಾನಿಗಳಿಗೆ ಹೇಳಿ ಹೇಳಿ ಸುಸ್ತಾದರು! ಕೊನೆಗೊಮ್ಮೆ ಅವರು ಸ್ವತಃ ವಿಜಯನಾರಸಿಂಹರ ಲ್ಯಾಂಡ್‌ಲೈನ್‌ಗೆ ಕರೆಮಾಡಿದರು. ವಿಜಯನಾರಸಿಂಹರು ಕರೆ ಸ್ವೀಕರಿಸಿ ''ಹಲೋ'' ಎಂದಾಗ, ಅತ್ತ ಕಡೆಯಿಂದ ಉದಯಶಂಕರ್ ತಾವ್ಯಾರೆಂದು ಹೇಳಿಕೊಳ್ಳದೆಯೇ, ''ಹಲೋ, ಯಾರು 'ಆಸೆಯ ಭಾವ'ನಾ ಮಾತಾಡ್ತಾ ಇರೋದು?'' ಅಂತ ತಮಾಷೆಯಾಗಿ ಕೇಳಿದರು. ವಿಜಯನಾರಸಿಂಹರಿಗೆ ತಲೆಬುಡ ಅರ್ಥವಾಗದೆ, ''ಇಲ್ಲ, ನಾನು ವಿಜಯನಾರಸಿಂಹ ಮಾತಾಡ್ತಾ ಇರೋದು; ನೀವು ರಾಂಗ್ ನಂಬರ್‌ಗೆ ಕರೆಮಾಡಿದ್ದೀರಿ...'' ಎಂದು ಹೇಳಿ ಇನ್ನೇನು ಫೋನ್ ಕಟ್ ಮಾಡುವವರಿದ್ದರು. ಅಷ್ಟರಲ್ಲಿ ಉದಯಶಂಕರ್, ''ಸರ್, ಸರ್, ಕಟ್ ಮಾಡ್ಬೇಡಿ, ನಾನು ಚಿ.ಉದಯಶಂಕರ ಮಾತಾಡ್ತಾ ಇರೋದು...'' ಎಂದಾಗ, ವಿಜಯನಾರಸಿಂಹರು ಹುಸಿಮುನಿಸು ಬೆರೆತ ನಗೆಯ ದನಿಯಲ್ಲಿ, ''ಹಾಗಂತ ನೇರವಾಗಿ ಹೇಳೋದಲ್ವೇನ್ರೀ ಉದಯ್, ಅದನ್ನ ಬಿಟ್ಟು 'ಆಸೆಯ ಭಾವ'ನಾ ಮಾತಾಡ್ತಾ ಇರೋದು ಅಂತ ನಿಮ್ಮ ಭಾವನ ಬಗ್ಗೆ ಕೇಳೋದಾ?'' ಅಂದ್ರು (ಆಗಲೂ ವಿಜಯನಾರಸಿಂಹರಿಗೆ, ಈ ಉದಯಶಂಕರ್ ತಮ್ಮ 'ಆಸೆಯ ಭಾವ' ಗೀತೆಯ ಬಗ್ಗೆ ಮಾತಾಡ್ತಿರೋದು ಅನ್ನೋದು ಗೊತ್ತಾಗಿರಲಿಲ್ಲವಂತೆ!). ಅವರ ಗೊಂದಲವನ್ನು ಲಪಕ್ಕನೆ ಗ್ರಹಿಸಿದ ಉದಯಶಂಕರ್, ''ಸರ್, ನಾನು ಮಾತಾಡ್ತಿರೋದು ನಮ್ಮ ಭಾವನ ಬಗ್ಗೆ ಅಲ್ಲ, 'ಮಾಂಗಲ್ಯಭಾಗ್ಯ' ಚಿತ್ರದಲ್ಲಿ ನೀವು ಬರೆದಿರೋ 'ಆಸೆಯ ಭಾವ' ಗೀತೆಯ ಬಗ್ಗೆ. ಅಭಿಮಾನಿಗಳೆಲ್ಲರೂ ಅದು ನನ್ನ ಗೀತೆ ಅಂದ್ಕೊಂಡು ನನಗೆ ಮೆಚ್ಚುಗೆ-ಶುಭಾಶಯ ಕಳಿಸ್ತಾ ಇದ್ದಾರೆ. ತಗೊಳ್ಳಿ, ಈ ಫೋನ್ ಮೂಲಕವೇ ಅದನ್ನೆಲ್ಲಾ ನಿಮಗೆ ವರ್ಗಾಯಿಸುತ್ತಿದ್ದೇನೆ. ಅದೆಷ್ಟು ಚೆನ್ನಾಗಿ ಬರೆದಿದ್ದೀರಿ ಸರ್. ಹೆಣ್ಣನ್ನು ಅದೆಷ್ಟು ಕಾವ್ಯಾತ್ಮಕವಾಗಿ ಬಣ್ಣಿಸಿದ್ದೀರಿ, ಏನ್ ಕಥೆ. ಚಿತ್ರಗೀತೆಯಾದರೂ ಇದು ಯಾವ ರಮ್ಯಕವಿತೆಗಿಂತ ಕಮ್ಮಿ ಸರ್? ಸಂಗೀತ ನಿರ್ದೇಶಕರು ನೀಡೋ ಟ್ಯೂನ್, ಮೀಟರ್ ಮತ್ತು ತಾಳ-ಗತಿಯನ್ನು ಇಟ್ಕೊಂಡು, ಒತ್ತಡದಲ್ಲೋ ತುರ್ತಿನಲ್ಲೋ ಇಂಥ ಗೀತೆ ಬರೆಯೋದು ನಿಜಕ್ಕೂ ಸವಾಲು ಸರ್. ಆ ಕಲೆ ನಿಮಗೆ ಸಿದ್ಧಿಸಿದೆ. ನಿಮ್ಮಂಥ ಗೀತರಚನೆಕಾರರ ಕಾಲದಲ್ಲೇ ನಾನೂ ಇದ್ದೀನಿ ಅನ್ನೋದು ನನ್ನ ಪುಣ್ಯ ಸರ್'' ಎಂದು ಮನದುಂಬಿ ಶ್ಲಾಘಿಸಿದರಂತೆ. ಫೋನಿನ ಈ ಬದಿಯಲ್ಲಿ ಈ ಮಾತು ಕೇಳಿಸಿಕೊಳ್ಳುತ್ತಿದ್ದ ವಿಜಯನಾರಸಿಂಹರ ಕಣ್ಣುಗಳು ಅಷ್ಟೊತ್ತಿಗಾಗಲೇ ಅಕ್ಷರಶಃ ಕೊಳಗಳಾಗಿದ್ದವು! ಗೀತರಚನೆಯಂಥ ಒಂದೇ ಕ್ಷೇತ್ರದಲ್ಲಿ ದುಡಿಯುತ್ತಿದ್ದರೂ ಅವರಿಬ್ಬರಲ್ಲಿ 'ವೃತ್ತಿಮತ್ಸರ' ಇರಲಿಲ್ಲ;



ವೃತ್ತಿಯಲ್ಲಿ ಸಹಜವಾಗಿರುವ ಸ್ಪರ್ಧೆಯನ್ನೂ ಮೀರಿದ ಮಮತೆ-ವಾತ್ಸಲ್ಯ, ಆಪ್ಯಾಯತೆ ಅವರಿಬ್ಬರಲ್ಲಿ ಕೆನೆಗಟ್ಟಿತ್ತು!

ಈ ಪ್ರಸಂಗ ನೆನಪಾಗೋದಕ್ಕೆ ಇನ್ನೂ ಒಂದು ಕಾರಣವಿದೆ. ಚಲನಚಿತ್ರ ರಸಿಕರು ತಂತಮ್ಮ ಮೆಚ್ಚಿನ ನಟನ ಕುರಿತಾಗಿ ಆರಾಧನಾ ಭಾವವನ್ನು ಬೆಳೆಸಿಕೊಳ್ಳುವುದಿದೆ. ಒಬ್ಬೊಬ್ಬ ನಾಯಕನಟ ಒಂದೊಂದು ಗುಂಪಿಗೆ ಮೆಚ್ಚುಗೆಯಾಗಬಹುದು. ಇದರಲ್ಲಿ ತಪ್ಪೇನಿಲ್ಲ, ಆದರೆ ಅದು ಅತಿರೇಕಕ್ಕೆ ಹೋಗಿ, ಇಬ್ಬರ ಅಭಿಮಾನಿಗಳೂ ಪರಸ್ಪರರನ್ನು ದ್ವೇಷಿಸುವ, ಕತ್ತಿಮಸೆಯುವ ಹಂತಕ್ಕೆ ಹೋಗುವುದಿದೆಯಲ್ಲಾ, ಅದು ಮಾತ್ರ ಅಪಾಯಕಾರಿ. 'ಗಂಧದಗುಡಿ' ಚಲನಚಿತ್ರದಲ್ಲಿನ ಗುಂಡು ಹಾರಿಸುವ ದೃಶ್ಯದಲ್ಲಿ ಆದ ಎಡವಟ್ಟು ಹಾಗೂ ಅದರ ಸುತ್ತಮುತ್ತ ಹಬ್ಬಿಕೊಂಡ ಅಪಪ್ರಚಾರಗಳ ಕಾರಣದಿಂದಾಗಿ ಡಾ.ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ಅಭಿಮಾನಿಗಳು ದಶಕಗಳವರೆಗೆ ಕಿತ್ತಾಡುವಂತಾಯಿತು. ಸಾಲದೆಂಬಂತೆ, 1981ರ ಡಿಸೆಂಬರ್‌ನಲ್ಲಿ ಅಣ್ಣಾವ್ರ 'ಕೆರಳಿದ ಸಿಂಹ' ಚಿತ್ರ ಬಿಡುಗಡೆಯಾಗಿ, 1982ರ ಫೆಬ್ರವರಿಯಲ್ಲಿ ವಿಷ್ಣುವರ್ಧನ್ ಅವರ 'ಸಾಹಸಸಿಂಹ' ಚಿತ್ರ ಬಿಡುಗಡೆಯಾದಾಗಲೂ, ಈ ಎರಡೂ ಶೀರ್ಷಿಕೆಗಳಲ್ಲಿ 'ಸಿಂಹ' ಎಂಬುದು 'ಕಾಮನ್ ಫ್ಯಾಕ್ಟರ್' ಆಗಿದ್ದನ್ನು ಕಂಡು ಕೆಲವರು, ''ಮೊದಲ ಚಿತ್ರಕ್ಕೆ ಪ್ರತ್ಯುತ್ತರ ನೀಡಲೆಂದೇ ಎರಡನೇ ಚಿತ್ರಕ್ಕೆ ಹಾಗಂತ ಹೆಸರಿಡಲಾಗಿದೆ'' ಎಂಬರ್ಥದಲ್ಲಿ ಗಾಳಿಸುದ್ದಿ ಹಬ್ಬಿಸಿದ್ದುಂಟು ಮತ್ತು ಅದು ಕೆಲಕಾಲ ಅಭಿಮಾನಿಗಳ ನಡುವೆ ಶೀತಲಸಮರಕ್ಕೂ ಕಾರಣವಾಗಿದ್ದುಂಟು. ಆದರೆ, 'ಗಂಧದಗುಡಿ' ಚಿತ್ರದ ನಂತರ ಡಾ.ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ಮತ್ತೆ ಜತೆಯಾಗಿ ನಟಿಸಲಿಲ್ಲ ಎನ್ನುವುದನ್ನು ಬಿಟ್ಟರೆ, ವೈಯಕ್ತಿಕ ನೆಲೆಯಲ್ಲಿ ಉತ್ತಮ ಬಾಂಧವ್ಯವನ್ನೇ ಹೊಂದಿದ್ದರು. ಅದರಲ್ಲೂ ವಿಷ್ಣುವರ್ಧನ್‌ರ 'ಯಜಮಾನ' ಚಿತ್ರವನ್ನು ವೀಕ್ಷಿಸಿದ ನಂತರ ಅಣ್ಣಾವ್ರು, ವಿಷ್ಣುರನ್ನು ಮುಖತಃ ಭೇಟಿಯಾಗಬೇಕು ಎಂದು ಇನ್ನಿಲ್ಲದಂತೆ ಹಂಬಲಿಸಿದ್ದುಂಟು. ಒಟ್ಟಾರೆ ಹೇಳುವುದಾದರೆ, 'ಗಂಧದಗುಡಿ' ಪ್ರಕರಣದ ತರುವಾಯದ ಕಾಲಘಟ್ಟದ ವಿವಿಧ ಸಂದರ್ಭಗಳಲ್ಲೂ ವೈಯಕ್ತಿಕ ನೆಲೆಯಲ್ಲಿ ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್‌ರ ನಡುವಿನ ಸಂಬಂಧ ಚೆನ್ನಾಗೇ ಇತ್ತು (ವಾಸ್ತವವಾಗಿ, ಅಣ್ಣಾವ್ರ 'ಕವಿರತ್ನ ಕಾಳಿದಾಸ' ಚಿತ್ರದ ಭೋಜರಾಜನ ಪಾತ್ರವನ್ನು ವಿಷ್ಣುವರ್ಧನ್ ನಿರ್ವಹಿಸಬೇಕಾಗಿತ್ತಂತೆ, ಅಣ್ಣಾವ್ರಿಗೂ ಆ ಬಯಕೆ ಇತ್ತಂತೆ; ಆದರೆ ಅಷ್ಟರಲ್ಲಾಗಲೇ ಪಾರ್ವತಮ್ಮನವರು ಶ್ರೀನಿವಾಸಮೂರ್ತಿಯವರಿಗೆ ಪ್ರಾಮಿಸ್ ಮಾಡಿದ್ದರಿಂದ ವಿಷ್ಣು ಅವರಿಗೆ ಆ ಅವಕಾಶ ತಪ್ಪಿತು ಎನ್ನಲಾಗುತ್ತದೆ).

ಇಲ್ಲಿ ಸಿನಿಮಾ ಕ್ಷೇತ್ರವನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಲಾಗಿದೆಯಷ್ಟೇ. ಹಾಗೆ ನೋಡಿದರೆ, ರಾಜಕಾರಣ, ಸಾಹಿತ್ಯ ಸೇರಿದಂತೆ ಸಮಾಜದ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಆಯಾ ಕಾಲಘಟ್ಟದ ಘಟಾನುಘಟಿಗಳ ನಡುವೆ ಸಹಜವಾಗಿಯೇ ವೃತ್ತಿಸಹಜ ಸ್ಪರ್ಧೆ/ಪೈಪೋಟಿ ಇರುತ್ತವೆ ಮತ್ತು ಅವು ಆರೋಗ್ಯಕರವಾಗಿದ್ದಲ್ಲಿ ಉತ್ತಮ ಕೆಲಸ/ಕೃತಿ ಹೊಮ್ಮುವುದಕ್ಕೆ ಕಾರಣವಾಗುತ್ತವೆ. ಇಂಥ ಸ್ಪರ್ಧೆಯಲ್ಲಿ ತೊಡಗಿದ 'ಆಟಗಾರರು' ಬಹುತೇಕವಾಗಿ ವೈಯಕ್ತಿಕ ನೆಲೆಯಲ್ಲಿ ಉತ್ತಮ ಬಾಂಧವ್ಯವನ್ನು ಉಳಿಸಿಕೊಂಡಿರುತ್ತಾರೆ; ಆದರೆ ಆ ಪೈಪೋಟಿಯನ್ನು 'ಹಳದಿ ಕಣ್ಣು'ಗಳಲ್ಲಿ ಕಂಡು ಹುಳಿ ಹಿಂಡುವವರ ಮಾತನ್ನೇ ನಿಜವೆಂದು ನಂಬುವ ಅಭಿಮಾನಿಗಳು-ಅನುಯಾಯಿಗಳು ವಿನಾಕಾರಣ ಕಿತ್ತಾಡಿ, ಸ್ನೇಹ-ಸಂಬಂಧವನ್ನು ಹುಳಿಯಾಗಿಸಿಕೊಳ್ಳುತ್ತಾರೆ. ಇದು ಬೇಕಾ?

(ಲೇಖಕರು ಪತ್ರಕರ್ತರು)

ಮಾಸ್ತರರಿಗೆ ಇಡೋ ಹೆಸರು- ಸರ್ ನೇಮ್

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಕೆಲವು ಸ್ಟಾರ್ ಸಿನಿಮಾಗಳು ಥಿಯೇಟರ್‌ಗಳಲ್ಲಿ ಬಿಡುಗಡೆ ಆಗಿ ಒಂದು ತಿಂಗಳು ಕಳೆಯುವ ಮುನ್ನವೇ ಓಟಿಟಿಗೆ ಕಾಲಿಡುತ್ತವೆ. ಅವುಗಳಲ್ಲಿ ಕೆಲವು ಚಿತ್ರಮಂದಿರದಲ್ಲಿ ಗೆದ್ದ ಚಿತ್ರಗಳೇ; ಆದರೆ ಇನ್ನು ಕೆಲವು ಸೋತ ಚಿತ್ರಗಳು ಓಟಿಟಿಯಲ್ಲಾದರೂ ದುಡ್ಡು ಮಾಡೋಣ ಅಂತ ಬಹಳ ಮುಂಚೆನೇ ಸೇಲ್ ಆಗಿಬಿಡುತ್ತವೆ. ಚಿತ್ರಮಂದಿರಗಳಲ್ಲಿ ಸದ್ದು ಮಾಡಲಿಲ್ಲವಾದರೂ ನಿರ್ಮಾಪಕರು 'ಸಿನಿಮಾ ಸಕ್ಸಸ್' ಅನ್ನೋದು, ಬಿಡುಗಡೆಯಾದ ಕೆಲವೇ ದಿನಗಳಲ್ಲಿ 'ಸಿನಿಮಾ ಅಷ್ಟು ಕೋಟಿ ಗಳಿಕೆ ಮಾಡಿದೆ' ಎಂದು ಹೇಳೋದು, ಎಲ್ಲದರ ನಂತರವೂ ಆ ಚಿತ್ರದ ಗಳಿಕೆಯ ಅಸಲಿಯತ್ತು ಎಲ್ಲರಿಗೂ ಗೊತ್ತಿರುತ್ತದೆ. ಹಾಗಾಗಿ ಈಗ, ಕಳೆದ ತಿಂಗಳು ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ತೆರೆಕಂಡಿದ್ದ ಚಿತ್ರ ಈ ತಿಂಗಳು ಶುರು ಆಗೋ ಮುನ್ನವೇ ಓಟಿಟಿಯಲ್ಲಿ ಕಾಣಿಸಿಕೊಳ್ಳುತ್ತದೆ. ಅದರ ಜತೆಗೇ ಮತ್ತೆ ಸಿನಿಮಾ ವಿಮರ್ಶೆ ಮಾಡುವವರು ಸೋಷಿಯಲ್ ಮೀಡಿಯಾಗಳಲ್ಲಿ ಬ್ಯುಸಿ ಆಗುತ್ತಾರೆ. ಒಂದು ಬದಲಾವಣೆ ಅಂದ್ರೆ, ಸಿನಿಮಾ ಬಿಡುಗಡೆ ಆದಾಗ ಸಿನಿಮಾ ಚೆನ್ನಾಗಿಲ್ಲ ಅಂತ ಹೇಳೋಕೆ ಹಿಂದೆ-ಮುಂದೆ ನೋಡ್ತಾ ಇದ್ದವರು, ಈಗ ಸಾರಾಸಗಟಾಗಿ 'ನಿರ್ದೇಶಕರು ಹಂಗ್ ಮಾಡಿದ್ದಾರೆ, ಹಿಂಗ್ ಮಾಡಿದ್ದಾರೆ' ಅಂತ ನೇರವಾಗಿ ಟೀಕೆ ಮಾಡುತ್ತಾರೆ. ಪ್ರೇಕ್ಷಕರ ಮಟ್ಟಿಗೆ ಚಿತ್ರಮಂದಿರಗಳಲ್ಲಿ ಫೇಲ್ ಆದ ಇಂಥ ಚಿತ್ರಗಳನ್ನು ನೋಡೋಕೆ ಎಷ್ಟು ಜನ ಆಸಕ್ತಿ

ತೋರಿಸ್ತಿದ್ದಾರೆ ಅನ್ನೋದ್ರ ಬಗ್ಗೆ ಇನ್ನೂ ಅಂಕಿ-ಅಂಶಗಳು ಸಿಕ್ಕಿಲ್ಲ. ಥಿಯೇಟರ್‌ನಲ್ಲಂತೂ ಸಿನಿಮಾ ನೋಡೋಕೆ ಪ್ರೇಕ್ಷಕರು ಬರಲಿಲ್ಲ, ಇಲ್ಲಾದ್ರೂ ಬರ್ತಾರಾ ಅಂತ ನಿರ್ಮಾಪಕರು ಕಾಯ್ತಾ ಇರುತ್ತಾರೆ. ಆದರೆ, ಚಿತ್ರಮಂದಿರಕ್ಕೆ ಬಾರದವರು ಓಟಿಟಿಗೆ ಬಂದಾರೆಯೇ? ಅಂತ ಗಾಂಧಿನಗರದ ಪಂಡಿತರು, 'ಅದು ಮುಂದುವರಿದ ಅಧ್ಯಾಯ ಅಲ್ಲ, ಮುಗಿದ ಅಧ್ಯಾಯ; ಮುಂದಿನ ಸಿನಿಮಾ ಬಗ್ಗೆ ಮಾತಾಡಿ' ಅಂತಿರೋದಂತೂ ಸತ್ಯ.

ಲೂಸ್ ಟಾಕ್

ಸಿದ್ದರಾಮಯ್ಯ

- **ನಿಮ್ಮ ವಿರುದ್ಧ ತನಿಖೆ ಶುರು ಆಗಿದೆಯಲ್ಲ ಸರ್. ಪರಿಣಾಮ ಏನಾಗಬಹುದು?**

– ಅಯ್ಯೋ 'ತನಿಖೆ' ಏನ್ ಬಿಡಿ, ಗುಲ್ಜಾರ್ ಖಾನ್ ಕೂಡಾ ಮಾಡಿದ್ರು. ಅದು ಫ್ಲಾಪ್ ಆಯ್ತು ತಾನೇ. ಇದೂ ಹಂಗೇ ಫ್ಲಾಪೇ ಆಗೋದು.

- **ಆದ್ರೂ, ಎಲ್ರೂ ನಿಮ್ಮನ್ನ ಈಗಾಗ್ಲೇ 'X' ಸಿಎಂ ಅಂತಿದ್ದಾರಲ್ಲ?**

– ಅವ್ರು ನನ್ನ ಟ್ವಿಟರ್ ಅಕೌಂಟ್ ನೋಡಿ ಹೇಳಿರಬೇಕು ಬಿಡಿ.

- **ಅಂದ್ರೆ ನಿಮಗೆ ಕಾನೂನಿನ ಪ್ರಕಾರ ಶಿಕ್ಷೆ ಆಗಲ್ಲ ಅಂತೀರಾ?**

– ಆಗುತ್ತೆ ಅಂತ ಅಂದ್ಕೊಳ್ಳೋದೆಲ್ಲ 'ಮುಡಾ'ನಂಬಿಕೆ.

- **ಕುಮಾರಸ್ವಾಮಿ ಅವರ ಮೇಲೂ ಆರೋಪಗಳಿವೆಯಲ್ಲ. ಅವರ ಗತಿ ಏನಾಗಬಹುದು?**

– ಅವ್ರು ನಮ್ಗೆ ಅಣ್ತಮ್ಮ ಇದ್ದಂಗೆ. ಅಲ್ದೆ ಅವ್ರು ಎಲ್ರನ್ನೂ 'ಬ್ರದರ್' ಅಂತಿರ್ತಾರೆ. ಅಂಥವ್ರನ್ನ ಬಿಟ್ ಕೊಡೋಕೆ ಆಗುತ್ತಾ. ನಾನ್ ಜೈಲಿಗೆ ಹೋದರೆ ಅವ್ರನ್ನೂ ಕರ್ಕೊಂಡೇ ಹೋಗೋದು.

- **ಅಂದ್ರೆ ನಿಮಗೆ ಜೈಲಿಗೆ ಹೋಗೋ ಭಯ ಇದೆ ಅನ್ನಂಗಾಯ್ತು?**

– ಹಂಗೇನಿಲ್ಲ. ಆದ್ರೆ, ಜೈಲ್‌ಗೆ ಹೋಗೋದು ಸೂಕ್ಷ್ಮ ಸಂಗತಿ. ತುಂಬಾ ಫ್ರ'ಜೈಲ್' ವಿಷ್ಯ. ಅದಕ್ಕೆ ಹೇಳ್ದೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ರಾಮು, ಸೋಮು, ಖೇಮು ಸಿಬಿಐ ಇಂಟರ್‌ವ್ಯೂಗೆ ಹೋಗಿದ್ದರು. ಅಲ್ಲಿ ಯಾವ ರೀತಿಯ ಪ್ರಶ್ನೆಗಳನ್ನು ಕೇಳಬಹುದು ಎಂಬ ಕುತೂಹಲದಲ್ಲೇ ಮೂವರೂ ಹೊರಗೆ ಕೂತಿದ್ದರು. ಸ್ವಲ್ಪ ಹೊತ್ತಿನಲ್ಲೇ ರಾಮು ಸರದಿ ಬಂತು. ಒಳಗೆ ಹೋದ ರಾಮುಗೆ ಕಂಪ್ಯೂಟರ್‌ನಲ್ಲಿ ಒಬ್ಬ ಶಂಕಿತ ಉಗ್ರಗಾಮಿಯ ಫೋಟೋ ತೋರಿಸಿದ ಸಂದರ್ಶಕರು 'ಈ ಫೋಟೋದಿಂದ ನಿಮಗೆ ಏನಾದರೂ ಕ್ಯೂ ಸಿಗುತ್ತಾ?' ಅಂತ ಕೇಳಿದ್ರು. ರಾಮು ಒಂದರೆಕ್ಷಣ ಯೋಚಿಸಿ, 'ಇವನಿಗೆ ಬಲಗಾಲೇ ಇಲ್ಲ' ಅಂದ. ಸಂದರ್ಶಕರು 'ಯಾಕೆ?' ಅಂತ ಕೇಳಿದಾಗ ರಾಮು ಹೇಳಿದ, 'ನೋಡಿ, ಫೋಟೋದಲ್ಲಿ ಅವನ ಎಡಗಾಲು ಮಾತ್ರ ಕಾಣುತ್ತಿದೆ. ಬಲಗಾಲು ಕಾಣುತ್ತಿಲ್ಲ' ಅಂದ. ಸಿಟ್ಟಿಗೆದ್ದ ಸಂದರ್ಶಕರು, 'ಅಯ್ಯೋ ನಿನ್ನ, ಅವನು ಎಡಕ್ಕೆ ತಿರುಗಿ ನಿಂತಿದಾನೆ ಅದಕ್ಕೆ ಬಲಗಾಲು ಕಾಣ್ತಾ ಇಲ್ಲ ಅಷ್ಟೆ, ನಡಿ ಮನೆಗೆ' ಅಂತ ಕಳಿಸಿದರು. ನಂತರ ಸೋಮು ಸರದಿ ಬಂತು. ಅವನಿಗೂ ಅದೇ ಫೋಟೋ ಅದೇ ಪ್ರಶ್ನೆ. ಎಷ್ಟೇ ಆದರೂ ಸ್ನೇಹಿತರಲ್ಲವೇ? ಹಾಗಾಗಿ ಸೋಮು ಉತ್ತರ ಕೂಡ ಅದೇ ಆಗಿತ್ತು ಮತ್ತು ಸಂದರ್ಶಕರಿಂದ ಅದೇ ಬೈಗುಳ ಸಿಕ್ಕಿತು. ಕೊನೆಯದಾಗಿ ಖೇಮುವನ್ನು ಕರೆಸಿದರು. ಅವನಿಗೂ ಅದೇ ಫೋಟೋ, ಅದೇ ಪ್ರಶ್ನೆ. ಖೇಮು ಒಂದರೆಕ್ಷಣ ಯೋಚಿಸಿ, 'ಈತ ಮರದ ಕಾಲು ಹಾಕ್ಕೊತಾನೆ' ಅಂದ. ಸಂದರ್ಶಕರಿಗೆ ಅಚ್ಚರಿ, 'ಇರು ಒಂದ್ ನಿಮಿಷ' ಅಂತ ಹೇಳಿ, ಆ ಉಗ್ರಗಾಮಿಯ ಪ್ರೊಫೈಲ್ ಚೆಕ್ ಮಾಡಿ ನೋಡಿದರು. ಖೇಮು ಹೇಳಿದ್ದು ಸರಿ ಇತ್ತು. ಸಂದರ್ಶಕರು ಫುಲ್ ಇಂಪ್ರೆಸ್ ಆಗಿ, 'ಅವನು ಮರದ ಕಾಲು ಹಾಕ್ಕೊತಾನೆ ಅಂತ ನಿಮಗೆ ಹೇಗೆ ಗೊತ್ತಾಯ್ತು?' ಅಂತ ಕೇಳಿದ್ರು. ಅದಕ್ಕೆ ಖೇಮು ತಣ್ಣಗೆ ಹೇಳಿದ, 'ಆ ಫೋಟೋ ನೋಡಿ, ಅವನಿಗೆ ಬಲಗಾಲೇ ಇಲ್ಲ, ಆದ್ರೂ ಅವನು ಎಲ್ಲಾ ಕಡೆ ಓಡಾಡಿಕೊಂಡು ಉಗ್ರಗಾಮಿ ಕೆಲಸ ಮಾಡ್ತಾನೆ ಅಂದ್ರೆ, ಅವನು ಮರದ ಕಾಲು ಹಾಕ್ಕೋತಿರ್ಬೇಕು ಅಂತ ಗೆಸ್ ಮಾಡಿದೆ'.

ಲೈನ್ ಮ್ಯಾನ್

- **ಕುಡಿತ ಬಿಡಿ**ಸುವ ಕೆಲಸ
  – ಡಿ 'ವೈನ್'
- ಹಳೇ ಕಾಲದ ಹಳ್ಳಿ ಶೈಲಿಯಲ್ಲಿ ಊಟ ಮಾಡೋ ಪದ್ಧತಿ
  – 'ತಾಟ್' ಪ್ರೊಸೆಸ್
- **ದುಂಬಿ ಜೇನಿಗೆ ಹೇಳಿದ್ದೇನು?**
  – ನಾನು ನಿನ್ನ ಮನದುಂಬಿ ಪ್ರೀತಿಸ್ತೀನಿ
- **ಬರೀ ಕೆಲಸ ಮಾಡೋರದ್ದು- ಟಾಸ್ಕ್ ಫೋರ್ಸ್**
  – ಎಲ್ಲವನ್ನೂ ಬರೀ ಪ್ರಶ್ನೆ ಮಾಡುವವರ ಗುಂಪು- ಆಸ್ಕ್ ಫೋರ್ಸ್
- **ಧ್ರುವ ಸರ್ಜಾ ಓದುಗರ ಪ್ರಶ್ನೆಗೆ ಉತ್ತರಿಸುವ ಕಾಲಂ ಶುರು ಮಾಡಿದ್ರೆ, ಅದರ ಹೆಸರು**
  – ಉತ್ತರ ಧ್ರುವ
- **ಡೇಂಜರಸ್ ಆಗಿ ಡ್ರೈವ್ ಮಾಡೋ ಆಂಬುಲೆನ್ಸ್ ಡ್ರೈವರ್‌ಗೆ ಏನಂತ** ಬಯ್ಬೇಕು?
  – **ಯಾಕೋ ಮಗನೇ, ಇವತ್ ಯಾರೂ ಗಿರಾಕಿ ಸಿಗಲಿಲ್ವಾ?**
- **ಪೂರಿಗೆ ಬರೀ ಚಟ್ನಿ ಕೊಟ್ಟಾಗ ಆಗೋ ಬೇಸರದಲ್ಲಿ ಮೂಡುವ ಹಾಡು**
  – ಏನಾಗಲಿ ಮುಂದೆ 'ಸಾಗು' ನೀ
- **ಕುರಿ ಮಾಂಸ ತಿಂದು ಹೊಟ್ಟೆ ಬರಿಸಿಕೊಂಡವನು**
  – ಲ್ಯಾಂಬೋದರ
- **ಮನುಷ್ಯನ ದೇಹದಲ್ಲಿ ಕೋಪ ಹುಟ್ಟಿಸುವ ಅಂಗ**
  – 'ಪಿತ್ತ' ಜನಕಾಂಗ
- **ಫಸ್ಟ್ ನೇಮ್, ಲಾಸ್ಟ್ ನೇಮ್ ಅಂತ ಗೊಂದಲ ಯಾರಿಗೆ ಇರೋದಿಲ್ಲ?**
  – ಪಾಠ ಹೇಳಿ ಕೊಡೋ ಮಾಸ್ತರರಿಗೆ. ಯಾಕಂದ್ರೆ, ಅವರದ್ದು 'ಸರ್' ನೇಮ್...

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 279

ಸಮಾಚಾರ ಸಣ್ಣದಲ್ಲ

57.4 ಲಕ್ಷ ಕೋಟಿ ರು. ವಿ.ವಿನಿಮಯ ಸಂಗ್ರಹ

ಮುಂಬೈ: ಭಾರತದ ವಿದೇಶಿ ವಿನಿಮಯ ಸಂಗ್ರಹ ಪ್ರಮಾಣ ಸೆ.20ಕ್ಕೆ ಕೊನೆಗೊಂಡ ವಾರದಲ್ಲಿ ಒಮ್ಮೆಲೇ 23,000 ಕೋಟಿ ರು. ಏರಿಕೆ ಕಂಡಿದೆ. ಆ ಮೂಲಕ ಸಾರ್ವಕಾಲಿಕ ಗರಿಷ್ಠ ಪ್ರಮಾಣಕ್ಕೆ(57.4 ಲಕ್ಷ ಕೋಟಿ ರು.ಗೆ) ಮುಟ್ಟಿದೆ. ಇದರೊಂದಿಗೆ ವಿದೇಶಿ ಕರೆನ್ಸಿಗಳ ಸಂಗ್ರಹದಲ್ಲಿ ವಿಶ್ವದ ವಿವಿಧ ದೇಶಗಳ ಪಟ್ಟಿಯಲ್ಲಿ ಭಾರತ 4ನೇ ಸ್ಥಾನದಲ್ಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಹೇಳಿದೆ. ವಿದೇಶಿ ವಿನಿಮಯ ಸಂಗ್ರಹದಲ್ಲಿ ಚೀನಾ 300 ಲಕ್ಷ ಕೋಟಿ ರು.ಗಳೊಂದಿಗೆ ಮೊದಲ ಸ್ಥಾನದಲ್ಲಿದೆ.

ಕಾರು ಡಿಕ್ಕಿ: ಬಾಲಕ ಆರೋಪಿ ವಿದ್ಯೆ ಮೊಟಕು

ಪುಣೆ: ವಿದೇಶದ ದುಬಾರಿ ಕಾರು 'ಪೋಷೆ'ಯನ್ನು ಮೇ 19ರ ಮುಂಜಾನೆ ಕುಡಿದ ಮತ್ತಿನಲ್ಲಿದ್ದಾಗ ಪುಣೆ ನಗರದಲ್ಲಿ ಮನಬಂದಂತೆ ಚಲಾಯಿಸಿ ಇಬ್ಬರು ಐಟಿ ಉದ್ಯೋಗಿಗಳ ಸಾವಿಗೆ ಕಾರಣನಾದ ಬಾಲಕನಿಗೆ ಈಗ ಕಾಲೇಜು ಸೇರುವುದೇ ಕಷ್ಟವಾಗಿದೆ. ಬಾಲಕನ ವಿರುದ್ಧ ಅಪರಾಧ ಪ್ರಕರಣದ ವಿಚಾರಣೆ ನಡೆಯುತ್ತಿರುವುದರಿಂದ ಆತನಿಗೆ ಯಾವುದೇ ಕಾಲೇಜಿನಲ್ಲಿಯೂ ಪ್ರವೇಶ ಸಿಗದಂತಾಗಿದೆ. ಕಾಲೇಜಿನಲ್ಲಿ ಸೀಟು ಪಡೆಯಲಾಗದೇ ಬಾಲಕ ಪರದಾಡುತ್ತಿದ್ದಾನೆ. ಇತ್ತೀಚೆಗೆ ಪಿಯುಸಿ ಉತ್ತೀರ್ಣನಾದ ಬಾಲ ಆರೋಪಿ ದೆಹಲಿ ಕಾಲೇಜಿನಲ್ಲಿ ಬಿಬಿಎ ವ್ಯಾಸಂಗಕ್ಕೆ ಅರ್ಜಿ ಸಲ್ಲಿಸಿದ್ದ. ಕಾಲೇಜು ಆಡಳಿತ ಮಂಡಳಿ ಸೀಟು ನೀಡಲು ನಿರಾಕರಿಸಿದೆ ಎಂದು ಆತನ ವಕೀಲರು ಬಾಲ ನ್ಯಾಯ ಮಂಡಳಿಗೆ ಮಾಹಿತಿ ನೀಡಿದ್ದಾರೆ.

ಅಸ್ಸಾಂ: 17 ಬಾಂಗ್ಲಾ ಪ್ರಜೆಗಳ ಗಡಿಪಾರು

ಗುವಾಹಟಿ: ಒಳ ನುಸುಳುವಿಕೆ ತಡೆ, ಅಕ್ರಮ ವಲಸಿಗರ ವಾಪಸ್ ಕ್ರಮಕ್ಕೆ ಮುಂದಾಗಿರುವ ಅಸ್ಸಾಂ ರಾಜ್ಯದ ಪೊಲೀಸರು ಶನಿವಾರ ಬೆಳಗ್ಗೆ ಬಾಂಗ್ಲಾದೇಶದಿಂದ ನುಸುಳಿ ಬಂದಿದ್ದ 9 ಹಿರಿಯರು ಮತ್ತು 8 ಮಕ್ಕಳನ್ನು ದೇಶದ ಗಡಿಯಂಚಿಗೆ ಕರೆದೊಯ್ದು ಅವರ ದೇಶಕ್ಕೆ ವಾಪಸ್ ಕಳುಹಿಸಿದ್ದಾರೆ. ದೇಶದೊಳಕ್ಕೆ ನುಸುಳಿಕೊಂಡು ಬಂದಿದ್ದ ಬಾಂಗ್ಲಾದೇಶೀಯರನ್ನು ವಾಪಸ್ ಕಳುಹಿಸಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಬಾಂಗ್ಲಾದಲ್ಲಿನ ರಾಜಕೀಯ ಪ್ರಕ್ಷುಬ್ಧತೆ ನಂತರ ಭಾರತ ದೇಶವನ್ನು ಅಕ್ರಮವಾಗಿ ಪ್ರವೇಶಿಸುವವರ ಸಂಖ್ಯೆ ಹೆಚ್ಚಿದೆ. ಅಸ್ಸಾಂ ರಾಜ್ಯವೊಂದರಲ್ಲೇ 100 ಜನರನ್ನು ಬಂಧಿಸಿ ವಾಪಸ್ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪುರಿಗೆ ಹೊರಟಿದ್ದ 4 ಯಾತ್ರಾರ್ಥಿ ಸಾವು

ಬಾಲಸೋರ್: ಒಡಿಶಾ ರಾಜ್ಯದ ಬಾಲಸೋರ್ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ-16ರಲ್ಲಿ ಯಾತ್ರಾರ್ಥಿಗಳಿದ್ದ ಬಸ್ ಶನಿವಾರ ನಸುಕಿನಲ್ಲಿ ಅಪಘಾತಕ್ಕೀಡಾಗಿದ್ದು, ಉತ್ತರ ಪ್ರದೇಶದ ಮಹಿಳೆ ಸೇರಿದಂತೆ ನಾಲ್ವರು ಯಾತ್ರಿಕರು ದುರ್ಮರಣಕ್ಕೀಡಾಗಿದ್ದಾರೆ. 16 ಯಾತ್ರಿಕರು ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ 7 ಯಾತ್ರಾರ್ಥಿಗಳ ಸ್ಥಿತಿ ಚಿಂತಾಜನಕವಾಗಿದೆ. ಚಾಲಕ ಮತ್ತು ಸಹಾಯಕ ಸೇರಿದಂತೆ 57 ಜನರಿದ್ದ ಬಸ್ ಪುರಿ ಜಗನ್ನಾಥ ದೇಗುಲಕ್ಕೆ ತೆರಳುತ್ತಿದ್ದಾಗ ಅಪಘಾತಕ್ಕೀಡಾಗಿದೆ. ಜಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯ ಚಾಲಂತಿ ಬೈಪಾಸ್‌ನಲ್ಲಿ 20 ಅಡಿ ಎತ್ತರದಿಂದ ಜಾರಿದ ಬಸ್ ಭತ್ತದ ಗದ್ದೆಗೆ ಬಿದ್ದಿದೆ. ಪೊಲೀಸರು, ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬಸ್ಸಿನಡಿ ಸಿಲುಕಿದ್ದ ಗಾಯಾಳುಗಳನ್ನು ರಕ್ಷಿಸಿ ಬಾಲಾಸೋರ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಜಾಗರೂಕ ಚಾಲನೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ವಿದ್ಯಾರ್ಥಿ ಅತ್ಯಾಚಾರ ವಾರ್ಡನ್‌ಗೆ ಗಲ್ಲು

ಇಟಾ ನಗರ: ಅರುಣಾಚಲ ಪ್ರದೇಶದಲ್ಲಿನ ಹಾಸ್ಟೆಲ್‌ನಲ್ಲಿ 15 ಬಾಲಕಿಯರು, 6 ಪ್ರೌಢರು ಸೇರಿದಂತೆ 21 ವಿದ್ಯಾರ್ಥಿಗಳ ಮೇಲೆ ತಿಂಗಳುಗಳ ಕಾಲ ಲೈಂಗಿಕ ದೌರ್ಜನ್ಯ ನಡೆಸಿದ್ದ ಹಾಸ್ಟೆಲ್ ವಾರ್ಡನ್‌ಗೆ ವಿಶೇಷ ಪೋಕ್ಸೊ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿ ಶನಿವಾರ ತೀರ್ಪು ನೀಡಿದೆ. ಶಿಯೋಮಿ ಜಿಲ್ಲೆಯ ಕರೋ ಸರಕಾರಿ ವಸತಿ ಶಾಲೆಯಲ್ಲಿ ವಾರ್ಡನ್ ಆಗಿದ್ದ ಯುಮ್ಕೆನ್ ಬಾಗ್ರಾ, ಮರಣದಂಡನೆ ಶಿಕ್ಷೆಗೆ ಗುರಿಯಾದ ಕೈದಿ. ಈತ 2019ರಿಂದ 2022ರವರೆಗೂ 6 ವರ್ಷದ ಪುಟ್ಟ ಬಾಲಕಿಯರಿಂದ, 15 ವರ್ಷದವರೆಗಿನ ಒಟ್ಟು 15 ಬಾಲಕಿಯರನ್ನು ಲೈಂಗಿಕವಾಗಿ ಶೋಷಣೆ ಮಾಡಿದ್ದ. ಇತರೆ 6 ವಿದ್ಯಾರ್ಥಿಗಳಿಗೂ ಲೈಂಗಿಕ ಕಿರುಕುಳ ನೀಡಿದ್ದ. ಇನ್ನಿಬ್ಬರು ಅಪರಾಧಿಗಳಿಗೆ ತಲಾ 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ. ಹಿಂದಿ ಶಿಕ್ಷಕ ಮಾರ್ಬೋಮ್ ನೋಮ್ದಿರ್, ನಿವೃತ್ತ ಹೆಡ್ ಮಾಸ್ಟರ್ ಸಿಂಗ್ತುನ್ ಯೋರ್ಪೆನ್ ವಾರ್ಡನ್ ಜತೆಗೂಡಿ 21 ಮಂದಿಗೂ ಲೈಂಗಿಕ ಕಿರುಕುಳ ನೀಡಿದ್ದರು.

{ನರೇಂದ್ರ ಮೋದಿ } ಪ್ರಧಾನಿ

ಕಾಂಗ್ರೆಸ್ ಪಕ್ಷ ಆಂತರಿಕವಾಗಿ ಕಚ್ಚಾಡುತ್ತಲೇ ಇರುತ್ತದೆ. ಆ ಪಕ್ಷದಿಂದ ಎಂದಿಗೂ ಸ್ಥಿರ ಆಡಳಿತ ಸಾಧ್ಯವೇ ಇಲ್ಲ. ಅದಾಗಲೇ ಹರಿಯಾಣ ಸಿಎಂ ಆಗುವುದಕ್ಕೆ ಕಾಂಗ್ರೆಸ್ ನಾಯಕರಲ್ಲೇ ಪೈಪೋಟಿ ಶುರುವಾಗಿದೆ. ಬಾಪ್(ಭೂಪಿಂದರ್ ಸಿಂಗ್ ಹೂಡ) ಮತ್ತು ಬೇಟಾ(ದೀಪೇಂದರ್ ಹೂಡಾ) ನಡುವೆಯೂ ಕಚ್ಚಾಟ ಶುರುವಾಗಿದೆ. ಇದುವೇ ಕಾಂಗ್ರೆಸ್ ಕಥೆ-ವ್ಯಥೆ.

ಹಿಜ್ಬುಲ್ಲಾ ಮುಖ್ಯಸ್ಥ ಹಸನ್ ನಸ್ರಲ್ಲಾ ಬೈರೂತ್‌ನಲ್ಲಿ ಸಾವು | ಉಗ್ರ ಸಂಘಟನೆ ಮುನ್ನಡೆಸುವವರು ಯಾರು?

ಹಿಜ್ಬುಲ್ಲಾ ನಾಯಕ ಹತ; ಸಂಘಟನೆಗೆ ದೊಡ್ಡ ಹೊಡೆತ

ಟೆಲ್‌ಅವಿವ್: ಇಸ್ರೇಲ್ ಸೇನಾಪಡೆ ಬೈರೂತ್‌ನಲ್ಲಿ ಶುಕ್ರವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಹಿಜ್ಬುಲ್ಲಾ ಉಗ್ರ ಸಂಘಟನೆಯ ನಾಯಕ ಹಸನ್ ನಸ್ರಲ್ಲಾನನ್ನು ಕೊಂದಿದೆ. ಈ ಮಾಹಿತಿಯನ್ನು ಸೇನೆಯ ವಕ್ತಾರರು ಶನಿವಾರ ಸುದ್ದಿಗಾರರ ಜತೆ ಹಂಚಿಕೊಂಡಿದ್ದಾರೆ.

ಇಸ್ರೇಲ್ ಸೇನೆ ಶುಕ್ರವಾರ ಹಿಜ್ಬುಲ್ಲಾ ಪ್ರಧಾನ ಕಚೇರಿಯನ್ನು ಗುರಿಯಾಗಿಸಿ ನಿಖರ ರಾಕೆಟ್ ದಾಳಿ ನಡೆಸಿದೆ. ಬೈರೂತ್‌ನ ದಕ್ಷಿಣದ ದಹೀಹ್‌ನಲ್ಲಿ ಆರು ವಸತಿ ಕಟ್ಟಡಗಳು ಈ ದಾಳಿಯಲ್ಲಿ ನೆಲಸಮಗೊಂಡಿವೆ. ಇದೇ ದಾಳಿಯಲ್ಲಿ ನಸ್ರಲ್ಲಾ ಹತನಾಗಿದ್ದಾನೆ. ಅಲ್ಲದೇ ಮಕ್ಕಳು ಸೇರಿದಂತೆ 6 ಜನರು ಮೃತಪಟ್ಟಿದ್ದಾರೆ.

ಜತೆಗೆ ಹಿಜ್ಬುಲ್ಲಾ ಉಗ್ರ ಸಂಘಟನೆಯ ಹಲವು ಹಿರಿಯ ನಾಯಕರೂ ಹತರಾಗಿದ್ದಾರೆ ಎಂದು ಇಸ್ರೇಲ್ ಸೇನಾಪಡೆ ಹೇಳಿದೆ. ಬೈರೂತ್ ಮೇಲೆ ಇಸ್ರೇಲ್ ಸೇನೆ ಶುಕ್ರವಾರ ನಡೆಸಿದ ಸರಣಿ ರಾಕೆಟ್ ದಾಳಿಗಳಲ್ಲಿ ನಸ್ರಲ್ಲಾನ ಪುತ್ರಿ ಝೈನಾಬ್ ಕೂಡ ಸಾವನ್ನಪ್ಪಿದ್ದಾಳೆ ಎಂದು ಮಾಧ್ಯಮ ಗಳು ವರದಿ ಮಾ ಡಿವೆ. ಹಿಜ್ಬುಲ್ಲಾ ಉಗ್ರ ಸಂಘಟನೆ ಮುನ್ನಡೆಸುವವರು ಯಾರು? ಎಂಬ ಪ್ರಶ್ನೆ ಈಗ ಎದುರಾಗಿದೆ.

ದೊಡ್ಡ ಸಂಖ್ಯೆಯ ಜನರು ಗಾಯಗೊಂಡಿದ್ದು, ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ. ಕಳೆದೊಂದು ವರ್ಷದಲ್ಲಿ ಲೆಬನಾನ್ ರಾಜಧಾನಿ ಯಲ್ಲಿನ ಅತಿ ದೊಡ್ಡ ಸ್ಫೋಟ ಇದಾಗಿದೆ. ಲೆಬನಾನ್‌ನ ದಕ್ಷಿಣದ ಉಪ ನಗರಗಳ ಮೇಲೆಯೂ ಇಸ್ರೇಲ್‌ನಿಂದ ಸರಣಿ ದಾಳಿ ನಡೆದಿವೆ.

ಹಿಜ್ಬುಲ್ಲಾದ ಸದರ್ನ್ ಫ್ರಂಟ್ ಕಮಾಂಡರ್ ಅಲಿ ಕರ್ಕಿ ಮತ್ತು ಹೆಚ್ಚುವರಿ ಹಿಜ್ಬುಲ್ಲಾ ಕಮಾಂಡರ್‌ಗಳು ಕೂಡಾ ಇತ್ತೀಚಿನ ವೈಮಾನಿಕ ದಾಳಿಗಳಲ್ಲಿ ಹತರಾ ದರು. ಹೆಚ್ಚುವರಿ ಮೀಸಲು ಪಡೆಗಳನ್ನು ಸಜ್ಜುಗೊಳಿ ಸಲಾಗುತ್ತಿದೆ. ಶನಿವಾರ ಬೆಳಗ್ಗೆ 3 ಬೆಟಾಲಿಯನ್ ಮೀಸಲು ಸೈನಿಕರನ್ನು ಸಕ್ರಿಯಗೊಳಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

- ಹಿಜ್ಬುಲ್ಲಾ ಪ್ರಧಾನ ಕಚೇರಿಗೆ ಇಸ್ರೇಲ್ ಸತತ ರಾಕೆಟ್ ದಾಳಿ
- ಶುಕ್ರವಾರದ ದಾಳಿಗೆ ಹಿಜ್ಬುಲ್ಲಾದ ಹಲವು ನಾಯಕರ ಸಾವು
- ಸರಣಿ ರಾಕೆಟ್ ದಾಳಿಗೆ ನಸ್ರಲ್ಲಾ ಪುತ್ರಿ ಝೈನಾಬ್ ಮರಣ
- 'ಹೇಡಿ ಇಸ್ರೇಲ್' ಎಂದ ಹಮಾಸ್; ಇರಾಕ್ 3 ದಿನ ಶೋಕ

ಆಪರೇಷನ್ ನ್ಯೂ ಆರ್ಡರ್!

ಹಿಜ್ಬುಲ್ಲಾ ಪ್ರಮುಖ ನಾಯಕ ಹಸನ್ ನಸ್ರಲ್ಲಾನನ್ನು ಆಪರೇಷನ್ ನ್ಯೂ ಆರ್ಡರ್ ಎಂದು ಕರೆಯುವ ಕಾರ್ಯಾಚರಣೆ ಮೂಲಕ ಕೊಂದಿದ್ದೇವೆ. ಹಲವು ತಿಂಗಳ ಹೋರಾಟದ ನಂತರ ಲೆಬನಾನಿನ ಉಗ್ರಗಾಮಿ ಗುಂಪಿಗೆ ದೊಡ್ಡ ಹೊಡೆತ ನೀಡಿದ್ದೇವೆ ಎಂದು ಇಸ್ರೇಲ್ ಹೇಳಿಕೊಂಡಿದೆ. ಇಸ್ರೇಲ್ ನಾಗರಿಕರಿಗೆ ಬೆದರಿಕೆ ಹಾಕುವ ಯಾರೇ ಆಗಿದ್ದರೂ ಅವರ ಅಂತ್ಯ ಶತಃಸಿದ್ಧ. ಅಂತಹವರು ಎಲ್ಲೇ ಅಡಗಿದ್ದರೂ ಅವರನ್ನು ಹೇಗೆ ತಲುಪಬೇಕು ಎಂದು ನಮಗೆ ತಿಳಿದಿದೆ ಎಂದು ಇಸ್ರೇಲಿ ಸೇನಾಪಡೆ ಮುಖ್ಯಸ್ಥ ಹಜಿರ್ ಹಲೇವಿ ಹೇಳಿರುವುದಾಗಿ ರಾಯಿಟರ್ಸ್ ವರದಿ ಮಾಡಿದೆ.



6 ದಿನಕ್ಕೆ 720 ಸಾವು, 90 ಸಾವಿರ ಜನ

ಸೋಮವಾರದಿಂದ ಈವರೆಗೆ ಲೆಬನಾನ್‌ನಲ್ಲಿ ಇಸ್ರೇಲ್ ದಾಳಿಗೆ ಮಕ್ಕಳು ಸೇರಿದಂತೆ 720 ಜನರು ಸಾವಿಗೀಡಾಗಿದ್ದಾರೆ. ಲೆಬನಾನ್ ಸರಕಾರಿ ಸುದ್ದಿಸಂಸ್ಥೆ ಪ್ರಕಾರ, ನಾಗರಿಕ ರಕ್ಷಣಾ ಕೇಂದ್ರಗಳು ಮತ್ತು ವೈದ್ಯಕೀಯ ಚಿಕಿತ್ಸಾಲಯಗಳ ಮೇಲೆಯೂ ಇಸ್ರೇಲ್ ಸೇನೆ ದಾಳಿ ನಡೆಸಿದ್ದು, 11 ವೈದ್ಯರು, ದಾದಿಯರು ಮತ್ತು ಶುಶ್ರೂಷಕರು ಕೂಡಾ ಸಾವಿಗೀಡಾಗಿದ್ದಾರೆ. 10 ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್‌ನ ನೇರ ಎಚ್ಚರಿಕೆ ಸಂದೇಶ ಮತ್ತು ರಾಕೆಟ್ ದಾಳಿ ತೀವ್ರಗೊಳ್ಳುತ್ತಲೇ ಲೆಬನಾನ್‌ನ ದಕ್ಷಿಣ ಭಾಗದಿಂದ ಈ ವಾರದಲ್ಲೇ 90 ಸಾವಿರಕ್ಕೂ ಅಧಿಕ ಜನರು ಮನೆ ತೊರೆದು ದೂರದ ಬೇರೆ ನಗರಗಳಿಗೆ ಸ್ಥಳಾಂತರಗೊಂಡಿದ್ದಾರೆ.

ಹಸನ್‌ನಸ್ರಲ್ಲಾ ಸಾವು ದೃಢಪಡಿಸಿದ ಹಿಜ್ಬುಲ್ಲಾ

ಹಿಜ್ಬುಲ್ಲಾ ಸಂಘಟನೆ ಈ ಬಗ್ಗೆ ತಡವಾಗಿ ಪ್ರತಿಕ್ರಿಯೆ ನೀಡಿದೆ. ತಮ್ಮ ಪ್ರಮುಖ ನಾಯಕ ನಸ್ರುಲ್ಲಾ ಸಾವಿಗೀಡಾಗಿರುವುದನ್ನು ಖಚಿತಪಡಿಸಿದೆ. ನಸ್ರಲ್ಲಾ ಸಾವಿಗೆ ಕಾರಣವಾದ ಇಸ್ರೇಲ್ ದಾಳಿ ಯನ್ನು ಹಮಾಸ್ ಉಗ್ರವಾಗಿ ಖಂಡಿಸಿದೆ. ಇದೊಂದು ಹೇಡಿತನದ ಕೃತ್ಯ ಎಂದು ಹೇಳಿದೆ. 3 ದಶಕಕ್ಕೂ ಅಧಿಕ ಸಮ ಯ ಹಿಜ್ಬುಲ್ಲಾ ಸಂಘಟನೆಯನ್ನು ಮುನ್ನಡೆಸಿದ್ದ ನಾ ಯಕ ನಸ್ರಲ್ಲಾ ಹತನಾಗಿರುವುದರಿಂದ ಇರಾಕ್ ದೇಶಾದ್ಯಂತ 3 ದಿನಗಳ ಶೋಕಾಚರಣೆ ಘೋಷಿಸಿದೆ.

ಯಾರು ಈ ನಸ್ರಲ್ಲಾ!

3 ದಶಕಗಳ ಕಾಲ ಹಿಜ್ಬುಲ್ಲಾ ಸಂಘಟನೆ ನೇತೃತ್ವ ವಹಿಸಿಕೊಂಡಿದ್ದ ಹಸನ್ ನಸ್ರಲ್ಲಾ, ಇಸ್ರೇಲ್ ವಿರುದ್ಧದ ಅನೇಕ ಶಸ್ತ್ರಾಸ್ತ್ರ ಹೋರಾಟಗಳಲ್ಲಿ ತೊಡಗಿದ್ದರು. ಸಿರಿಯಾ ಅಂತರ್‌ಯುದ್ಧದಲ್ಲಿಯೂ ಮಹತ್ವದ ಪಾತ್ರ ವಹಿಸಿದ್ದ. ಅಧ್ಯಕ್ಷ ಬಶರ್ ಅಸ್ಸಾದ್ ಸ್ಥಾನ ಬಲಪಡಿಸಲು ಕೈಜೋಡಿಸಿದ್ದರು. ಇರಾನ್‌ನ ಶಿಯಾ ನಾಯಕರು, ಹಮಾಸ್ ಉಗ್ರ ಸಂಘಟನೆ ಜತೆ ಬಲವಾದ ಮೈತ್ರಿ ಬೆಳೆಸಿಕೊಂಡಿದ್ದ ನಸ್ರಲ್ಲಾ, ಇಸ್ರೇಲ್‌ಗೆ ಪ್ರಮುಖ ಎದುರಾಳಿಯಾಗಿದ್ದ. 1960ರಲ್ಲಿ ಬೈರೂತ್‌ನ ಬಡ ಶಿಯಾ ಕುಟುಂಬದಲ್ಲಿ ಜನಿಸಿದ ನಸ್ರಲ್ಲಾ, 1982ರಲ್ಲಿ ಹಿಜ್ಬುಲ್ಲಾ ಸಂಘಟನೆ ಸ್ಥಾಪನೆಗೆ ಕೈಜೋಡಿಸಿದ್ದ. ಅದಕ್ಕೆ ಮೊದಲು ಅಮಲ್ ಚಳವಳಿ ಸೇರಿದ್ದ. ಸಯ್ಯದ್ ಅಬ್ಬಾಸ್ ಮುಸಾವಿ ಹತ್ಯೆ ನಂತರ 1992 ರಲ್ಲಿ ಹಿಜ್ಬುಲ್ಲಾ ನಾಯಕನಾದ.

ಸುರಕ್ಷಿತ ತಾಣ ಸೇರಿದ ಆಯತೊಲ್ಲಾ

ಇಸ್ರೇಲ್ ಶುಕ್ರವಾರ ನಡೆಸಿದ ಸರಣಿ ರಾಕೆಟ್‌ಗಳ ದಾಳಿಯಲ್ಲಿ ಹಿಜ್ಬುಲ್ಲಾ ಉಗ್ರ ಸಂಘಟನೆಯ ಕ್ಷಿಪಣಿ ಘಟಕದ ಕಮಾಂಡರ್ ಮೊಹಮ್ಮದ್ ಅಲಿ ಇಸ್ಮಾ ಯಿಲ್ ಮತ್ತು ಉಪ ಕಮಾಂಡರ್ ಹುಸೇನ್ ಅಹ ಮದ್ ಇಸ್ಮಾಯಿಲ್ ಕೂಡಾ ಹತರಾಗಿದ್ದಾರೆ. ಇದ ರಿಂದ ಹಿಜ್ಬುಲ್ಲಾ ಉಗ್ರ ಸಂಘಟನೆಯ ಜಂಘಾಬಲವೇ ಉಡುಗಿದಂತಾಗಿದೆ. ಕಡೆಗೂ ಇಸ್ರೇಲ್ ಸೇನಾಪಡೆ ಗುರಿಯಿಟ್ಟು ಹಿಜ್ಬುಲ್ಲಾ ಪ್ರಧಾನ ಕಚೇರಿಯ ಮೇಲೇ ದಾಳಿ ನಡೆಸಿ ಪ್ರಮುಖ ನಾಯಕ ನಸ್ರುಲ್ಲಾನನ್ನು ಕೊಂದು ಹಾಕಿದ ಬಳಿಕ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಖಮೇನಿ ಅವರೂ ಸುರಕ್ಷಿತವಾದ ತಾಣವನ್ನು ಸೇರಿಕೊಂಡಿದ್ದಾರೆ ಎಂದು ವರದಿಯಾಗಿದೆ.

ವಿಶ್ವಸಂಸ್ಥೆ: ಪಾಕ್‌ಗೆ ಭಾರತ ಪ್ರತಿನಿಧಿ ತರಾಟೆ

ನ್ಯೂಯಾರ್ಕ್: ವಿಶ್ವಸಂಸ್ಥೆ ಮಹಾಸಭೆಯ 79ನೇ ಅಧಿವೇಶನದಲ್ಲಿ ಕಾಶ್ಮೀರ ವಿಚಾರ ಪ್ರಸ್ತಾಪಿಸಿ ಭಾರತಕ್ಕೆ ಮುಜುಗರ ತರಲೆತ್ನಿಸಿದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್‌ಗೆ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ, ಪ್ರಥಮ ಕಾರ್ಯದರ್ಶಿ ಭಾವಿಕಾ ಮಂಗಳಾನಂದನ್ ಬಲವಾದ ತಿರುಗೇಟು ನೀಡಿದ್ದಾರೆ. ದೇಶದ ಗಡಿಯಲ್ಲಿ ಪಾಕ್ ನಡೆಸುವ ಉಗ್ರ ಕೃತ್ಯಗಳನ್ನು ಸಾಕ್ಷಿ ಸಮೇತ ವಿವರಿಸಿ ತರಾಟೆಗೆ ತೆಗೆದುಕೊಂಡಿದ್ದಾರೆ. ಭಯೋತ್ಪಾದನೆ, ಮಾದಕ ದ್ರವ್ಯ ಕಳ್ಳಸಾಗಣೆ, ಅಂತಾರಾಷ್ಟ್ರೀಯ ಅಪರಾಧಗಳಿಗೆ ವಿಶ್ವದಲ್ಲೇ ಕುಖ್ಯಾತಿ ಪಡೆದಿರುವ ದೇಶ, ನೆಪ ಮಾತ್ರಕ್ಕೆ ಚುನಾವಣೆ ನಡೆಸಿ ಸೇನೆಯಿಂದ ಆಡಳಿತ ನಡೆಸುತ್ತದೆ. ಅಂಥ ದೇಶ ಇಲ್ಲಿ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದ ವಿರುದ್ಧ ಆರೋಪ ಮಾಡಲೆತ್ನಿಸಿದೆ. ಪಾಕ್ ಪ್ರಧಾನಿಯ ಭಾಷಣಕ್ಕೆ ಪ್ರತಿಯಾಗಿ ಈ ಹೇಳಿಕೆ ನೀಡುತ್ತಿದ್ದೇನೆ ಎಂದು ಭಾವಿಕಾ ಉಗ್ರ ಖಂಡನೆ ವ್ಯಕ್ತಪಡಿಸಿದರು.

ಪಾಕ್ ಪ್ರಧಾನಿ: ಗಡಿ ನಿಯಂತ್ರಣ ರೇಖೆ ದಾಟಿ ಬಂದು ಆಜಾದ್ ಕಾಶ್ಮೀರ ವಶಪಡಿಸಿಕೊಳ್ಳುವುದಾಗಿ ಭಾರತ ಬೆದರಿಸುತ್ತಿದೆ. ಇಂಥ ಆಕ್ರಮಣ ವಿರುದ್ಧ ಪಾಕ್ ತಕ್ಕ ರೀತಿ ಪ್ರತಿಕ್ರಿಯಿಸಲಿದೆ ಎಂದು ಹಿಂಜರಿಕೆಯಿಲ್ಲದೆ ಹೇಳುವೆ. ಕಾಶ್ಮೀರ ವಿಚಾರದಲ್ಲಿ ಭಾರತ 2019ರ ಆ.5ರಲ್ಲಿ ತೆಗೆದುಕೊಂಡ ಏಕಪಕ್ಷೀಯ-ಕಾನೂನುಬಾಹಿರ ಕ್ರಮಗಳನ್ನು ರದ್ದುಗೊಳಿಸಬೇಕು ಎಂದು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ತಮ್ಮ ಭಾಷಣದಲ್ಲಿ ಆಗ್ರಹಿಸಿದ್ದರು.

ಭಾರತ ವಿರುದ್ಧ ಗಡಿಯಾಚೆ ಭಯೋತ್ಪಾದನೆ ನಡೆಸಿದರೆ, ಉಗ್ರರಿಗೆ ಕುಮ್ಮಕ್ಕು ನೀಡಿದರೆ ತಕ್ಕ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಅರಿತಿರಲಿ. ವಿಶ್ವಾದ್ಯಂತ ಉಗ್ರ ಕೃತ್ಯ ನಡೆಸಿದ ಒಸಾಮಾ ಬಿನ್ ಲಾಡೆನ್‌ನನ್ನು ಸಲಹಿದ, ವಿಶ್ವಾದ್ಯಂತ ಮಾದಕ ದ್ರವ್ಯ ಜಾಲ ಹರಡುವ ದೇಶ ಪಾಕ್. ಅದರ ಪ್ರಧಾನಿ ಇಲ್ಲಿ ಆಡಿದ ಮಾತುಗಳನ್ನು ಖಂಡಿತಾ ಒಪ್ಪಲಾಗದು.

-ಭಾವಿಕಾ ಮಂಗಳಾನಂದನ್

ಭದ್ರತಾ ಮಂಡಳಿಗೆ ಭಾರತ: ಭೂತಾನ್ ಬೆಂಬಲ

ನ್ಯೂಯಾರ್ಕ್: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ನೀಡಬೇಕು ಎಂದು ಭೂತಾನ್ ಕೂಡ ಹೇಳಿದೆ.

ಆರ್ಥಿಕ ಪಗ್ರತಿಯಲ್ಲಿ ಗಮನಾರ್ಹ ಸಾಧನೆ ತೋರುತ್ತಿರುವ ಮತ್ತು ಜಾಗತಿಕ ನಾಯಕತ್ವ ವಹಿಸುತ್ತಿರುವ ಭಾರತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯನಾಗುವುದಕ್ಕೆ ಎಲ್ಲಾ ರೀತಿಯಲ್ಲೂ ಅರ್ಹವಾಗಿದೆ ಎಂದು ಭೂತಾನ್ ಪ್ರಧಾನಿ ಶೆರಿಂಗ್ ಟೊಬಗೆ ವಿಶ್ವಸಂಸ್ಥೆಯ ಮಹಾ ಅಧಿವೇಶನದ 79ನೇ ಸಭೆಯಲ್ಲಿ ಶುಕ್ರವಾರ ಹೇಳಿದ್ದಾರೆ. ತೀರಾ ಹಿಂದುಳಿದ ದೇಶ ಶ್ರೇಣಿಯಲ್ಲಿದ್ದ ಭೂತಾನ್ ಪ್ರಗತಿಯತ್ತ ಮುನ್ನಡೆಯಲು ಭಾರತ ನೀಡಿದ ನೆರವು ಮತ್ತು ಸ್ನೇಹಕ್ಕಾಗಿ, ಟೊಬಗೆ ಇದೇ ವೇಳೆ ಕೃತಜ್ಞತೆ ಸಲ್ಲಿಸಿ ದ್ದಾರೆ. ವಿಶ್ವಶಾಂತಿಗೆ ಶ್ರಮಿಸುತ್ತಿರುವ ಜಪಾನ್ ದೇಶಕ್ಕೂ ಭದ್ರತಾ ಮಂಡಳಿ ಯಲ್ಲಿ ಕಾಯಂ ಸದಸ್ಯತ್ವ ಸಿಗಬೇಕು ಎಂದು ಆಗ್ರಹಿಸಿದ್ದಾರೆ. ವಿಶ್ವಸಂಸ್ಥೆ ಪ್ರಸಕ್ತ ವಿಶ್ವದ ವಾಸ್ತವ ಅಂಶಗಳಿಗೆ ತಕ್ಕದಾಗಿರಬೇಕು. ಆದರೆ, ಈಗಿನ ಭದ್ರತಾ ಮಂಡಳಿ ಗತಕಾಲದ ಅವಶೇಷದಂತಿದೆ. ಸದ್ಯದ ಭೌಗೋಳಿಕ ರಾಜಕೀಯ, ಆರ್ಥಿಕ ಚಿತ್ರಣ ಮತ್ತು ಸಾಮಾಜಿಕ ವಾಸ್ತವಾಂಶಗಳನ್ನು ಪ್ರತಿನಿಧಿಸು ವಂತಹ ಸಮಥ ಭದ್ರತಾ ಮಂಡಳಿಯ ಅಗತ್ಯವಿದೆ ಎಂದೂ ಅವರು ಪ್ರತಿಪಾದಿಸಿದ್ದಾರೆ.

ಮಾಜಿ ಪ್ರಾಂಶುಪಾಲಗೆ ಜಾಮೀನಿಗೆ ವಿಶೇಷ ಕೋರ್ಟ್ ನಕಾರ

ಘೋಷ್ ಆರೋಪ ಸಾಬೀತಾದರೆ ಗಲ್ಲು

ಕೋಲ್ಕತ್ತ: ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿದ್ದ ಕಿರಿಯ ವೈದ್ಯೆ ಮೇಲೆ ನಡೆದ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶಕ್ಕೆ ಯತ್ನಿಸಿದ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಕಾಲೇಜಿನ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ವಿರುದ್ಧದ ಆರೋಪಗಳು ಬಹಳ ಗಂಭೀರವಾದದ್ದಾಗಿವೆ. ಸಾಬೀತಾದರೆ ಆರೋಪಿಗೆ ಗಲ್ಲು ಶಿಕ್ಷೆಯಾಗಲು ಇವೇ ಆರೋಪಗಳು ಕಾರಣ ಆಗಬಹುದು ಎಂದು ನ್ಯಾಯಾಲಯ ಶನಿವಾರ ಹೇಳಿದೆ.

ಕೇಂದ್ರೀಯ ತನಿಖಾ ದಳ(ಸಿಬಿಐ) ತನಿಖೆ ನಡೆಸುತ್ತಿರುವ ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆ ಪ್ರಕರಣದಲ್ಲಿ ಆರೋಪಿ ಸಂದೀಪ್ ಘೋಷ್‌ಗೆ ಜಾಮೀನು ನೀಡಲು ವಿಶೇಷ ನ್ಯಾಯಾಲಯ ನಿರಾಕರಿಸಿದೆ. ಜಾಮೀನು ನೀಡದೇ ಇರಲು ಪ್ರಮುಖ ಕಾರಣವೆಂದರೆ ಆರೋಪಿ ಸಂದೀಪ್ ಘೋಷ್ ವಿರುದ್ಧ ಗಂಭೀರ ಆರೋಪಗಳಿವೆ. ಅವು ಸಾಬೀತಾದರೆ ಮರಣದಂಡನೆಗೆ ಕಾರಣ ಆಗುವಂತಹ ಆರೋಪಗಳಾಗಿವೆ ಎಂದು ನ್ಯಾಯಾಲಯ ಹೇಳಿದೆ. ಘೋಷ್ ಜಾಮೀನು ಅರ್ಜಿ ತಿರಸ್ಕರಿಸಿದ ಹೆಚ್ಚುವರಿ ಮುಖ್ಯ ನ್ಯಾಯಾಲಯದ ನ್ಯಾಯಾಧೀಶರಾದ ಎಸ್. ಡೇ ಅವರು, 'ಆರೋಪಿ ಸಂದೀಪ್ ಘೋಷ್ ವಿರುದ್ಧದ ಆರೋಪಗಳೆಲ್ಲವೂ ಬಹಳ ಗಂಭೀರ ಸ್ವರೂಪದ್ದಾಗಿವೆ. ಮರಣದಂಡನೆ ಶಿಕ್ಷೆಯನ್ನು ಅಪರೂಪದ ಪ್ರಕರಣಗಳಲ್ಲಷ್ಟೇ ನೀಡಲಾಗುತ್ತದೆ. ಈ ಪ್ರಕರಣದಲ್ಲಿನ ಆರೋಪಗಳು ಅಷ್ಟೇ ಗಂಭೀರ ಸ್ವರೂಪದ್ದಾಗಿವೆ. ಆರೋಪಿಗೆ ಜಾಮೀನು ನೀಡಿ ಬಿಡುಗಡೆ ಮಾಡಿದರೆ ಕಾನೂನಿನೆದುರು ಎಲ್ಲರೂ ಸಮಾನರು ಎಂಬ ತತ್ವದ ಉಲ್ಲಂಘನೆ ಆಗುತ್ತದೆ. ಹಾಗಾಗಿ ಜಾಮೀನು ಮಂಜೂರು ಮಾಡಲಾಗದು ಎಂದು ಹೇಳಿದರು. ಆರೋಪಿ ಘೋಷ್‌ರನ್ನು ಪ್ರಕರಣದಲ್ಲಿ ತಪ್ಪಾಗಿ ಸಿಲುಕಿಸಲಾಗಿದೆ ಮತ್ತು ಅಪರಾಧ ಕೃತ್ಯದಲ್ಲಿ ಆರೋಪಿಯ ಯಾವುದೇ ಪಾತ್ರವಿಲ್ಲ ಎಂದು ಪ್ರತಿಪಾದಿಸಿದರು. ಆದರೆ, ನ್ಯಾಯಾಲಯ ವಕೀಲರ ವಾದವನ್ನು ಪುರಸ್ಕರಿಸಲಿಲ್ಲ.

ಅಭಿಜಿತ್‌ಗೂ ಜಾಮೀನಿಲ್ಲ

ಒಬ್ಬ ವ್ಯಕ್ತಿ ಹಲವರ ಸಹಾಯದಿಂದ ಅಪರಾಧ ಎಸಗಿರಬಹುದು. ಆ ಇತರೆ ಆರೋಪಿಗಳು ಘಟನೆ ನಡೆದಾಗ ಸ್ಥಳದಲ್ಲಿ ಹಾಜರಿರದೇ ಇದ್ದರೂ ಅವರೂ ಕೃತ್ಯದಲ್ಲಿ ಅಷ್ಟೇ ಪ್ರಮಾಣದಲ್ಲಿ ಭಾಗಿ ಎಂದೇ ಪರಿಗಣಿತವಾಗುತ್ತದೆ ಎಂದು ವಿಶೇಷ ನ್ಯಾಯಾಲಯ ಶನಿವಾರ ಹೊರಡಿಸಿದ ಆದೇಶದಲ್ಲಿ ತಿಳಿಸಿದೆ. ಮತ್ತೊಬ್ಬ ಪ್ರಮುಖ ಆರೋಪಿ ಪೊಲೀಸ್ ಅಧಿಕಾರಿ ಅಭಿಜಿತ್ ಮಂಡಲ್ ಜಾಮೀನು ಅರ್ಜಿಯನ್ನೂ ನ್ಯಾಯಾ ಲಯ ತಿರಸ್ಕರಿಸಿದೆ. ಸೆ.30ರವರೆಗೆ ಆರೋಪಿಗಳಿಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಸಿಬಿಐ ಸಲ್ಲಿಸಿದ ಮನವಿಯನ್ನು ಕೋರ್ಟ್ ಅಂಗೀಕರಿಸಿದೆ.

ಸಾಕ್ಷ್ಯ ನಾಶಕ್ಕೆ ಯತ್ನ

ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.8ರ ರಾತ್ರಿ ಪಾಳಿ ಯಲ್ಲಿದ್ದ ಕಿರಿಯ ವೈದ್ಯೆಯ ಮೇಲೆ ಆ.9ರ ನಸುಕಿನಲ್ಲಿ ಅತ್ಯಾಚಾರ ನಡೆಸಿ ಕೊಲೆ ಮಾಡ ಲಾಗಿದೆ. ಈ ಪ್ರಕರಣದಲ್ಲಿ ಘಟನೆ ಬೆಳಕಿಗೆ ಬಂದ ತಕ್ಷಣ ಆರೋಪಿ, ಮಾಜಿ ಪ್ರಾಂಶುಪಾಲ ಪೊಲೀಸರಿಗೆ ಮಾಹಿತಿ ನೀಡಬೇಕಿತ್ತು. ಹಾಗೆ ನಡೆದುಕೊಂಡಿಲ್ಲ. ಅಲ್ಲದೇ, ಹತ್ಯಾಚಾರ ಕೃತ್ಯ ವನ್ನು ಆತ್ಮಹತ್ಯೆ ಎಂಬಂತೆ ಬಿಂಬಿಸಲು ಯತ್ನಿಸಿ ದ್ದಾರೆ. ಕಟ್ಟಡ ನವೀಕರಣ ನೆಪದಲ್ಲಿ ಕೃತ್ಯ ನಡೆದ ಸ್ಥಳದಲ್ಲಿದ್ದ ಬಹಳಷ್ಟು ಸಾಕ್ಷ್ಯಗಳನ್ನು ನಾಶಪಡಿಸಿದ್ದಾರೆ ಎಂದು ಆರೋಪಿಸಲಾಗಿದೆ. ಇದಷ್ಟೇ ಅಲ್ಲದೇ, ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ ಆರೋಪದಡಿ ಕೋಲ್ಕತ್ತ ನಗರದ ತಾಲಾ ಪೊಲೀಸ್ ಠಾಣೆಯ ಮಾಜಿ ಉಸ್ತುವಾರಿ ಅಭಿಜಿತ್ ಮೊಂಡಲ್‌ರನ್ನು ಸಿಬಿಐ ಬಂಧಿಸಿತ್ತು.

ಉಗ್ರರ ಗುಂಡು ತಾಗಿ ನಾಲ್ವರು ಯೋಧರು, ಒಬ್ಬ ಪೊಲೀಸ್‌ಗೆ ಗಾಯ

ಕುಲ್ಗಾಂ ಕಾರ್ಯಾಚರಣೆ; ಇಬ್ಬರು ಉಗ್ರರು ಫಿನಿಶ್

ಕುಲ್ಗಾಂ: ಜಮ್ಮು-ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಶನಿವಾರ ಸುದೀರ್ಘ ನಡೆದ ಉಗ್ರ ನಿಗ್ರಹ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಇಬ್ಬರು ಉಗ್ರರನ್ನು ಹೊಡೆದುರುಳಿಸಿವೆ.

ಇಬ್ಬರು ಭಯೋತ್ಪಾದಕರ ಮೃತದೇಹಗಳ ಬಳಿಯಿದ್ದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಸದ್ಯ ಸ್ಥಳದಲ್ಲಿ ಕಾರ್ಯಾಚರಣೆ ಮುಂದುವರಿದಿದೆ.

ಭದ್ರತಾ ಪಡೆಗಳ ಜಂಟಿ ತಂಡ ಕುಲ್ಗಾಂನಲ್ಲಿ ಭಯೋತ್ಪಾದಕರಿದ್ದ ಪ್ರದೇಶವನ್ನು ಸುತ್ತುವರೆದಾಗ ಉಗ್ರರು ಮೊದಲು ಗುಂಡು ಹಾರಿಸಲು ಆರಂಭಿಸಿದರು. ಉಗ್ರರನ್ನು ಸದೆಬಡಿಯುವ ಕಾರ್ಯಾಚರಣೆ ವೇಳೆ ಗುಂಡು ತಾಗಿ ನಾಲ್ವರು ಯೋಧರು, ಒಬ್ಬರು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿ ಗಾಯಗೊಂಡಿದ್ದಾರೆ ಎಂದು ಸೇನಾಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲೆಯ ಅಡಿಗಾಂ ಗ್ರಾಮದಲ್ಲಿ ಭಯೋತ್ಪಾದಕರು ಇರುವ ಬಗ್ಗೆ ಗುಪ್ತಚರ ಮಾಹಿತಿ ಲಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ, ಸೇನೆಯ ಯೋಧರು, ಕಾಶ್ಮೀರ ಪೊಲೀಸ್ ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಸೇರಿದಂತೆ ಭದ್ರತಾ ಪಡೆಗಳ ಜಂಟಿ ತಂಡ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿವೆ. ಅಡಗಿರುವ ಉಗ್ರರು ತಪ್ಪಿಸಿಕೊಳ್ಳದಂತೆ ಭದ್ರತಾ ಪಡೆಗಳು ಎಲ್ಲಾ ಮಾರ್ಗಗಳನ್ನು ಮುಚ್ಚಿವೆ.

ಪುಲ್ವಾಮ: 6 ಸಹಚರರ ಸೆರೆ

ಪುಲ್ವಾಮ: ಜಮ್ಮು-ಕಾಶ್ಮೀರದ ಪುಲ್ವಾಮದಲ್ಲಿ ಶನಿವಾರ ಕಾರ್ಯಾಚರಣೆ ನಡೆಸಿದ ರಾಜ್ಯ ಪೊಲೀಸರು ಉಗ್ರರ 6 ಸಹಚರರನ್ನು ಬಂಧಿಸಿದ್ದಾರೆ. ಜತೆಗೆ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರು ಜೈಶ್-ಎ-ಮೊಹಮ್ಮದ್ ಸಂಘಟನೆಗೆ ಸೇರಿದವರು. ಪಾಕಿಸ್ತಾನ ಮೂಲದ ಕಾಶ್ಮೀರಿ ಉಗ್ರಗಾಮಿ ಶ್ರೇಣಿಗೆ ಸೇರಲು ಯುವಕರನ್ನು ಪ್ರಚೋದಿಸುತ್ತಿದ್ದರು. ಸಂಘಟನೆಗೆ ಯುವಕರನ್ನು ಸೇರಿಸಿಕೊಂಡಾಗ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳ ಬಳಕೆಯ ತರಬೇತಿ ನೀಡುತ್ತಿದ್ದರು. ಇವರ ಪ್ರಚೋದನೆಯಿಂದ ಉಗ್ರ ಸಂಘಟನೆಗೆ ಸೇರಿದ ಯುವಕರನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಧ್ಯಮಕ್ಕೆ ಮಾಹಿತಿ ನೀಡಿದ್ದಾರೆ.

ತ.ನಾಡು ಕೃಷ್ಣಗಿರಿ ಜಿಲ್ಲೆ ಹೊಸೂರಲ್ಲಿನ ಘಟಕ

ಹೊಸೂರು: ಟಾಟಾ ಇಲೆಕ್ಟ್ರಾನಿಕ್ಸ್ ಅಗ್ನಿ ಅವಘಡ, 9 ಮಂದಿಗೆ ಗಾಯ

ಹೊಸೂರು: ತಮಿಳುನಾಡಿನಲ್ಲಿರುವ 'ಟಾಟಾ ಎಲೆಕ್ಟ್ರಾನಿಕ್ಸ್ ಪ್ರೈ.ಲಿ.' ಘಟಕದಲ್ಲಿ ಭೀಕರ ಶನಿವಾರ ಬೆಳಗ್ಗೆ ಭಾರೀ ಬೆಂಕಿ ಅವಘಡ ಸಂಭವಿಸಿದ್ದು, 9 ಮಂದಿ ಗಾಯಗೊಂಡಿದ್ದಾರೆ. ಕೋಟ್ಯಂತರ ಮೌಲ್ಯದ ಪರಿಕರಗಳು ಭಸ್ಮವಾಗಿವೆ. ಮೂಲಗಳ ಪ್ರಕಾರ ಘಟನೆ ನಡೆದಾಗ ಮೊದಲ ಪಾಳಿಯಲ್ಲಿ 1,500 ಉದ್ಯೋಗಿಗಳು ಕರ್ತವ್ಯದಲ್ಲಿದ್ದರು.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ಬಳಿಯ ಟಾಟಾ ಇಲೆಕ್ಟ್ರಾನಿಕ್ಸ್ ಪ್ರೈ.ಲಿ. ಘಟಕದಲ್ಲಿ ಶನಿವಾರ ಬೆಳಗ್ಗೆ ಭಾರೀ ಅಗ್ನಿ ಅವಘಡ ಸಂಭವಿಸಿದೆ. ನಾಗಮಂಗಲಂ ಸಮೀಪದ ಉದ್ದಾನಪಲ್ಲಿಯಲ್ಲಿರುವ ಕಂಪನಿಯ ಮೊಬೈಲ್ ಫೋನ್ ಬಿಡಿಭಾಗಗಳ ಪೇಂಟಿಂಗ್ ಘಟಕದಲ್ಲಿ ರಾಸಾಯನಿಕಗಳಿದ್ದ ಕಡೆ ಬೆಳಿಗ್ಗೆ 5.30ರಲ್ಲಿ ಬೆಂಕಿ ಹೊತ್ತಿಕೊಂಡಿದೆ. ಅವಘಡದ ಬೆನ್ನಲ್ಲೇ ಘಟಕದ ತುಂಬಾ ದಟ್ಟ ಹೊಗೆ ಆವರಿಸಿದೆ. ಎಲ್ಲಾ ಉದ್ಯೋಗಿಗಳನ್ನು ತಕ್ಷಣವೇ ಆವರಣದಿಂದ ಸ್ಥಳಾಂತರಿಸಲಾಗಿದೆ. 7 ಅಗ್ನಿಶಾಮಕ ವಾಹನಗಳ ನೆರವಿನಲ್ಲಿ ಬೆಂಕಿ ನಂದಿಸುವ ಕಾರ್ಯ ತಾಸುಗಟ್ಟಲೆ ನಡೆದು ಬೆಂಕಿಯನ್ನು ಪೂರ್ಣ ನಂದಿಸಲಾಗಿದೆ.

ಮನೆಯವರಿಂದ ಪಾಕ್ 82%ಮಹಿಳೆ ಅತ್ಯಾಚಾರ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿನ ಮಹಿಳೆ 4 ಗೋಡೆಗಳ ನಡುವೆ ನರಕ ಅನುಭವಿಸುತ್ತಿದ್ದಾಳೆ. ಮಹಿಳೆ ಮೇಲೆ ಮನೆಯ ಪುರುಷರೇ ಅತ್ಯಾಚಾರ ನಡೆಸುತ್ತಾರೆ ಎಂದು ಪಾಕ್ ಸಂಸದೆ ಷಂದಾನಾ ಗುಲ್ಜಾರ್ ಖಾನ್ ಹೇಳಿದ್ದಾರೆ.

ದೇಶದ ಶೇ.82 ಸ್ತ್ರೀಯರು ಕುಟುಂಬದವರಿಂದಲೇ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ. ಅಪ್ಪ, ಚಿಕ್ಕಪ್ಪ, ಅಜ್ಜ, ಸೋದರರಿಂದಲೂ ಅತ್ಯಾಚಾರಕ್ಕೆ ಒಳಗಾಗಿದ್ದಾರೆ. ಸಂತ್ರಸ್ತ ಮಹಿಳೆಯರೇ ಈ ಬಗ್ಗೆ ಅಳಲು ತೋಡಿಕೊಂಡಿದ್ದಾರೆ ಎಂದು ಸಂಸದೆ ಟಿವಿ ಚರ್ಚಾಕೂಟದಲ್ಲಿ ಹೇಳಿದ್ದಾರೆ. ಜತೆಗೆ 'ವಾರ್ ಆನ್ ರೇಪ್' ಸಂಸ್ಥೆಯ ವರದಿಯನ್ನೂ ಉಲ್ಲೇಖಿಸಿದ್ದಾರೆ.

ಅತ್ಯಾಚಾರಕ್ಕೆ ಒಳಗಾಗಿ ಗರ್ಭಿಣಿಯಾದರೂ ಪೊಲೀಸರಿಗೆ ದೂರು ನೀಡುವುದಿಲ್ಲ. ಬದಲಾಗಿ ಗರ್ಭಪಾತ ಮಾಡಿಕೊಳ್ಳಲು ವೈದ್ಯರ ಬಳಿ ಹೋಗುತ್ತಾಳೆ. ದೇಶದಲ್ಲಿ ಯಾರೂ ಈ ಬಗ್ಗೆ ಮಾತನಾಡುವುದಿಲ್ಲ, ಪ್ರತಿಭಟಿಸುವುದಿಲ್ಲ. ಎಲ್ಲರಿಗೂ ಜೀವ ಭಯ ಎಂದು ಸಂಸದೆ ಹೇಳಿದ್ದಾರೆ. ಗುಲ್ಜಾರ್ 2018ರಿಂದ ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿ ಸದಸ್ಯರಾಗಿದ್ದಾರೆ. ಒಬ್ಬ ಸಂಸದೆಯೇ ದಾಖಲೆ ಸಹಿತ ಹೇಳಿಕೆ ನೀಡಿರುವುದರಿಂದ ಪಾಕ್‌ನಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ.

ಕಾಶ್ಮೀರದಲ್ಲಿ ಬಿಜೆಪಿಗೆ ಬಹುಮತ: ಮೋದಿ

ಶ್ರೀನಗರ: ಜಮ್ಮು-ಕಾಶ್ಮೀರ ಚುನಾವಣೆಯಲ್ಲಿ ಮೊದಲ ಬಾರಿಗೆ ಬಿಜೆಪಿ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅ.1ರಂದು 3ನೇ ಹಂತದ ಮತದಾನ ನಡೆಯಲಿರುವ ಹಿನ್ನೆಲೆ ಪ್ರಧಾನಿ ಮೋದಿ ಶನಿವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ಮೊದಲ ಎರಡು ಹಂತದ ಮತದಾನದ ನಂತರ ಬಿಜೆಪಿ ಜಮ್ಮು-ಕಾಶ್ಮೀರದಲ್ಲಿ ಪೂರ್ಣ ಬಹುಮತದೊಂದಿಗೆ ಸರಕಾರ ರಚಿಸುವುದು ಖಚಿತವಾಗಿದೆ. ಕಣಿವೆ ಪ್ರದೇಶದ ಜನರು ಅಭಿವೃದ್ಧಿಗಾಗಿ ಬಿಜೆಪಿ ಸರಕಾರವನ್ನೇ ಬಯಸುತ್ತಿದ್ದಾರೆ. ಹಾಗಾಗಿಯೇ ಈವರೆಗೆ ನಡೆದ 2 ಹಂತಗಳ ಚುನಾವಣೆಯಲ್ಲಿ ಭಾರೀ ಪ್ರಮಾಣದ ಮತದಾನವಾಗಿದೆ ಎಂದು ವಿಶ್ಲೇಷಿಸಿದರು. ಮೊದಲ ಬಾರಿಗೆ ಜಮ್ಮು ಪ್ರದೇಶದ ಜನರ ಆಶಯದಂತೆ ಸರಕಾರ ರಚನೆಯಾಗುತ್ತಿದೆ. ಇದು ದೇವಾಲ ಯಗಳ ಸ್ಥಳವಾಗಿದೆ. ಈ ಅವಕಾಶವನ್ನು ಕಳೆದುಕೊಳ್ಳಬೇಡಿ. ಬಿಜೆಪಿ ಸರಕಾರ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂದು ಭರವಸೆ ನೀಡಿದರು. ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ಪಕ್ಷಗಳ ವಿರುದ್ಧ ಟೀಕಾಪ್ರಹಾರ ಮಾಡಿದರು. 2016ರ ಸರ್ಜಿಕಲ್ ಸ್ಟ್ರೈಕ್ ವಾರ್ಷಿಕೋತ್ಸವ ಮೆಲುಕು ಹಾಕಿ, ಜಗತ್ತಿಗೆ ಇದು ನವ ಭಾರತ ಮತ್ತು ಭಯೋತ್ಪಾದನೆ ಸಹಿಸಲ್ಲ ಎಂಬ ಸಂದೇಶ ನೀಡಿದೆ ಎಂದರು.

ಅದಾಲತ್ ₹4.50 ಕೋಟಿ ವಿಮೆ ಪರಿಹಾರ

ಥಾಣೆ: ಮಹಾರಾಷ್ಟ್ರದ ಮುಂಬೈ-ಪನವೇಲ್ ರಸ್ತೆಯಲ್ಲಿ 2022ರ ಡಿ.9ರಂದು ಸ್ಕೂಟರ್‌ನಲ್ಲಿ ಸಾಗುತ್ತಿದ್ದಾಗ ಟ್ರಕ್ಕೊಂದು ಡಿಕ್ಕಿ ಹೊಡೆದಿದ್ದರಿಂದ ಅಮೆರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದ ಪಂಕಜ್ ರಮೇಶ್ ಶೇಡ್ಗೆ ಸಾವಿಗೀಡಾಗಿದ್ದರು.

ಅವರಿಗೆ ಆ ಸಂದರ್ಭ 8.40 ಲಕ್ಷ ರು. ವೇತನ ಬರುತ್ತಿತ್ತು. ಅಲ್ಲದೇ, ಪಂಕಜ್ ಅವರೇ ಕುಟುಂಬಕ್ಕೆ ಆಧಾರವಾಗಿದ್ದರು, ಆದಾಯದ ಏಕಮಾತ್ರ ಮೂಲವಾಗಿದ್ದರು. ಹಾಗಾಗಿ ಕುಟುಂಬದವರು 30 ಲಕ್ಷ ಕೋಟಿ ರು. ಪರಿಹಾರ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ವಿಮಾ ಕಂಪನಿ ಅಷ್ಟೊಂದು ದೊಡ್ಡ ಮೊತ್ತದ ಪರಿಹಾರ ನೀಡಲು ಒಪ್ಪಿಕೊಳ್ಳಲಿಲ್ಲ. 20 ತಿಂಗಳ ಕಾಲ ವಿಚಾರಣೆ ನಡೆದರೂ ಪ್ರಕರಣ ಇತ್ಯರ್ಥವಾಗಿರಲಿಲ್ಲ. ಶನಿವಾರ ರಾಷ್ಟ್ರೀಯ ಲೋಕ ಅದಾಲತ್ ನಡೆದಾಗ ಈ ಪ್ರಕರಣವೂ ವಿಚಾರಣೆಗೆ ಬಂದಿತು. ಆಗ ಲೋಕ ಅದಾಲತ್ ಸಲಹೆ ಮೇರೆಗೆ ನಿಲುವು ಬದಲಿಸಿದ ವಿಮಾ ಕಂಪನಿ ಕೊನೆಗೆ 4.50 ಕೋಟಿ ರು. ಪರಿಹಾರ ಕೊಡಲು ಒಪ್ಪಿಕೊಂಡಿತು. ಆ ಮೊತ್ತಕ್ಕೆ ಪಂಕಜ್ ಕುಟುಂಬದವರೂ ಒಪ್ಪಿಕೊಂಡರು. ಅಲ್ಲಿಗೆ ಪ್ರಕರಣ ಕೊನೆಗೊಂಡಿತು.

ಉಗ್ರರ ದಾಳಿ ಭೀತಿ; ಮುಂಬೈನಲ್ಲಿ ಕಟ್ಟೆಚ್ಚರ

ಮುಂಬೈ: ಈಗಾಗಲೇ ಹಲವು ಬಾರಿ ಭಯೋತ್ಪಾದಕ ದಾಳಿಗೆ ಒಳಗಾಗಿ ನಲುಗಿರುವ ದೇಶದ ವಾಣಿಜ್ಯ ರಾಜಧಾನಿ ಮುಂಬೈಗೆ ಈಗ ಮತ್ತೊಮ್ಮೆ ಉಗ್ರರ ದಾಳಿ ಭೀತಿ ಎದುರಾಗಿದೆ. ಭಯೋತ್ಪಾದಕರ ದಾಳಿ ಸಾಧ್ಯತೆ ಇದೆ ಎಂದು ಕೇಂದ್ರದ ಗುಪ್ತಚರ ಸಂಸ್ಥೆ ಮತ್ತು ತನಿಖಾ ಸಂಸ್ಥೆಗಳು ಎಚ್ಚರಿಕೆ ಸಂದೇಶ ರವಾನಿಸಿರುವುದರಿಂದ ಮುಂಬೈ ಪೊಲೀಸರು ಎಚ್ಚೆತ್ತು ಕೊಂಡಿದ್ದು, ಐತಿಹಾಸಿಕ ಸ್ಮಾರಕಗಳು, ಜನನಿಬಿಡ ಪ್ರದೇಶ ಗಳು, ಧಾರ್ಮಿಕ ಕೇಂದ್ರಗಳೂ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬಿಗಿಭದ್ರತೆ, ತಪಾಸಣೆ ಪ್ರಕ್ರಿಯೆ ಹೆಚ್ಚಿಸಿದ್ದಾರೆ. ಇನ್ನೊಂದೆಡೆ, ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆಯೂ ಸಮೀಪಿಸುತ್ತಿದೆ. ದಸರಾ, ದೀಪಾವಳಿ ಸೇರಿದಂತೆ ವಿವಿಧ ಹಬ್ಬಗಳ ಕಾಲವೂ ಎದುರಿಗೇ ಇದೆ. ಹೀಗಾಗಿ ಜನರ ಓಡಾಟ ಮಾರುಕಟ್ಟೆ ಪ್ರದೇಶಗಳಲ್ಲಿ ಹೆಚ್ಚಲಿದೆ. ಇಂಥ ಸಂದರ್ಭದಲ್ಲಿ ಉಗ್ರರ ದಾಳಿ ಭೀತಿ ಎದುರಾಗಿರುವುದು ದೊಡ್ಡ ಸವಾಲಿನಂತಾಗಿದೆ. ಪೊಲೀಸ್ ಇಲಾಖೆ ಆದಷ್ಟೂ ಕಟ್ಟೆಚ್ಚರ ವಹಿಸಲಿದೆ ಎಂದು ಅಧಿಕಾರಿಯೊಬ್ಬರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ಮುಂಬೈ ಮಹಾ ನಗರದಲ್ಲಿನ ಎಲ್ಲಾ ದೇಗುಲಗಳಿಗೂ ಎಚ್ಚರಿಕೆ ವಹಿಸಲು, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಎಂ.ಜಿ.ಬಾಲಕೃಷ್ಣ ಅಧಿಕಾರ ಸ್ವೀಕಾರ



ಬೆಂಗಳೂರು: ಶತಮಾನದ ಇತಿಹಾಸ ಹೊಂದಿರುವ ಪ್ರತಿಷ್ಠಿತ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ)ಯ 2024-25ನೇ ಸಾಲಿನ ಅಧ್ಯಕ್ಷರಾಗಿ ಎಂ. ಜಿ ಬಾಲಕೃಷ್ಣ ಅಧಿಕಾರ ವಹಿಸಿಕೊಂಡಿದ್ದಾರೆ. ಎಫ್‌ಕೆಸಿಸಿಐ ವಿವಿಧ ಸಮಿತಿಗಳಲ್ಲಿ ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿರುವ ಉಮಾ ರೆಡ್ಡಿ ಹಿರಿಯ ಉಪಾಧ್ಯಕ್ಷೆಯಾಗಿ, ಸಾಯಿ ರಾಂ ಪ್ರಸಾದ್ ಕೂಡ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಭಾಸ್ಮತಿಯೇತರ ಅಕ್ಕಿ ರಫ್ತಿಗೆ ಅನುಮತಿ

ದೆಹಲಿ: ಕೇಂದ್ರ ಸರಕಾರವು ಭಾಸ್ಮತಿಯೇತರ ಅಕ್ಕಿ ಮೇಲೆ ವಿಧಿಸಿದ್ದ ರಫ್ತು ನಿಷೇಧವನ್ನು ಶನಿವಾರ ವಾಪಸ್ ಪಡೆದಿದೆ. ಕನಿಷ್ಠ ರಫ್ತು ದರವನ್ನು (ಎಂಇಪಿ) 490 ಡಾಲರ್‌ಗೆ (₹41,022) ನಿಗದಿಪಡಿಸಿದೆ. ಮುಂದಿನ ಸೂಚನೆವರೆಗೂ ಈ ಆದೇಶ ಜಾರಿಯಲ್ಲಿ ಇರಲಿದೆ ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ. ದೇಶೀಯ ಪೂರೈಕೆ ಹೆಚ್ಚಳಕ್ಕೆ ಒತ್ತು ನೀಡುವ ದೃಷ್ಟಿಯಿಂದ ಕಳೆದ ವರ್ಷದ ಜುಲೈ 20ರಿಂದ ಭಾಸ್ಮತಿಯೇತರ ಅಕ್ಕಿ ರಫ್ತಿಗೆ ನಿಷೇಧ ಹೇರಲಾಗಿತ್ತು. ಕುಚ್ಚಲಕ್ಕಿ ಮೇಲೆ ವಿಧಿಸಿದ್ದ ಶೇ.20ರಷ್ಟು ರಫ್ತು ಸುಂಕವನ್ನು ಶೇ.10ಕ್ಕೆ ಇಳಿಸಿದೆ. ಬಾಸ್ಮತಿ ಅಕ್ಕಿ ರಫ್ತಿಗೆ ನಿಗದಿಪಡಿಸಿದ್ದ ಕನಿಷ್ಠ ದರವನ್ನೂ ಸರಕಾರ ಕಳೆದ ಎರಡು ವಾರದ ರದ್ದುಪಡಿಸಿತ್ತು. ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಂಡಿದೆ.

ಜಿಎಸ್‌ಟಿಗೆ ಪೆಟ್ರೋಲ್, ಡೀಸೆಲ್: ಬೆಂಬಲ ಬೇಕು

ಪುಣೆ: ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಯಡಿ ತರಲು ನಾನು ಉತ್ಸುಕನಾಗಿದ್ದೇನೆ. ಆದರೆ, ರಾಜ್ಯಗಳು ಇದಕ್ಕೆ ಸರ್ವಾನುಮತದಿಂದ ಬೆಂಬಲ ನೀಡಬೇಕಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ. ಪುಣೆ ಇಂಟರ್‌ನ್ಯಾಷನಲ್ ಸೆಂಟರ್‌ನಿಂದ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಬಗ್ಗೆ ನಾನು ಹಲವು ದಿನಗಳಿಂದ ಸಲಹೆ ನೀಡುತ್ತಿದ್ದೇನೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೂಡ ಹಲವು ಸಂದರ್ಭಗಳಲ್ಲಿ ಈ ಮಾತನ್ನು ಪುನರುಚ್ಚರಿದ್ದಾರೆ ಎಂದರು. ಕೇರಳದ ಹೈಕೋರ್ಟ್ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ಅಡಿ ತರುವ ಬಗ್ಗೆ ಸರಕು ಮತ್ತು ಸೇವಾ ತೆರಿಗೆ ಮಂಡಳಿಯು ತನ್ನ ಕಾರ್ಯಸೂಚಿಯಲ್ಲಿ ಪ್ರಸ್ತಾಪಿಸಿ ಚರ್ಚಿಸುವಂತೆ ಸಲಹೆ ನೀಡಿದೆ. ಅಲಹಾಬಾದ್‌ನಲ್ಲಿ ನಡೆದ ಮಂಡಳಿಯ ಸಭೆಯಲ್ಲಿ ಈ ವಿಷಯವು ಚರ್ಚೆಗೆ ಬಂದಿತ್ತು. ಆದರೆ, ಮಂಡಳಿಯು ರಾಜ್ಯಗಳ ಒಮ್ಮತ ನಿರ್ಧಾರದ ಮೇಲೆ ಕೆಲಸ ನಿರ್ವಹಿಸಲಿದೆ. ಇದಕ್ಕೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪಿಗೆ ನೀಡಬೇಕಿದೆ ಸಚಿವರು ತಿಳಿಸಿದರು.

ನೇಪಾಳ: ಮಳೆಗೆ 59 ಮಂದಿ ಸಾವು

ಕಂಠ್ಮಂಡುವಿನಲ್ಲಿ ಉಕ್ಕಿ ಹರಿಯುತ್ತಿರುವ ಭಾಗ್ಮತಿ ನದಿ.

ಕಠ್ಮಂಡು: ನಿರಂತರ ಮಳೆಯಿಂದ ಉಂಟಾದ ಪ್ರವಾಹ ಮತ್ತು ಭೂಕುಸಿತದಿಂದ ನೇಪಾಳದಲ್ಲಿ ಕನಿಷ್ಠ 59 ಜನ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಶುಕ್ರವಾರದಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ದೇಶದ (ನೇಪಾಳ) ಕೆಲವು ಭಾಗಗಳು ಜಲಾವೃತಗೊಂಡಿವೆ. ನಿರಂತರ ಮಳೆಯಿಂದಾಗಿ 59 ಮಂದಿ ಸಾವಿಗೀಡಾಗಿದ್ದಾರೆ. ಅವರಲ್ಲಿ 34 ಮಂದಿ ಕಠ್ಮಂಡು ಕಣಿವೆಯಲ್ಲಿಯೇ ಮೃತಪಟ್ಟಿದ್ದಾರೆ. 36 ಜನ ಗಾಯಗೊಂಡಿದ್ದಾರೆ ಎಂದು ನೇಪಾಳ ಪೊಲೀಸರ ಉಪ ವಕ್ತಾರ ಬಿಷ್ಣೋ ಅಧಿಕಾರಿ ತಿಳಿಸಿದ್ದಾರೆ. ಪ್ರವಾಹದಲ್ಲಿ ಒಟ್ಟು 44 ಮಂದಿ ನಾಪತ್ತೆಯಾಗಿದ್ದಾರೆ. ಸಾವಿರಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ. ದೇಶದಾದ್ಯಂತ 44 ಸ್ಥಳಗಳಲ್ಲಿ ಪ್ರಮುಖ ಹೆದ್ದಾರಿಗಳನ್ನು ಬಂದ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಕಠ್ಮಂಡುವಿನಲ್ಲಿ ಸುಮಾರು 226 ಮನೆಗಳು ಮುಳುಗಡೆಯಾಗಿವೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸುಮಾರು 3,000 ಭದ್ರತಾ ಸಿಬ್ಬಂದಿಯ ರಕ್ಷಣಾ ತಂಡವನ್ನು ನಿಯೋಜಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

{ರಾಮಲಿಂಗಾರೆಡ್ಡಿ} ಸಾರಿಗೆ ಸಚಿವ

ವಾಯುವ್ಯ ಕರ್ನಾಟಕ ಸಾರಿಗೆ ಅಭಿವೃದ್ಧಿಗಾಗಿ ಈ ಬಾರಿಯೂ 400 ಬಸ್‌ಗಳ ಖರೀದಿ ಮಾಡಲಾಗುವುದು. ಅದೇ ರೀತಿ 9 ಸಾವಿರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುವುದು.

ಮನುಷ್ಯರ ಮೇಲೆ ನಾಯಿ ದಾಳಿ ನಿಯಂತ್ರಣಕ್ಕೆ ಹೊಸ ಪ್ಲಾನ್ | ನಾಯಿಗಳಿಗೆ ಆಹಾರ ನೀಡಲು ಪ್ರಾಣಿ ಪ್ರಿಯರಿಗೆ ಅವಕಾಶ

ಬೀದಿ ನಾಯಿಗಳಿಗೆ ಪಾಲಿಕೆಯಿಂದಲೇ ಆಹಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ಬೀದಿ ನಾಯಿಗಳು ಸಾರ್ವಜನಿಕರ ಮೇಲೆ ದಾಳಿ ಮಾಡುವ ಪ್ರಕರಣಗಳು ಹೆಚ್ಚಾಗಿದ್ದು, ಇದರ ನಿಯಂತ್ರಣಕ್ಕೆ ಬಿಬಿಎಂಪಿ ಹೊಸ ಸಿದ್ಧತೆ ನಡೆಸಿದೆ.

ಬಿಬಿಎಂಪಿ ಪಶುಸಂಗೋಪನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಮಾತನಾಡಿ, ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಆಹಾರ ಸಿಗದಂತಹ ಪ್ರದೇಶದಲ್ಲಿ ಆಹಾರದ ವ್ಯವಸ್ಥೆ ಮಾಡುವ ನಿಟ್ಟಿನಲ್ಲಿ ಪಾಲಿಕೆಯ ಪಶುಸಂಗೋಪನಾ ವಿಭಾಗದಿಂದ ಪ್ರಾಯೋಗಿಕವಾಗಿ ಹೊಸ ಯೋಜನೆಯನ್ನು ರೂಪಿಸಲಾಗುತ್ತಿದೆ. ಈ ಮೂಲಕ ಬೀದಿ ನಾಯಿಗಳು ಮನುಷ್ಯರ ಮೇಲೆ ದಾಳಿ ನಡೆಸುವುದನ್ನು ನಿಯಂತ್ರಿಸಬಹುದು ಎಂದರು.

ನಗರದಲ್ಲಿ ಅನೇಕ ಸ್ಥಳಗಳಲ್ಲಿ ಸಮುದಾಯ ಪ್ರಾಣಿಗಳಿಗೆ ದಿನಕ್ಕೆ ಒಂದು ಹೊತ್ತಿನ ಆಹಾರವೂ ಸಹ ಸಿಗದಿರುವುದು ಪಾಲಿಕೆಯ ಗಮನಕ್ಕೆ ಬಂದಿದ್ದು, ಇದರಿಂದ ಬೀದಿ ನಾಯಿಗಳು ಆಕ್ರಮಣಕಾರಿಯಾಗಿ ವರ್ತಿಸುತ್ತವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚೆಗೆ ಬೀದಿ ನಾಯಿಗಳು ಸಾರ್ವಜನಿಕರಿಗೆ ಕಚ್ಚುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದನ್ನು ನಿಯಂತ್ರಿಸಬೇಕಿದೆ. ಆದ್ದರಿಂದ ನಾಯಿಗಳಿಗೆ ಸರಿಯಾಗಿ ಆಹಾರ ಸಿಗುವಂತೆ ಮಾಡಲು ಪಾಲಿಕೆಯು ಪ್ರಾಣಿ ಪಾಲಕರು, ಪೌರಕಾರ್ಮಿಕರು,

ಹೋಟೆಲ್ ಮಾಲಿಕರು, ಆರೋಗ್ಯ ವಿಭಾಗದ ಸಿಬ್ಬಂದಿ ಹಾಗೂ ಇತರೆ ಆಸಕ್ತರೊಂದಿಗೆ ಸಮನ್ವಯ ಸಾಧಿಸಿ ಇದನ್ನು ಮಾಡಲಾಗುವುದು ಎಂದರು.

ಯೋಜನೆಯ ಜಾರಿ ವಿಧಾನ: ಪ್ರಾಣಿಗಳಿಗೆ ಆಹಾರ ನೀಡುವ ಪ್ರಾಣಿ ಪ್ರಿಯರ ನೋಂದಣಿಗೆ ಅವಕಾಶ ಕಲ್ಪಿಸಲಾಗುವುದು. ನಂತರ ಪೌರ ಕಾರ್ಮಿಕರು ಮತ್ತು ಖಾಸಗಿ ಹೋಟೆಲ್ ಮಾಲಿಕರನ್ನು ಇದರಲ್ಲಿ ಪಾಲ್ಗೊಳ್ಳುವಂತೆ ಮಾಡಿ ಆಹಾರ ನೀಡುವ ಸ್ಥಳಗಳನ್ನು ಗುರುತಿಸಿ ಬೀದಿ ನಾಯಿಗಳಿಗೆ ಸರಿಯಾಗಿ ಆಹಾರ ಸಿಗುವಂತೆ ಮಾಡುವುದು. ಅದಾದ ಬಳಿಕ ಈ ಅಭಿಯಾನವನ್ನು ಪ್ರಾಯೋಗಿಕವಾಗಿ ಆಯ್ದ ಸ್ಥಳಗಳಲ್ಲಿ ಅನುಷ್ಠಾನಗೊಳಿಸಿ ಎಲ್ಲಾ ಪಾಲುದಾರರ ಪ್ರತಿಕ್ರಿಯೆಯನ್ನು ಸಂಗ್ರಹಿಸಲಾಗುವುದು. ಯೋಜನೆ ಯಶಸ್ವಿಯಾದಲ್ಲಿ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಈ ಅಭಿಯಾನವನ್ನು ಅನುಷ್ಠಾನಗೊಳಿಸುವುದು.

ವಿವರವಾದ ಯೋಜನೆ ಶೀಘ್ರ ಬಿಡುಗಡೆ: ಸಮುದಾಯದ ಪ್ರಾಣಿಗಳಿಗೆ ಉತ್ತಮ ಸಹಾಯ ಮಾಡಲು ಕೇರ್‌ಟೇಕರ್‌ಗಳನ್ನು ಬಲಪಡಿಸುವುದರ ಜತೆಗೆ, ಪ್ರಾಣಿಗಳ ಸಂರಕ್ಷಣೆ ಕಾರ್ಯಾಚರಣೆ ಹಾಗೂ ಶಸ್ತ್ರಚಿಕಿತ್ಸಾ ನಂತರದ ಆರೈಕೆ, ವೈದ್ಯಕೀಯ ಮೇಲ್ವಿಚಾರಣೆಗೆ ಅಗತ್ಯವಿರುವ ಸಂದರ್ಭಗಳಲ್ಲಿ ಪ್ರತ್ಯೇಕ ವಲಯಗಳಲ್ಲಿ ರಕ್ಷಣೆ ಮತ್ತು ಚೇತರಿಸಿಕೊಳ್ಳುವಿಕೆಯನ್ನು ಬೆಂಬಲಿಸುವ ಸಾಮರ್ಥ್ಯವನ್ನು ಪಾಲಿಕೆ ನಿರ್ಮಿಸುತ್ತಿದೆ. ಈ ಕುರಿತು ವಿವರವಾದ ಯೋಜನೆಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದರು.

ಪ್ರಾಣಿ ಪಾಲಕರು ನೋಂದಾಯಿಸಿ: ಪಾಲಿಕೆ ವ್ಯಾಪ್ತಿಯಲ್ಲಿ ನಾಯಿಗಳಿಗೆ ಆಹಾರ ನೀಡುತ್ತಿರುವ ಪ್ರಾಣಿ ಪಾಲಕರು ಪಾಲಿಕೆ ಪಶುಸಂಗೋಪನಾ ಇಲಾಖೆಯಿಂದ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಪಶಸಂಗೋಪನೆ ವಿಭಾಗದ ಸಾಮಾಜಿಕ ಜಾಲತಾಣವಾದ ಟ್ವಿಟರ್(ಎಕ್ಸ್), ಫೇಸ್ ಬುಕ್, ಮತು ಇನ್ಸ್‌ಟಾಗ್ರಾಮ್ ಬಿಬಿಎಂಪಿ ಪಶು ಸಂಗೋಪನೆ ಪುಟಗಳಲ್ಲಿ ನೋಂದಣಿಯ ಮಾಡಿಕೊಳ್ಳುವ ಲಿಂಕ್‌ನ್ನು ನೀಡಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಈ ಯೋಜನೆಯನ್ನು ಯಶಸ್ವಿಗೊಳಿಸಲು ಪಾಲಿಕೆ ಜತೆ ಕೈಜೋಡಿಸುವಂತೆ ಬಿಬಿಎಂಪಿ ಮನವಿ ಮಾಡಿದೆ.

ನೋಂದಣಿ ಕಡ್ಡಾಯವಲ್ಲ

ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ಪಾಲಕರ ನೋಂದಣಿಯು 2ನೇ ಅಕ್ಟೋಬರ್ 2024 ರಿಂದ ಪ್ರಾರಂಭವಾಗಲಿದ್ದು, 31ನೇ ಅಕ್ಟೋಬರ್ 2024ರವರೆಗೆ ನೊಂದಣಿಯಾಗಲು ಅವಕಾಶ ವಿರುತ್ತದೆ. ಪ್ರಾಣಿ ಪಾಲಕರ ನೋಂದಣಿ ಕಡ್ಡಾಯವಾಗಿರುವುದಿಲ್ಲ. ಈ ನೋಂದಣಿಯು ಅಭಿಯಾನವನ್ನು ಯೋಜಿಸಲು ಮತ್ತು ಅದನ್ನು ಸಮರ್ಥನೀಯವಾಗಿ ಡೇಟಾಬೇಸ್ ರಚಿಸುವ ದೃಷ್ಟಿಯಿಂದ ಪಾಲಿಕೆ ಈ ಕ್ರಮಕ್ಕೆ ಮುಂದಾಗಿದೆ.

ಪಾಲಿಕೆ ಜತೆ ಕೈ ಜೋಡಿಸಿ

ಬೀದಿ ನಾಯಿಗಳಿಗೆ ಆಹಾರ ನೀಡುವ ಅಭಿಯಾನದ ಮೂಲಕ, ನಾಗರಿಕರಲ್ಲಿ ಸಹಾನುಭೂತಿಯ ಅರ್ಥವನ್ನು ಹಾಗೂ ಪ್ರಾಣಿಗಳೊಂದಿಗಿನ ಸಹ ಬಾಳ್ವೆಯ ಅನುಕೂಲ ಮನವರಿಕೆ ಮಾಡಲು Coexisting Champion ಆಗಿ ಪಾಲಿಕೆ ಜತೆ ಕೈ ಜೋಡಿಸಲು ಕೋರುತ್ತಿದೆ. ಈ ನಿಟ್ಟಿನಲ್ಲಿ ಸ್ಥಳೀಯರು ತಮ್ಮ ಪ್ರದೇಶದಲ್ಲಿ ಸಮುದಾಯದ ಪ್ರಾಣಿಗಳ ಆರೈಕೆಯ ಸಾಮಾಜಿಕ ಕಾಳಜಿ ಕೈಗೊಳ್ಳಲು, ಪ್ರೋತ್ಸಾಹಿಸಲು ಮನವಿ ಮಾಡಿದೆ.

ಹಿಜ್ಬುಲ್ಲಾ ಪ್ರಧಾನ ಕಚೇರಿ ಗುರಿಯಾಗಿಸಿ ದಾಳಿ
ಇಸ್ರೇಲ್ ರಾಕೆಟ್ ದಾಳಿ ಖಂಡಿಸಿದ ಇರಾನ್

ಇಸ್ರೇಲ್ ದಾಳಿಗೆ ಇರಾನ್ ಡೆಪ್ಯೂಟಿ ಕಮಾಂಡರ್ ಹತ

ಟೆಹರಾನ್: ಇಸ್ರೇಲ್ ಸೇನಾಪಡೆ ಶುಕ್ರವಾರ ನಡೆಸಿದ ಸರಣಿ ರಾಕೆಟ್ ದಾಳಿಗೆ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಪ್ರಧಾನ ಕಚೇರಿ ಸೇರಿದಂತೆ ಹಲವು ಬಹುಮಹಡಿ ಕಟ್ಟಡಗಳು ನೆಲಸಮವಾಗಿದ್ದು, ಹಿಜ್ಬುಲ್ಲಾ ಉಗ್ರ ಸಂಘಟನೆ ಮುಖ್ಯಸ್ಥ ಹಸನ್ ನಸ್ರಲ್ಲಾ ಜತೆಗೆ ಇರಾನ್‌ನ ಡೆಪ್ಯೂಟಿ ಕಮಾಂಡರ್ ಕೂಡ ಸಾವನ್ನಪ್ಪಿದ್ದಾರೆ.

ಬೈರೂತ್ ನಗರದಲ್ಲಿದ್ದ ಹಿಜ್ಬುಲ್ಲಾ ಪ್ರಧಾನ ಕಚೇರಿ ಕೇಂದ್ರೀಕರಿಸಿ ಇಸ್ರೇಲ್ ನಡೆಸಿದ ರಾಕೆಟ್ ದಾಳಿಗೆ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ (ಐಆರ್‌ಜಿಸಿ) ಡೆಪ್ಯುಟಿ ಕಮಾಂಡರ್ ಅಬ್ಬಾಸ್ ನಿಲ್ಫೊರೊಶನ್ ಕೂಡ ಸಾವನ್ನಪ್ಪಿದ್ದಾರೆ. ಇಸ್ರೇಲಿ ದಾಳಿ ನಡೆಸಿದಾಗ ಅಬ್ಬಾಸ್ ಅವರು ನಸ್ರಲ್ಲಾ ಜತೆಗೇ ಇದ್ದರು ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಬ್ರಿಗೇಡಿಯರ್ ಜನರಲ್ ಆಗಿರುವ ಅಬ್ಬಾಸ್ ನಿಲ್ಫೊರೊಶನ್, ಲೆಬನಾನ್‌ನಲ್ಲಿ ಕುಡ್ಸ್ ಫೋರ್ಸ್‌ನ ಕಮಾಂಡರ್ ಕೂಡಾ ಆಗಿದ್ದರು. ನಿಲ್ಫೊರೊಶನ್ 'ಐಆರ್‌ಜಿಸಿ' ಕಾರ್ಯಾಚರಣೆಗಳ ಕಮಾಂಡ್ ನಿರ್ವಹಿಸುತ್ತಿದ್ದರು. ಐಆರ್‌ಜಿಸಿ ಸೇನಾ ಚಟುವಟಿಕೆ ಮತ್ತು ಭದ್ರತಾ ಕಾರ್ಯಾಚರಣೆಗಳಲ್ಲಿ ನೇರವಾಗಿ ತೊಡಗಿಸಿಕೊಂಡಿದೆ.

ಇರಾನ್ ಖಂಡನೆ: ಇಸ್ರೇಲ್ ರಾಕೆಟ್ ದಾಳಿಯನ್ನು ಇರಾನ್ ತೀವ್ರವಾಗಿ ಖಂಡಿಸಿದೆ. ಇಸ್ರೇಲ್ ಎಂದಿಗೂ ಹಿಜ್ಬುಲ್ಲಾವನ್ನು ತೊಡೆದು ಹಾಕಲು ಸಾಧ್ಯವಾಗದು ಎಂದು ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

80 ಟನ್ ಸ್ಫೋಟಕ ಬಳಕೆ

ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿರುವ ಹಿಜ್ಬುಲ್ಲಾದ ಪ್ರಧಾನ ಕಚೇರಿಯ ಮೇಲೆ ಇಸ್ರೇಲ್ ಸೇನಾಪಡೆ 80 ಟನ್ ಸ್ಫೋಟಕ ಬಳಸಿ ದೊಡ್ಡ ಮಟ್ಟದ ದಾಳಿ ನಡೆಸಿದೆ. ಪರಿಣಾಮ ಭಾರೀ ಸ್ಫೋಟವಾಗಿದ್ದು, ಆರು ಕಟ್ಟಡಗಳು ಅಕ್ಷರಶಃ ನೆಲಸಮಗೊಂಡಿವೆ. ಈ ವೇಳೆ ಪ್ರಧಾನ ಕಚೇರಿಯಲ್ಲಿ ನಸ್ರಲ್ಲಾ ಪುತ್ರಿಯೂ ತಂದೆಯ ಜತೆಗಿದ್ದರು. ಅಬ್ಬಾಸ್ ಸೇರಿದಂತೆ ಇರಾನ್‌ನ ಹಲವು ಕಮಾಂಡರ್‌ಗಳೂ, ಅನೇಕ ಹಿರಿಯ ಅಧಿಕಾರಿಗಳು ಸ್ಥಳದಲ್ಲಿದ್ದರು. ಲೆಬನಾನ್ ಮೇಲಿನ ಈ ದಾಳಿಯು ಪಶ್ಚಿಮ ಏಷ್ಯಾದಲ್ಲಿ ಮತ್ತೊಮ್ಮೆ ಉದ್ವಿಗ್ನತೆಯನ್ನು ಹೆಚ್ಚಿಸಿದೆ.

ವೈಎಸ್‌ಆರ್‌ಸಿಪಿಯಿಂದ ಪ್ರಾಯಶ್ಚಿತ ಕಾರ್ಯ

ಅಮರಾವತಿ: ತಿರುಪತಿ ದೇವಸ್ಥಾನದ ಪ್ರಸಾದವಾದ ಲಾಡು ತಯಾರಿಕೆಯಲ್ಲಿ ಕಲಬೆರಕೆ ತುಪ್ಪ ಬಳಸಲಾಗಿದೆ ಎಂದು ಆರೋಪಿಸುವ ಮೂಲಕ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು 'ಪಾಪ' ಮಾಡಿದ್ದಾರೆ ಹಾಗೂ ಈ ಪಾಪ ಪರಿಹಾರಕ್ಕಾಗಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಶನಿವಾರ ಪ್ರಾಯಶ್ಚಿತ ವಿಧಿ ಕೈಗೊಂಡಿದ್ದರು.

ಮುಖ್ಯಮಂತ್ರಿ ನಾಯ್ಡು ಅವರ ತಪ್ಪಿನಿಂದಾದ ಅಪಪ್ರಚಾರ ನಿವಾರಣೆಗಾಗಿ ಪ್ರಾಯಶ್ಚಿತ್ತ ಹಾಗೂ ಕ್ಷಮಾಪಣೆ ವಿಧಿಗಳನ್ನು ಕೈಗೊಳ್ಳಬೇಕು ಎಂದು ಪಕ್ಷದ ಮುಖ್ಯಸ್ಥ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಕರೆ ನೀಡಿದ್ದರು. ಪಕ್ಷದ ಹಿರಿಯ ನಾಯಕ ಹಾಗೂ ಟಿಟಿಡಿ ಮಾಜಿ ಅಧ್ಯಕ್ಷ ಬಿ.ಕರುಣಾಕರ ರೆಡ್ಡಿ ಅವರು ತಿರುಪತಿಯ ತಾತಯ್ಯ ಗುಂಟದಲ್ಲಿರುವ ಗಂಗಮ್ಮ ದೇವಸ್ಥಾನದಲ್ಲಿ ನಡೆದ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಂಡಿದ್ದರು.

ಮಾಜಿ ನೀರಾವರಿ ಸಚಿವ ಅಂಬಟಿ ರಾಮ್ ಬಾಬು, ಗುಂಟೂರಿನ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದ ಪೂಜಾ ವಿಧಿಗಳಲ್ಲಿ ಪಾಲ್ಗೊಂಡಿದ್ದರು. ಏಲೂರು ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಪೂಜಾ ಕಾರ್ಯಗಳಲ್ಲಿಯೂ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಬೆಂಬಲಿಗರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಎಸ್‌ಐಟಿ ತನಿಖೆ ಆರಂಭ

ತಿರುಪತಿಯ ಲಾಡು ಕಲಬೆರಕೆ ಪ್ರಕರಣದ ತನಿಖೆಗೆ ಆಂಧ್ರಪ್ರದೇಶ ಸರಕಾರ ನೇಮಕ ಮಾಡಿರುವ ಎಸ್‌ಐಟಿ ಶನಿವಾರ ತನ್ನ ಕೆಲಸ ಆರಂಭಿಸಿದೆ. ಎಸ್‌ಐಟಿ ಮುಖ್ಯಸ್ಥ, ಗುಂಟೂರು ಐ.ಜಿ ಸರ್ವಶ್ರೇಷ್ಠ ತ್ರಿಪಾಠಿ ಅವರು ತಮ್ಮ ತಂಡದೊಂದಿಗೆ ತಿರುಪತಿ ತಲುಪಿದ್ದಾರೆ. ಟಿಟಿಡಿಯ ಕೆಲವು ಸಿಬ್ಬಂದಿ ಜತೆ ಎಸ್‌ಐಟಿ ತಂಡವು ಚರ್ಚೆ ನಡೆಸಿತು. ಅಲ್ಲದೆ, ತಮಿಳುನಾಡು ಮೂಲದ ಎ.ಆರ್.ಡೈರಿ ವಿರುದ್ಧ ದೂರು ದಾಖಲಾಗಿರುವ ತಿರುಪತಿ ಪಶ್ಚಿಮ ಪೊಲೀಸ್ ಠಾಣೆಯ ಸಿಬ್ಬಂದಿ ಜತೆಯೂ ಎಸ್‌ಐಟಿ ತಂಡವು ಮಾತುಕತೆ ನಡೆಸಿತು. ಟಿಟಿಡಿ ಕಾರ್ಯನಿರ್ವಹಣಾ ಅಧಿಕಾರಿ ಜೆ.ಶ್ಯಾಮಲ ರಾವ್ ಅವರ ಜತೆ ತ್ರಿಪಾಠಿ ಅವರು ಮಾತುಕತೆ ನಡೆಸಿದರು.

ತಥಾಗತ್ ಹಾರ್ಟ್ ಸೆಂಟರ್ ಆಯೋಜಿಸಿದ್ದ ಹೃದಯ ಜಾಗೃತಿ ನಡಿಗೆಗೆ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಬದಲಾದ ಜೀವನಶೈಲಿ ಹೃದಯ ಸಮಸ್ಯೆಗೆ ಕಾರಣ

ಬೆಂಗಳೂರು: ಬದಲಾದ ಆಹಾರ ಪದ್ಧತಿ ಹಾಗೂ ಜೀವನಶೈಲಿಯೇ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳಲು ಮೂಲ ಕಾರಣ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಶ್ವ ಹೃದಯ ದಿನದ ಪ್ರಯುಕ್ತ ರಾಜಾಜಿನಗರದ ತಥಾಗತ್ ಹಾರ್ಟ್ ಸೆಂಟರ್ ಆಯೋಜಿಸಿದ್ದ ಹೃದಯ ಜಾಗೃತಿ ನಡಿಗೆ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಧ್ಯವಾದಷ್ಟು ಪ್ರೊಸೆಸ್ಡ್ ಫುಡ್ ಗಳಿಂದ ದೂರ ಇರುವುದು ಹೃದಯದ ಆರೋಗ್ಯಕ್ಕೆ ಒಳ್ಳೆಯದಾಗಿದೆ. ಈ ರೀತಿಯ ಆಹಾರಗಳಿಂದ ಹೆಚ್ಚಿನ ಸಕ್ಕರೆ ಅಂಶ ನಮ್ಮ ದೇಹಕ್ಕೆ ಸೇರುತ್ತಿದೆ. ಇದರಿಂದ ಡಯಾಬಿಟಿಸ್ ಸಮಸ್ಯೆ ತಲೆದೂರಿತ್ತಿವೆ. ಡಯಾಬಿಟಿಸ್, ಹೈಪರ್ ಟೆನ್ಷನ್ ನಂತಹ ಕಾಯಿಲೆಗಳು, ಹೃದಯದ ಸಮಸ್ಯೆಗೆ ಮೂಲ ಕಾರಣ ಕೆಟ್ಟ ಆರೋಗ್ಯ ಪದ್ಧತಿಯಾಗಿದೆ ಎನ್ನುವುದನ್ನು ಜನರು ಅರಿತುಕೊಳ್ಳಬೇಕು ಎಂದರು.

ಉತ್ತಮ ಹವ್ಯಾಸ ರೂಡಿಸಿಕೊಳ್ಳುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಜನರು ಆರೋಗ್ಯದ ಬಗ್ಗೆ ಹೆಚ್ಚು ಜಾಗೃತಿ ವಹಿಸಬೇಕಾಗಿದೆ. ಹಠಾತ್ ಹೃದಯಘಾತಕ್ಕೆ ಒಳಗಾಗುವರನ್ನು ರಕ್ಷಿಸಲು ಆರೋಗ್ಯ ಇಲಾಖೆ ಪುನೀತ್ ರಾಜಕುಮಾರ್ ಹೃದಯ ಜ್ಯೋತಿ ಯೋಜನೆ ಮೂಲಕ ಪರಿಣಾಮಕಾರಿ ಚಿಕಿತ್ಸೆ ಒದಗಿಸುತ್ತಿದೆ. ಸುಮಾರು 2 ಲಕ್ಷ ಜನರ ಹೃದಯ ತಪಾಸಣೆ ನಡೆಸಲಾಗಿದ್ದು, 1.81 ಲಕ್ಷ ಜನರಿಗೆ ಇಸಿಜಿ ಮಾಡಿಸಲಾಗಿದೆ. ಸರಕಾರಿ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಟೆನೆಕ್ಟೆಪ್ಲೇಸ್ ಚುಚ್ಚುಮದ್ದನ್ನು ಉಚಿತವಾಗಿ ನೀಡುತ್ತಿರುವುದರ ಪರಿಣಾಮ ಜನಸಾಮಾನ್ಯರಿಗೆ ಹೆಚ್ಚಿನ ಅನುಕೂಲವಾಗಿದೆ ಎಂದರು. ಮಾಜಿ ಸಚಿವ, ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಗೋಪಾಲ್ಯಯ ಇದ್ದರು.

ಗಂಟೆಗೆ 5,687 ಸಂಚಾರ ನಿಯಮ ಉಲ್ಲಂಘನೆ

ಬೆಂಗಳೂರು: ಇತ್ತೀಚಿಗಿನ ದಿನಗಳಲ್ಲಿ ರಸ್ತೆ ನಿಯಮ ಗಾಳಿಗೆ ತೂರಿ ಬೇಕಾಬಿಟ್ಟಿ ವಾಹನ ಚಾಲನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚಳವಾಗುತ್ತಿದೆ.

ಸಂಚಾರ ಪೊಲೀಸ್ ಇಲಾಖೆಯು ಪ್ರಸ್ತುತಪಡಿಸಿದ ಅಂಕಿಅಂಶಗಳ ಪ್ರಕಾರ, ಮೇ ನಿಂದ ಸೆಪ್ಟೆಂಬರ್ ವರೆಗೆ ಪ್ರತಿ ಗಂಟೆಗೆ ಎಐ ಆಧಾರಿತ ಕ್ಯಾಮೆರಾಗಳ ಮೂಲಕ ಸೆರೆಹಿಡಿಯಲಾಗಿದ್ದು, ನಗರದಲ್ಲಿ 5,687 ಸಂಚಾರ ಉಲ್ಲಂಘನೆ ಪ್ರಕರಣಗಳು ದಾಖಲಿಸಲಾಗಿದೆ. ಈ ಸುಧಾರಿತ ಕಣ್ಗಾವಲು ವ್ಯವಸ್ಥೆಗಳು ಒಟ್ಟು 8 ಮಿಲಿಯನ್ ಸಂಚಾರ ಉಲ್ಲಂಘನೆಗಳನ್ನು ದಾಖಲಿಸಿದೆ. ದಿನಕ್ಕೆ ಸರಾಸರಿ 57,942 ಉಲ್ಲಂಘನೆಗಳು ಅಥವಾ ಪ್ರತಿ ಜಂಕ್ಷನ್‌ನಲ್ಲಿ 789 ಉಲ್ಲಂಘನೆಗಳಾಗಿವೆ. ಬೆಳಗ್ಗಿನ ವೇಳೆ 8 ರಿಂದ 9 ಗಂಟೆ ಸುಮಾರಿಗೆ 9,134 ಮತ್ತು 8,265 ನಿಯಮ ಉಲ್ಲಂಘನೆಗಳು ಪ್ರಕರಣಗಳು ದಾಖಲಾಗಿದೆ. ಪ್ರತಿನಿತ್ಯ ರಾಂಗ್ ವೇಯಲ್ಲಿ ವಾಹನ ಚಾಲನೆ ಮಾಡುವ ಪ್ರಕರಣಗಳ ಸಂಖ್ಯೆಯು 2300 ಏರಿಕೆಯಾಗಿದೆ ಎಂದು ಅಂಕಿಅಂಶಗಳಲ್ಲಿ ಬಹಿರಂಗವಾಗಿದೆ.

ಅತಿಹೆಚ್ಚು ಉಲ್ಲಂಘನೆಯ ಠಾಣಾ ವ್ಯಾಪ್ತಿ: ಆಡುಗೋಡಿ, ಬನಶಂಕರಿ, ಬಸವನಗುಡಿ, ಹಲಸೂರು, ಜಯನಗರ, ಮಲ್ಲೇಶ್ವರ, ಮೈಕೋ ಲೇಔಟ್, ಆರ್‌ಟಿ ನಗರ, ಸದಾಶಿವನಗರ, ವಿವಿ ಪುರಂ ಸೇರಿದಂತೆ ಕೆಲವು ಪೊಲೀಸ್ ಠಾಣೆಗಳಲ್ಲಿ ಅತಿ ಹೆಚ್ಚು ಉಲ್ಲಂಘನೆ ಪ್ರಕರಣಗಳು ವರದಿಯಾಗಿವೆ. ಪ್ರಸ್ತುತ, ಬೆಂಗಳೂರಿನಾದ್ಯಂತ 50 ಜಂಕ್ಷನ್‌ಗಳು ಎಐ ಕ್ಯಾಮೆರಾಗಳ ನಿರಂತರ ಮೇಲ್ವಿಚಾರಣೆಯಲ್ಲಿವೆ. ಇದು ಸ್ಮಾರ್ಟ್ ಎನ್ಫೋರ್ಸ್‌ಮೆಂಟ್ ಸೆಂಟರ್ ಮೂಲಕ ಎಲೆಕ್ಟ್ರಾನಿಕ್ ಚಲನಗಳನ್ನು ವಿತರಿಸಲು ಅನುಕೂಲವಾಗಿದೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು, ಈ ಕ್ಯಾಮೆರಾಗಳು ಉಲ್ಲಂಘನೆಗಳನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಿ ಪ್ರಕರಣ ದಾಖಲಿಸುತ್ತಿವೆ. ಎಐ ಆಧಾರಿತ ಕಣ್ಗಾವಲು ಜತೆಗೆ, ಬೆಂಗಳೂರಿನ ಸಂಚಾರ ಪೊಲೀಸರು ನೇರ ಸಂಪರ್ಕವಿಲ್ಲದೆ ಉಲ್ಲಂಘನೆಗಳನ್ನು ದಾಖಲಿಸಲು ಕ್ಷೇತ್ರ ಸಂಚಾರ ಉಲ್ಲಂಘನೆ ವರದಿ ಯಂತ್ರಗಳನ್ನು ಬಳಸುತ್ತಿದ್ದಾರೆ. ಆಗಸ್ಟ್ 2024 ರ ಹೊತ್ತಿಗೆ, ಈ ಯಂತ್ರಗಳು 1.43 ಕೋಟಿ ನಿಯಮ ಉಲ್ಲಂಘನೆ ಪ್ರಕರಣ ದಾಖಲಿಸಿವೆ.

ಅಪಘಾತ ಪ್ರಕರಣಗಳು ಹೆಚ್ಚಳ

ಕಳೆದ ಆರು ವರ್ಷಗಳಲ್ಲಿ, ಬೆಂಗಳೂರು 27,800 ರಸ್ತೆ ಅಪಘಾತ ದಾಖಲಿಸಿದೆ. 2024 ರ ಜುಲೈವರೆಗೆ, 2,419 ಮಾರಣಾಂತಿಕವಲ್ಲದ ಮತ್ತು 497 ಮಾರಣಾಂತಿಕ ಅಪಘಾತ ಸಂಭವಿಸಿವೆ. 2018 ರಲ್ಲಿ ಒಟ್ಟು 4,819 ಮಾರಣಾಂತಿಕ ಅಪಘಾತಗಳ ವರದಿಯಾಗಿದೆ. 2023 ರಲ್ಲಿ 5,998 ಅತ್ಯಧಿಕ ರಸ್ತೆ ಪ್ರಕರಣಗಳು ವರದಿಯಾಗಿದೆ. ದೇವನಹಳ್ಳಿ ವಿಮಾನ ನಿಲ್ದಾಣ, ಕೆಆರ್ ಪುರ, ಕಾಮಾಕ್ಷಿಪಾಳ್ಯ, ಪೀಣ್ಯ, ಯಲಹಂಕ ನಗರಗಳಲ್ಲಿ ಅಪಘಾತ ಸಂಭವಿಸುವ ಮೊದಲ ಐದು ಪ್ರದೇಶಗಳೆಂದು ಸಂಚಾರ ಪೊಲೀಸರು ಗುರುತಿಸಿದ್ದಾರೆ. ಹೀಗಾಗಿ ಸಂಚಾರ ನಿಯಮ ಉಲ್ಲಂಘನೆ ಮತ್ತು ಅಪಘಾತಗಳಲ್ಲಿ ಹೆಚ್ಚುತ್ತಿರುವ ಪ್ರವೃತ್ತಿ ಎದುರಿಸಲು ಹೆಚ್ಚಿನ ಸುರಕ್ಷತಾ ಕ್ರಮಗಳು ಮತ್ತು ಸಾರ್ವಜನಿಕ ಜಾಗೃತಿಯ ತುರ್ತು ಅಗತ್ಯತೆ ಸೂಚಿಸುತ್ತದೆ.

ಅ.2ಕ್ಕೆ ಮಾಂಸ ಮಾರಾಟಕ್ಕೆ ಅವಕಾಶ ಕಲ್ಪಿಸುಂತೆ ಆಗ್ರಹ

ಬೆಂಗಳೂರು: ಗಾಂಧಿ ಜಯಂತಿ (ಅಕ್ಟೋಬರ್ 2) ದಿನ ಮಹಾಲಯ ಅಮಾವಾಸ್ಯೆಯ ಪ್ರಯುಕ್ತ ಪಿತೃಪಕ್ಷ ಹಬ್ಬವೂ ಇದೆ. ಇದನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ಆ ದಿನ ಮಾಂಸ ಮಾರಾಟಕ್ಕೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಪೌಲ್ಟ್ರಿ ಟ್ರೇಡರ್ಸ್ ಅಸೋಸಿಯೇಷನ್ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಕೆ.ಎನ್. ನಾಗರಾಜು, ಪಿತೃಪಕ್ಷ ನಿಮಿತ್ತ ಕೋಟ್ಯಂತರ ಜನರು ಮಾಂಸಾಹಾರ ಸಿದ್ಧಪಡಿಸಿ, ಅಗಲಿದ ಹಿರಿಯರಿಗೆ ಎಡೆ ಇಟ್ಟು, ಪೂಜೆ ಮಾಡುತ್ತಾರೆ. ಇದನ್ನು ಹಬ್ಬವಾಗಿ ಆಚರಿಸಲಾಗುತ್ತದೆ. ಈ ವರ್ಷ ಮಹಾಲಯ ಅಮಾವಾಸ್ಯೆ ದಿನವೇ ಗಾಂಧಿ ಜಯಂತಿ ಬಂದಿದೆ. ಅ.2ರಂದು ಪ್ರಾಣಿ ವಧೆ ನಿಷೇಧಿಸಲಾಗಿದೆ. ಇದರಿಂದ, ಪಿತೃಪಕ್ಷ ಹಬ್ಬ ಆಚರಿಸುವವರಿಗೆ ಅಡಚಣೆ ಆಗಲಿದ್ದು, ಆ ದಿನ ಮಾಂಸ ಮಾರಾಟಕ್ಕೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಈ ಬಗ್ಗೆ ಈಗಾಗಲೇ ಸಿಎಂ ಸಿದ್ದರಾಮಯ್ಯ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ನನ್ನ ಜೀವನ ತೆರೆದ ಪುಸ್ತಕವೆಂದು ಹೇಳುವ ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ 70ಕ್ಕೂ ಹೆಚ್ಚು ಪ್ರಕರಣ ದಾಖಲು: ಎಚ್‌ಡಿಕೆ

ದಾಖಲೆ ಬಯಲು ಮಾಡಿದರೆ ಸಚಿವರ ರಾಜೀನಾಮೆ: ಎಚ್‌ಡಿಕೆ

ಬೆಂಗಳೂರು: ರಾಜ್ಯ ಸಚಿವ ಸಂಪುಟದಲ್ಲಿ ಒಬ್ಬರಿಗಿಂತ ಒಬ್ಬರು ಪೈಪೋಟಿಯಲ್ಲಿ ಲೂಟಿ ಮಾಡುತ್ತಿದ್ದು, ದಾಖಲೆ ಬಯಲು ಮಾಡಿದರೆ 6ರಿಂದ 7 ಸಚಿವರು ರಾಜೀನಾಮೆ ನೀಡಬೇಕಾಗುತ್ತದೆ. ಶೀಘ್ರದಲ್ಲಿಯೇ ಎಲ್ಲಾ ದಾಖಲೆ ಬಯಲು ಮಾಡುವುದಾಗಿ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾನು ಬಹಳ ಕ್ಲೀನ್, ಪಾರದರ್ಶಕ, ನನ್ನ ಜೀವನ ತೆರೆದ ಪುಸ್ತಕ ಎಂದೆಲ್ಲಾ ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತದಲ್ಲಿ 70ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆ. ಇವರು ಕ್ಲೀನ್, ಸ್ವಚ್ಛವಾಗಿದ್ದರೆ ಇಷ್ಟು ಪ್ರಕರಣ ಇವರ ಮೇಲೆ ಏಕೆ ದಾಖಲಾಗುತ್ತಿದ್ದವು, ಇಂಥ ಪ್ರಕರಣ ಮುಚ್ಚಿ ಹಾಕಿಕೊಳ್ಳಲು ಹಿಂದೆ ಲೋಕಾಯುಕ್ತ ಮುಗಿಸಿ ಎಸಿಬಿ ರಚನೆ ಮಾಡಿಕೊಂಡಿದ್ದರು. ಆ ಪ್ರಕರಣಗಳ ಕಥೆ ಏನಾಗಿದೆ? ಅವುಗಳ ತನಿಖೆ ಎಲ್ಲಿಗೆ ಬಂದಿದೆ ಎಂಬುದನ್ನು ಜನರಿಗೆ ಹೇಳಬೇಕಲ್ಲವೇ? ಎಂದು ಒತ್ತಾಯಿಸಿದ್ದಾರೆ.

ಸರಕಾರಿ ಜಮೀನು ಕಬಳಿಸಿಲ್ಲ: ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರು ಪೊಲೀಸರಿಗೆ ಸೂಚನೆ ಕೊಟ್ಟು ಕೆಲವರಿಗೆ ತೊಂದರೆ ಮಾಡುತ್ತಿದ್ದಾರೆ. ಇದಕ್ಕೆಲ್ಲಾ ಹೆದರುವುದಿಲ್ಲ, ನನಗೆ ಲೋಕಾಯುಕ್ತರಿಂದ ಯಾವುದೇ ನೋಟಿಸ್ ಬಂದಿಲ್ಲ. ನಾನೇ ಸ್ವಯಂ ಪ್ರೇರಿತವಾಗಿ ಲೋಕಾಯುಕ್ತ ಕಚೇರಿಗೆ ಹೋಗಿದ್ದೆ.

ಜೆಡಿಎಸ್ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಟಿಯಲ್ಲಿ ಮಾಥನಾಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್, ಜೆಡಿಎಸ್ ನಗರ ಘಟಕದ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ ಹಲವರು ಉಪಸ್ಥಿತರಿದ್ದರು.

ನಾನು ಆರ್ಕಾವತಿಯಲ್ಲಿ ರೀಡೂ ಮಾಡಿದಂತೆ ಮಾಡಿಲ್ಲ. ಸರಕಾರಿ ಜಮೀನು ಕಬಳಿಸಿಲ್ಲ, ಎಲ್ಲಾ ಮಾಡಿ ಮೋದಿ ಹಾಗೂ ನಿರ್ಮಲಾ ಸೀತಾರಾಮನ್ ಬಗ್ಗೆ ಮಾತನಾಡುತ್ತಾರೆ ನಾಚಿಕೆ ಆಗಬೇಕು ಎಂದು ಕಿಡಿಕಾರಿದರು. ನನ್ನ ವಿರುದ್ಧದ ಪ್ರಕರಣಗಳು ನ್ಯಾಯಲಯದಲ್ಲಿ ತಿರ್ಮಾನವಾಗಲಿ. ತೀರ್ಪು ಬರಲಿ, ತಲೆಬಾಗುತ್ತೇನೆ. ಇವರು ಕೇಳಿದ ಕೂಡಲೇ ನಾನು ಏಕೆ ರಾಜೀನಾಮೆ ಕೊಡಲಿ? ರಾಜೀನಾಮೆ ಕೊಡಲು ಏನಿದೆ? ಸಂವಿಧಾನ ಸಂಸ್ಥೆಗಳನ್ನು ದುರುಪಯೋಗಪಡಿಸಿ ಕೊಳ್ಳಲ್ಲ. ಅಂತಹ ಪರಿಸ್ಥಿತಿ ಬಂದರೆ ಗೌರವಯುತ ವಾಗಿ ರಾಜೀನಾಮೆ ನೀಡುತ್ತೇನೆ. ರಾಜೀನಾಮೆ ಕೊಡಬೇಕಾದಾಗ ನಾನೇ ಕೊಡುತ್ತೇನೆ. ಅದರ ಬಗ್ಗೆ ಸಿದ್ದರಾಮಯ್ಯ ಹೇಳುವುದು ಬೇಡ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಐಜಿಪಿ ಚಂದ್ರಶೇಖರ್ ಭ್ರಷ್ಟ ಅಧಿಕಾರಿ

ಸಿದ್ದರಾಮಯ್ಯ ಸರಕಾರದಲ್ಲಿ ಯಾವ ತನಿಖೆಯೂ ಪಾರದರ್ಶಕವಾಗಿ ನಡೆಯುತ್ತಿಲ್ಲ. ರಾಜಕೀಯ ಸೇಡಿಗಾಗಿ ತನಿಖೆ ನಡೆಸಲಾಗುತ್ತಿದ್ದು, ಅದಕ್ಕೆ ಚಂದ್ರಶೇಖರ್ ಅವರಂಥ ಕಳಂಕಿತ ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಐಜಿಪಿ ಚಂದ್ರಶೇಖರ್ ವಿರುದ್ಧ ಹಲವಾರು ದೂರುಗಳು ದಾಖಲಾಗಿದ್ದು, ತಮ್ಮ ಅಧೀನದಲ್ಲಿದ್ದ ಅಧಿಕಾರಿಯಿಂದ ಭೂಮಿ ವ್ಯವಹಾರಕ್ಕೆ ಸಂಬಂಧಿಸಿ 20 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಇದೇ ಅಧಿಕಾರಿ ತನ್ನ ಪತ್ನಿ ಹೆಸರಿನಲ್ಲಿ 38 ಮಹಡಿಯ ವಾಣಿಜ್ಯ ಕಟ್ಟಡ ರಾಜಕಾಲುವೆ ಮೇಲೆ ಮಹಡಿ ಕಟ್ಟುತ್ತಿದ್ದು, ಇಂಥ ಅಧಿಕಾರಿ ಇಟ್ಟುಕೊಂಡರೆ ರಾಜ್ಯ ಹೇಗೆ ಉದ್ಧಾರ ಆಗುತ್ತದೆ. ಕಾನೂನುಬಾಹಿರವಾಗಿ ತನ್ನ ಅಧೀನದ ಅಧಿಕಾರಿ, ಬಿಲ್ಡರುಗಳನ್ನು ಹೆದರಿಸಿ ಐಪಿಎಸ್ ಅಧಿಕಾರಿ ಚಂದ್ರಶೇಖರ್ ಎಷ್ಟು ಕೋಟಿ ವಸೂಲಿ ಮಾಡಿದ್ದಾರೆ? ಎನ್ನುವುದು ಹೊರಗೆ ಬರಬೇಕು. ಇವರು ಒಂದು ಖಾಸಗಿ ತಂಡ ಇದೆ ಇಟ್ಟುಕೊಂಡು ಈ ದಂಧೆ ನಡೆಸುತ್ತಿದ್ದಾರೆ. ಈತನ ಬಗ್ಗೆ ದಾಖಲೆ ಸಮೇತ ಕೇಂದ್ರ ಗೃಹ ಕಾರ್ಯದರ್ಶಿಗೆ ಪತ್ರ ಬರೆಯುತ್ತೇನೆ ಎಂದು ತಿಳಿಸಿದ್ದಾರೆ.

ಮೊದಲೇ ಸರಣಿ ಅಪರಾಧ ಮಾಡಿ ಸಿಕ್ಕಿ ಹಾಕಿಕೊಂಡಿರುವ ಐಜಿಪಿ ಚಂದ್ರಶೇಖರ್‌ಗೆ ಸರಕಾರ ಆಮಿಷ ಒಡ್ಡಿ ಇಂತಹ ಕಾನೂನು ಬಾಹಿರ ಕೃತ್ಯ ಮಾಡಿಸುತ್ತಿದೆ. ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಹುದ್ದೆಯ ಆಮಿಷ ಒಡ್ಡಲಾಗಿದ್ದು, ಬಿ.ಕೆ.ಸಿಂಗ್, ಎಂ.ಚಂದ್ರಶೇಖರ್, ಗುಪ್ತದಳ ಮುಖ್ಯಸ್ಥರು ಸೇರಿದಂತೆ ಅನೇಕರಿಗೆ ಕಮಿಷನರ್ ಮಾಡುತ್ತೇವೆ ಎಂದು ಟೋಪಿ ಹಾಕಿದ್ದಾರೆ. ಇಂಥ ಸರಕಾರದಲ್ಲಿ ತನಿಖೆ ಪಾರದರ್ಶಕವಾಗಿ ನಡೆಯುತ್ತವೆ ಎನ್ನುವ ನಂಬಿಕೆ ಇಲ್ಲ.

-ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸಮಾಚಾರ ಸಣ್ಣದಲ್ಲ

ಸರ್ಫ್‌ರಾಜ್ ಖಾನ್ ಸೋದರನಿಗೆ ಅಪಘಾತ

ಲಖನೌ: ಟೀಂ ಇಂಡಿಯಾ ಕ್ರಿಕೆಟಿಗ ಸರ್ಫ‌ರಾಜ್ ಖಾನ್ ಅವರ ಸಹೋದರ ಮುಶೀರ್ ಖಾನ್ ಅವರು ಉತ್ತರ ಪ್ರದೇಶದಲ್ಲಿ ರಸ್ತೆ ಅಪಘಾತಕ್ಕೀಡಾಗಿ ತೀವ್ರವಾಗಿ ಗಾಯಗೊಂಡಿದ್ದಾರೆ. ಮುಂಬೈ ಮೂಲದ ಆಟಗಾರನಾದ ಮುಶೀರ್ ಖಾನ್ ಇರಾನಿ ಕಪ್ ಟೈ ಪರವಾಗಿ ಆಡಲು ಕಾನ್ಪುರದಿಂದ ಲಖನೌಗೆ ತನ್ನ ಕೋಚ್ ಆಗಿರುವ ತಂದೆ ನೌಶಾದ್ ಖಾನ್ ಅವರೊಂದಿಗೆ ಪ್ರಯಾಣಿಸುತ್ತಿದ್ದರು. ಈ ವೇಳೆ ರಸ್ತೆ ಅಪಘಾತಕ್ಕೀಡಾಗಿ ಮೂಳೆ ಮುರಿತಕ್ಕೆ ಒಳಗಾಗಿದ್ದಾರೆ. ಪ್ರತಿಭಾನ್ವಿತ ರಣಜಿ ಪ್ಲೇಯರ್ ಆಗಿರುವ 19 ವರ್ಷದ ಮುಶೀರ್ ಖಾನ್ ಈವರೆಗೆ 9 ಪ್ರಥಮದರ್ಜೆ ಪಂದ್ಯಗಳ ನ್ನಾಡಿದ್ದಾರೆ. ಇತ್ತೀಚೆಗೆ ದುಲೀಪ್ ಟ್ರೋಫಿಯಲ್ಲಿ ಭಾರತ ಎ ತಂಡದ ವಿರುದ್ಧ 181 ರನ್ ಗಳಿಸಿ ಮಿಂಚಿದ್ದರು.

ಎರಡನೇ ದಿನ ಮಳೆಯದ್ದೇ ಆಟ

ಕಾನ್ಪುರ ಟೆಸ್ಟ್: ಭಾರತ-ಬಾಂಗ್ಲಾದೇಶ ನಡುವಣ ಎರಡನೇ ಟೆಸ್ಟ್ ಪಂದ್ಯ ರದ್ದು ಸಂಭವ

ಕಾನ್ಪುರ್: ಇಲ್ಲಿನ ಗ್ರೀನ್ ಪಾರ್ಕ್‌ನಲ್ಲಿ ಶುಕ್ರವಾರ ಆರಂಭವಾಗಿರುವ ಭಾರತ ಹಾಗೂ ಬಾಂಗ್ಲಾದೇಶ ತಂಡಗಳ ನಡುವಣ ಎರಡನೇ ಟೆಸ್ಟ್ ಪಂದ್ಯದ ಎರಡನೇ ದಿನ ಮಳೆಗೆ ಆಹುತಿಯಾಗಿದೆ. ಎರಡನೇ ದಿನವಾದ ಶನಿವಾರ ಒಂದೂ ಎಸೆತ ಕಾಣದೆ ಆಟ ಅಂತ್ಯವಾಯಿತು. ಆ ಮೂಲಕ ಬೆಳಗಿನಿಂದ ಎರಡನೇ ದಿನದಾಟವನ್ನು ಆರಂಭಿಸಲು ಎದುರು ನೋಡುತ್ತಿದ್ದ ಎರಡೂ ತಂಡಗಳ ಆಟಗಾರರಿಗೆ ಭಾರಿ ನಿರಾಶೆಯಾಯಿತು.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ್ದ ಬಾಂಗ್ಲಾದೇಶ ತಂಡ ಶುಕ್ರವಾರ ಮೊದಲನೇ ದಿನದಾಟದ ಅಂತ್ಯಕ್ಕೆ 35 ಓವರ್‌ಗಳಲ್ಲಿ 3 ವಿಕೆಟ್‌ಗಳ ನಷ್ಟಕ್ಕೆ 107 ರನ್‌ಗಳನ್ನು ಕಲೆ ಹಾಕಿತ್ತು. ಮಳೆಯ ಕಾರಣ ಮೊದಲನೇ ದಿನದಾಟದಲ್ಲಿ ನಿಗದಿತ 90 ಓವರ್‌ಗಳನ್ನು ಮುಗಿಸಲು ಸಾಧ್ಯವಾಗಲಿಲ್ಲ. ಆದರೆ, ಎರಡನೇ ದಿನದಾಟವನ್ನು ಆರಂಭಿಸಲು ಬಾಂಗ್ಲಾದೇಶ ತಂಡ ಎದುರು ನೋಡುತ್ತಿತ್ತು. ಆದರೆ, ಬೆಳಗಿನಿಂದಲೇ ಇದಕ್ಕೆ ಮಳೆರಾಯ ಅವಕಾಶ ನೀಡಲಿಲ್ಲ.

ಬೆಳಗ್ಗೆ ತುಂತುರು ಮಳೆಯಾಗಿತ್ತು. ಆನಂತರ ಮಳೆ ಬಿರುಸಾಯಿತು. ಇದರಿಂದಾಗಿ ಮೈದಾನ ತೀವ್ರವಾಗಿ ಒದ್ದೆಯಾಗಿತ್ತು. ಆಟವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಕನಿಷ್ಠ ಕೊನೆಯ ಸೆಷನ್‌ನಲ್ಲಿ ಮಳೆ ನಿಲ್ಲಬಹುದು ಹಾಗೂ ಬಿಸಿಲು ಬರಬಹುದೆಂದು ನಿರೀಕ್ಷೆ ಮಾಡಲಾಗಿತ್ತು. ಆದರೆ, ಮಳೆ ನಿಲ್ಲುವ ಲಕ್ಷಣಗಳೇ ಕಾಣಲಿಲ್ಲ. ಆ ಮೂಲಕ ಎರಡನೇ ದಿನದಾಟ ಮುಗಿಯುವುದಕ್ಕೂ ಮುನ್ನವೇ ತಂಡಗಳು ಮೈದಾನವನ್ನು ತೊರೆದವು.

ಭಾನುವಾರವೂ ಮಳೆ ಬೀಳುವ ಸಾಧ್ಯತೆ: ಶುಕ್ರವಾರ,



ಶನಿವಾರದಂತೆ ಭಾನುವಾರವೂ ಕೂಡ ಎರಡನೇ ಟೆಸ್ಟ್ ಪಂದ್ಯಕ್ಕೆ ಮಳೆ ಕಾಟ ನೀಡಲಿದೆ ಎಂದು ಹವಾಮಾನ ವರದಿ ತಿಳಿಸಿದೆ. ಪಂದ್ಯದ ನಾಲ್ಕನೇ ದಿನವಾದ ಸೋಮವಾರ ಮತ್ತು ಐದನೇ ದಿನವಾದ ಮಂಗಳವಾರ ಬಿಸಿಲು ಇರಲಿದೆ ಎಂದು ಹೇಳಲಾಗಿದೆ. ಕೊನೆಯ ಎರಡು ದಿನಗಳಲ್ಲಿ ಪಂದ್ಯ ನಡೆದರೂ ಅಂತಿಮವಾಗಿ ಪಂದ್ಯ ಡ್ರಾನಲ್ಲಿ ಅಂತ್ಯವಾಗಬಹುದು. ಆ ಮೂಲಕ ಮೊದಲನೇ ಟೆಸ್ಟ್ ಪಂದ್ಯದಲ್ಲಿ ಗೆಲುವು ಪಡೆದ ಫಲವಾಗಿ ಭಾರತ 1-0 ಅಂತರದಲ್ಲಿ ಟೆಸ್ಟ್ ಸರಣಿಯನ್ನು ಗೆಲ್ಲಬಹುದು.

ಚೆನ್ನೈನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದಿದ್ದ ಮೊದಲನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ 280 ರನ್‌ಗಳಿಂದ ಗೆಲುವು ಪಡೆದಿತ್ತು. ಆ ಮೂಲಕ ಸರಣಿಯಲ್ಲಿ 1-0 ಮುನ್ನಡೆ ಪಡೆದಿದೆ.

ನಿಕೋಲಸ್ ದಾಖಲೆ

ಒಂದೇ ಋತುವಿನಲ್ಲಿ 2059 ರನ್ ಪೇರಿಸಿದ ಪೂರನ್
ಪಾಕಿಸ್ತಾನದ ಆಟಗಾರ ರಿಜ್ವಾನ್ ವಿಶ್ವ ದಾಖಲೆ ಪತನ

ಜಮೈಕಾ: ಟಿ20 ಕ್ರಿಕೆಟ್‌ನಲ್ಲಿ ಒಂದೇ ವರ್ಷ ಅತ್ಯಧಿಕ ಸಿಕ್ಸ್ ಸಿಡಿಸಿ ವಿಶ್ವ ದಾಖಲೆ ನಿರ್ಮಿಸಿದ್ದ ನಿಕೋಲಸ್ ಪೂರನ್ ಪಾಕಿಸ್ತಾನದ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಕ್ರಿಕೆಟ್ ಋತುವಿನಲ್ಲಿ ನಿಕೊಲಸ್ 2059 ರನ್ ಕಲೆ ಹಾಕಿ ರಿಜ್ವಾನ್ ದಾಖಲೆ ಮರಿದಿದ್ದಾರೆ.

ಕೆರಿಬಿಯನ್ ಪ್ರೀಮಿಯರ್ ಲೀಗ್‌ನ 28ನೇ ಪಂದ್ಯದಲ್ಲಿ ಬಾರ್ಬಡೋಸ್ ರಾಯಲ್ ವಿರುದ್ಧ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡದ ಸ್ಫೋಟಕ ದಾಂಡಿಗ ನಿಕೋಲಸ್ ಪೂರನ್ 15 ಎಸೆತಗಳಲ್ಲಿ 1 ಸಿಕ್ಸ್, 4 ಫೋರ್‌ಳೊಂದಿಗೆ 27 ರನ್ ಬಾರಿಸಿದ್ದರು. ಈ ಇಪ್ಪತ್ತೇಳು ರನ್‌ಗಳೊಂದಿಗೆ ಪೂರನ್ ಟಿ20 ಕ್ರಿಕೆಟ್‌ನಲ್ಲಿ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ ಒಂದು ಕ್ಯಾಲೆಂಡರ್ ವರ್ಷದೊಳಗೆ ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ ಮೊಹಮ್ಮದ್ ರಿಜ್ವಾನ್ ಹೆಸರಿನಲ್ಲಿತ್ತು. 2021ರಲ್ಲಿ ಪಾಕ್ ದಾಂಡಿಗ 45 ಇನಿಂಗ್ಸ್‌ಗಳಲ್ಲಿ ಒಟ್ಟು 2036 ರನ್ ಬಾರಿಸಿ ಈ ವಿಶ್ವ ದಾಖಲೆ ನಿರ್ಮಿಸಿದ್ದರು. ಇದೀಗ ಪೂರನ್ ಈ ದಾಖಲೆಯನ್ನು ಮುರಿದಿದ್ದಾರೆ.

2024ರಲ್ಲಿ 65 ಟಿ20 ಇನಿಂಗ್ಸ್ ಆಡಿರುವ ನಿಕೋಲಸ್ ಪೂರನ್ ಈವರೆಗೆ 2059 ರನ್ ಕಲೆಹಾಕಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲಿ ಒಂದು ಕ್ಯಾಲೆಂಡರ್ ವರ್ಷದಲ್ಲಿ ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆಯನ್ನು ತಮ್ಮದಾ ಗಿಸಿಕೊಂಡಿದ್ದಾರೆ. ಹಾಗೆಯೇ ಕ್ಯಾಲೆಂಡರ್ ವರ್ಷವೊಂದರಲ್ಲಿ ಟಿ20 ಕ್ರಿಕೆಟ್‌ನಲ್ಲಿ 2 ಸಾವಿರಕ್ಕೂ ಅಧಿಕ ರನ್ ಕಲೆಹಾಕಿದ ವಿಶ್ವದ 2ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೂ ನಿಕೋಲಸ್ ಪೂರನ್ ಪಾತ್ರರಾಗಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ ಒಂದು ಕ್ಯಾಲೆಂಡರ್ ವರ್ಷದಲ್ಲಿ ಅತ್ಯಧಿಕ ರನ್ ಕಲೆಹಾಕಿದ ಭಾರತೀಯ ಬ್ಯಾಟರ್ ದಾಖಲೆ ವಿರಾಟ್ ಕೊಹ್ಲಿ ಹೆಸರಿನಲ್ಲಿದೆ. 2016 ರಲ್ಲಿ ಆರ್‌ಸಿಬಿ ಮತ್ತು ಟೀಮ್ ಇಂಡಿಯಾ ಪರ ಒಟ್ಟು 29 ಟಿ20 ಇನಿಂಗ್ಸ್ ಆಡಿದ್ದ ಕಿಂಗ್ ಕೊಹ್ಲಿ 1614 ರನ್ ಕಲೆಹಾಕಿ ದಾಖಲೆ ನಿರ್ಮಿಸಿದ್ದಾರೆ.

ಹಾಗೆಯೇ ಟಿ20 ಕ್ರಿಕೆಟ್‌ನಲ್ಲಿ ಒಂದೇ ವರ್ಷದಲ್ಲಿ ಅತ್ಯಧಿಕ ಸಿಕ್ಸ್ ಸಿಡಿಸಿದ ವಿಶ್ವ ದಾಖಲೆಯನ್ನೂ ಸಹ ಪೂರನ್ ತಮ್ಮದಾಗಿ ಸಿಕೊಂಡಿದ್ದಾರೆ. 2024 ರಲ್ಲಿ 65 ಪಂದ್ಯ ಗಳಲ್ಲಿ ಬ್ಯಾಟ್ ಬೀಸಿರುವ ಪೂರನ್ ಒಟ್ಟು 152 ಸಿಕ್ಸ್‌ಗಳನ್ನು ಸಿಡಿಸಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಒಂದೇ ವರ್ಷ 150+ ಸಿಕ್ಸ್ ಬಾರಿಸಿದ ವಿಶ್ವದ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಐಪಿಎಲ್ ಆಟಗಾರರ ವೇತನ ಹೆಚ್ಚಳ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಆಟಗಾರರಿಗೆ ಪ್ರತಿ ಪಂದ್ಯಕ್ಕೆ 7.5 ಲಕ್ಷ ರೂ.ಗಳ ಪಂದ್ಯದ ವೇತನ ನೀಡಲಾಗುವುದು ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಪ್ರಕಟಿಸಿದ್ದಾರೆ. ಇದರೊಂದಿಗೆ ಆಟಗಾರರಿಗೆ ಭರ್ಜರಿ ಹಣವನ್ನು ಘೋಷಿಸಿದ್ದಾರೆ. ಫ್ರಾಂಚೈಸಿಗಳು ಇಷ್ಟು ಹಣವನ್ನು ಕೊಡಲೇಬೇಕು ಎಂಬುದಾಗಿ ಅವರು ಸೂಚನೆ ಕೊಟ್ಟಿದ್ದಾರೆ.

> ಪ್ರತಿ ಪಂದ್ಯಕ್ಕೆ 7.5 ಲಕ್ಷ ರುಪಾಯಿ ವೇತನ ಪ್ರಕಟಿಸಿದ ಬಿಸಿಸಿಐ

ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅಧ್ಯಕ್ಷರೂ ಆಗಿರುವ ಜಯ್ ಶಾ, ಪ್ರತಿ ಫ್ರಾಂಚೈಸಿಯು ಈ ಋತುವಿನ ಎಲ್ಲ ಪಂದ್ಯಗಳಿಗೆ ಪಂದ್ಯದ ಶುಲ್ಕವಾಗಿ 12.60 ಕೋಟಿ ರೂ.ಗಳನ್ನು ನಿಗದಿಪಡಿಸಬೇಕು ಎಂದು ಹೇಳಿದ್ದಾರೆ.

ಐಪಿಎಲ್‌ನಲ್ಲಿ ಸ್ಥಿರತೆ ಮತ್ತು ಚಾಂಪಿಯನ್ ಅತ್ಯುತ್ತಮ ಪ್ರದರ್ಶನವನ್ನು ಆಚರಿಸುವ ಉದ್ದೇಶದೊಂದಿಗೆ ನಮ್ಮ ಕ್ರಿಕೆಟಿಗರಿಗೆ ಪ್ರತಿ ಪಂದ್ಯಕ್ಕೆ 7.5 ಲಕ್ಷ ರೂ.ಗಳ ಪಂದ್ಯ ಶುಲ್ಕ ನೀಡುವುದಕ್ಕೆ ನಮಗೆ ಹೆಮ್ಮೆಯಾಗುತ್ತಿದೆ. ಒಂದು ಋತುವಿನ ಎಲ್ಲಾ ಲೀಗ್ ಪಂದ್ಯಗಳನ್ನು ಆಡುವ ಕ್ರಿಕೆಟಿಗನಿಗೆ ಅವರ ಒಪ್ಪಂದದ ಮೊತ್ತಕ್ಕೆ ಹೆಚ್ಚುವರಿಯಾಗಿ 1.05 ಕೋಟಿ ರೂ. ಸಿಗಲಿದೆ ಎಂದು ಜಯ್‌ಶಾ ಹೇಳಿಕೊಂಡಿದ್ದಾರೆ. ಪ್ರತಿ ಫ್ರಾಂಚೈಸಿ ಈ ಋತುವಿನಲ್ಲಿ ಪಂದ್ಯದ ಶುಲ್ಕವಾಗಿ 12.60 ಕೋಟಿ ರೂಪಾಯಿ ನಿಗದಿಪಡಿಸುತ್ತದೆ. ಇದು ಐಪಿಎಲ್ ಮತ್ತು ನಮ್ಮ ಆಟಗಾರರಿಗೆ ಹೊಸ ಯುಗ, ಎಂದು ಶಾ ಹೇಳಿದ್ದಾರೆ.

ಐಪಿಎಲ್ ಆಡಳಿತ ಮಂಡಳಿಗೆ ಭಾರತೀಯ ಕ್ರಿಕೆಟಿಗರ ಸಂಘದ (ಐಸಿಎ) ಪ್ರತಿನಿಧಿಯನ್ನು ಸೇರಿಸುವುದಾಗಿ ಎಜಿಎಂ ನಲ್ಲಿ ಹೇಳಲಾಗಿದೆ. ಸಾಮಾನ್ಯ ಸಭೆಯಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡುವುದು ಮತ್ತು ಕ್ರಿಕೆಟ್ ಸಮಿತಿಯಂತಹ ವಿವಿಧ ಉಪ ಸಮಿತಿಗಳ ನೇಮಕ ಮಾಡುವುದು ಪರಿಹರಿಸಬೇಕಾದ ಇತರ ವಿಷಯಗಳು ಕಾರ್ಯಸೂಚಿಯಲ್ಲಿವೆ.

ಯದುವೀರ್ ಭೇಟಿ ಮಾಡಿದ ಚಹಲ್

ಮೈಸೂರು: ಮೈಸೂರು-ಕೊಡಗು ಕ್ಷೇತ್ರದ ಸಂಸದ, ಮೈಸೂರು ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭಾರತೀಯ ಕ್ರಿಕೆಟಿಗ ಯಜುವೇಂದ್ರ ಚಹಲ್ ಮೈಸೂರಿನಲ್ಲಿ ಭೇಟಿಯಾದರು. ಇದರ ಫೋಟೋವನ್ನು ಯದುವೀರ್ ಸಾಮಾಜಿಕ ತಾಣದಲ್ಲಿ ಹಂಚಿಕೊಂಡಿದ್ದಾರೆ.



ಈ ಸಂದರ್ಭದಲ್ಲಿ ಯಜುವೇಂದ್ರ ಚಹಲ್‌ಗೆ ಸಾಂಪ್ರದಾಯಿಕ ಮೈಸೂರು ಪೇಟ ಹಾರ ಹಾಗೂ ಶಾಲು ಹಾಕಿ ಸನ್ಮಾನಿಸಲಾಗಿದೆ. ಈ ಕುರಿತಂತೆ ಟ್ವೀಟ್ ಮಾಡಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಖ್ಯಾತ ಭಾರತೀಯ ಕ್ರಿಕೆಟಿಗ ಯಜುವೇಂದ್ರ ಚಹಲ್ ಅವರನ್ನು ಮೈಸೂರಿನ ತಮ್ಮ ಕಚೇರಿಯಲ್ಲಿ ಭೇಟಿ ಮಾಡಲಾಯಿತು ಎಂದು ಬರೆದುಕೊಂಡಿದ್ದಾರೆ. ಇನ್ನು ಇದಕ್ಕೆ ಪ್ರತಿಯಾಗಿ ಚಹಲ್ ಕೂಡಾ ಈ ಬಗ್ಗೆ ಟ್ವೀಟ್ ಮಾಡಿದ್ದು, ಮೈಸೂರು ಯದುವೀರ್ ಒಡೆಯರ್‌ರನ್ನು ಭೇಟಿಯಾಗಿದ್ದು ವಿಶೇಷ ಗೌರವ' ಎಂದಿದ್ದಾರೆ.

ಚಹಲ್‌ಗೆ ಕರ್ನಾಟಕದ ನಂಟು: ಭಾರತದ ಯಶಸ್ವಿ ಲೆಗ್‌ಸ್ಪಿನ್ನರ್‌ಗಳಲ್ಲಿ ಒಬ್ಬರೆನಿಸಿಕೊಂಡಿರುವ ಯಜುವೇಂದ್ರ ಚಹಲ್‌ಗೆ ಕರ್ನಾಟಕ ಹಾಗೂ ಆರ್‌ಸಿಬಿ ಜತೆಗೆ ಒಳ್ಳೆಯ ಸಂಬಂಧವಿದೆ. 2014ರಲ್ಲಿ ಕೇವಲ 10 ಲಕ್ಷ ರುಪಾಯಿಗೆ ಆರ್‌ಸಿಬಿ ತಂಡವನ್ನು ಕೂಡಿಕೊಂಡ ಚಹಲ್, ಐಪಿಎಲ್‌ನ ಯಶಸ್ವಿ ಸ್ಪಿನ್ನರ್ ಆಗಿ ಬೆಳೆದು ನಿಂತರು. ಪರಿಣಾಮ ಆರ್‌ಸಿಬಿ ಪರವಾಗಿ ತೋರಿದ ಅದ್ಭುತ ಪ್ರದರ್ಶನದ ನೆರವಿನಿಂದ ಚಹಲ್, 2016ರಲ್ಲಿ ಟೀಂ ಇಂಡಿಯಾಗೆ ಪಾದಾರ್ಪಣೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಇನ್ನು ಚಹಲ್ ವಿಶೇಷ ಸಂದರ್ಭಗಳಲ್ಲಿ ಕನ್ನಡದಲ್ಲೇ ಟ್ವೀಟ್ ಮಾಡುವ ಮೂಲಕ ಕನ್ನಡಿಗರು ಹಾಗೂ ಕರ್ನಾಟಕದ ಅಭಿಮಾನಿಗಳ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಸದ್ಯ ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಚಹಲ್, ಸೋಷಿಯಲ್ ಮೀಡಿಯಾದಲ್ಲಿ ಆಗಾಗ ಕನ್ನಡದಲ್ಲೇ ಶುಭಕೋರಿ ಗಮನ ಸೆಳೆಯುತ್ತಾ ಬಂದಿದ್ದಾರೆ.

ಬಹುಮುಖ ಪ್ರತಿಭೆ: ಯಜುವೇಂದ್ರ ಚಹಲ್ ಕೇವಲ ಕ್ರಿಕೆಟ್‌ನಲ್ಲಿ ಮಾತ್ರವಲ್ಲದೇ ಚೆಸ್‌ನಲ್ಲಿಯೂ ಭಾರತವನ್ನು ಪ್ರತಿನಿಧಿಸಿದ ಬಹುಮುಖ ಪ್ರತಿಭೆ ಎನಿಸಿಕೊಂಡಿದ್ದಾರೆ. ಯಜುವೇಂದ್ರ ಚಹಲ್, ಅಂತಾರಾಷ್ಟ್ರೀಯ ಮಟ್ಟದಲ್ಲಿ ಚೆಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

ರಾಷ್ಟ್ರೀಯ ದಾಖಲೆ ಮುರಿದು ಚಿನ್ನ ಗೆದ್ದ ಗುಲ್ವೀರ್ ಸಿಂಗ್

ಹೊಸದಿಲ್ಲಿ: ಜಪಾನಿನ ನಿಗಾಟಾದಲ್ಲಿ ಶನಿವಾರ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್‌ನ ಪುರುಷರ 5,000 ಮೀ. ಓಟದ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆಯನ್ನು ಮುರಿದಿರುವ ಗುಲ್ವೀರ್ ಸಿಂಗ್ ಚಿನ್ನದ ಪದಕ ಜಯಿಸಿದ್ದಾರೆ.

ಗುಲ್ವೀರ್ 13:11.82 ಸೆಕೆಂಡ್‌ನಲ್ಲಿ ಗುರಿ ತಲುಪಿ ಈ ಸಾಧನೆ ಮಾಡಿದ್ದಾರೆ. ಈ ವರ್ಷದ ಜೂನ್‌ನಲ್ಲಿ ಗುಲ್ವೀರ್ ಅವರು ಪೋರ್ಟ್‌ಲ್ಯಾಂಡ್ ಟ್ರ್ಯಾಕ್ ಫೆಸ್ಟಿವಲ್‌ನಲ್ಲಿ 13:18.92 ಸೆಕೆಂಡ್‌ನಲ್ಲಿ ಗುರಿ ತಲುಪಿ ಅವಿನಾಶ್ ಸಾಬ್ಳೆ 2023ರಲ್ಲಿ ನಿರ್ಮಿಸಿದ್ದ ದಾಖಲೆಯನ್ನು ಮರಿದಿದ್ದರು.

26ರ ಹರೆಯದ ಗುಲ್ವೀರ್ ಕೇವಲ 13 ಸೆಕೆಂಡ್‌ನಿಂದ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾಗಿದ್ದರು. ಗುಲ್ವೀರ್ ಈ ವರ್ಷದ ಮಾರ್ಚ್‌ನಲ್ಲಿ ಕ್ಯಾಲಿಫೋರ್ನಿಯಾದಲ್ಲಿ ನಡೆದಿದ್ದ ದಿ ಟೆನ್ ಟ್ರ್ಯಾಕ್ ಕ್ರೀಡಾಕೂಟದಲಿ ಪುರುಷರ 10,000 ಮೀ. ಓಟದಲ್ಲಿ 27:41.81 ಸೆಕೆಂಡ್‌ನಲ್ಲಿ ಗುರಿ ತಲುಪಿದ್ದರು. ಈ ಮೂಲಕ ಭಾರತೀಯ ಪುರುಷರ ಟ್ರ್ಯಾಕ್ ಅ್ಯಂಡ್ ಫೀಲ್ಡ್‌ನ ಎರಡನೇ ಅತಿ ಹಳೆಯ ದಾಖಲೆ ಮುರಿದಿದ್ದರು.

ನವೆಂಬರ್‌ನಲ್ಲಿ ಆರಾಮ್ ಅರವಿಂದ ಸ್ವಾಮಿ

ಆರಂಭದಿಂದಲೂ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಿಸಿರುವ ಆರಾಮ್ ಅರವಿಂದ ಸ್ವಾಮಿ ಸಿನಿಮಾ ತೆರೆಗೆ ಬರಲು ರೆಡಿಯಾಗಿದೆ. ನವೆಂಬರ್‌ನಲ್ಲಿ ಅರವಿಂದ ಸ್ವಾಮಿ ಆರಾಮಾಗೆ ಬರಲಿದ್ದಾನೆ.

ಮಾಸ್ ಸಿನಿಮಾಗಳಲ್ಲಿಯೇ ಹೆಚ್ಚಾಗಿ ನಟಿಸಿರುವ ಅನೀಶ್ ,ಆರಾಮ್ ಅರವಿಂದ್ ಸ್ವಾಮಿ ಸಿನಿಮಾ ಮೂಲಕ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರವನ್ನು ಪ್ರೇಕ್ಷಕರಿಗೆ ಉಣಬಡಿಸಲಿದ್ದಾರೆ. ನಮ್ ಗಣಿ ಬಿಕಾಂ ಪಾಸ್ ಮತ್ತೆ ಗಜಾನನ ಅಂಡ್ ಗ್ಯಾಂಗ್ ಸಿನಿಮಾ ಮೂಲಕ ಭರವಸೆ ಮೂಡಿಸಿರುವ ಅಭಿಷೇಕ್ ಶೆಟ್ಟಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಅನೀಶ್‌ಗೆ ಜತೆಯಾಗಿ ಮಿಲನಾ ನಾಗರಾಜ್ ಹಾಗೂ ಹೃತಿಕಾ ಶ್ರೀನಿವಾಸ್ ನಟಿಸಿದ್ದಾರೆ. ಚಿತ್ರದ ಹಾಡುಗಳಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಶ್ರೀಕಾಂತ್ ಪ್ರಸನ್ನ ಹಾಗೂ ನಿರ್ಮಾಪಕ ಪ್ರಶಾಂತ್ ರೆಡ್ಡಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ವೈವಿಬಿ ಶಿವಸಾಗರ್ ಛಾಯಾಗ್ರಹಣ, ಉಮೇಶ್, ಸಂಕಲನ ಈ ಚಿತ್ರಕ್ಕಿದೆ.



ಧೂಮ್ ತಂಡ ಸೇರಿದ ರಣಬೀರ್

ಬಾಲಿವುಡ್ ನಲ್ಲಿ ಧೂಮ್ ಸರಣಿಯ ಸಿನಿಮಾಗಳು ತೆರೆಗೆ ಬಂದು ಸೂಪರ್ ಹಿಟ್ ಆಗಿವೆ. ಈಗ ಧೂಮ್ 4 ಸೆಟ್ಟೇರಲು ಸಿದ್ಧವಾಗಿವೆ.

ಈ ಚಿತ್ರದಲ್ಲಿ ನಾಯಕನಾಗಿ ಯಾರು ನಟಿಸಬಹುದು ಎಂಬ ಕುತೂಹಲವಿತ್ತು. ಅದಕ್ಕೆ ಉತ್ತರವೂ ಸಿಕ್ಕಿದೆ. ರಣಬೀರ್ ಕಪೂರ್ ಧೂಮ್ 4 ನಲ್ಲಿ ನಾಯಕನಾಗಿ ಅಭಿನಯಿಸಲಿದ್ದಾರೆ. ಜತೆಗೆ ತಮಿಳು ನಟ ಸೂರ್ಯ ಕೂಡ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಧೂಮ್ 4 ಸೈಬರ್ ಕ್ರೈಂ ಕಥೆಯನ್ನು ಒಳಗೊಂಡಿದ್ದು ರೋಚಕವಾಗಿ ಮೂಡಿಬರಲಿದೆ. ಇದು ಹೈ ಬಜೆಟ್ ಸಿನಿಮಾವಾಗಿದ್ದು, ಅದ್ದೂರಿಯಾಗಿ ಮೂಡಿಬರಲಿದೆ. ಯಶ್ ರಾಜ್ ಫಿಲಂಸ್ ಈ ಚಿತ್ರವನ್ನು ನಿರ್ಮಿಸಲಿದೆ.

ಧೂಮ್ ಚಿತ್ರದಲ್ಲಿ ಖಳನಾಯಕನೇ ನಾಯಕ ಇಲ್ಲಿ ನೆಗೆಟಿವ್ ರೋಲ್ ಪ್ರಧಾನವಾಗಿದ್ದು ಆ ಪಾತ್ರದ ಸುತ್ತ ಚಿತ್ರದ ಕಥೆ ಸಾಗಲಿದೆ. ಧೂಮ್ ಮೊದಲ ಭಾಗದಲ್ಲಿ ಜಾನ್ ಅಬ್ರಾಹಂ ಪ್ರಮುಖ ಪಾತ್ರದಲ್ಲಿ ನಟಿಸಿದ್ದರು. ಧೂಮ್ 2 ನಲ್ಲಿ ಹೃತಿಕ್ ರೋಷನ್ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಇನ್ನು ಧೂಮ್ 3 ಯಲ್ಲಿ ಅಮೀರ್ ಖಾನ್ ದ್ವಿಪಾತ್ರದಲ್ಲಿ ಅಭಿನಯಿಸಿದ್ದರು. ಧೂಮ್ ಮೂರೂ ಭಾಗಗಳು ಭರ್ಜರಿ ಯಶಸ್ಸು ಪಡೆದಿದ್ದವು. ಈ ಯಶಸ್ಸಿನ ಖುಷಿಯಲ್ಲಿ ಧೂಮ್ ಮುಂದುವರಿದ ಭಾಗ ಮೂಡಿಬರುತ್ತಿದೆ. ರಣವೀರ್ ಕಪೂರ್ ಪ್ರಮುಖ ಪಾತ್ರದಲ್ಲಿ ಮಿಂಚಲಿದ್ದಾರೆ. ಕಿಯಾರಾ ಅಡ್ವಾಣಿ ನಾಯಕಿಯಾಗುವ ನಿರೀಕ್ಷೆಯಿದೆ.

ದಾಖಲೆ ಬರೆಯಲಿದೆ ಛಾವಾ

ಬಾಲಿವುಡ್ ನಲ್ಲಿ ಬಹು ಬೇಡಿಕೆಯ ನಟನಾಗಿರುವ ವಿಕ್ಕಿ ಕೌಶಲ್ ಛಾವಾ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದು ಐತಿಹಾಸಿಕ ಕಥೆಯ ಸಿನಿಮಾವಾಗಿದ್ದು, ಛತ್ರಪತಿ ಸಾಂಬಾಜಿ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಾಯಕಿಯಾಗಿ ರಶ್ಮಿಕಾ ಮಂದಣ್ಣ ಬಣ್ಣಹಚ್ಚಿದ್ದು ಯೇಸುಬಾಯಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಲಕ್ಷಣ್ ಉಟೇಕರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರ ಆರಂಭದಿಂದಲೂ ಸದ್ದು ಮಾಡುತ್ತಿದೆ. ವಿಶೇಷ ಎಂದರೆ ಛಾವಾ, ಹಾಡಿನ ಮೂಲಕ ದಾಖಲೆ ಬರೆಯಲು ರೆಡಿಯಾಗಿದೆ. ಸಾಮಾನ್ಯವಾಗಿ ಹಾಡಿನಲ್ಲಿ ನೂರು, ಇನ್ನೂರು ಸಹ ಕಲಾವಿದರು ಕಾಣಿಸಿಕೊಳ್ಳಲಿದ್ದಾರೆ. ಆದರೆ ಛಾವಾ ಚಿತ್ರದಲ್ಲಿ ಬರೋಬ್ಬರಿ ಏಳುನೂರು ಮಂದಿ ಸಹ ಕಲಾವಿದರು ನೃತ್ಯ ಮಾಡಲಿದ್ದಾರೆ. ಮರಾಠಿ ಜಾನಪದ ಸಾಹಿತ್ಯದ ಈ ಹಾಡು ಇನ್ನೇನು ಚಿತ್ರೀಕರಣಗೊಳ್ಳಲಿದೆ. ವಿಜಯ್ ಗಂಗೂಲಿ ನೃತ್ಯ ನಿರ್ದೇಶನ ಮಾಡಲಿದ್ದಾರೆ.

ಕುರಿಫಾರಂನ ಕುತೂಹಲದ ಕಥೆ

ಗ್ರಾಮೀಣ ಭಾಗದ ಕಥೆಗಳೇ ಹಾಗೆ. ಒಂದಷ್ಟು ಮನರಂಜನೆ ಉಣಬಡಿಸುತ್ತವೆ. ಅಂತೆಯೇ ಈ ವಾರ ತೆರೆಗೆ ಬಂದ ಕೇಧಾರನಾಥ ಕುರಿಫಾರಂ ಹಳ್ಳಿಗಾಡಿನ ಕಥೆಯನ್ನು ಒಳಗೊಂಡಿದ್ದು ಕಾಮಿಡಿ ಕಚಗುಳಿ ಇಡುತ್ತದೆ. ಆತ ಮಂಜ ಕೇಧಾರನಾಥ ಕುರಿಫಾರಂನಲ್ಲಿ ಕೆಲಸ ಮಾಡುವಾತ, ಅಪ್ಪಟ ಹಳ್ಳಿಹುಡುಗ ಮಂಜನಿಗೆ ಬೇಲಿ ಹಾರುವುದೇ ಕೆಲಸ, ತನ್ನ ಪೋಲಿ ಗೆಳೆಯರೊಂದಿಗೆ ಊರು ಸುತ್ತವುದೇ ಆತನ ಕಯಾಲಿಯಾಗಿರುತ್ತದೆ.

> **ಚಿತ್ರ:** ಕೇದಾರನಾಥ ಕುರಿಫಾರಂ
> **ನಿರ್ದೇಶನ:** ಶೀನು ಸಾಗರ್
> **ನಿರ್ಮಾಣ:** ಕೆ.ಎಂ ನಟರಾಜು
> **ತಾರಾಗಣ:** ಮಡೆನೂರು ಮಂಜು, ಶಿವಾನಿ, ಟೆನ್ನಿಸ್ ಕೃಷ್ಣ, ಕರಿಸುಬ್ಬು ಮುಂತಾದವರು.
> **ರೇಟಿಂಗ್:** 2.5

ಹೀಗಿರುವಾಗಲೇ ಕೇದಾರನಾಥ ಕುರಿಫಾರಂಗೆ ದೂರದೂರಿನಿಂದ ಕೆಲಸ ಅರಸುತ್ತಾ ಸಣ್ಣಪ್ಪನ ಕುಟುಂಬ ಬರುತ್ತದೆ. ಸಣ್ಣಪ್ಪನ ಮಗಳು ವಾಸಂತಿ ಕೂಡ ಅದೇ ಕುರಿಫಾರಂನ ಪಕ್ಕದ ಮನೆಯಲ್ಲಿಯೇ ವಾಸ್ತವ್ಯ ಹೂಡುತ್ತಾರೆ. ವಾಸಂತಿಯನ್ನು ನೋಡಿ ಮಂಜನಿಗೆ ಮೊದಲ ನೋಟದಲ್ಲಿಯೇ ಪ್ರೀತಿ ಮೂಡುತ್ತದೆ. ವಾಸಂತಿಯನ್ನು ಪ್ರಾಮಾಣಿಕವಾಗಿ ಪ್ರೀತಿಸುತ್ತಾನೆ. ಹೀಗಿರುವಾಗಲೇ ಸಣ್ಣಪ್ಪನ ಹೆಂಡತಿ ಹಾಗೂ ಕುರಿಫಾರಂ ಮಾಲೀಕನ ನಡುವಿನ ಅನೈತಿಕ ಸಂಬಂಧ ಬಯಲಾಗುತ್ತದೆ. ಇದರಿಂದ ಸಣ್ಣಪ್ಪ ಕೆಂಡಾಮಂಲನಾಗುತ್ತಾನೆ. ಫಾರಂ ಮಾಲೀಕ ಸಣ್ಣಪ್ಪನನ್ನು ಕೊಲೆಮಾಡಿಸುತ್ತಾನೆ. ಇದನ್ನು ಅರಿತ ವಾಸಂತಿ ಕುರಿಫಾರಂ ಮಾಲೀಕ ಕೊಲೆ ಮಾಡಲು ಮಂಜನಿಗೆ ಸುಫಾರಿ ನೀಡುತ್ತಾಳೆ. ತನ್ನ ಪ್ರೇಯಸಿ ಒಪ್ಪಿಸಿದ ಕೆಲಸವನ್ನು ಮಂಜು ಚಾಚು ತಪ್ಪದೇ ಮಾಡುತ್ತಾನೆ. ಮಾಲೀಕನ ಕಥೆ ಮುಗಿಸಿದ ಮೇಲೆ ಮಂಜನಿಗೆ ಯಾವೆಲ್ಲಾ ಸಮಸ್ಯೆಗಳು ಕಾಡುತ್ತವೆ. ಅದನ್ನು ಹೇಗೆ ಎದುರಿಸುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ನಿರ್ದೇಶಕ ಶೀನು ಸಾಗರ್ ಕೇದಾರನಾಥ ಕುರಿಫಾರಂನಲ್ಲಿ ಹಳ್ಳಿಗಾಡಿನ ಕಥೆಯನ್ನು ಮೆಚ್ಚುವಂತೆ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.ಅದಕ್ಕೆ ಇನ್ನೊಂದಷ್ಟು ಸೆಂಟಿಮೆಂಟ್ ಬೆರಸಿ ಕಟ್ಟಿಕೊಡಬಹುದಿತ್ತು ಎನ್ನಿಸುತ್ತದೆ.

ಮಂಜನಾಗಿ ನಟ ಮಡೆನೂರು ಮಂಜು ಅದ್ಭುತವಾಗಿ ನಟಿಸಿದ್ದಾರೆ. ಶಿವಾನಿ ನಾಯಕಿಯಾಗಿ ನಟಿಸಿದ್ದು ಅಪ್ಪಟ ಹಳ್ಳಿಹುಡುಗಿಯಂತೆ ಕಂಗೊಳಸಿದ್ದಾರೆ. ಉಳಿದಂತೆ ಟೆನ್ನಿಸ್ ಕೃಷ್ಣ ,ಕರಿಸುಬ್ಬು ಮುಂತಾದವರು ಮೆಚ್ಚುವ ಅಭಿನಯ ತೋರಿದ್ದಾರೆ. ಹಿನ್ನೆಲೆ ಸಂಗೀತ, ಛಾಯಾಗ್ರಹಣ ಸಾಧಾರಣವಾಗಿದೆ.

ಕೊರಗಜ್ಜ ಸಿನಿಮಾ ಮೆಚ್ಚಿದ ತ್ರಿವಿಕ್ರಮ

ತ್ರಿವಿಕ್ರಮ ಸಿನಿಮಾಸ್ ಮತ್ತು ಸಕ್ಸಸ್ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಕೊರಗಜ್ಜ ಸಿನಿಮಾದ ಮೊದಲ ಪ್ರತಿ ಸಿದ್ಧವಾಗಿದೆ. ಸಿನಿಮಾ ನೋಡಿದ ನಿರ್ಮಾಪಕ ತ್ರಿವಿಕ್ರಮ ಸಪಲ್ಯ, ಸಿನಿಮಾದ ಗುಣಮಟ್ಟ, ತಾಂತ್ರಿಕತೆ ಮತ್ತು ಮಾಸ್ ಅಪೀಲ್‌ಗೆ ಫಿದಾ ಆಗಿದ್ದಾರೆ. ನಿರ್ದೇಶಕ ಸುಧೀರ್ ಅತ್ತಾವರ್‌ಗೆ ಕಾರು ಉಡುಗೊರೆಯಾಗಿ ನೀಡಿದ್ದಾರೆ.

ನಿರ್ದೇಶಕರ ಸೃಜನಶೀಲ ತಾಂತ್ರಿಕ ನೈಪುಣ್ಯತೆಯೊಂದಿಗೆ ಸುಮಾರು ಹದಿನೈದು ಕೋಟಿ ವೆಚ್ಚದ ಈ ಸಿನಿಮಾ ಯಾವ ಮಟ್ಟದಲ್ಲಿ ಮೂಡಿಬಂದಿರಬಹುದು ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ.

ನಮ್ಮ ತ್ರಿವಿಕ್ರಮ ಸಿನಿಮಾಸ್ ಬ್ಯಾನರ್‌ನಲ್ಲಿ ಈ ಮಟ್ಟದಲ್ಲಿ ಸಿನಿಮಾ ಮೂಡಿಬರುತ್ತದೆ ಎಂದು ನಾನು ಊಹಿಸಿರಲಿಲ್ಲ. ಕೊರಗಜ್ಜ ಸಿನಿಮಾ ಎಲ್ಲಾ ಊಹೆಯನ್ನು ಮೀರಿ ಅದ್ಭುತವಾಗಿ

ಮೂಡಿಬಂದಿದೆ. ಭಾರತೀಯ ಚಿತ್ರರಂಗದಲ್ಲೇ ಇದೊಂದು ವಿಶಿಷ್ಟ ಚಿತ್ರವಾಗಿ ಮೂಡಿಬಂದಿದೆ. ನಿರ್ದೇಶಕರು ಸುಮಾರು ಒಂದೂವರೆ ವರ್ಷಗಳ ಕಾಲ ಸಂಶೋಧನೆ ನಡೆಸಿ ತನಿಯಾ ಎಂಬ ಆದಿವಾಸಿ ಹುಡುಗ ಮಹಾನ್ ಶಕ್ತಿ ಕೊರಗಜ್ಜನಾಗಿ ಬೆಳಗುತ್ತಿರುವ ಬಗೆ ಹೇಗೆ ಎನ್ನುವುದನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಎಂದು ನಿರ್ಮಾಪಕರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ನಿರ್ದೇಶನ ಮಾತ್ರವಲ್ಲದೆ, ಸಿನಿಮಾಗೆ ಕಲಾ ನಿರ್ದೇಶನ, ಮೇಕಪ್ ಡಿಸೈನ್ ಕೂಡಾ ಸುಧೀರ್ ಅತ್ತಾವರ್ ಅಧ್ಭುತವಾಗಿ ಮಾಡಿದ್ದಾರೆ. ಕೊರಗಜ್ಜ ಸಿನಿಮಾ ಡಿಸೆಂಬರ್ ತಿಂಗಳಲ್ಲಿ ಬಿಡುಗಡೆಯಾಗಲಿದೆ.

ಇನ್ನೂರು ವರ್ಷಗಳಿಗೂ ಮಿಗಿಲಾದ ಇತಿಹಾಸವಿರುವ ಜರ್ಮನಿಯ ಮ್ಯೂನಿಕ್‌ನಲ್ಲಿ ಈಗ ನಡೆಯುತ್ತಿರುವ 'ಅಕ್ಟೋಬರ್ ಫೆಸ್ಟ್' ನಿಜಕ್ಕೂ ರೋಮಾಂಚಕಾರಿ ಅನುಭವ ನೀಡುವಂತಹದ್ದು. ಸೆಪ್ಟೆಂಬರ್ 21ರಿಂದ ಆರಂಭಗೊಂಡು, ಅಕ್ಟೋಬರ್ 6ನೆಯ ತಾರೀಕು ಮುಕ್ತಾಯಗೊಳ್ಳುತ್ತಿರುವ ಈ ಹಬ್ಬದ ಅವಧಿಯಲ್ಲಿ, ಮಿಲಿಯಗಟ್ಟಲೆ ಲೀಟರ್ ಬಿಯರ್ ಖರ್ಚಾಗುತ್ತದೆ! ಅಷ್ಟೊಂದು ಜನ ಬಿಯರ್ ಪ್ರಿಯರು ಇಲ್ಲಿ ನೆರೆದು, ಪಾನೀಯ ಸೇವಿಸಿ, ಕುಣಿದು ಕುಪ್ಪಳಿಸಿ ಮಜಾ ಮಾಡುತ್ತಾರೆ. ಇದನ್ನು ನೋಡಲೆಂದೇ ದೇಶ ವಿದೇಶಗಳ ಪ್ರವಾಸಿಗರು ಬರುವುದರಿಂದಾಗಿ, ಈ ದೇಶದ ಪ್ರವಾಸೋದ್ಯಮಕ್ಕೂ ಈ ಹಬ್ಬದ ಕೊಡುಗೆ ಇದೆ. ಹಾಗೆಂದು ಇದು ಬಿಯರ್ ಹಬ್ಬ ಮಾತ್ರ ಎಂದು ತಿಳಿಯಬೇಡಿ : ಈ ಹಬ್ಬದ ನೆಪದಲ್ಲಿ ಸ್ಥಳೀಯ ಸಂಪ್ರದಾಯದ ವಿವಿಧ ಬಣ್ಣದ ಬಟ್ಟೆಗಳನ್ನು ಧರಿಸಿ, ಜನರು ಸಂಭ್ರಮಿಸುತ್ತಾರೆ, ಸ್ಥಳೀಯ ಸಂಪ್ರದಾಯಗಳನ್ನು ನೆನಪಿಸಿಕೊಳ್ಳುತ್ತಾರೆ. ಅಕ್ಟೋಬರ್ ಫೆಸ್ಟ್ ಈಗ ಜರ್ಮನಿಯ ಸಾಂಸ್ಕೃತಿಕ ಪರಂಪರೆಯ ಭಾಗವಾಗಿಬಿಟ್ಟಿದೆ.

ಇಲ್ಲಿ ಹರಿಯುತ್ತದೆ ಬಿಯರ್‌ನ ಹೊಳೆ! ಇದೊಂದು ಮತ್ತಿನ ಜಾತ್ರೆ!

ಮ್ಯೂನಿಕ್‌ನಲ್ಲಿ ಅಕ್ಟೋಬರ್ ಹಬ್ಬ!

» ಎಸ್. ಪಿ. ವಿಜಯಲಕ್ಷ್ಮಿ

ಹದಿನಾರು ದಿನಗಳ ಕಾಲ ಲಕ್ಷಲಕ್ಷಗಟ್ಟಲೆ ಬಿಯರ್ ಸರಬರಾಜಿನಲ್ಲಿ ವಿಶ್ವಪ್ರವಾಸಿಗರನ್ನು ಮತ್ತೇರಿಸುವ, ಅಮ್ಯೂಸ್ಮೆಂಟ್ ರೈಡುಗಳಿಂದ ಮೋಜು-ಥ್ರಿಲ್ ಉಕ್ಕಿಸುವ, ವೈವಿಧ್ಯಮಯ ಬವೇರಿಯನ್ ತಿಂಡಿತೀರ್ಥಗಳ ಅಂಗಡಿಗಳಿಂದ ಆಕರ್ಷಿಸುವ, ಮಕ್ಕಳಿಗಾಗಿಯೇ ಮನೋರಂಜಕ ಕ್ರೀಡೋತ್ಸವಗಳಲ್ಲಿ ರಂಜಿಸುವ, ಸಾವಿರಾರು ಮಂದಿ ಬಿಯರ್‌ಪ್ರಿಯರು ಕೂತು ಎಂಜಾಯ್ ಮಾಡುವ ದೈತ್ಯ ಸ್ಟಾಲ್‌ಗಳನ್ನು ತೆರೆದಿರುವ, ಮಜಬೂತಾದ ಬವೇರಿಯನ್ ಕುದುರೆ ಛಾರಿಯೆಟ್‌ಗಳಲ್ಲಿ ಮನರಂಜನೆ ಆಸ್ವಾದಿಸುವ, ಬಣ್ಣಬಣ್ಣದ ಉಡುಗೆತೊಡುಗೆಗಳಲ್ಲಿ ಮೋಹಕವಾಗಿ ಕಾಣುವ ಹೆಂಗಳೆ-ಪುರುಷ-ಮಕ್ಕಳ ಸಮೂಹವೇ ನೆರೆಯುವ, ಈ ಎಲ್ಲವೂ ಒಂದೆಡೆಯಲ್ಲೇ ಕಾಣುವ, ಜಾತ್ರೆಯಂಥ ಮೇಳ ನೋಡುವಾಸೆಯೇ? ಹಾಗಿದ್ದರೆ ಬನ್ನಿ ಮ್ಯೂನಿಕ್‌ಗೆ; 'ಮ್ಯೂನ್ಶೇನ್' ಅಂದರೆ ಜರ್ಮನಿಯ 'ಮ್ಯೂನಿಕ್' ಪ್ರಜೆಗಳಿಂದ 'ವೀಸೆನ್'ಎಂದು ಚಿಕ್ಕದಾಗಿ ಕರೆಸಿಕೊಳ್ಳುವ 'ಬಿಯರ್ ಫೆಸ್ಟ್' ಅಥವಾ 'ಅಕ್ಟೋಬರ್ ಫೆಸ್ಟ್'ಗೆ!

ಕಳೆದ ವಾರ ಸೆ.21 ನೇ ತಾರೀಖು ಆರಂಭವಾಗಿ, ಭಾನುವಾರ, 22ನೇ ತಾರೀಖು ಮ್ಯೂನಿಕ್ಕಿನ ಹೃದಯಭಾಗದಲ್ಲಿ 'ಫೆಸ್ಟ್ ಓಪನ್ ಪೆರೇಡ್' ನಡೆದು, ಮ್ಯೂನಿಕ್ ಈಗ ಬವೇರಿಯನ್ ಪ್ರಜೆಗಳ 'ಲುಕ್'ನಲ್ಲಿ ಫಳಫಳಾ ಅಂತಿದೆ ಈ ಹಬ್ಬ. ಇಂತಹ 'ಅಕ್ಟೋಬರ್ ಫೆಸ್ಟ್' ಬಹಳ ಮಂದಿಗೆ ತಿಳಿದಿದೆ, ಈಗ ಬೆಂಗಳೂರಿನಲ್ಲೂ ಸಣ್ಣ ಪ್ರಮಾಣದಲ್ಲಿ ನಡೆಯುವ ವರದಿಯನ್ನೂ ಜನ ಓದಿರುತ್ತಾರೆ, ಕೆಲವರು ಕಂಡಿರಲೂಬಹುದು. ಆದರೆ ಜರ್ಮನಿಯ ಬವೇರಿಯಾ ರಾಜ್ಯದ ಮ್ಯೂನಿಕ್ ನಗರದಲ್ಲಿ ನಡೆಯುವ ಫೆಸ್ಟಿವಲ್ ತುಂಬಾ ವಿಶಿಷ್ಟ; ಇದು ಇಲ್ಲೇ ಹುಟ್ಟಿಕೊಂಡ ಬವೇರಿಯನ್ನರ ಮೂಲ ಹಬ್ಬ, ಸಾಂಸ್ಕೃತಿಕ ಪರಂಪರೆಯ ಭಾಗ ಹಾಗೂ ಜಗತ್ಪ್ರಸಿದ್ಧವಾದದ್ದೂ ಕೂಡ. ಇಲ್ಲಿಯ ದೊರೆ ಒಂದನೇ ಲುಡ್ವಿಗ್‌ನ ವಿವಾಹದ ಸಂತೋಷ ಸಮಾರಂಭವಾಗಿ 1810ರಲ್ಲಿ ಆರಂಭವಾದ ಈ ಕೂಟ ಇಂದು ಜರ್ಮನಿಯ ಅತ್ಯಾಕರ್ಷಕ ಫನ್‌ಫೇರ್ ಆಗಿ ವಿಶ್ವದಲ್ಲೇ ದೊಡ್ಡದೆಂದು ಖ್ಯಾತಿಯಾಗಿದೆ.

ಸೆಪ್ಟೆಂಬರ್ 16ಕ್ಕೆ ಆರಂಭವಾಗುವ ಈ ಫೆಸ್ಟ್ ಅಕ್ಟೋಬರ್ ಮೊದಲ ವಾರದ ವೀಕೆಂಡ್ ನಂತರದ ಸೋಮವಾರ ಅಥವಾ 'ಜರ್ಮನ್ ಯೂನಿಫಿಕೇಷನ್ ಡೇ' ಮರುದಿನ ಇದ್ದರೆ ಅಂದು ಮುಕ್ತಾಯವಾಗುತ್ತದೆ. ಸೆಪ್ಟೆಂಬರ್‌ನಲ್ಲಿಯೇ ಮ್ಯೂನಿಕ್‌ನಗರ ಈ ಹಬ್ಬದ ಸಿದ್ಧತೆಗೆ ಸಜ್ಜಾಗಿ ಬಿಡುವುದು ನಾನಿಲ್ಲಿ ಕಂಡ ರೋಚಕ ಸಂಗತಿ. ಮ್ಯೂನ್ಷೇನರು (ಮ್ಯೂನಿಕ್ ನಾಗರಿಕರು) ಈ ಹಬ್ಬವನ್ನು ಸಂಭ್ರಮಿಸಲು ತಮ್ಮ ಅಗತ್ಯದ ಉಡುಪುಗಳನ್ನು ಖರೀದಿಸುವುದೋ ಅಥವಾ ಇದ್ದುದನ್ನು ಹೊರಗೆ ತಂದು ಸಿದ್ಧ ಮಾಡಿಟ್ಟುಕೊಳ್ಳುವ ಸಡಗರದಲ್ಲಿ ತೊಡಗುವುದೋ ಆರಂಭವಾಗಿಬಿಡುತ್ತದೆ. ಎಲ್ಲೆಲ್ಲಿ ನೋಡಲಿ ಈ ಫೆಸ್ಟ್‌ನ 'ಮೂಡ್' ಎದ್ದೆದ್ದು ಕಣ್ಣಿಗೆ ರಾಚುತ್ತದೆ. ನಗರದ ಕೇಂದ್ರಭಾಗ ಮರಿಯನ್ ಪ್ಲಾಟ್ಜ್ ಇನ್ನಿತರ ಕಡೆ ಈ ಹಬ್ಬದ ವಿವರಗಳು, ಬೇಕಾದ ಅಲಂಕೃತ ವಸ್ತುಗಳು, ಹೃದಯದಾಕಾರದ ಸಿಹಿತಿಂಡಿಗಳ ಸ್ಟಾಲ್ ಕಣ್ಣಿಗೆ ಬೀಳುವುದು ಖಚಿತ. ಇಲ್ಲಿನ ಜನ ಮಾತ್ರವಲ್ಲ, ಸುತ್ತಮುತ್ತಲ ನಗರ, ಹಳ್ಳಿಗಳಿಂದ, ಅಷ್ಟೇಕೆ ವಿಶ್ವದ ನಾನಾಕಡೆಯಿಂದ ಇಲ್ಲಿಗೆ ಪ್ರವಾಸಿಗರು ಅಕ್ಟೋಬರ್ ಫೆಸ್ಟ್ ನೋಡಿ, ಎಂಜಾಯ್ ಮಾಡಲೆಂದೇ ಆಗಮಿಸುತ್ತಾರೆ. 16 ದಿನ ನಡೆಯುವ ಈ ಬೃಹತ್ ಜಾತ್ರೆಯಂಥ ಮೇಳದಲ್ಲಿ ಸುಮಾರು 50-60 ಲಕ್ಷ ಪ್ರವಾಸಿಗರ ಭೇಟಿ ಇರುವುದೆಂದರೆ ಇದರ ಜನಪ್ರಿಯತೆಯನ್ನು ನೀವೇ ಲೆಕ್ಕ ಹಾಕಿ!

ಚಕ್ಕಳದಂತಿರುವ ತಿನಿಸು!

ಈ ಫೆಸ್ಟಿವಲ್‌ನಲ್ಲಿ ಮುಖ್ಯವಾಗಿ ಎದ್ದುಕಾಣುವ ಸಂಗತಿಗಳು ನಾಲ್ಕು. ಒಂದು, ಬ್ರೂಯರಿ ಕಂಪೆನಿಗಳ ದೊಡ್ಡದೊಡ್ಡ ಟೆಂಟ್‌ಗಳು, ಇಲ್ಲಿ ಬಿಯರ್‌ನ ಭರಪೂರ ಸೇವನೆಯ ಮೋಜು. ಒಂದು ರೀತಿಯಲ್ಲಿ ಇಲ್ಲಿ ಬಿಯರ್‌ನ ಹೊಳೆಯೇ ಹರಿಯತ್ತದೆ! ಎರಡು, ಎಲ್ಲೆಲ್ಲಿ ನೋಡಲಿ ಬವೇರಿಯಾದ ಟ್ರೆಡಿಷನಲ್‌ಡ್ರೆಸ್ ತೊಟ್ಟ ಸುಂದರಜೋಡಿ ಮತ್ತು ಮಕ್ಕಳು. ಮೂರು, ಎಲ್ಲ ಸ್ಟಾಲ್‌ಗಳಲ್ಲೂ ತೂಗುಬಿದ್ದಿರುವ ಹಾರ್ಟ್ ಆಕಾರದ ಚಿಕ್ಕದೊಡ್ಡ ಅಲಂಕಾರಿಕ ಚಾಕೋಲೇಟ್‌ಗಳು. ನಾಲಕ್ಕು, ಎಲ್ಲೆಲ್ಲೂ ಕಣ್ಣಿಗೆ ರಾಚುವ ಟ್ರೆಡಿಷನಲ್ ಆಹಾರವಾದ 'ಪ್ರೆಟ್ಝೆಲ್' ಎನ್ನುವ ಬ್ರೆಡ್ ಮತ್ತು ಟ್ರೆಡಿಷನಲ್ ಬವೇರಿಯನ್ ಫುಡ್‌ಸ್ಟಾಲ್‌ಗಳು. ಹೃದಯಾಕಾರದಲ್ಲಿರುವ ಚಿಕ್ಕದೊಡ್ಡ ರೂಪದ ಈ 'ಪ್ರೆಟ್ಝೆಲ್ಲ'ನ್ನು ಜರ್ಮನ್ನರು ಬಹಳ ಇಷ್ಟಪಟ್ಟು ಬಿಯರ್‌ನೊಂದಿಗೆ ಸವಿಯುತ್ತಾರೆ. ಇದರ ರುಚಿ ಒಮ್ಮೆ ನೋಡಿದೆ; ನನಗೇನೋ ಇದರಲ್ಲಿ ಯಾವ ಸ್ವಾರಸ್ಯವೂ ಕಾಣಲಿಲ್ಲ. ಉಪ್ಪುಪ್ಪಾಗಿ, ಚಕ್ಕಳದಂತಿರುವ ಇದು ನಮ್ಮ ಸ್ಪೈಸಿ ನಾಲಿಗೆಗೆ ಒಗ್ಗಲಿಲ್ಲ.

ಅಕ್ಟೋಬರ್ ಫೆಸ್ಟಿವಲ್ - ಇದು ಮ್ಯೂನಿಕ್‌ನ ಹೃದಯಭಾಗದಲ್ಲಿ 'ಥೆರೆಸಿಯನ್‌ವೀಸೆ' ಎಂಬಲ್ಲಿ ಪ್ರತಿವರ್ಷ ನಡೆಯುತ್ತದೆ. ನಮ್ಮ ವಾಸಸ್ಥಳದಿಂದ ಮೆಟ್ರೋ ರೈಲಿನಲ್ಲಿ ಪಯಣಿಸಿ, ಈ ಅತಿ ದೊಡ್ಡ ಜಾಗಕ್ಕೆ ಹತ್ತಿರದ ಸ್ಟೇಷನ್‌ಗೆ ತಲುಪಿ ಮೆಟ್ರೋರೈಲಿನಿಂದಿಳಿದ ಮೇಲೆ ಈ ಮೈದಾನ ಎಲ್ಲಿದೆ ಎಂದು ಯಾರನ್ನೂ ಕೇಳುವ ಅಗತ್ಯವೇ ಬರುವುದಿಲ್ಲ. ಕಾರಣ, ಈಗಾಗಲೇ ನಮ್ಮೊಂದಿಗೆ ರೈಲಿನಲ್ಲಿ ಬಾಯರ್ನ್ ರೈತಮಂದಿಯ ಸಾಂಪ್ರದಾಯಿಕ ಉಡುಗೆ 'ಲೇಡೆರ್‌ಹೋಸೆನ್' ತೊಟ್ಟ ಸುಂದರ ಗಂಡಸರು, ಹೆಂಗಸರ ಸಾಂಪ್ರದಾಯಿಕ 'ಡರ್‌ನ್ಡೆಲ್' ತೊಟ್ಟ ಸುಂದರರಮಣಿಯರು ತುಂಬಿರುತ್ತಾರೆ. ಮಕ್ಕಳು, ಮುದುಕರೂ ಇಂಥದ್ದೇ ಉಡುಗೆಯಲ್ಲಿ ಮಿಂಚುತ್ತಾ, ಉತ್ಸಾಹದಲ್ಲಿ ಭರಭರನೆ ಹೆಜ್ಜೆಯಿಟ್ಟು ಗುಂಪುಗುಂಪಾಗಿ ಸಾಗುವುದು ಒಂದೇ ದಿಕ್ಕಿಗೆ, ಅದು ಈ ಫೆಸ್ಟಿವಲ್ ನಡೆಯುವ ಮೈದಾನಕ್ಕೇ. ಸಾವಿರಾರು ಮಂದಿ ಒಂದೇ ಕಡೆ ಸಾಗುವವರನ್ನು ಅನುಸರಿಸಿದರೆ ಸಿಗುವುದೇ 'ಅಕ್ಟೋಬರ್ ಫೆಸ್ಟ್' ಮೈದಾನ. ಎಲ್ಲೆಲ್ಲಿ ನೋಡಲಿ ಕ್ಯೂ! ಈ ಜನರನ್ನು, ಸರದಿ ಸಾಲನ್ನು ನೋಡುವುದೂ ಒಂದು ಹಬ್ಬವೇ ಹೌದು...

ಹಿನ್ನೆಲೆ: ಮೊದಲಿಗೆ ಈ ಫೆಸ್ಟ್ (ಹಬ್ಬ, ಮೇಳ), ಬವೇರಿಯನ್ ದೊರೆ ಒಂದನೇ ಲುಡ್ವಿಗ್, ರಾಜಕುಮಾರಿ ಥೆರೇಸಾಳನ್ನು ವಿವಾಹವಾಗಿ, ಆ ಆನಂದವನ್ನು ಜನಸಾಮಾನ್ಯರೊಂದಿಗೂ ಹಂಚಿಕೊಳ್ಳಲು ಕೊಟ್ಟ ಬಿಯರ್ ಪಾರ್ಟಿಯಾಗಿ ಶುರುವಾದದ್ದು. ಈ ರಾಜಕುಮಾರಿಯನ್ನು ಗೌರವಿಸಲು ಈ ಮೈದಾನವನ್ನು 'ಥೆರೇಸಿಯನ್ ವೀಸೇ' ಎಂದೇ ನಾಮಕರಣ ಮಾಡಲಾಯ್ತು. ಇನ್ನು ಬವೇರಿಯನ್ ಉತ್ಸವ, ಸಡಗರ ಎಂದ ಮೇಲೆ ಇಲ್ಲಿಯ ಸಾಂಪ್ರದಾಯಿಕ ಡ್ರಿಂಕ್ 'ಬಿಯರ್' ಅತ್ಯಗತ್ಯವೇ ಸರಿ. ಹಾಗಾಗಿ ಇಲ್ಲಿ ಅಂದಿನಿಂದ ಇಂದಿನವರೆಗೂ ಸುರಿದು ಚೆಲ್ಲಾಡುವ ಮುಖ್ಯ ಆಕರ್ಷಣೆ 'ಬಿಯರ್' ಆಗಿದೆ.

ಹೀಗೆ ಆರಂಭವಾದ ಫೆಸ್ಟ್ ಮರುವರ್ಷ ರೈತಸ್ನೇಹಿಯಾಗಿ, ವ್ಯವಸಾಯದ ಥೀಮ್ ಇಟ್ಟುಕೊಂಡು ಆಚರಣೆಯಾಗಿತ್ತು. ಆನಂತರದಲ್ಲಿ ಕ್ರೀಡೆ ಮತ್ತಿತರ ವಿಷಯಗಳು ಪ್ರಧಾನವಾಗಿ ಆಚರಣೆಯಾಯ್ತು. ನಾಝಿ ಕಾಲದ ಕೆಲವು ದುರಂತದ ಸಮಯದಲ್ಲಿ, ವಿಶ್ವಯುದ್ಧದ ದುರಂತ, ಉಗ್ರಗಾಮಿ ದಾಳಿ, ಕೋವಿಡ್ ವರ್ಷಗಳಲ್ಲಿ ದುಃಖಸೂಚಕವಾಗಿ ಈ ಫೆಸ್ಟ್ ನಡೆದಿರಲಿಲ್ಲ. 1910ರಲ್ಲಿ ನೂರನೇ ವಾರ್ಷಿಕೋತ್ಸವದಲ್ಲಿ ಈ ಹಬ್ಬ ಪ್ರತಿವರ್ಷದ ಸಂಭ್ರಮವಾಗಿ ಆಚರಿಸುವ ನಿರ್ಧಾರ ತೆಗೆದುಕೊಂಡಿದ್ದದ್ದು ಬಾಯರ್ನ್ ಜನತೆ. ಹಾಗಾಗಿಯೇ, ಈ ಫೆಸ್ಟ್ ಸಾಂಪ್ರದಾಯಿಕತೆಯ ಜೊತೆಜೊತೆಗೇ ಇಂದಿನ ಆಧುನಿಕ ಬದಲಾವಣೆಗಳನ್ನೂ ಅಳವಡಿಸಿಕೊಂಡು ಎಲ್ಲ ವಯಸ್ಸಿನವರನ್ನೂ ಆಕರ್ಷಿಸುತ್ತಲೇ ಬಂದಿದೆ. ವರ್ಷವರ್ಷಕ್ಕೂ ಜನಪ್ರಿಯತೆ ಹೆಚ್ಚುತ್ತಾ, ಈಗ 200 ವರ್ಷಗಳನ್ನೂ ದಾಟಿ ಮುನ್ನಡೆಯುತ್ತಿದ್ದು, ಈ ವರ್ಷದ ಹಬ್ಬ ಅಕ್ಟೋಬರ್ 6ನೇ ತಾರೀಕಿಗೆ ಮುಕ್ತಾಯವಾಗುತ್ತಿದೆ. ಈ ಹಬ್ಬದಲ್ಲಿ ಪಾಲ್ಗೊಳ್ಳಲು, ಇಲ್ಲಿನ ಸಂಭ್ರಮದ ಭಾಗವಾಗಲು ಜಗತ್ತಿನ ನಾನಾ ದೇಶಗಳ ಜನರು ಬರುವುದು ತೀರಾ ಸಾಮಾನ್ಯ; ಈ ನಿಟ್ಟಿನಲ್ಲಿ, ಅಕ್ಟೋಬರ್ ಫೆಸ್ಟ್, ಪ್ರವಾಸೋದ್ಯಮದ ಭಾಗವೂ ಆಗಿದ್ದು, ಸ್ಥಳೀಯ ವ್ಯಾಪಾರಸ್ಥರಿಗೆ ಲಾಭದಾಯಕ ವ್ಯಾಪಾರವನ್ನೂ ಒದಗಿಸುತ್ತದೆ.

ಸೇರಿನ ಗಾತ್ರದ ಬಿಯರ್ ಗ್ಲಾಸ್

ಹಬ್ಬ ನಡೆಯುವ ಮೈದಾನ ಹೊಕ್ಕಮೇಲೆ ಇದೊಂದು ಬೇರೆಯದೇ ಲೋಕ. ಮೈನಡುಗಿಸುವ ರೈಡ್‌ಗಳು, ಗೇಮ್ಸ್, ಸಂಗೀತ, ಮನೋರಂಜನೆ ಎಲ್ಲ ಧಾರಾಳವಾಗಿ, ಅಲಂಕಾರಿಕ ಕುದುರೆಗಳನ್ನು ಹೊಂದಿದ ಚ್ಯಾರಿಯಟ್ ರೈಡ್, ತರಹೇವಾರಿ ತಿಂಡಿ, ಸ್ವೀಟ್‌ಗಳ ಭರಾಟೆ ಉತ್ತುಂಗದಲ್ಲಿದ್ದದ್ದು ನೋಡುವುದೇ ಒಂದು ಹಬ್ಬವಾಗಿತ್ತು. ನನ್ನ ಮಕ್ಕಳು ಬೆದರಿಸುವ ರೈಡುಗಳಲ್ಲಿ ಕೂತು ಥ್ರಿಲ್ ಅನುಭವಿಸಿದರೆ, ನಾನು ಸುತ್ತಮುತ್ತ ನೋಡುವ ಸುಖ ಅನುಭವಿಸಿದೆ... ಇನ್ನು ಭಾರೀ ಭಾರೀ ಬಿಯರ್ ಕಂಪೆನಿಗಳು ಹಾಕಿದ ಬಿಯರ್‌ಟೆಂಟ್‌ಗಳಲ್ಲಂತೂ ಗಮ್ಮತ್ತಿನ ಮೋಜೇ ಮೋಜು. ಮುಂಚಿತವಾಗಿಯೇ ಟಿಕೆಟ್ ಪಡೆದು ಟೆಂಟ್‌ಗಳ ಒಳಸೇರಿದ್ದ ಬಿಯರ್ ಪ್ರಿಯರು ಪಾನದಲ್ಲಿ ಮಗ್ನರಾಗಿದ್ದರೆ, ಸೇರಿನ ಗಾತ್ರದ ಹತ್ತಾರು ಬಿಯರ್ ಗ್ಲಾಸುಗಳನ್ನು ಕೈಲಿಹಿಡಿದು ಬ್ಯಾಲೆನ್ಸ್ ಮಾಡುತ್ತ ಗಿರಾಕಿಗಳಿಗೆ ಸಪ್ಲೈ ಮಾಡುವ 'ಡರ್‌ನ್ಡೆಲ್' ತೊಟ್ಟ ಸುರಸುಂದರಿಯರನ್ನು ನೋಡುವುದೇ ಕಣ್ಣಿಗೆ ಹಬ್ಬವಾಗಿತ್ತು. ಒಳಾಲಂಕಾರವೂ ಝಗಮಗ ಕಣ್ಣು ಕೋರೈಸುವಂತೇ ಇದ್ದು, ಸಂಗೀತ, ಡ್ರಮ್ ಬೀಟ್ ಹೀಗೆ ಒಂದಲ್ಲ ಒಂದು ಮನರಂಜನೆಯೂ ಕಿಕ್ ಕೊಡುತ್ತಲೇ ಇರುವ ದೃಶ್ಯಗಳನ್ನು ನಾನಂತೂ ಕಣ್ಣಲ್ಲಿ ತುಂಬಿಕೊಂಡೆ. ಎಲ್ಲ ದೇಶಗಳಲ್ಲೂ ಸಂಭ್ರಮಿಸುವ ಮನಸ್ಸುಗಳ ಹಿಂದೆ ಇರುವುದು ಜೀವನೋತ್ಸಾಹವಾದರೂ ಅದಕ್ಕೆ ಕಂಡುಕೊಳ್ಳುವ ಹಾದಿ ಬೇರೆಬೇರೆಯಾಗಿರುತ್ತದೆ, ನೆಲಧರ್ಮ, ಸಂಪ್ರದಾಯಗಳ ಹಿನ್ನೆಲೆ ಕಾರಣವಾಗಿರುತ್ತದೆ. ಹಾಗೆ ಈ ಫೆಸ್ಟ್ ಇಲ್ಲಿಯ ನೆಲಸಂಸ್ಕೃತಿಯಾಗಿದೆ.

ಹೊರಗಿನ ಬೆಲೆಗಿಂತ ಬಿಯರ್ ಬೆಲೆ ಈ ಫೆಸ್ಟ್‌ನಲ್ಲಿ ಮುಪ್ಪಟ್ಟು ಹೆಚ್ಚಿದ್ದರೂ, ಈ ಹದಿನಾರು ದಿನಗಳಲ್ಲಿ ಏಳು ಮಿಲಿಯನ್ ಲೀ.ಬಿಯರ್ ಮಾರಾಟವಾಗುವುದು, ಸೇವನೆಯಾಗುವುದು ಇಲ್ಲಿನ ವಿಶೇಷ. ನಾವು ಹಬ್ಬಗಳಲ್ಲಿ ಹೂವು, ಹಣ್ಣು ದುಪ್ಪಟ್ಟು ಬೆಲೆಯಾದರೂ ಕೊಳ್ಳುವಂತೆ ಇಲ್ಲಿನವರಿಗೂ ಈ ಫೆಸ್ಟ್‌ನಲ್ಲಿ ಬಿಯರ್ ಕುಡಿಯುವುದೇ ಒಂದು ಕನಸು. ಹೀಗೆ ಕುಡಿದ ಅನೇಕರು ಅಸಭ್ಯವಾಗಿ ವರ್ತಿಸುವುದು, ಹೆಚ್ಚು ಕುಡಿತದಿಂದ ಎಲ್ಲೆಂದರಲ್ಲಿ ವಾಂತಿಮಾಡುವುದು, ಕೂಗಾಟ ಇವೂ ಆಗಾಗ ನಡೆಯುತ್ತದೆ. ಇದು ಈ ಫೆಸ್ಟಿನ ಕೆಟ್ಟಭಾಗ. ಆದರೂ, ಇಲ್ಲಿ ಪೋಲೀಸರು ಜನಪರರು. ಅವರ ಮೋಜಿಗೆ, ಮೈಮರೆತ ಕೂಗಾಟಗಳಿಗೆ ಸುಮ್ಮನಿರುತ್ತಾರೆ, ಅದರಿಂದ ಬೇರೆಯವರಿಗೆ ತೊಂದರೆಯಾದರೆ ಮಾತ್ರ ಎತ್ತೊಯ್ಯುತ್ತಾರೆ.

ಕುಣಿಯುವ ಸಂಗೀತ

ಇಲ್ಲಿನ ಸಂಗೀತಕ್ಕೂ ಒಂದು ಶಿಸ್ತು ಇದೆ; ಬೆಳಗಿನಿಂದ ಸಂಜೆ ಆರರವರೆಗೆ ಹಿತವಾದ ಸಂಗೀತ ಹಾಕುವಂತೆ ಏರ್ಪಾಡು ಮಾಡಿದ್ದಾರೆ. ಆರರ ನಂತರ ಪಾಪ್ ಮತ್ತು ಶ್ಲೇಗರ್ ಎನ್ನುವ ಸಂಗೀತ ಪ್ರಕಾರಗಳಿರುತ್ತೆ. ಯಾಕೆಂದರೆ ಕುಡಿದ ಮಂದಿ ಈ ಸಂಗೀತವನ್ನೂ ಕೇಳಿಬಿಟ್ಟರೆ ಜೋಷ್ ಹೆಚ್ಚಾಗಿ ವಿಪರೀತವಾಗಿ ಕುಣಿದು ಕುಪ್ಪಳಿಸುತ್ತಾರೆ. ಮತ್ತಿನಲ್ಲಿದ್ದಾಗ ಮಕ್ಕಳು, ವೃದ್ಧರಿಗೆ ತೊಂದರೆಯಾಗಬಾರದೆನ್ನುವ ಕಾಳಜಿ. ಈ ಕಾರಣದಿಂದ ಸಂಜೆ ಏಳರ ನಂತರ ಮಕ್ಕಳು, ವೃದ್ಧರು ಹೆಚ್ಚಾಗಿ ಇಲ್ಲಿ ಇರುವುದೂ ಇಲ್ಲ. ಏನಿದ್ದರೂ ಮಧ್ಯವಯಸ್ಕರು, ಯುವಜನತೆಯ ಕಾರುಬಾರೇ ಹೆಚ್ಚು. ರಾತ್ರಿ ಹತ್ತೂವರೆಗೆ ಮದ್ಯ ಸರಬರಾಜು ಬಂದಾಗುತ್ತದೆ. 16 ದಿನಗಳು ಇಲ್ಲಿ ಕಾಣುವ ಸಡಗರ, ಉತ್ಸಾಹ, ಕೇಕೆ, ಜೀವಂತಿಕೆ, ಗಲಾಟೆ ಎಣೆಯಿಲ್ಲದ್ದು. ಅನ್ಯಮನಸ್ಕರಾದವರು ಇಲ್ಲಿ ಹೋಗಿಬಂದರೆ ಖಂಡಿತಾ ಶರೀರದಲ್ಲಿ ಲವಲವಿಕೆ ತುಂಬಿಕೊಳ್ಳುವುದು!

ಈ ಬಿಯರ್ ಫೆಸ್ಟ್ ಮುಗಿದ ಮರುದಿನಕ್ಕೆ ಸಾವಿರಾರು ಟನ್ ಕಸ ವಿಲೇವಾರಿಗೆ ಕಾದಿರುವುದು ಮತ್ತೊಂದು ದೃಶ್ಯ. ಅಷ್ಟೊಂದು ಜನ ಹಬ್ಬ ಮಾಡಿದ ಮೇಲೆ ಕಸ ಉತ್ಪತ್ತಿಯಾಗದೇ ಇರುತ್ತದೆಯೆ?

ಅದೇನೇ ಇರಲಿ, ಈ ಬಾಯರ್ನ್ 'ಅಕ್ಟೋಬರ್ ಫೆಸ್ಟ್' ಎರಡನೆಯ ಬಾರಿಗೆ ನೋಡಿದರೂ ನನಗಂತೂ ಥ್ರಿಲ್ ಆದದ್ದು ಸುಳ್ಳಲ್ಲ. ದಿನವಿಡೀ ಕಾಲ ಕಳೆದುಬರಲು ಅಗತ್ಯವಾದ ಎಲ್ಲವೆಲ್ಲವೂ ಇದೆ. ಬವೇರಿಯಾದ ಸಾಂಸ್ಕೃತಿಕ ಪರಂಪರೆಯ ಪರಿಚಯ ಆಗುತ್ತದೆ. ಕಣ್ಣಿಗೆ ಹಬ್ಬ ಖಂಡಿತಕ್ಕೂ ಇದೆ. ಮೋಜು, ಮನರಂಜನೆ ಬಯಸುವ ಜರ್ಮನಿಯ ಇತರ ಭಾಗಗಳಲ್ಲೂ ಈಗ ಈ ರೀತಿಯ ಫೆಸ್ಟ್ ಆರಂಭವಾಗಿರುವುದು ಇದರ ಜನಪ್ರಿಯತೆಗೆ ಸಾಕ್ಷಿ. ಆದರೂ, ಮ್ಯೂನಿಕ್ಕಿನ 'ಅಕ್ಟೋಬರ್ ಫೆಸ್ಟ್'ಗೆ ಅದು ಮಾತ್ರ ಸಾಟಿ!

ಚಿಂಚೋಳಿಯಲ್ಲಿ ಪತ್ತೆಯಾಗಿರುವ ಸೀಳು ನಾಯಿಯ ಚಿತ್ರ.

ಚಿಂಚೋಳಿಯಲ್ಲಿ ಸೀಳುನಾಯಿ!

ಸೀಳು ನಾಯಿಗಳು ನಮ್ಮ ರಾಜ್ಯದ ಅಪರೂಪದ ಜೀವಿಗಳು. ಪಶ್ಚಿಮಘಟ್ಟಗಳಲ್ಲಿ ಇವು ಅಲ್ಲಲ್ಲಿ ಕಾಣಸಿಗುತ್ತವೆ; ಗುಂಪಾಗಿ ಓಡಾಡುತ್ತಾ, ಇತರ ಪ್ರಾಣಿಗಳನ್ನು ಬೇಟೆಯಾಡುವುದು ಇವುಗಳ ಜೀವನ ಶೈಲಿ. ಇದೇ ಮೊದಲ ಬಾರಿಗೆ, ಸೀಳು ನಾಯಿಗಳನ್ನು ಚಿಂಚೋಳಿ ವನ್ಯಜೀವಿ ಧಾಮದಲ್ಲಿ ಪತ್ತೆ ಮಾಡಲಾಗಿದ್ದು, ಇದು ಪರಿಸರ ರಕ್ಷಣೆಯ ದೃಷ್ಟಿಯಿಂದ, ಸಸ್ತನಿಗಳ ಅಧ್ಯಯನದ ದೃಷ್ಟಿಯಿಂದ ಬಹು ಮುಖ್ಯ ಬೆಳವಣಿಗೆ ಎನಿಸಿದೆ.

» ಅನ್ನಪೂರ್ಣ ದೈತೋಟ

ನಮ್ಮ ರಾಜ್ಯದಲ್ಲಿ ಇದೇ ಮೊದಲಬಾರಿಗೆ ಬೀದರ್ ಜಿಲ್ಲೆಯಲ್ಲಿ ಸೀಳು ನಾಯಿಗಳನ್ನು ಪತ್ತೆ ಮಾಡಲಾಗಿದೆ. ನೇಚರ್ ಕನ್ಸರ್ವೇಷನ್ ಫೌಂಡೇಶನ್ ಮತ್ತು ಹೊಳೆಮತ್ತಿ ನೇಚರ್ ಫೌಂಡೇಶನಿನ ಡಾ.ಸಂಜಯ್ ಗುಬ್ಬಿ ಮತ್ತು ತಂಡದವರು, ಚಿಂಚೋಳಿ ವನ್ಯಜೀವಿಧಾಮದಲ್ಲಿ (134.8 ಚ.ಕಿಮಿ) ಚಿರತೆಗಳ ಬಗ್ಗೆ ನಡೆಸಿದ ವೈಜ್ಞಾನಿಕ ಅಧ್ಯಯನಗಳಲ್ಲಿ, ಮೊಟ್ಟಮೊದಲ ಬಾರಿಗೆ ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಸೀಳು ನಾಯಿಗಳು ದಾಖಲಾಗಿರುವುದು ವಿಶೇಷವಾಗಿದೆ. 2023ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ವನ್ಯಜೀವಿಧಾಮ ಮತ್ತು ಬೀದರ್ ಜಿಲ್ಲೆಯ ದೇವಗಿರಿ-ಚಾಂಗ್ಲೆರ್ (25.07 ಚ.ಕಿಮಿ), ಸಾಲೇಬೀರನಹಳ್ಳಿ (12.2 ಚ.ಕಿಮಿ), ಮತ್ತು ಬಾಸಿಪುರ್ (3.23 ಚ.ಕಿಮಿ) ಕಾಯ್ದಿಟ್ಟ ಅರಣ್ಯಗಳಲ್ಲಿ ಕ್ಯಾಮರ ಟ್ರ್ಯಾಪ್ ಗಳನ್ನು ಅಳವಡಿಸಿ ಅಧ್ಯಯನ ಕೈಗೊಂಡ ಸಮಯದಲ್ಲಿ ಸೀಳು ನಾಯಿಗಳನ್ನು ಗುರುತಿಸಿದರು; ಇದೊಂದು ಅಚ್ಚರಿಯ ಬೆಳವಣಿಗೆ. ಜತೆಯಲ್ಲೇ, ಇನ್ನಿತರ 24 ಸಸ್ತನಿಗಳು ಈ ಪ್ರದೇಶದಲ್ಲಿ ದಾಖಲಾಗಿರುವುದು ಬಹು ವಿಶೇಷವಾಗಿದೆ. ಇವರು ನಡೆಸಿದ ಅಧ್ಯಯನದ ನಂತರ ಅರಣ್ಯ ಇಲಾಖೆ ಅಳವಡಿಸಿದ್ದ ಕ್ಯಾಮರಾ ಟ್ರ್ಯಾಪ್‌ಗಳಲ್ಲಿ ಕೂಡ ಸೀಳು ನಾಯಿಗಳು ದಾಖಲಾಗಿವೆ.

ಇಲ್ಲಿ ಸೀಳು ನಾಯಿಗಳು ದಾಖಲಾಗಿರುವುದು ನಿಜಕ್ಕೂ ವಿಶೇಷ. ಈ ಮೂಲಕ, ಕರ್ನಾಟಕದಲ್ಲಿ ಕ್ಯಾನಿಡೆ ಕುಟುಂಬದ ಎಲ್ಲ ವನ್ಯಜೀವಿಗಳು (ಸೀಳು ನಾಯಿ, ತೋಳ, ನರಿ ಮತ್ತು ಕಪ್ಪಲು ನರಿ) ಕಂಡುಬರುವ ಕೆಲವೇ ಕೆಲ ಜಿಲ್ಲೆಗಳಲ್ಲಿ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳು ಸೇರ್ಪಡೆಯಾಗಿವೆ.

ಈ ಬೆಳವಣಿಗೆಯ ನಂತರ, ಬೀದರ್ ಜಿಲ್ಲೆಯ ದೇವಗಿರಿ-ಚಾಂಗ್ಲೆರ್ (25.07 ಚ.ಕಿಮಿ), ಸಾಲೇಬೀರನಹಳ್ಳಿ (12.2 ಚ.ಕಿಮಿ), ಮತ್ತು ಬಾಸಿಪುರ್ (3.23 ಚ.ಕಿಮಿ) ಕಾಯ್ದಿಟ್ಟ ಅರಣ್ಯ ಪ್ರದೇಶಗಳನ್ನು ಚಿಂಚೋಳಿ ವನ್ಯಜೀವಿಧಾಮಕ್ಕೆ ಸೇರ್ಪಡೆ ಮಾಡಬೇಕೆಂದು ಅರಣ್ಯ ಇಲಾಖೆಗೆ ಮನವಿ ಮಾಡಲಾಗಿದೆ. ಇದರಿಂದ ಈಗಿನ ಚಿಂಚೋಳಿ ವನ್ಯಜೀವಿಧಾಮದ ಅಂಚಿನಲ್ಲಿರುವ ಸುಮಾರು 40.5 ಚ ಕಿಮಿ (ಸುಮಾರು 10,000 ಎಕರೆ) ಕಾಡು ಪ್ರದೇಶಕ್ಕೆ ಹೆಚ್ಚಿನ ರಕ್ಷಣೆ ಒದಗಿಸಿದಂತಾಗುತ್ತದೆ. ಸೀಳು ನಾಯಿಗಳ ಸಂರಕ್ಷಣೆಯ ಜತೆಯಲ್ಲೇ, ಈ ಪ್ರದೇಶದಲ್ಲಿ ಅಪರೂಪವಾಗಿರುವ, ಅಳಿವಿನಂಚಿನಲ್ಲಿರುವ ಇತರ ಹಲವು ಜೀವಿಗಳನ್ನು, ಹಕ್ಕಿಗಳನ್ನು ರಕ್ಷಿಸುವಲ್ಲೂ ಈ ನಡೆ ಸಹಕಾರಿ ಎನಿಸುತ್ತದೆ.

ಬೀದರ್ ಜಿಲ್ಲೆಯ ಈ ಕಾಯ್ದಿಟ್ಟ ಅರಣ್ಯಗಳನ್ನು 'ಚಿಂಚೋಳಿ ವನ್ಯಜೀವಿಧಾಮ'ಕ್ಕೆ ಸೇರಿಸಿದರೆ ಸೀಳುನಾಯಿಗಳ ಸಂರಕ್ಷಣೆಗೆ ಪಶ್ಚಿಮಘಟ್ಟಗಳಾಚೆ ಹೆಚ್ಚಿನ ಸಂರಕ್ಷಣೆ ಸಿಕ್ಕಂತಾಗುತ್ತದೆ. ಸೀಳು ನಾಯಿಗಳಿಗೆ ಅವಶ್ಯವಾದ ಸಾರಗ, ಕೊಂಡುಕುರಿ, ಕೃಷ್ಣಮೃಗ, ಮರವಿ ಮತ್ತಿತರ ಬಲಿಪ್ರಾಣಿಗಳು ಚಿಂಚೋಳಿ ವನ್ಯಜೀವಿಧಾಮದಲ್ಲಿ ಲಭ್ಯವಿರುವುದು ಬಹು ಸಕಾರಾತ್ಮಕ ವಿಚಾರ. ಎಲೆ ಉದುರುವ ಶುಷ್ಕ ಕಾಡುಗಳು ಮತ್ತು ಹುಲ್ಲುಗಾವಲುಗಳಿಂದ ಕೂಡಿದ ಈ ಪ್ರದೇಶ ಕಲ್ಯಾಣ-ಕರ್ನಾಟಕ ಪ್ರದೇಶದಲ್ಲೇ ಒಂದು ವಿಶಿಷ್ಟವಾದ ವನ್ಯಜೀವಿ ಆವಾಸಸ್ಥಾನ. ಕರ್ನಾಟಕದ ಉತ್ತರ ಭಾಗದಲ್ಲಿರುವ ಈ ಪ್ರದೇಶವನ್ನು ಚಿಂಚೋಳಿ ವನ್ಯಜೀವಿಧಾಮವೆಂದು 2011ರಲ್ಲಿ ಘೋಷಿಸಲಾಯಿತು.

ನಶಿಸುವ ಹಂತದಲ್ಲಿರುವ ಸಸ್ತನಿ

ಸೀಳು ನಾಯಿಗಳು ನಮ್ಮ ನಾಡಿನ ವಿಶಿಷ್ಟ ಜೀವಿಗಳು; ಇದುವರೆಗೆ ಪಶ್ಚಿಮಘಟ್ಟಗಳ ಕೆಲವೇ ಕೆಲವು ಪ್ರದೇಶಗಳಲ್ಲಿ ಅವುಗಳ ಅಧ್ಯಯನ ನಡೆದಿದ್ದು, ಅವುಗಳ ವಿಶಿಷ್ಟ ಜೀವನ ಕ್ರಮದ ಪರಿಚಯವಾಗಿದೆ. ಅವುಗಳ ವಾಸಸ್ಥಳದ ನಾಶ, ಅವುಗಳ ಜೀವನ ಕ್ರಮ, ಅವು ಬೇಟೆಯಾಡುವ ರೀತಿ, ಅವುಗಳ ಕುರಿತು ಜನರಲ್ಲಿರುವ ತಪ್ಪು ಅಭಿಪ್ರಾಯಗಳಿಂದಾಗಿ, ಅವುಗಳ ಸಂಖ್ಯೆ ಕ್ರಮೇಣ ನಶಿಸುತ್ತಾ ಬಂದಿದೆ. ಬ್ರಿಟಿಷರು ಈ ಸೀಳುನಾಯಿಗಳನ್ನು ನಾಶಪಡಿಸಲು ಸಾಕಷ್ಟು ಕ್ರಮ ಕೈಗೊಂಡಿದ್ದರು. ಇಂದು ಪ್ರಪಂಚದಲ್ಲಿ 2,500ಕ್ಕೂ ಕಡಿಮೆ ಸಂಖ್ಯೆಯಲ್ಲಿರುವ ಸೀಳುನಾಯಿಗಳು ಉಳಿದುಕೊಂಡಿವೆ; ಈ ಸಂತತಿ ನಶಿಸುವ ಹಂತದಲ್ಲಿವೆ. ಈ ನಿಟ್ಟಿನಲ್ಲಿ, ಬೀದರ ಜಿಲ್ಲೆಯಲ್ಲಿ ಮೊದಲ ಬಾರಿ ಪತ್ತೆಯಾಗಿರುವ ಸೀಳುನಾಯಿಗಳಿಗೆ ರಕ್ಷಣೆ ನೀಡಿ, ಅವುಗಳ ಸಂತತಿಯನ್ನು ಬೆಳೆಸುವ ಕೆಲಸವಾದರೆ, ಪರಿಸರ ರಕ್ಷಣೆಯ ದೃಷ್ಟಿಯಲ್ಲಿ ಬಹು ಮುಖ್ಯ ಬೆಳವಣಿಗೆ ಎನಿಸುತ್ತದೆ. ಇದಕ್ಕೆ ನಮ್ಮ ರಾಜ್ಯದ ಅರಣ್ಯ ಇಲಾಖೆಯವರು ಮನಸ್ಸು ಮಾಡಬೇಕು, ಈಗ ಅವು ಪತ್ತೆಯಾಗಿರುವ ಪ್ರದೇಶದ ಸಮಗ್ರ ರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಪುಸ್ತಕ ವಿಮಾನ

ನಗು ಉಕ್ಕಿಸುವ ಉಕ್ತಿಗಳು!

» ಎಂ.ಎಸ್.ಹೆಬ್ಬಾರ್

ಕಳೆದ ಹಲವು ವರ್ಷಗಳ ಅವಧಿಯಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್ ಅವರು ಬರೆದಿರುವ ಆಯ್ದ 'ವಕ್ರತುಂಡೋಕ್ತಿ'ಗಳ ಸಂಕಲನವಿದು. ಓದಿದವರಿಗೆ ನಗೆಯ ಕಚಗುಳಿ ಇಡುವ ಪುಟ್ಟ ಪುಟ್ಟ ಬರಹಗಳು; ದಿನಪತ್ರಿಕೆಯ ಒಂದು ಮೂಲೆಯಲ್ಲಿ ಪ್ರಕಟವಾಗುವ ಇದನ್ನು ಓದುವುದಕ್ಕೆಂದೇ ಪತ್ರಿಕೆಯನ್ನು ಕೊಂಡುಕೊಳ್ಳುವವರಿದ್ದಾರೆ. ಒಮ್ಮೊಮ್ಮೆ ಅನಿವಾರ್ಯ ಕಾರಣಗಳಿಂದ ವಕ್ರತುಂಡೋಕ್ತಿ ಪ್ರಕಟವಾಗದೇ ಇದ್ದಾಗ, 'ನೀವು ಸಂಪಾದಕೀಯವನ್ನು ಬರೆಯದಿದ್ದರೂ ನಾವು ಕೇಳುವುದಿಲ್ಲ, ಆದರೆ ಯಾವ ಕಾರಣಕ್ಕೂ ವಕ್ರತುಂಡೋಕ್ತಿಯನ್ನು ಕೈಬಿಡಬೇಡಿ' ಎಂದು ಓದುಗರು ವಿಶ್ವೇಶ್ವರ ಭಟ್ ಅವರನ್ನು ಕೇಳಿದ್ದುಂಟು ಎಂಬ ಸ್ವಾರಸ್ಯಕರ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ. ನಗು, ಹಾಸ್ಯ, ಅಲ್ಲಲ್ಲಿ ವ್ಯಂಗ್ಯ, ಪ್ರಚಲಿತ ವಿದ್ಯಮಾನಗಳ ಗೇಲಿ – ಇವೆಲ್ಲವನ್ನೂ ಹೊಂದಿರುವ ಇಲ್ಲಿನ ವಕ್ರತುಂಡೋಕ್ತಿಗಳು, ಓದುಗರಲ್ಲಿ ನಗು ಹುಟ್ಟಿಸುವುದರ ಜತೆಯಲ್ಲೇ, ಅವರ ತಲೆಗೆ ಸಾಣೆ ಹಿಡಿಯುವ ಕೆಲಸವನ್ನೂ ಮಾಡುತ್ತವೆ.

ಅರ್ಧನಾರೀಶ್ವರ
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ ಬೆಂಗಳೂರು
8431007267
ಬೆಲೆ ರು. 160/-

'ವಕ್ರತುಂಡೋಕ್ತಿ' ಅದೆಷ್ಟು ಜನಪ್ರಿಯ ಎಂದರೆ, ಅದರ ಕತ್ತು ಹಿಸುಕುವ ಪ್ರಯತ್ನವನ್ನೂ ಕೆಲವರು ಮಾಡಿದ್ದುಂಟು! 'ವಕ್ರತುಂಡೋಕ್ತಿ' ಎಂಬ ಶೀರ್ಷಿಕೆಯು ತಮ್ಮ ಆಸ್ತಿ ಎಂದು ಬೇರೊಂದು ಸಂಸ್ಥೆ ತಗಾದೆ ಮಾಡಿದಾಗ, ಲೇಖಕರು ಅವರಿಗೆ ಸೂಕ್ತ ಉತ್ತರ ಕೊಟ್ಟ ವಿವರಗಳು ಈ ಪುಸ್ತಕದ 'ಲೇಖಕರ ಮಾತು'ಗಳಲ್ಲಿ ಉದಹರಿಸಲ್ಪಟ್ಟಿವೆ. ಲೇಖರಿಗೆ ಅಂತಹದ್ದೊಂದು ಒತ್ತಡ ಎದುರಾದಾಗ, ಅವರು ನೀಡಿದ ಉತ್ತರ ಹೀಗಿದೆ : 'ವಕ್ರತುಂಡೋಕ್ತಿ ನಿಮ್ಮ ಆಸ್ತಿ ಎಂದು ಹೇಳಿದವರು ಯಾರು? ಆ ಪದವನ್ನು ಯಾರು ಬೇಕಾದರೂ ಬಳಸಬಹುದು. ಅದನ್ನು ಟಂಕಿಸಿದವರು ಯಾರು, ಮೊದಲು ಬಳಸಿದ್ದು ಯಾರು, ಬಳಸುತ್ತಿರುವವರು ಯಾರು ಎಂಬುದು ಕನ್ನಡದ ಓದುಗರು ಬಲ್ಲರು. ಇಂಥ ಚಿಲ್ಲರೆ ವಿಷಯಗಳಿಗೆ ಕ್ಯಾತೆ ತೆಗೆಯುವುದು ನಿಮ್ಮ ಘನತೆಗೆ ತಕ್ಕುದಾದುದಲ್ಲ. ನಾನಂತೂ 'ವಕ್ರತುಂಡೋಕ್ತಿ'ಯನ್ನು ಬಳಸುತ್ತೇನೆ. ನೀವು ಕಾನೂನು ಕ್ರಮ ಜರುಗಿಸಲು ಸ್ವತಂತ್ರರು. ಅದೂ ಆಗಿ ಹೋಗಲಿ ಬಿಡಿ' ಎಂದು ನಾನು ಉತ್ತರಿಸಿದೆ. ಅಲ್ಲಿಗೆ ಆ ಪ್ರಹಸನ ಮುಗಿಯಿತು. ಇಲ್ಲದಿದ್ದರೆ ಅವತ್ತೇ 'ವಕ್ರತುಂಡೋಕ್ರಿ'ಯನ್ನು ಕತ್ತು ಹಿಚುಕಿ ಸಾಯಿಸಿಬಿಡುತ್ತಿದ್ದರು'. (ಪುಟ 8). ಬಲಾಢ್ಯರು ಪ್ರಶ್ನಿಸಿದಾಗ, ಅದಕ್ಕೆ ಬಲವಾದ ಉತ್ತರವನ್ನೇ ನೀಡಬೇಕು!

ಈ ಪುಸ್ತಕದಲ್ಲಿರುವ ಪುಟ್ಟ ಪುಟ್ಟ ಉಕ್ತಿಗಳು ಅದೇಕೆ ಅಷ್ಟೊಂದು ಜನಪ್ರಿಯ? ಒಂದೆರಡು ಸ್ಯಾಂಪಲ್ ನೋಡೋಣ. 'ಹೆಂಗಸರ ಜಾಗ ಅಡುಗೆ ಮನೆಯೇ. ಅಲ್ಲಿಯೇ ಅವರು ಕಾಲ ಮೇಲೆ ಕಾಲು ಹಾಕಿಕೊಂಡು, ತಮ್ಮ ಗಂಡಂದಿರು ಹೇಗೆ ಅಡುಗೆ ಮಾಡಬೇಕು ಎಂದು ಆರ್ಡರ್ ಮಾಡುವುದು'. (ಪುಟ 46). 'ನೀನು ನಿಜ ಹೇಳಿದರೂ ನಂಬುತ್ತೀಯಾ, ಸುಳ್ಳು ಹೇಳಿದರೂ ನಂಬುತ್ತೀಯಾ ಎಂದು ಹೇಳುವವರು ಹೇಳುವುದು

ತಿಳಿಹಾಸ್ಯ, ಮೊನಚಾದ ಟೀಕೆ, ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗುವ ಪನ್ ಎಲ್ಲವೂ ಇಲ್ಲಿವೆ; ಬಿಗುಮುಖದ ಓದುಗನೊಬ್ಬನು ಇಲ್ಲಿನ ಪುಟಾಣಿ ಬರಹಗಳನ್ನೋದಿದರೆ ನಗುಮುಖದವನಾಗುತ್ತಾನೆ!

ಸುಳ್ಳೇ.' (ಪುಟ 17). 'ಬೇರೆಲ್ಲಾ ಹೆಂಗಸರು ತುಂಬಾ ಒಳ್ಳೆಯವರು ಎಂದು ಅನಿಸುವುದು ಗಂಡಸಿನ ಜೀವನದಲ್ಲಿ ಹೆಂಡತಿಯ ಪ್ರವೇಶವಾದ ನಂತರವೇ.' (ಪುಟ 128). 'ಸರಿಯಾಗಿ ಕೆಲಸ ಮಾಡದಿದ್ದಾಗಲೂ ಬೆನ್ನು ತಟ್ಟಿಸಿಕೊಳ್ಳುವ ಏಕೈಕ ವಸ್ತು ಎಂದರೆ ಟಿವಿ ರಿಮೋಟ್ ಕಂಟ್ರೋಲ್.' (ಪುಟ 143) 'ಪ್ಯಾರಾಚೂಟ್ ಇಲ್ಲದೇ ನೀವು ಸ್ಕೈಡೈವ್ ಮಾಡಬಹುದು. ಆದರೆ ಈ ರೀತಿ ನೀವು ಒಂದೇ ಸಲ ಮಾಡಬಹುದು.' (91) 'ಪ್ರತಿ ಮೂರ್ಖನನ್ನೂ ಗೌರವಿಸಬೇಕು, ಪ್ರೀತಿಯಿಂದ ನಡೆಸಿಕೊಳ್ಳಬೇಕು. ಯಾರಿಗೆ ಗೊತ್ತು? ಆತ ನಾಳೆ ನಮ್ಮ ಶಾಸಕನೋ, ಮಂತ್ರಿಯೋ, ಕಚೇರಿಯ ಮುಖ್ಯಸ್ಥನೋ ಆಗಬಹುದು.' (ಪುಟ 25)

'ಅರ್ಧ ನಾರೀಶ್ವರ' ಪುಸ್ತಕವು ಇಂತಹ ಮೊನಚಾದ ಹೇಳಿಕೆಗಳಿಗಾಗಿ ಬಹಳ ಇಷ್ಟವಾಗುತ್ತದೆ; ಓದುತ್ತಾ ಓದುತ್ತಾ ನಗೆಯನ್ನೂ ಹುಟ್ಟಿಸುತ್ತದೆ. ಜತೆಯಲ್ಲೇ, ಈ ಪುಸ್ತಕದ ಇನ್ನೂ ಹಲವು ಸ್ವಾರಸ್ಯಕರ ಅಂಶಗಳನ್ನು ಗುರುತಿಸಬಹುದು. ಪುಸ್ತಕದ ಹೆಸರೇ ಅನನ್ಯ 'ಅರ್ಧನಾರೀಶ್ವರ' – ಇಲ್ಲಿ ಪದದ ಜತೆ ಪನ್ ನಡೆದಿದೆ. ಇಲ್ಲಿರುವ ವಕ್ರತುಂಡೋಕ್ತಿಗಳನ್ನು ಸಮರ್ಥವಾಗಿ ಬಿಂಬಿಸುವ ಆರ್ಟ್ ವರ್ಕ್ ಮುಖಪುಟದಲ್ಲಿದ್ದು, ಹೇಗೆ ವಕ್ರವಕ್ರವಾಗಿ, ತುಂಡಾಗಿ ಬಿದ್ದಿರುವ ವರ್ತುಲಾಕೃತಿಗಳು ಅರ್ಥ ಹುಟ್ಟಿಸುವ ಕಲೆಯಾಗಬಹುದು ಎಂಬುದನ್ನು ತೋರಿಸುತ್ತವೆ. ಪುಸ್ತಕದ ಮುಖಪುಟ, ಅದಕ್ಕೆ ಬಳಸಿದ ಆರ್ಟ್‌ಪೇಪರ್, ವರ್ಣಸಂಯೋಜನೆ, ಒಳಪುಟಗಳ ವಿಶಿಷ್ಟ ವಿನ್ಯಾಸ, ಅಲ್ಲಲ್ಲಿ ಬಳಸಿದ ವ್ಯಂಗ್ಯಚಿತ್ರಗಳು, ಹಿಂಬದಿಯ ರಕ್ಷಾಪುಟದ ವಿನ್ಯಾಸ ಎಲ್ಲವೂ ಆಕರ್ಷಕ. ಪುಸ್ತಕದ ಹೂರಣ ಮತ್ತು ಅದರ ಪ್ರೊಡಕ್ಷನ್ ಎರಡೂ ಸೇರಿ ಈ ಪುಸ್ತಕವನ್ನು ಒಂದು ಸಂಗ್ರಾಹ್ಯ ಕೃತಿಯನ್ನಾಗಿಸಿದೆ ಎಂದರೆ ಅದು ಅತಿಶಯೋಕ್ತಿಯಲ್ಲ. ಕೆಲಸದ ನಡುವೆ, ಕೆಲವೇ ಕ್ಷಣಗಳ ಓದಿನ ಮೂಲಕ ನಿಮ್ಮ ಮನಸ್ಸು ಹಗುರಾಗಿಸುವಂತಹ ಹಾಸ್ಯಭರಿತ ವಾಕ್ಯಗಳನ್ನು ಆಗಾಗ ಓದಬೇಕೆಂದರೆ, ತಕ್ಷಣ ಈ ಪುಸ್ತಕವನ್ನು ತರಿಸಿಕೊಂಡು, ನಿಮ್ಮ ಟೇಬಲ್ ಮೇಲಿಟ್ಟುಕೊಳ್ಳಿ; ದಿನವಿಡೀ ಮನಸ್ಸನ್ನು ಪ್ರಫುಲ್ಲಗೊಳಿಸಿಕೊಳ್ಳಬಹುದು!

ಕನ್ನಡಕ್ಕೆ ಬಂದ ಮಹತ್ವದ ಕೃತಿ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಒಂದು ಪುರಾತನ ನೆಲದಲ್ಲಿ – ಇದು ಅಮಿತಾವ್ ಘೋಷ್ ಅವರ 'ಇನ್ ಯ್ಯಾನ್ ಅಂಟಿಕ್ ಲ್ಯಾಂಡ್' ಇಂಗ್ಲಿಷ್ ಕಾದಂಬರಿಯ ಕನ್ನಡ ಅನುವಾದ. ಅಮಿತಾವ್ ಘೋಷ್ ಭಾರತದ ಪ್ರಭಾವಿ ಲೇಖಕರಲ್ಲಿ ಒಬ್ಬರು. 'ಪದ್ಮಶ್ರೀ' ಪುರಸ್ಕೃತರಾದ ಘೋಷ್ ಅವರಿಗೆ 2018ರ ಸಾಲಿನ 'ಭಾರತೀಯ ಜ್ಞಾನಪೀಠ ಪ್ರಶಸ್ತಿ' ದೊರಕಿದೆ.

ಕಲ್ಕತ್ತಾದಲ್ಲಿ ಮೂಲದ ಘೋಷ್‌ರು ಬಾಲ್ಯದಲ್ಲಿ ಕೆಲಕಾಲ ಕೊಲೊಂಬೋ ಹಾಗೂ ಢಾಕ್ಕಾದಲ್ಲಿದ್ದರು. ಅವರು.

ಕಾದಂಬರಿಕಾರರಾಗಿ ದೇಶ ವಿದೇಶಗಳಲ್ಲಿ ಸೈ ಎನಿಸಿಕೊಂಡ ಜನಪ್ರಿಯ ಸಾಹಿತಿ, ಚಿಂತಕ.

ಡಾ. ಅಮಿತಾವ್ ಘೋಷ್ ಅವರು ಐತಿಹಾಸಿಕ ಘಟನೆಗಳನ್ನು ತಮ್ಮ ಕಲ್ಪನಾ ಶಕ್ತಿಯಲ್ಲಿ ಉಪಯೋಗಿಸಿ ಸಮಕಾಲೀನ ಪರಿಸ್ಥಿತಿಗೆ ಹೊಂದುವಂತೆ ಹೇಗೆ ಅತ್ಯುತ್ತಮ ಕೃತಿಯನ್ನು ರಚಿಸಬಲ್ಲರು ಎಂಬುದಕ್ಕೆ ಪ್ರಸ್ತುತ ಕಾದಂಬರಿ ಉತ್ತಮ ನಿದರ್ಶನ. ಈ ಕಾದಂಬರಿ ಮೇಲು ನೋಟಕ್ಕೆ ಐತಿಹಾಸಿಕ ಕೃತಿ ಅನಿಸಿದರೂ ಇತಿಹಾಸವನ್ನು ಇಲ್ಲಿ ಲೇಖಕ ಅಮಿತಾವ್ ಘೋಷ್ ಅವರು ಗ್ರಹಿಸಿರುವ ನಿರೂಪಿಸಿರುವ ಪರಿ ಭಿನ್ನ. ಇದು ಕ್ರಿ.ಶ. 1130ರಲ್ಲಿ ಈಜಿಪ್ಟ್ ಮತ್ತು ಏಡನ್ ಮೂಲಕ ಭಾರತಕ್ಕೆ ಬಂದ ಮೂಲತಃ ಟ್ಯುನಿಸಿಯದವನಾದ ಯಹೂದಿ ವರ್ತಕ ಅಬ್ರಹಾಂ ಬೆನ್ ಯಿಜುವಿನ ಮತ್ತು ಈಜಿಪ್ಪಿನಲ್ಲಿದ್ದ ಇಬ್ಬರು ಭಾರತೀಯರ ಕತೆ. ಬೆನ್ ಯಿಜು ಮಂಗಳೂರಿನಲ್ಲಿ ಹದಿನೇಳು ವರ್ಷಗಳ ಕಾಲ ಇದ್ದು, ನಾಯರ್ ಹೆಂಗಸೊಬ್ಬಳನ್ನು ಮದುವೆಯಾಗಿ, ತುಳುನಾಡಿನವನಾದ ಬೊಮ್ಮ ಎಂಬ ಭಾರತೀಯ 'ಗುಲಾಮ'ನೊಬ್ಬನನ್ನು ಹೊಂದಿದ್ದ. ಬೊಮ್ಮನು ಬೆನ್ ಯಿಜು ಬರೆದ ಅಥವಾ ಅವನಿಗೆ ಬಂದ ಪತ್ರಗಳಲ್ಲಿ ಕಾಣಿಸಿಕೊಳ್ಳುತ್ತಾನೆ ಹಾಗೂ ಅವನ ಯಜಮಾನನು ತನ್ನ ಕೊನೆಯ ದಿನಗಳಲ್ಲಿ ಈಜಿಪ್ಟಿಗೆ ಹಿಂದಿರುಗಿದಾಗ ಅವನ ಜೊತೆಯಲ್ಲೇ ಹೋಗಿದ್ದ ಎನ್ನುವ ಆಕಸ್ಮಿಕವಾಗಿ ಸಿಕ್ಕಿದ ಪತ್ರಗಳು ಈ ಬೃಹತ್ ಕಾದಂಬರಿ ರಚನೆಗೆ ಪ್ರೇರಣೆಯಾಗಿದೆ.

ಇಲ್ಲಿ ಏಕ ಕಾಲಕ್ಕೆ ಸಮಾನಾಂತರವಾಗಿ ಸಾಗುವ ಎರಡು ನಿರೂಪಣೆಗಳಿವೆ. ಸ್ವತ: ಘೋಷ್ ಅವರು ಈಜಿಪ್ಟ್‌ನ ಗ್ರಾಮೀಣ ಪ್ರದೇಶದಲ್ಲಿ ಪದವಿ ವಿದ್ಯಾರ್ಥಿಯಾಗಿ ಶೋಧನೆಯಲ್ಲಿ ನಿರತರಾಗಿರುವುದು. ಇನ್ನೊಂದು ಕಡೆ ಇತಿಹಾಸದಲ್ಲಿ, ಪತ್ರಗಳಲ್ಲಿ ಉಲ್ಲೇಖಿಸಲಾಗಿರುವ ಮಂಗಳೂರು ಮೂಲದ ಆಳು ಮಗ ಬೊಮ್ಮ ಅಥವಾ ಭಾರತೀಯ ಗುಲಾಮ. ಇದೊಂದು ವಿಶಿಷ್ಟ ಬಗೆಯ ಕಾದಂಬರಿ. ವರ್ತಮಾನದ ದ್ವಂದ್ವ,ಘರ್ಷಣೆಗಳನ್ನು ಬೆಳಕಿಗೆ ಹಿಡಿಯಲು ಇಲ್ಲಿ ಚರಿತ್ರೆಯನ್ನು ಬಳಸಿಕೊಂಡ ಬಗೆ ಮನೋಜ್ಞವಾಗಿದೆ.



ಒಂದು ಪುರಾತನ ನೆಲದಲ್ಲಿ
ಲೇ : ಅಮಿತಾವ್ ಘೋಷ್
ಅನು:ಮಿತ್ರಾ ವೆಂಕಟ್ರಾಜ್
ಮನೋಹರ ಗ್ರಂಥ ಮಾಲಾ, ಧಾರವಾಡ
ಬೆಲೆ ರು. 450/-

ಇತಿಹಾಸವನ್ನು ಹಿನ್ನೆಲೆಯಾಗಿಟ್ಟುಕೊಂಡು ಆ ಕಾಲದ ಜೀವನಕ್ರಮ, ವಿಸ್ತಾರವಾದ ವೈವಿಧ್ಯ ಮಯವಾದ ಬದುಕು, ಸಂವೇದನೆ, ಆಶಯಗಳ ಅನ್ವೇಷಣೆ ಇಲ್ಲಿ ಲೇಖಕರಿಗೆ ಮುಖ್ಯವಾಗಿ ಕಂಡಿದೆ. ಗತ ಇತಿಹಾಸದ ಮೂಲಚೂಲಗಳನ್ನು ಹುಡುಕುತ್ತಲೇ ಅಲ್ಲಿನ ಸಾರ್ವಕಾಲೀನತೆ, ಅದು ಸಾಂಪ್ರತ ಬದುಕಿಗೆ ಕೊಡಬಲ್ಲ ಬೆಳಕನ್ನು ಇಲ್ಲಿ ಮುನ್ನೆಲೆಗೆ ತಂದು ವಿಶ್ಲೇಷಣೆ ಮಾಡಿರುವುದು ಅವಲೋಕನೀಯ ಸಂಗತಿ.

ಇದು ಪ್ರವಾಸೀ ಕಥನದ ಸೋಗಿನಲ್ಲಿರುವ ಬುಡಮೇಲು

ಹನ್ನೆರಡನೆಯ ಶತಮಾನದಲ್ಲಿ ಈಜಿಪ್ಟಿನ ವ್ಯಾಪಾರಿಯೊಬ್ಬನ ಗುಲಾಮನಾಗಿ ಮಂಗಳೂರಿನ 'ಬೊಮ್ಮ' ಎಂಬಾತನು, ಆ ದೂರದೇಶಕ್ಕೆ ಹೋಗುವುದು ಈ ಕಾದಂಬರಿಯ ವಿದ್ಯಮನಾನಗಳಲ್ಲಿ ಒಂದು.

ಮಾಡುವ ಚರಿತ್ರೆ. ವಿಪುಲವಾದ ವಿವರಣೆ, ಉಪಕತೆಗಳಿಂದ ತುಂಬಿದ ಈ ಪುಸ್ತಕವು ಧರ್ಮಯುದ್ಧದಿಂದ ಹಿಡಿದು ಆಪರೇಶನ್ ಡೆಸರ್ಟ್ ಸ್ಟೋರ್ಮ್‌ನ ವರೆಗಿನ ಈಜಿಪ್ಟಿನ ಮಾಂತ್ರಿಕ ಒಳನೋಟವನ್ನು ಕೊಡುತ್ತದೆ. ಕೆಲವು ಶತಮಾನಗಳ ಹಿಂದಿನವರೆಗೂ ಪ್ರಚಲಿತವಿದ್ದು ಈಗ ಹಲವು ಸ್ಥಳಗಳಲ್ಲಿ ವಿಭಜನೆಗೊಳಗಾಗಿರುವ –ಭಾರತೀಯರು ಮತ್ತು ಈಜಿಪ್ಟಿನವರು, ಮುಸ್ಲಿಂ ಮತ್ತು ಯಹೂದಿ, ಹಿಂದೂ ಮತ್ತು ಮುಸ್ಲಿಂ ಎಂದು ಒಂದರೊಳಗೊಂದು ಹೆಣೆದುಕೊಂಡ ಹಲವು ಸಣ್ಣ, ಅಸ್ಪಷ್ಟ ಚರಿತ್ರೆಗಳ ವಿಶದವಾದ ದರ್ಶನವನ್ನು ನೀಡುತ್ತದೆ ಎಂಬುದಾಗಿ ಈ ಕೃತಿಯನ್ನು ಬಹುವಾಗಿ ಮೆಚ್ಚಿ ಕನ್ನಡಕ್ಕೆ ತಂದ ಮಿತ್ರಾ ಅವರ ಮುನ್ನುಡಿಯ ಮಾತುಗಳು ಈ ಕೃತಿಯ ಗಟ್ಟಿತನಕ್ಕೆ ಸಾಕ್ಷಿ. ಕಾದಂಬರಿಯ ಪಾತ್ರವಾದ ಬೊಮ್ಮನ ಮೂಲವನ್ನು ಹುಡುಕುವ ಉದ್ದೇಶದಿಂದ ಘೋಷ್ ಅವರ ಮಂಗಳೂರು ಭೇಟಿ, ಅಲ್ಲಿ ನಾಡಿನ ಹಿರಿಯ ವಿದ್ವಾಂಸರಾದ ಪ್ರೊ. ವಿವೇಕ ರೈ ಅವರ ಜೊತೆಗಿನ ಓಡಾಟ, ತುಳುನಾಡಿನ ಭೂತಾರಾಧನೆ ಮೊದಲಾದ ಸಾಂಸ್ಕೃತಿಕ ಸಂಗತಿಗಳು ಕಾದಂಬರಿಯ ಭಾಗವೇ ಆಗಿರುವುದು ಇನ್ನೊಂದು ವಿಶೇಷ. 12ನೆಯ ಶತಮಾನದಿಂದೀಚಿನ ಈಜಿಪ್ಟಿನ ಬದುಕು, ಮಂಗಳೂರು–ಮಲಬಾರ್ ಕರಾವಳಿಯ ಸೂಕ್ಷ್ಮ ಚಿತ್ರಗಳು, ವೈಯಕ್ತಿಕ ಘಟನೆಗಳ ಮನಕಲಕುವ ವಿವರಗಳು ತುಂಬಿದ ಈ ಹೊತ್ತಿಗೆಯು ಓದುಗರನ್ನು ದೇಶ ಕಾಲಗಳಾಚೆ ಕೊಂಡೊಯ್ಯುತ್ತದೆ ಎಂಬ ಅನುವಾದಕರ ಮಾತಿನಲ್ಲಿ ತಥ್ಯವಿದೆ. ಇತಿಹಾಸದ ನೆನಪುಗಳ ಮೂಲಕ ಮಾನವ ಜನಾಂಗದ ನಿನ್ನೆ ಮೊನ್ನೆಗಳನ್ನು ವರ್ತಮಾನಕ್ಕೆ ತಂದು ತಾಳೆ ಹಾಕಿ ನೋಡುವ ಪ್ರಯತ್ನವೂ ಈ ಕಾದಂಬರಿಯಲ್ಲಿ ಯಶಸ್ವಿಯಾಗಿ ನೆರವೇರಿದೆ. ಬಹು ಆಯಾಮಗಳ ಈ ಕಾದಂಬರಿಯನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದ ಮಿತ್ರಾ, ವೆಂಕಟ್ರಾಜ್ ಅವರ ಶ್ರಮ ಸಾರ್ಥಕವಾಗಿದೆ.

ಸಾಂಸ್ಕೃತಿಕ ಚರಿತ್ರೆ ಕಟ್ಟಿಕೊಡುವ ಕಾದಂಬರಿ

» ಡಾ. ಬಿ. ಜನಾರ್ದನ ಭಟ್

ಎಸ್. ಗಂಗಾಧರಯ್ಯ ಅವರ ಕಾದಂಬರಿ ಗಂಗಪಾಣಿ ಒಂದು ಸಾಂಸ್ಕೃತಿಕ –ಐತಿಹಾಸಿಕ ಮಹತ್ವದ ಕಾದಂಬರಿ. ಗಂಗಪಾಣಿ ಅಥವಾ ಗಂಗಾಪಾಣಿ ಒಂದು ತೆಂಗಿನ ತಳಿಯ ಹೆಸರು. ಅದು ತಿಪಟೂರು ತಾಲೂಕಿನ ಹೊನ್ನವಳ್ಳಿ ಮೂಲದ ತಳಿಯಂತೆ. ರುಚಿಕರವಾದ ಅಚ್ಚ ಹಸಿರಿನ ಗಂಗಾಪಾಣಿ ಎಳನೀರನ್ನು ಮೈಸೂರು ಅರಸರು ತರಿಸಿಕೊಳ್ಳುತ್ತಿದ್ದರಂತೆ. ಕಾದಂಬರಿಯಲ್ಲಿ ಈ ಮಾಹಿತಿಯನ್ನು ಊರಿನ ಹೆಸರು ಹೇಳದೆ ಹೇಳಿದ್ದಾರೆ (ಅಧ್ಯಾಯ 24). ಕಾದಂಬರಿಯಲ್ಲಿ ಗಂಗಪಾಣಿ ಗಾಂಧಿಯ ಸ್ಮರಣಾರ್ಥ ನೆಡುವ ಒಂದು ತೆಂಗಿನ ಸಸಿಯಾಗಿಯೂ, ಸಂಕೇತವಾಗಿಯೂ ಇದೆ.

ಕಾದಂಬರಿಯಲ್ಲಿ ಗದ್ದಿಗೆಪ್ಪ ಎಂಬ ಪ್ರಾತಿನಿಧಿಕ ಪಾತ್ರದ ಮೂಲಕ ನಮ್ಮ ದೇಶದ ಚರಿತ್ರೆಯನ್ನು ಗ್ರಾಮ ಸಮಾಜದ ದೃಷ್ಟಿಯಿಂದ ನೋಡುವ ಪ್ರಯತ್ನ ಇದೆ. ಕಾದಂಬರಿಯ ಸಾಕ್ಷಿಪ್ರಜ್ಞೆಯೂ ಆಗಿರುವ ಗದ್ದಿಗೆಪ್ಪನ ಅಜ್ಜ ಸ್ವಾತಂತ್ರ್ಯ ಹೋರಾಟಗಾರ ಸಣ್ಣೀರಪ್ಪನಿಗೆ ಗಾಂಧೀಜಿ ಮುಟ್ಟಿದ ಗಂಗಪಾಣಿ ಗಿಡದಿಂದ ಪಡೆದ ಕಾಯಿಗಳಿಂದ ಬೀಜಗಳನ್ನು ಮಾಡಿ ತೋಟವೊಂದನ್ನು ಮಾಡಬೇಕೆಂಬ ಹಂಬಲವಿತ್ತು. ಇಡೀ ತೋಟವೇ ಗಾಂಧಿ ಮುಟ್ಟಿದ ತೋಟವಾಗಬೇಕು; ಗಾಂಧಿ ಅವುಗಳೊಳಗೆ ಮರುಜೀವಿಸಬೇಕು ಎಂಬ ಹಂಬಲವಿತ್ತು. ಹಾಗೆಯೇ ಗಾಂಧಿ ಹರಸಿಕೊಟ್ಟ ಒಂದು ಗಂಗಪಾಣಿ ಬೀಜದಿಂದ ಮರವನ್ನು ಬೆಳೆಸಿ ಸಮೃದ್ಧವಾಗಿ ಫಲಕೊಡುವ, ಮೂಲ ರುಚಿಯನ್ನೇ ಉಳಿಸಿಕೊಂಡ ಗಂಗಪಾಣಿ ತೆಂಗಿನ ಮರವನ್ನು ಬೆಳೆಸಿದ್ದ.

ಗದ್ದಿಗೆಪ್ಪನ ಅಜ್ಜ ಸಣ್ಣೀರಪ್ಪ ಸ್ವಾತಂತ್ರ್ಯ ಹೋರಾಟಗಾರ. ಅವನೂ, ಅದೇ ಊರಿನವನಾದ ದಾಸೇಗೌಡನೂ ಜೈಲಿಗೆ ಹೋಗಿದ್ದಾಗ ಅಲ್ಲಿ ವಿನೋಬಾ ಭಾವೆಯವರ ಅನುಯಾಯಿ 'ಭೂದಾನ' ಚಳುವಳಿಯ ರಾಮಣ್ಣನ ಪರಿಚಯವಾಗಿತ್ತು. ಸಣ್ಣೀರಪ್ಪನ ಅಪ್ಪ ಮೇಲಜ್ಜ ಕೂಡ ಸ್ವಾತಂತ್ರ್ಯ ಹೋರಾಟಗಾರ. ಅವನು ಒಮ್ಮೆ ಜೈಲು ಸೇರಿದ್ದವನು ಏನಾದನೆಂದೇ ತಿಳಿದಿರಲಿಲ್ಲ.

ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧೀಜಿ ತಮ್ಮ ಊರಿಗೆ ಬಂದು ಸ್ವಾತಂತ್ರ್ಯದ ಹೋರಾಟದ ಕಿಡಿಯನ್ನು ಹೊತ್ತಿಸಿ ಹೋಗಿದ್ದ ಹೋರಾಟದ ತ್ಯಾಗದ ಕಥೆಯನ್ನು ಅಜ್ಜ ಸಣ್ಣೀರಪ್ಪನಿಂದ ಗದ್ದಿಗೆಪ್ಪ ತಿಳಿಯುತ್ತಾನೆ. ಸಣ್ಣೀರಪ್ಪ ಮತ್ತು ಅವನ ಜೊತೆಗಾರರು ಸ್ವಾತಂತ್ರ್ಯ ಹೋರಾಟಕ್ಕೆ ಇಳಿಯುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಸ್ವಾತಂತ್ರ್ಯ ಹೋರಾಟಗಾರರಿಗೆ ಸರಕಾರ ಪಿಂಚಣಿ ಸೌಲಭ್ಯವನ್ನು ನೀಡಿದಾಗ ರಾಮಣ್ಣ ಮತ್ತು ಸಣ್ಣೀರಪ್ಪ ಅದನ್ನು ನಿರಾಕರಿಸಿದ್ದರು.

ಗಾಂಧಿ ಕೈಯಲ್ಲಿ ಮುಟ್ಟಿದ ತೆಂಗಿನ ಕಾಯಿಯನ್ನು ನೆಟ್ಟು, ಅದರಿಂದ ತೋಟ ಬೆಳೆಸಿ, ಮಗನಿಗೆ ಗಾಂಧಿ ಎಂಬ ಹೆಸರಿಟ್ಟ ನಿರೂಪಕನು, ಇಪ್ಪತ್ತು ವರ್ಷಗಳ ನಂತರ ಬಂದು ನೋಡಿದರೆ, ತನ್ನ ತೋಟ ಹಾಳಾಗಿದೆ, ಸುತ್ತಲಿನ ಪರಿಸರವು ಗಣಿಗಾರಿಕೆಯಿಂದ ಕನಲಿಹೋಗಿದೆ!

ಸಣ್ಣೀರಪ್ಪ ತತ್ವಪದ ಹಾಡುಗಾರನೂ ಹೌದು. ಈ ಹಾಡುಗಳಿಂದ ಗದ್ದಿಗಪ್ಪ ಆಧ್ಯಾತ್ಮಿಕ ಒಲವನ್ನೂ ಬೆಳೆಸಿಕೊಳ್ಳುತ್ತಾನೆ. ಗದ್ದಿಗಪ್ಪನ ವೈಯಕ್ತಿಕ ಬದುಕಿನಲ್ಲಿ ಹಲವು ದುರಂತಗಳು ಸಂಭವಿಸುತ್ತವೆ. ಅವನ ತಾಯಿ ಸಾಯುತ್ತಾಳೆ. ಅವನ ಮಗನಿಗೆ ಗಾಂಧಿ ಎಂದು ಹೆಸರಿಟ್ಟಿದ್ದ; ಅವನು ಬಂದೂಕು ಸ್ಫೋಟದಲ್ಲಿ ಎರಡೂ ಕಣ್ಣುಗಳನ್ನು ಕಳೆದುಕೊಂಡು ಕುರುಡನಾಗುತ್ತಾನೆ, ಒಂದು ದಿನ ಬಾವಿಯಲ್ಲಿ ಬಿದ್ದು ಸಾಯುತ್ತಾನೆ. ಗದ್ದಿಗೆಪ್ಪ ಭೂದಾನ ಚಳುವಳಿಯ ರಾಮಣ್ಣನಿಂದ ಪ್ರೇರಿತನಾಗಿ ತನ್ನ ಹತ್ತು ಎಕರೆ ಜಮೀನನ್ನು ದಾನ ಮಾಡುತ್ತಾನೆ. ಮನಶ್ಶಾಂತಿ ಇಲ್ಲದೆ ಊರು ಬಿಟ್ಟು ಉತ್ತರ ಭಾರತದಲ್ಲಿ ಅಲೆಯುತ್ತ ಜೀವನ ಸಾಗಿಸುತ್ತಾನೆ. ಹಿಮಾಲಯಕ್ಕೂ ಹೋಗಿ ಅಲ್ಲಿ ಒಬ್ಬಾಕೆಯೊಡನೆ ಸಂಸಾರ ನಡೆಸುತ್ತಾನೆ. ಅವಳ ಅತ್ಯಾಚಾರವಾಗಿ ಕೊಲೆಯಾಗುತ್ತದೆ. ಆ ಪ್ರದೇಶವನ್ನು ಬಿಟ್ಟು ಮುಂದೆ ನಡೆಯುತ್ತ ಬೆಟ್ಟದ ಮೇಲಿದ್ದ ಗುಡಿಗೆ ಬರುತ್ತಾನೆ. ಅಲ್ಲಿ ಸೀತಾ ಎಂಬ ಹೆಣ್ಣಿನ ಸಂಪರ್ಕಕ್ಕೆ ಬರುತ್ತಾನೆ. ಆಕೆಯದೂ ಒಂದು ದುರಂತ ಕಥೆಯಿದೆ. ಅತ್ಯಾಚಾರದಿಂದ ಜನಿಸಿದ ಮಗಳೊಬ್ಬಳಿದ್ದಾಳೆ. ಜತೆಗೆ ಇನ್ನಿಬ್ಬರು ಮಕ್ಕಳಿದ್ದಾರೆ. ಕೊನೆಗೆ ಗದ್ದಿಗೆಪ್ಪನನ್ನು ಊರಿನ ತುಡಿತ ಸೆಳೆಯುತ್ತದೆ.



ಗಂಗಪಾಣಿ
(ಕಾದಂಬರಿ)
ಲೇ: ಎಸ್. ಗಂಗಾಧರಯ್ಯ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ: ರು.280/-

ಇಪ್ಪತ್ತು ವರ್ಷಗಳ ಮೇಲೆ ಅವನು ಹಿಂದಿರುಗಿ ಊರಿಗೆ ಬಂದಾಗ ಊರು ಪರಿಚಯ ಸಿಗದಷ್ಟು ಬದಲಾವಣೆಗೊಂಡಿರುತ್ತದೆ. ಗಣಿಗಾರಿಕೆ ಊರನ್ನು ಕುಲಗೆಡಿಸಿರುತ್ತದೆ. ಗಣಿಗಾರಿಕೆಯನ್ನು ಪ್ರತಿಭಟಿಸಿದ ನಾಯಕರು ಕೊಲೆಗೀಡಾಗುತ್ತಾರೆ. ಗಾಂಧೀಜೀ ಹಾಗೂ ವಿನೋಬಾ ಅವರ ಚಿತ್ರಗಳಿಗೆ ಗೆದ್ದಲು ಹಿಡಿದಿರುತ್ತದೆ.

ತನ್ನ ಜಾಗ ಹೇಗಾಗಿದೆಯೆಂದು ನೋಡಲು ಹೋಗುತ್ತಾನೆ. ಇವನು ದಾನ ಮಾಡಿದ ಜಮೀನು ಸಹಿತ ಪ್ರಕೃತಿಯ ಮೇಲೆ ಅತ್ಯಾಚಾರ ಆಗಿರುತ್ತದೆ. ಅಲ್ಲಿ ಗಂಗಪಾಣಿ ಮರವನ್ನು ನಾಶಮಾಡಿ ಬೇರೆ ತೋಟ ಬೆಳೆಸಿರುತ್ತಾರೆ. ಕಲ್ಲು ಬಾವಿಯನ್ನು ಮುಚ್ಚಿ ಕೊಳವೆ ಬಾವಿ ತೋಡಿಸಿರುತ್ತಾರೆ. ಅವನ ಮಗನ ಸಮಾಧಿಯನ್ನು ನಾಶ ಮಾಡಿರುತ್ತಾರೆ. ಗದ್ದಿಗೆಪ್ಪ ತನ್ನ ಮಗನಿಗೆ 'ಗಾಂಧಿ' ಎಂದು ಹೆಸರಿಟ್ಟಿದ್ದ. ಅವನ ಸಮಾಧಿಯೂ, ಗಾಂಧಿಯ ನೆನಪಿನ 'ಗಂಗಪಾಣಿ' ಮರದ ಜತೆಗೆ ನಾಶವಾಗುವುದು ದೇಶವು ಗಾಂಧೀವಾದವನ್ನು ಬಿಟ್ಟು ಸಾಗಿರುವುದನ್ನು ಸೂಚಿಸುತ್ತದೆ. ಸಮಾಜವು ಪ್ರಕೃತಿ ಪ್ರೀತಿಯ ಬದುಕನ್ನು ಮರೆತು ಆದರ್ಶಗಳಿಲ್ಲದೆ ಸಾಂಸ್ಕೃತಿಕ ವಿಸ್ಮೃತಿಗೂ, ಸ್ವಾರ್ಥಿಯಾದ ಧನದಾಹಕ್ಕೂ ಸಂದಿರುವುದನ್ನು ಸೂಚಿಸುತ್ತದೆ.

ಈ ಕಾದಂಬರಿಯ ಲೇಖಕ ಎಸ್. ಗಂಗಾಧರಯ್ಯ ಅವರು ತಿಪಟೂರು ತಾಲೂಕಿನವರು. ತಮ್ಮ ಸೀಮೆಯ ಸಮೃದ್ಧವಾದ ಸಾಂಸ್ಕೃತಿಕ ಲೋಕವನ್ನು, ಭಾವಶ್ರೀಮಂತಿಕೆಯ ಇತಿಹಾಸವನ್ನು ತಮ್ಮ ಸ್ಮೃತಿಕೋಶದಲ್ಲಿ ಜತನವಾಗಿ ಕಾಪಿಟ್ಟಿರುವ ಅವರು ಈ ಕಾದಂಬರಿಯ ಹೆಣಿಗೆಯಲ್ಲಿ ಅವನ್ನೆಲ್ಲ ಹಿಡಿದು ಒಂದು ಅನುಭವವಾಗಿ ಕಟ್ಟಿಕೊಟ್ಟಿದ್ದಾರೆ. ಕಾದಂಬರಿಯ ಕಥಾನಕಗಳು ನಡೆಯುವ ಕಾಲಮಾನ ಸುಮಾರು 1925 ರಿಂದ ಇಂದಿನವರೆಗೆ. ವಿನೋಬಾ ಭಾವೆ, ಗಾಂಧೀಜಿ, ಸ್ವಾತಂತ್ರ್ಯ ಹೋರಾಟ, ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಬದುಕು ಇಲ್ಲಿ ದಾಖಲಾಗಿದೆ. ವಿನೋಬಾ ಭಾವೆ ಅವರ ಭೂದಾನ ಚಳವಳಿಯಿಂದ ಪ್ರೇರಿತರಾಗಿ ಹಳ್ಳಿಯ ಕೆಲವರು ಭೂದಾನ ಮಾಡಿದ ಕಥೆಯೂ ಇಲ್ಲಿದೆ. ಹಳ್ಳಿಗರ ಆಧ್ಯಾತ್ಮಿಕ ತುಡಿತಗಳಿಗೆ ಸ್ವರವಾಗುವ ತತ್ವಪದಗಳು, ವಚನಗಳು ಇಲ್ಲಿ ಮೈದಳೆಯುತ್ತವೆ. ಈ ತತ್ವಪದಗಳು, ಅವುಗಳನ್ನು ಪ್ರಸ್ತುತಪಡಿಸುವ ಸನ್ನಿವೇಶಗಳು ಕಾದಂಬರಿಗೆ ಒಂದು ವಿಶಿಷ್ಟ ಆಯಾಮವನ್ನು ಒದಗಿಸಿವೆ. ಬುಡುಬುಡಿಕೆಯವರು, ಜೋಗಿಗಳು ಮುಂತಾಗಿ ಇತರ ಅಲೌಕಿಕದ ಬೆನ್ನುಹತ್ತಿದವರೂ ಈ ಕಾದಂಬರಿಯಲ್ಲಿ ಬರುತ್ತಾರೆ. ಸಮಾಜದ ತಳ ಸ್ತರದಲ್ಲಿ ಅಥವಾ ಒಳಸ್ತರಗಳಲ್ಲಿ, ದೇಶದ ಮೂಲೆ ಮೂಲೆಗಳಲ್ಲಿ ಹರಿಯುವ ಸುಪ್ತವಾದ ಅಮೃತವಾಹಿನಿಯಂತಹ ಜೀವನಪ್ರೀತಿ, ಸಬಾಲ್ಟರ್ನ್ ಆಧ್ಯಾತ್ಮಿಕತೆಯನ್ನು ಇಂತಹ ಸನ್ನಿವೇಶಗಳು ಸೂಚಿಸುತ್ತವೆ. (ಲೇಖಕರಿಗೆ ತತ್ವಪದಗಳ ಪರಂಪರೆಯ ಕುರಿತ ಗಾಢವಾದ ಅನುಭವ ಇರುವುದು ಇಂತಹ ಚಿತ್ರಣವನ್ನು ಅಥೆಂಟಿಕ್ ಅನಿಸುವಂತೆ ಮಾಡಿದೆ).

ಕಾದಂಬರಿಯ ಭಾಷೆ ತಿಪಟೂರು ಸೀಮೆಯ ಗ್ರಾಮ್ಯ ಕನ್ನಡವಾಗಿದೆ. ಅದನ್ನು ಓದುವಾಗ ಆನಂದವಾಗುತ್ತದೆ. ನಡುವೆ ಗದ್ದಿಗೆಪ್ಪನ ಭಾರತ ಪರ್ಯಟನೆಯ ಕೆಲವು ನಿರೂಪಣೆಗಳಿಗೆ ಶಿಷ್ಟ ಕನ್ನಡವೂ ಬಳಕೆಯಾಗಿಲ್ಲವೆಂದಲ್ಲ. ಕೆಲವು ಪ್ರಾದೇಶಿಕ ಪದಗಳಿಗೆ ಕಾದಂಬರಿಯ ಕೊನೆಯಲ್ಲಿ ಶಬ್ದಕೋಶವನ್ನು ಕೊಟ್ಟಿದ್ದಾರೆ. 'ಗಂಗಪಾಣಿ' ಕನ್ನಡದ ಕಾದಂಬರಿ ಪರಂಪರೆಯನ್ನು ಅರ್ಥಪೂರ್ಣವಾಗಿ ಬೆಳೆಸಿದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಶಿವನಿಗಾಗಿ ಕಾಯುತ್ತ
(ಕಾಶಿ ಜ್ಞಾನವಾಪಿಯ ಸತ್ಯದ ಅನಾವರಣ)
ಲೇ: ವಿಕ್ರಮ್ ಸಂಪತ್
ಅನು : ಜಿ.ಎಲ್.ಶೇಖರ್,
ನರೇಂದ್ರಕುಮಾರ್ ಎಸ್,ಎಸ್.
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 475/-



2
ಹಿಮಾಲಯದ ಋಷಿಗಳ ದಿವ್ಯ ಸಂದೇಶಗಳು
(ಸಕಾಲಿಕ ಮತ್ತು ಕಾಲಾತೀತ)
ಲೇ: ಗುರು ಸಕಲಮಾ
ಪ್ರ: ಸಕಲಮಾ ಪ್ರಕಾಶನ, ಬೆಂಗಳೂರು
ಬೆಲೆ : ರೂ 399/-



3
ವಚನ ದರ್ಶನ
ಸಂ : ಜನಮೇಜಯ ಉಮರ್ಜಿ ಮತ್ತು ಇತರರು
(ವಚನ ಸಾಹಿತ್ಯ ಕುರಿತು ವಿದ್ವತ್ಪೂರ್ಣ ಲೇಖನಗಳು)
ಪ್ರ: ಅಯೋಧ್ಯ ಪ್ರಕಾಶನ, ಬೆಂಗಳೂರು
ಬೆಲೆ : ರೂ 260/-



4
ಉಳಿದಾವ ನೆನಪು
(ಪತ್ರಕರ್ತನ ವೃತ್ತಿ ಜೀವನದ ನೆನಪುಗಳು)
ಲೇ: ಪದ್ಮರಾಜ ದಂಡಾವತಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 250/-

5
ಪುಟಗಳ ನಡುವಣ ನವಿಲುಗರಿ
(ಅಭಿಜಾತ ಭಾರತೀಯ ಕಥಾಕಲಾಪ)
ಲೇ: ಶತಾವಧಾನಿ ಡಾ। ಆರ್.ಗಣೇಶ್
ಪ್ರ: ವಸಂತ ಪ್ರಕಾಶನ, ಬೆಂಗಳೂರು
ಬೆಲೆ : ರೂ 240/-

6
ಸಾಕ್ಷಿ
(ನನ್ನ ಬದುಕಿಗೆ ನಾನೇ ಸಾಕ್ಷಿ)
ಲೇ: ಡಾ। ಗುರುರಾಜ ಕರಜಗಿ
ಪ್ರ: ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ
ಬೆಲೆ : ರೂ 499/-

7
ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-



8
ಕುಂತಿ – ಪಾಂಡು
(ಅವಘಡವಾದ ಅವಕಾಶಗಳಲ್ಲೇ ಆದರ್ಶ ಮೆರೆದವರು)
ಲೇ: ಜಗದೀಶಶರ್ಮಾ ಸಂಪ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 150/-



9
ತುಯ್ಯವೆಲ್ಲ ನವ್ಯದತ್ತ
(ಅಂದತ್ತರ ಉಯ್ಯಾಲೆ ಮತ್ತು ಅದರ ಸುತ್ತ)
ಲೇ: ರಘುನಂದನ
ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್, ಬೆಂಗಳೂರು
ಬೆಲೆ : ರೂ 300/-

10
ಸಂದರ್ಶಿತೆ
(ಅಮೆರಿಕೆಯಲ್ಲಿರುವ ನಮ್ಮವರ ಕತೆಗಳು)
ಲೇ: ಡಾ। ಲೋಹಿತ್ ನಾಯ್ಕರ
ಪ್ರ: ಮನೋಹರ ಗ್ರಂಥಮಾಲೆ, ಧಾರವಾಡ
ಬೆಲೆ : ರೂ 230/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಕಲೆಗೆ ನೆಲೆ ನೀಡಿದ ಕಾಯಕ ಯೋಗಿ

ಹನುಮಂತ ನಗರದ ಆರಂಭದಲ್ಲಿಯೇ ಇದ್ದ ಒಂದು ಕಲ್ಲಿನ ಕಟ್ಟಡ. ಬಹಳ ವರ್ಷ ಅದು ನನ್ನ ಪ್ರೀತಿಯ ಸೆಲೆಯಾಗಿತ್ತು. ಅಲ್ಲಿಗೆ ಹೋದರೆ ಹೊರ ಬರಲು ಅರ್ಧದಿನವಾದರೂ ಬೇಕಿತ್ತು! ಈ ಕಟ್ಟಡದ ಮೊದಲ ಮಹಡಿಯಲ್ಲಿದ್ದವರು ಎಸ್.ಎನ್. ಶಿವಸ್ವಾಮಿ. ಅವರು ಆಕಾಶವಾಣಿಯ ಬಾಲ್ಯಾವಸ್ಥೆಯಲ್ಲಿ ಸೇರಿ ಅದನ್ನು ಪ್ರವರ್ಧನಮಾನಕ್ಕೆ ತಂದವರು. ಅವರು ಹಾಸ್ಯ ಸಾಹಿತ್ಯಕ್ಕೆ ಹೊಸ ರೂಪವನ್ನು ಕೊಟ್ಟವರೂ ಕೂಡ ಹೌದು!

ಎರಡನೆಯ ಮಹಡಿಯಲ್ಲಿದ್ದವರು ಎಸ್.ಎನ್.ಕೃಷ್ಣಸ್ವಾಮಿ ಅವರು ಗಾಂಧಿವಾದಿಗಳು, ವಿವೇಕಾನಂದ ಸಂಸ್ಥೆಗಳ ಮೂಲಕ

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಹೆಸರನ್ನು ಮಾಡಿದವರು. ಮೂರನೆಯ ಮಹಡಿಯಲ್ಲಿದ್ದವರೇ ಎಸ್.ಎನ್.ಚಂದ್ರಶೇಖರ್, ಪತ್ರಕರ್ತರು, ಕಲಾ ವಿಮರ್ಶಕರು. ವ್ಯಕ್ತಿತ್ವದಲ್ಲಿ ಇನ್ನೂ ಎಷ್ಟೊಂದು ಆಯಾಮಗಳನ್ನು ಹೊಂದಿದವರು. ಈ ಸೋದರರಿಗೆ ಸುಬ್ಬರಾವ್ ಎನ್ನುವ ಇನ್ನೊಬ್ಬ ಸೋದರರಿದ್ದರು. ಅವರು ಸೇವಾದಳದಲ್ಲಿ ಹೆಸರು ಮಾಡಿದವರು. ಸಂಗೀತ ಪ್ರಿಯ ಲಕ್ಷ್ಮಣ್, ಗಣೇಶ್ ಕೂಡ ಸೋದರರು. ಸಾವಿತ್ರಿ ಮತ್ತು ಉಮಾ ಸೋದರಿಯರು. ಈ ಎಲ್ಲರ ಕುರಿತೂ ವಿವರವಾದ ಲೇಖನಗಳನ್ನು ಬರೆಯಬಹುದು ಅಷ್ಟು ಘನ ವ್ಯಕ್ತಿತ್ವದವರು. ಅವರಲ್ಲಿ ನನಗೆ ನಿಕಟ ಒಡನಾಟ ಇದ್ದ ಎಸ್.ಎನ್. ಚಂದ್ರಶೇಖರ್ ಅವರ ಬಗ್ಗೆ ಈಗ ಬರೆಯುತ್ತೇನೆ.

ಈ ಸೋದರರು ಹುಟ್ಟಿದ್ದು ಚಿಕ್ಕಬಳ್ಳಾಪುರದಲ್ಲಿ. ಇಬ್ಬರೂ ತಾತಂದಿರು ಅಮಲ್ದಾರರು. ನಿವೃತ್ತಿಯ ನಂತರ ತಂದೆಯ ತಂದೆ ಬೆಂಗಳೂರಿಗೆ ಬಂದು ವಕೀಲಿ ವೃತ್ತಿ ನಡೆಸಿದರು. ತಂದೆಯೂ ವಕೀಲಿ ವೃತ್ತಿ ಮುಂದುವರೆಸಿದರು. ಅಕ್ಕಿಪೇಟೆಯಿಂದ ಮಲ್ಲೇಶ್ವರಂಗೆ ಬಂದರು. ಅವರ ತಾಯಿಯ ಚಿಕ್ಕಮ್ಮ ಮೀನಾಮಣಿ ಅಮ್ಮ, ದಿವಾನ್ ಶೇಷಾದ್ರಿ ಅಯ್ಯರ್ ಅವರ ಸೊಸೆ. ಅವರಿಗೆ ಸೇರಿದ ಬಂಗಲೆಯೊಂದು ಮಲ್ಲೇಶ್ವರಂನ ಐದನೆಯ ಕ್ರಾಸ್‌ನಲ್ಲಿತ್ತು. ಅದನ್ನು ಈ ಕುಟುಂಬದ ವಾಸಕ್ಕೆ ಬಿಟ್ಟು ಕೊಟ್ಟರು. ಚಂದ್ರಶೇಖರ್ ಅವರ ತಂದೆ ನಂಜುಂಡಯ್ಯ ಮತ್ತು ಶಾರದಮ್ಮ. ಚಂದ್ರಶೇಖರ್ ಹುಟ್ಟಿದ್ದು 1922ರಲ್ಲಿ. ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಚಳುವಳಿಯ ಸೆಳೆತ ಶುರುವಾಯಿತು. ಸಿದ್ದವ್ವನಹಳ್ಳಿ ಕೃಷ್ಣಶರ್ಮರ ನೇತೃತ್ವದಲ್ಲಿ ಹೋರಾಟಕ್ಕೆ ಧುಮುಕಿದರು. ಪತ್ರಿಕೋದ್ಯಮದ ಸೆಳೆತವೂ ಅವರ ಮೂಲಕ ಬಂದಿತು. ಆರ್.ಆರ್.ದಿವಾಕರ್ ಅದಕ್ಕೆ ರೂಪ ಕೊಟ್ಟರು.

ಚಂದ್ರಶೇಖರ್ ಈ ನಡುವೆ ಸೋಹನ್ ಲಾಲ್ ಅವರ ಶಿಷ್ಯರಾಗಿ ನೃತ್ಯ ಕಲಿತರು. ಕಲಾವಿದ ಎಂಬ ಚಿತ್ರದಲ್ಲಿ ನಟಿಸಿ ಬೆಳ್ಳಿತೆರೆ ಸಂಪರ್ಕಕ್ಕೆ ಬಂದರು. ವಿದ್ವಾನ್ ರತ್ನಗಿರಿ ಸುಬ್ಬಾಶಾಸ್ತ್ರಿಗಳ ಮೂಲಕ ಕರ್ನಾಟಕಿ ಸಂಗೀತವನ್ನು ಕಲಿತರು. ಸಂಯುಕ್ತ ಕರ್ನಾಟಕದ ಮೂಲಕ ಪತ್ರಿಕೋದ್ಯಮಕ್ಕೆ ಬಂದವರು, ಡೆಕ್ಕನ್ ಹೆರಾಲ್ಡ್ ಮೂಲಕ ವಿಕಸಿತರಾದರು. ಅಲ್ಲಿಯವರೆಗೂ ಕಲಾ ವಿಮರ್ಶೆ ಎನ್ನುವ ಪ್ರಕಾರವೇ ಇರಲಿಲ್ಲ. ಸಂಗೀತ, ನೃತ್ಯ, ಚಿತ್ರಕಲೆ, ಸಿನಿಮಾ ಹೀಗೆ ವಿಭಿನ್ನ ಕಲಾಕ್ಷೇತ್ರಗಳ ಬಗ್ಗೆ ಎಸ್.ಎನ್.ಸಿ. ವ್ಯಾಪಕವಾಗಿ ಬರೆದರು. ಪ್ರತಿಯೊಂದರ ಕುರಿತೂ ಅಧಿಕೃತವಾಗಿ ಬರೆದರು. ಈ ಎಲ್ಲಾ ಕ್ಷೇತ್ರಗಳ ವಿಮರ್ಶೆಗೆ ಭದ್ರ ಬುನಾದಿ ಹಾಕಿದ ಹೆಗ್ಗಳಿಕೆ ಅವರಿಗೇ ಸಲ್ಲಬೇಕು.

ಕಲೆಗಾಗಿಯೇ ಒಂದು ಪತ್ರಿಕೆ ಇರಲಿ ಎಂದು ಅವರು ಹುಟ್ಟು ಹಾಕಿದ್ದು 'ಫೀನಿಕ್ಸ್ ' ಪತ್ರಿಕೆಯನ್ನು. ಇದು ಕೆಲಕಾಲ ಬೆಂಗಳೂರು ಮುದ್ರಣಾಲಯದ ಸಹಯೋಗದಲ್ಲಿ ನಡೆಯುತ್ತಿತ್ತು. ನನಗೆ ಅವರ ಒಡನಾಟ ಬಂದಿದ್ದು ಇಲ್ಲಿಯೇ. ಪತ್ರಿಕೋದ್ಯಮದ ಹಿನ್ನೆಲೆಯೇ ಇಲ್ಲದೆ, 'ಮಲ್ಲಿಗೆ' ಮಾಸಪತ್ರಿಕೆಯ ಹೊಣೆ ಹೊತ್ತಿದ್ದ ನನಗೆ ಪತ್ರಿಕೋದ್ಯಮದ ಭೀಷ್ಮಾಚಾರ್ಯ

ತೊಂಬತ್ತು ದಾಟಿದ್ದ ಎಸ್.ಎನ್.ಸಿ. 'ನನಗಿನ್ನೂ ಹಿರಿಯ ಎನ್ನಿಸಿ ಕೊಳ್ಳುವಷ್ಟು ವಯಸ್ಸಾಗಿಲ್ಲ ಕಣಯ್ಯ' ಎಂದಿದ್ದರು. ಅದು ಒಂದು ರೀತಿಯಲ್ಲಿ ಸತ್ಯವೂ ಆಗಿತ್ತು. ಅವರು ಮಾನಸಿಕವಾಗಿ ಎಂದಿಗೂ ಕಿರಿಯ ಉತ್ಸಾಹಿಯೇ ಆಗಿದ್ದರು.

ಎಸ್.ಎನ್.ಸಿ. ಗುರುವಾದರು. ಅವರು ಏನು ಕಲಿಸಿದರು ಎನ್ನುವದಕ್ಕಿಂತ ಏನನ್ನು ಕಲಿಸಲಿಲ್ಲ ಎನ್ನಬೇಕು; ಶೀರ್ಷಿಕೆ ನೀಡುವುದು, ಪುಟ ವಿನ್ಯಾಸ ಮಾಡುವುದು, ಚಿತ್ರಗಳನ್ನು ಕೂಡಿಸುವುದು, ಕೊನೆಗೆ ಲೇಖಕರಿಗೆ ಪತ್ರ ಬರೆಯುವದನ್ನೂ ಕೂಡ ನಾನು ಅವರಿಂದ ಕಲಿತೆ. ಜೊತೆಗೆ ಫೀನಿಕ್ಸ್‌ನಲ್ಲಿ ಬರುತ್ತಿದ್ದ ಲೇಖನಗಳೇ ಲಲಿತಕಲೆಗಳ ಪಾಠದಿಂತಿದ್ದವು. ಸಂಗೀತದ ಹಿಂದಿನ ಗಣಿತದ ಸೂತ್ರಗಳನ್ನು ನನಗೆ ಕಲಿಸಿದವರು ಎಸ್.ಎನ್.ಸಿ.ಯವರೇ!

ಕಛೇರಿಯಲ್ಲಿ ಎಸ್.ಎನ್.ಸಿ, ಪ್ರತಿದಿನವೂ ಪತ್ರಿಕೋದ್ಯಮದ ಕತೆಗಳನ್ನು ಹೇಳುತ್ತಿದ್ದರು. ಅವು ನಾಡಿನ ಸಾಂಸ್ಕೃತಿಕ ಚರಿತ್ರೆಯ ಮುಖ್ಯ ಭಾಗಗಳು. ಅವೆಲ್ಲವೂ ದಾಖಲಾಗಿದ್ದರೆ ಕನ್ನಡಕ್ಕೆ ಅಮೂಲ್ಯ ಕೃತಿಯೊಂದು ದೊರಕುತ್ತಿತ್ತು. ಬಹಳ ಮುಖ್ಯವಾದ ಎರಡು ಘಟನೆಗಳನ್ನು ಬರೆಯುತ್ತೇನೆ. ಕರ್ನಾಟಕದ ಏಕೀಕರಣ 1956ರಲ್ಲಿ ಆದಾಗ, ಎಸ್.ಎನ್.ಸಿ. ಡೆಕ್ಕನ್ ಹೆರಾಲ್ಡ್ ಸಾಪ್ತಾಹಿಕದ ಮುಖ್ಯಸ್ಥರಾಗಿದ್ದರು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಂದ ಅಗ್ರ ಲೇಖನ ಕೇಳಿದರು. ಅವರು ಒಪ್ಪಿ ಕನ್ನಡದಲ್ಲಿ ಬರೆಯುತ್ತೇನೆ, ನೀವು ಇಂಗ್ಲೀಷ್ ಗೆ ಅನುವಾದಿಸಿ ಕೊಳ್ಳಿ ಎಂದರು.

ಸಮಾರಂಭ ಒಲ್ಲದ ಡಿವಿಜಿ

ಎಸ್.ಎನ್.ಸಿ.ಯವರಿಗೆ ಅಚ್ಚರಿ, ಮಾಸ್ತಿಯವರು ಅಸಿಸ್ಟಂಟ್ ಕಮೀಷನರ್ ಆಗಿದ್ದವರು. ಇಂಗ್ಲೀಷ್‌ನಲ್ಲಿ ಕೃತಿಗಳನ್ನೂ ರಚಿಸಿದ್ದವರು. 'ನೀವೇ ಇಂಗ್ಲೀಷ್ ನಲ್ಲಿ ಸೊಗಸಾಗಿ ಬರೆಯಬಲ್ಲಿರಿ' ಎಂದರೆ, ಮಾಸ್ತಿ ಹೇಳಿದರು. 'ಆಗಿನ ಸ್ಥಿತಿ ಬೇರೆ, ಈಗಿನ ಪರಿಸ್ಥಿತಿ ಬೇರೆ; ಈಗ ನಾನು ಕನ್ನಡ ಬರಹಗಾರ. ಇಂಗ್ಲೀಷ್‌ನಲ್ಲಿ ಬರೆದರೆ ಏಕೀಕರಣದ ಉದ್ದೇಶವೇ ವಿಫಲವಾಗುತ್ತದೆ. ಕನ್ನಡದಲ್ಲಿಯೇ ಬರೆಯುತ್ತೇನೆ, ಅನುವಾದಿಸಿದ್ದು ಎಂದೇ ನೀವು ಪ್ರಕಟಿಸಬೇಕು' ಎಂದರು. ಡಿ.ವಿ.ಜಿ.ಯವರ 'ಜೀವನ ಧರ್ಮಯೋಗ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪುರಸ್ಕಾರ ಲಭಿಸಿತು. ಅದನ್ನು ಸ್ವೀಕರಿಸಲು ಅವರು ದೆಹಲಿಗೆ ಹೋಗಲಿಲ್ಲ. ಅವರ ಮನೆಯಲ್ಲಿಯೇ ಕಾರ್ಯಕ್ರಮ ಏರ್ಪಡಿಸಲೂ ಒಪ್ಪಲಿಲ್ಲ. ಸಾಹಿತ್ಯ ಅಕಾಡಮಿ ಕಾರ್ಯದರ್ಶಿ ಡಾ.ಕೆ.ಎಂ.ಜಾರ್ಜ್ ನಾಲ್ಕಾರು ಸಲ ದೆಹಲಿಯಿಂದ ಎಡತಾಕಿದ್ದೇ ಬಂತು.

ಆಗ ಗೋಖಲೆ ಸಂಸ್ಥೆಯಲ್ಲಿ ಡಿ.ವಿ.ಜಿ. ಕ್ಲಾಸ್ ತೆಗೆದುಕೊಳ್ಳುತ್ತಿದ್ದರು. ಒಂದು ಸಂಜೆ ಕ್ಲಾಸ್ ಮುಗಿಯುವಾಗ ತಿ.ತಾ.ಶರ್ಮರು ಬಂದರು, ಗೋಕಾಕರು ಬಂದರು, ಪತ್ರಕರ್ತರು, ಛಾಯಾಗ್ರಾಹಕರು ಬಂದರು. ಡಿ.ವಿ.ಜಿಯವರಿಗೆ ಏನಾಗುತ್ತಿದೆ ಎಂದು ಅರ್ಥವಾಗುವಷ್ಟರಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವೇ ಶುರುವಾಗಿಬಿಟ್ಟಿತು. ವಿ.ಸೀ.ಯವರು ವಂದನಾರ್ಪಣೆಯಲ್ಲಿ ಹೇಳಿದಾಗಲೇ ಇದು ಎಸ್.ಎನ್.ಚಂದ್ರಶೇಖರ್ ಅವರ ಕಿತಾಪತಿ ಎಂದು ಡಿ.ವಿ.ಜಿ.ಯವರಿಗೆ ಗೊತ್ತಾಗಿದ್ದು.

ಎಸ್.ಎನ್.ಚಂದ್ರಶೇಖರ್ ಬಾಲ್ಯದಿಂದಲೂ ಅಧ್ಯಾತ್ಮದ ಸೆಳೆತದಲ್ಲಿದ್ದರು. ಲೌಕಿಕದಲ್ಲಿದ್ದರೂ ಅಲೌಕಿಕದ ಸೆಳೆತ ಅವರಿಗೆ ಸದಾ ಇತ್ತು. ಸ್ವಾಮಿ ಶ್ರೀನಿವಾಸಾನಂದರ ಪ್ರಭಾವ ಅವರನ್ನು ಅಧ್ಯಾತ್ಮಿಕವಾಗಿ ಬೆಳೆಸಿತ್ತು. ರಾಮಕೃಷ್ಣಾಶ್ರಮದ ಸ್ವಾಮಿ ಯತೀಶ್ವರಾನಂದರಿಂದ 1954ರಲ್ಲಿ ದೀಕ್ಷೆಯನ್ನು ಪಡೆದರು. ಅವರು ಸಂನ್ಯಾಸಕ್ಕೆ ಬರದಿದ್ದರೂ, ಅಜನ್ಮ ಬ್ರಹ್ಮಚಾರಿಗಳಾಗಿ ಸಂನ್ಯಾಸಿಯಂತೆಯೇ ಬದುಕಿದರು. ಅವರ ಅಧ್ಯಾತ್ಮಿಕ ಚಿಂತನೆಗಳು ಬಹಳ ಆಳವಾಗಿದ್ದವು. ಸ್ವಾಮಿ ಹರ್ಷಾನಂದರೇ ವೇದ-ಉಪನಿಷತ್ತುಗಳ ಕುರಿತು ಇವರ ಸಲಹೆಗಳನ್ನು ಕೇಳುತ್ತಿದ್ದರು. ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಎಸ್.ಎನ್.ಸಿ. ಭಾರತೀಯ ವಿದ್ಯಾಭವನಕ್ಕೆ ಮಾರ್ಗದರ್ಶಕರಾಗಿದ್ದರು. ಭವನ್ ಪ್ರಕಟಣೆಗಳಿಗೆ, ಭವನ್ಸ್ ಜರ್ನಲ್‌ಗೆ ಹೊಸ ರೂಪವನ್ನು ಕೊಟ್ಟರು. ಮತ್ತೂರು ಕೃಷ್ಣಮೂರ್ತಿಗಳ ಗಾಂಧಿ ಉಪನಿಷತ್ತನ್ನು ಇಂಗ್ಲೀಷ್‌ಗೆ ತಂದರು. ಅದು ಬರೀ ಅನುವಾದವಾಗಿರಲಿಲ್ಲ, ಎಸ್.ಎನ್.ಸಿಯವರ ಗಾಂಧಿ ಚಿಂತನೆಗಳೂ ಸೇರಿ ಹೊಸ ಎತ್ತರವನ್ನೇ ತಲುಪಿತ್ತು.

ಮುಖ್ಯವಾಗಿ ಅವರು ಎಳೆಯರನ್ನು ಬೆಳೆಸಿದರು. ಅವರು ರೂಪಿಸಿದ ಬಿ.ಕೆ.ಎಸ್.ವರ್ಮ, ಎಂ.ಎಸ್.ಶೀಲಾ, ಟಿ.ಆರ್. ಮಹಾಲಿಂಗಂ, ನಿರುಪಮಾ ರಾಜೇಂದ್ರ ಮೊದಲಾದವರು ಬಹಳ ದೊಡ್ಡ ಹೆಸರನ್ನು ಮಾಡಿದರು. ನಾನು ವಿಜಯವಾಣಿಯಲ್ಲಿದ್ದಾಗ 'ವಿಶ್ವ ಹಿರಿಯರ ದಿನ'ಕ್ಕೆ ಅವರಿಂದ ಲೇಖನ ಕೇಳಿದೆ. ಆಗ ತೊಂಬತ್ತು ದಾಟಿದ್ದ ಎಸ್.ಎನ್.ಸಿ. 'ನನಗಿನ್ನೂ ಹಿರಿಯ ಎನ್ನಿಸಿ ಕೊಳ್ಳುವಷ್ಟು ವಯಸ್ಸಾಗಿಲ್ಲ ಕಣಯ್ಯ' ಎಂದಿದ್ದರು. ಅದು ಒಂದು ರೀತಿಯಲ್ಲಿ ಸತ್ಯವೂ ಆಗಿತ್ತು. ಅವರು ಮಾನಸಿಕವಾಗಿ ಎಂದಿಗೂ ಕಿರಿಯ ಉತ್ಸಾಹಿಯೇ ಆಗಿದ್ದರು. 2015ರ ಜನವರಿ 20ರಂದು ತಮ್ಮ ತೊಂಬತ್ತಮೂರನೆಯ ವಯಸ್ಸಿನಲ್ಲಿ ಎಂದಿನಂತೆ ಭಾರತೀಯ ವಿದ್ಯಾ ಭವನಕ್ಕೆ ತೆರಳಲು ಸಿದ್ಧರಾಗಿದ್ದಾಗ ತೀವ್ರ ಹೃದಯಾಘಾತದಿಂದ ನಮ್ಮನ್ನು ಅಗಲಿದರು. ಸಾಯುವ ಕ್ಷಣದಲ್ಲಿಯೂ ಅವರ ಕೈಯಲ್ಲಿ ಭಾರತೀಯ ವಿದ್ಯಾ ಭವನಕ್ಕೆ ರೂಪಿಸಿದಂತಹ ಹೊಸ ಯೋಜನೆಗಳಿದ್ದವು.

ಅವನಂತೆ

ಕವಿ ಕಣ

» ಡಾ. ಗೋವಿಂದ ಹೆಗಡೆ

ಸೋಕಬೇಕು ಅವನಂತೆ
ಕಲ್ಲದೆ ಹೆಣ್ಣಾಗುವಂತೆ
ಕಡಲು ಹಿಮ್ಮೆಟ್ಟುವಂತೆ

ಸೋಕಬೇಕು ಅವನಂತೆ
ಬಿದಿರು ಕೊಳಲಾಗುವಂತೆ
ರಜರಜವು ಅರಳುವಂತೆ
ವಕ್ರತೆಯು ಅಳಿಯುವಂತೆ

ಸೋಕಬೇಕು ಅವನಂತೆ
ರಕ್ತಿಗೇ ಮೈ ಬರುವಂತೆ
ಕತ್ತಲೆಗೂ ಕಣ್ಣು ಬರುವಂತೆ

ಸೋಕಬೇಕು ಅವನಂತೆ
ಮೌನ ಬೆಳಕಾಗುವಂತೆ
ರೂಹು ಕಳೆದ ಬಯಲಂತೆ

ಸೋಕಬೇಕು ಅವನಂತೆ
ನಾ ನೀ ಅಳಿದು ಅವನಾಗುವಂತೆ

» ಸಂತೋಷ್ ರಾವ್ ಪೆರ್ಮುಡ

ಮೋನು ಎನ್ನುವುದು ಗಾಂಧೀಜಿಯವರ ಬಾಲ್ಯದ ಹೆಸರಾಗಿತ್ತು. ಮೋನುವಿಗೆ ಇಬ್ಬರು ಮಂದಿ ಅಣ್ಣಂದಿರಿದ್ದು. ದೊಡ್ಡಣ್ಣ ಲಕ್ಷ್ಮೀದಾಸ ಮತ್ತು ಸಣ್ಣಣ್ಣ ಕರ್ಸನ್ ದಾಸ್. ಮೋನುವಿಗಿಂತ ಒಂಭತ್ತು ವರ್ಷ ಹಿರಿಯಣ್ಣನಾಗಿದ್ದ ಲಕ್ಷ್ಮೀದಾಸರಿಗೆ ಅದಾಗಲೇ ಬಾಲ್ಯ ವಿವಾಹವೂ ಆಗಿತ್ತು. ತನ್ನ ಕಿರಿಯ ಅಣ್ಣನಾದ ಕರ್ಸನ್ ದಾಸ್‌ರ ಒತ್ತಾಯಕ್ಕೆ ಮಣಿದ ಮೋನು, ತನ್ನ ಮನೆಯಲ್ಲಿದ್ದ ಚಿನ್ನದ ಕೈ ಕಡಗದ ತುಣುಕೊಂದನ್ನು ಚಿನ್ನದ ವ್ಯಾಪಾರಿಗೆ ಅಂಗಡಿಯಲ್ಲಿ ಮಾರಾಟ ಮಾಡಲು ಅಣ್ಣ ಕರ್ಸನ್ ದಾಸ್‌ಗೆ ಸಹಾಯವನ್ನು ಮಾಡಿದ್ದನು. ಅಂದರೆ, ಮನೆಯವರಿಗೆ ತಿಳಿಯದೇ ಆ ಚಿನ್ನವನ್ನು ಮಾರಲು ಮೋನು ಸಹಕರಿಸಿದ್ದರು. ಆದರೆ ತಾನು ಅಣ್ಣನಿಗೆ ಮಾಡಿದ ಸಹಾಯವು ನ್ಯಾಯಯುತವಾದದ್ದು ಅಲ್ಲ, ಅದು ತಪ್ಪು ಎಂದು ಪಶ್ಚಾತ್ತಾಪದಿಂದ ಕೊರಗುತ್ತಿದ್ದನು.

ತನ್ನ ಮಾನಸಿಕ ನೆಮ್ಮದಿಗಾಗಿ ಮತ್ತು ತಾನು ಮಾಡಿದ ತಪ್ಪಿನ ಪ್ರಾಯಶ್ಚಿತ್ತವಾಗಿ ತನ್ನ ತಪ್ಪನ್ನು ತನ್ನ ತಂದೆ ಮತ್ತು ತಾಯಿಗೆ ತಿಳಿಸಿ ಕ್ಷಮೆಯನ್ನು ಕೇಳಬೇಕೆಂದು ಮೋನು ಯೋಚಿಸುತ್ತಾ ಇದ್ದನು. ಮಾತಿನಲ್ಲಿ ಹೇಳುವುದು ಕಷ್ಟ ಎಂದರಿತ ಮೋನು, ತನ್ನ ತಪ್ಪಿಗೆ ಕ್ಷಮೆಯಾಚನೆಯ ಒಂದು ಪತ್ರವನ್ನು ಬರೆದು ತನ್ನ ಜತೆಗೇ ಇಟ್ಟುಕೊಂಡಿದ್ದನು. ಎಂದಿನಂತೆ ಅಂದೂ ಮೋನು ಶಾಲೆಗೆ ಹೊರಡುತ್ತಿದ್ದ. ಆಗ ಮೋನು ಅನಿರೀಕ್ಷಿತವಾಗಿ ತನ್ನ ತಂದೆಯವರು ಮಲಗಿದ್ದ ಕೋಣೆಗೆ ಹೋದನು. ಅನಿರೀಕ್ಷಿತವಾಗಿ ತನ್ನ ಕೋಣೆಯ ಒಳಗೆ ಬಂದ ತನ್ನ ಪ್ರೀತಿಯ ಮಗ ಮೋನುವನ್ನು ನೋಡಿದ ತಂದೆ ಕರಮಚಂದ್ ಗಾಂಧಿ ಮಗನ ಮುಖದಲ್ಲಿ ನೋವಿನ ಮತ್ತು ಆತಂಕದ ಛಾಯೆ ಆವರಿಸಿರುವುದನ್ನು ನೋಡಿ ಗಾಬರಿಯಾದರು. ಮೋನು ತನ್ನ ಚಡ್ಡಿಯ ಕಿಸೆಯಿಂದ ಪತ್ರವನ್ನು ಹೊರಗೆ ತೆಗೆಯುತ್ತಾ ಇದ್ದಾಗ ಮೋನುವಿನ ಕೈಗಳು ನಡುಗುತ್ತಾ ಇರುವುದನ್ನು ಗಮನಿಸಿದರು.

ಕಿಸೆಯಿಂದ ತೆಗೆದ ಪತ್ರವನ್ನು ತನ್ನ ತಂದೆಯವರ ಕಡೆಗೆ ಚಾಚಿದ ಮೋನುವು ತಂದೆಯವರ ಮುಂದೆ ತಲೆ ತಗ್ಗಿಸಿ ಕುಳಿತು ಬಿಟ್ಟರು. ಮಗನು ಬರೆದಿದ್ದ ಪತ್ರವನ್ನು ಅತ್ಯಂತ ಕುತೂಹಲದಿಂದ ತಂದೆ ಕರಮಚಂದ್ ಗಾಂಧಿ ಓದತೊಡಗಿದರು. ಮಗನ ಪತ್ರವನ್ನು ಪೂರ್ತಿಯಾಗಿ ಓದಿದ ನಂತರ ತನ್ನೆದುರು ತಲೆ ತಗ್ಗಿಸಿ ಕುಳಿತಿದ್ದ ಮಗ ಮೋನುವನ್ನು ಆಶ್ಚರ್ಯ ಮತ್ತು ಅಭಿಮಾನದಿಂದ ಮೌನವಾಗಿ ದಿಟ್ಟಿಸಿ ನೋಡಲಾರಂಭಿಸಿದರು. ತನ್ನ ತಂದೆಯ ಮೌನದ ನೋಟದಿಂದ ಮೋನು ತೀರಾ ಗಾಬರಿಗೆ ಒಳಗಾಗಿದ್ದನು. ಕಣ್ಣುಮುಚ್ಚಿಕೊಂಡು ನೆಲದಲ್ಲಿ ಮಲಗಿದ್ದ ಜಾಗದಿಂದಲೇ



ಪಶ್ಚಾತ್ತಾಪವೇ ಶಿಕ್ಷೆ!

ತಂದೆಯ ಬಳಿ ತಪ್ಪೊಪ್ಪಿಕೊಳ್ಳಲು ಮೋನು ಆಯ್ಕೆ ಮಾಡಿದ ಮಾರ್ಗವೆಂದರೆ, ಎಲ್ಲವನ್ನೂ ಒಂದು ಚೀಟಿಯಲ್ಲಿ ಬರೆದು, ತಂದೆಗೆ ಕೊಡುವುದು!

ಕರಮಚಂದ್ ಗಾಂಧಿ ತನ್ನೆರಡೂ ಕೈಗಳನ್ನು ಮಗ ಮೋನುವಿನ ಕಡೆಗೆ ಚಾಚಿದ್ದರು.

ಹಲವಾರು ವರ್ಷಗಳ ಕಾಲದಿಂದ ತನ್ನ ಪ್ರೀತಿಯ ತಂದೆಯ ಅಪ್ಪುಗೆಯಿಂದ ವಂಚಿತನಾಗಿದ್ದ ಮೋನುಗೆ, ಈ ಸ್ಪರ್ಶದಿಂದ ಮೈ ರೋಮಾಂಚನ ಆಗಿತ್ತು. ಕುಳಿತಲ್ಲಿಂದ ಎದ್ದ ಮೋನು ತನ್ನ ತಂದೆಯ ಎದೆಯ ಮೇಲೆ ತಲೆಯಿರಿಸಿ ನೆಮ್ಮದಿಯ ನಿಟ್ಟುಸಿರು ಬಿಟ್ಟನು. ತಂದೆಯ ಮೌನವೂ ಮೋನುವಿಗೆ ಜೀವನದ ಹೊಸತಾದ ಪಾಠವೊಂದನ್ನು ಕಲಿಸಿತ್ತು. ಆ ಪಾಠವು ಮೋನುವಿನ ಬದುಕಿನಲ್ಲಿ ಗಟ್ಟಿಯಾದ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡಿತ್ತು - ಶಿಕ್ಷೆ ಇರುವುದು ಕೇವಲ ತಪ್ಪನ್ನು ಮಾಡಿದವನನ್ನು ದಂಡಿಸುವುದಕ್ಕೆ ಅಷ್ಟೇ ಅಲ್ಲ. ಬದಲಿಗೆ ಅದು ಶಿಕ್ಷೆಗೆ ಈಡಾದವನ ತಪ್ಪನ್ನು ಸರಿಪಡಿಸುವುದಕ್ಕೆ ಇರುವ ಒಂದು ಪ್ರಬಲವಾದ ಸಾಧನ ಎನ್ನುವ ಹೊಸ ಪಾಠ ಅರಿವು ಮೋನುವಿಗೆ ಆಯಿತು; ಮಾಡಿದ್ದ ತಪ್ಪಿನಿಂದ ಗೊಂದಲದ ಗೂಡಾಗಿದ್ದ ಮೋನುವಿನ ಮನಸ್ಸು ಈ ಪ್ರಫುಲ್ಲವಾಗಿತ್ತು. ಮೋನು ಮುಂದೆ ಗಾಂಧೀಜಿಯಾಗಿ ರೂಪುಗೊಳ್ಳಲು, ಬಾಲ್ಯದ ಇಂತಹ ಹಲವು ಅನುಭವಗಳ ಬುನಾದಿ ಇದೆ.

» ಡಾ. ಕೆ.ಎಸ್.ಚೈತ್ರಾ

ಪ್ರೀತಿ ಎನ್ನುವುದು ಮನಸ್ಸನ್ನು ಅರಳಿಸುವ ಶಕ್ತಿ, ಬದುಕಿನ ಮೂಲ ದ್ರವ್ಯ. ಆದರೆ ಇತ್ತೀಚಿನ ಪೊಲೀಸ್ ಇಲಾಖೆಯ ಅಂಕಿ ಅಂಶಗಳ ಪ್ರಕಾರ, ನಮ್ಮ ರಾಜ್ಯದಲ್ಲಿ ಕೊಲೆಗಳ ಸಂಖ್ಯೆ ಹೆಚ್ಚಾಗುತ್ತಿದ್ದು 2024 ರಲ್ಲಿ ಈವರೆಗೆ 161 ಕೊಲೆಯಾಗಿವೆ; ಇವುಗಳಲ್ಲಿ ಐದು ಕೊಲೆ ಪ್ರಕರಣಗಳಲ್ಲಿ ಒಂದು ಪ್ರೇಮಿಗಳ ಅಥವಾ ಸಂಗಾತಿಯದ್ದಾಗಿದೆ. ಈ ರೀತಿ ಪ್ರೇಮಿ/ ಸಂಗಾತಿಗಳ ನಡುವೆಯೇ ಕ್ರೌರ್ಯ ಹೆಚ್ಚುತ್ತಿರುವುದು ನಿಜಕ್ಕೂ ಗಾಬರಿಯನ್ನು ಮೂಡಿಸುತ್ತದೆ. ಅದರಲ್ಲಿಯೂ ಇದು ಯುವ ಜೋಡಿಗಳಲ್ಲಿಯೇ ಎನ್ನುವುದು ಗಮನಾರ್ಹ. ಕೆಲಸದ ಒತ್ತಡ, ಹೊಂದಾಣಿಕೆ ಕೊರತೆ, ಹೆಚ್ಚಿದ ನಿರೀಕ್ಷೆ, ಅನುಮಾನ, ಅಕ್ರಮ ಸಂಬಂಧ, ವೃತ್ತಿಪರ ಬೆಳವಣಿಗೆ ಕುರಿತು ಅಸೂಯೆ, ಸಮಯದ ಕೊರತೆ ಇವು ಮುಖ್ಯ ಕಾರಣ ಎಂದು ಹೇಳಲಾಗಿದೆ.

ಪ್ರೀತಿ, ಮದುವೆ, ಸಂಗಾತಿಯ ಆಯ್ಕೆ ಎಲ್ಲದರ ಬಗ್ಗೆ ರೂಢಿಗತ ನಂಬಿಕೆ-ಸಿದ್ಧ ಮಾದರಿಗಳು ಪಲ್ಲಟವಾಗಿದೆ. ಯುವಜನರಲ್ಲಿ ಇಂದು ಅಂತರ್ಜಾಲದ ಮೂಲಕ ಪ್ರೀತಿ ಪ್ರೇಮ ಮೂಡುವುದು ಹೆಚ್ಚು. ಸಾಮಾಜಿಕ ಮಾಧ್ಯಮ

ಪ್ರೀತಿ ಪ್ರೇಮ ಮತ್ತು ಕೊಲೆ!

ಗಳು ಇಡೀ ಜಗತ್ತನ್ನು ನಮ್ಮ ಮನೆಯ ಜಗಲಿಯನ್ನಾಗಿ ಮಾಡಿ ಹೊಸ ಕ್ರಾಂತಿಯನ್ನೇ ಸೃಷ್ಟಿಸಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಯಾರನ್ನಾದರೂ ಕ್ಷಣದಲ್ಲಿ ಸಂಪರ್ಕಿಸುವ ಅನುಕೂಲವನ್ನು ಮಾಡಿಕೊಟ್ಟಿದೆ. ಲಕ್ಷಾಂತರ ಪ್ರೇಮ ಪ್ರಕರಣಗಳು, ವಿವಾಹ ಮತ್ತು ಸಹಜೀವನಕ್ಕೂ ಕಾರಣವಾಗಿದೆ.ತಂತ್ರಜ್ಞಾನದ ಆಳ- ಅಗಲ ಬಲ್ಲ ಯುವಜನರು ವೈವಾಹಿಕ ಜಾಲತಾಣ, ಡೇಟಿಂಗ್ ಆಪ್, ಸಾಮಾಜಿಕ ಮಾಧ್ಯಮಗಳ ಮೂಲಕ ತಮ್ಮ ಸಂಗಾತಿಯನ್ನು ಹುಡುಕಿಕೊಳ್ಳುತ್ತಾರೆ. ಭೇಟಿಯಾಗುವ ಮುನ್ನ ಫೋನ್ ನೆಟ್ ಮೂಲಕ ಪರಸ್ಪರ ಆಸಕ್ತಿಗಳನ್ನು ಅರಿತುಕೊಂಡು ನಂತರವೇ ತೀರ್ಮಾನಿಸುತ್ತಾರೆ. ಕೆಲವರು ಮದುವೆಯ ಮುನ್ನ ಲಿವ್ ಇನ್ ಸಂಬಂಧದಲ್ಲಿಯೂ ಇದ್ದು ತಮಗೆ ಮದುವೆ ಬೇಕೇ ಬೇಡವೇ ಎಂಬುದನ್ನು ನಿರ್ಧರಿಸುತ್ತಾರೆ.

ಭ್ರಾಮಕ ಜಗತ್ತಿನಲ್ಲಿ ವಿಹರಿಸುತ್ತಾ...

ತೀವ್ರ ಭಾವನೆಗಳನ್ನು ತತ್‌ಕ್ಷಣ ವ್ಯಕ್ತಪಡಿಸಬಲ್ಲ, ಮುಖಾಮುಖಿ ಇಲ್ಲದೇ ಎಲ್ಲಿಯೂ ಹೋಗದೆ ಮನೆಯಿಂದಲೇ ಕುಳಿತು ಮಾಡಬಹುದಾದ ಕಡಿಮೆ ಖರ್ಚಿನ, ಮನಸ್ಸಿಗೆ ಆನಂದ ನೀಡುವ ಈ ರಹಸ್ಯ ಜಗತ್ತಿನಲ್ಲಿ ಪ್ರೇಮ ಪ್ರೀತಿ ಪ್ರಣಯ ಎಲ್ಲವೂ ಸುಲಭವೇ! ಆದರೆ ಅದನ್ನು ನಿಭಾಯಿಸುವುದು ಕಷ್ಟ. ಏಕೆಂದರೆ ವರ್ಚುವಲ್ ಮೀಡಿಯಾದ್ದು ಭ್ರಾಮಕ ಜಗತ್ತು; ಅಲ್ಲಿ ಯಾವುದೇ ಘರ್ಷಣೆ ಇಲ್ಲದೇ ವಿಹರಿಸುವುದು ಸುಲಭ ಮತ್ತು ಆಕರ್ಷಕ. ಆದರೆ ವಾಸ್ತವ ಹಾಗಿರುವುದಿಲ್ಲ. ಬದುಕಿಗೆ ಭಾವುಕತೆ ಮಾತ್ರವಲ್ಲ, ಬದ್ಧತೆಯೂ ಬೇಕು ! ದಿನಗಳೆದಂತೆ ಪರಸ್ಪರ ನಿರೀಕ್ಷೆಗಳಲ್ಲಿ ಅಜಗಜಾಂತರ ವ್ಯತ್ಯಾಸ ನಿಚ್ಚಳವಾಗುತ್ತದೆ. ಉದಾಹರಣೆಗೆ ಹುಡುಗಿಗೆ ಈ ಸಹಜೀವನ/ ಮದುವೆ ಭವಿಷ್ಯಕ್ಕೆ ಬುನಾದಿ ಎನಿಸಿದರೆ ಹುಡುಗನಿಗೆ ಅದು ಪ್ರಯೋಗ ಎನಿಸಬಹುದು. ಮಗುವಿನ ಬಗ್ಗೆ ಒತ್ತಾಯ, ದುಡ್ಡು-ಆಸ್ತಿ ಕುರಿತ ಜಗಳ, ಇತರ ಸಂಬಂಧಗಳ ಕುರಿತು ಗುಮಾನಿ, ಲೈಂಗಿಕ ಅತೃಪ್ತಿ ಇವೆಲ್ಲವೂ ಸಾಮಾನ್ಯ. ಆರಂಭದಲ್ಲಿ ಆಗಾಗ್ಗೆ ವಾದ-ವಿವಾದ, ಜಗಳ, ಬೈಗುಳ, ಹೊಡೆದಾಟ. ನಂತರ ಮುಂದುವರಿದು ಮಿತಿಮೀರಿದಾಗ ಲೈಂಗಿಕ ದೌರ್ಜನ್ಯ, ಹಲ್ಲೆ, ಕೊಲೆಗೂ ಕಾರಣವಾಗುತ್ತದೆ. ಪ್ರೀತಿ ಎನ್ನುವುದು ಮಾನವರಿಗಿರುವ ತೀವ್ರವಾದ ತುಡಿತ, ಅವಶ್ಯಕತೆ. ಪ್ರೀತಿಯ ತುಡಿತದಲ್ಲಿ ದೈಹಿಕ ಸಂಪರ್ಕ ಮೊದಲ ಮೆಟ್ಟಿಲಾದರೆ, ಮಧುರ ಪ್ರೀತಿ (ರೊಮ್ಯಾಂಟಿಕ್) ಎರಡನೆಯದ್ದು. ಮೂರನೆಯದ್ದು , ಮುಖ್ಯವಾದದ್ದು ಸುರಕ್ಷೆ ಮತ್ತು ನೆಮ್ಮದಿ ನೀಡುವ ಬಾಂಧವ್ಯ.ಈ ಮೂರನೆಯ ಹಂತವು ದೀರ್ಘಕಾಲದ ಸಂಬಂಧಗಳಲ್ಲಿ ಮಾತ್ರ ಸಾಧ್ಯ. ಸಾಧಾರಣವಾಗಿ ಈ ಯುವಜೋಡಿಗಳ ಸಂಬಂಧಗಳಲ್ಲಿ ಒಂದು- ಎರಡನೆಯ ಮೆಟ್ಟಿಲು ಸಾಧ್ಯವಾಗುತ್ತದೆ. ಆದರೆ ಮೂರನೆಯ ಹಂತ ತಲುಪಲು ಬೇಕಾದ ಬದ್ಧತೆ ಇರುವುದಿಲ್ಲ. ಏಕೆಂದರೆ ತಮಗೇನು ಬೇಕು, ಈ ಸಹಜೀವನದ ಉದ್ದೇಶ ಏನು ಎಂಬುದರ ಬಗ್ಗೆಯೇ ಸ್ಪಷ್ಟ ಅರಿವಿಲ್ಲ. ಸಾಧಕ-ಬಾಧಕಗಳನ್ನು ಚರ್ಚಿಸುವ ತಾಳ್ಮೆಯಿಲ್ಲ. ಹಿರಿಯರ ಮಾತು ಆಲಿಸುವ ಸಹನೆಯೂ ಇಲ್ಲ. ಪರಸ್ಪರ ಕುಳಿತು ಮಾತನಾಡಲು ಸಮಯವಿಲ್ಲ.

ಹೊಂದಾಣಿಕೆ ಅಗತ್ಯ

ಪ್ರೀತಿ-ಮದುವೆ ಎನ್ನುವುದು ಸಿನಿಮಾಗಳಲ್ಲಿ ಕಂಡಷ್ಟು, ಪುಸ್ತಕದಲ್ಲಿ ಓದಿದಷ್ಟು ರಮ್ಯವಲ್ಲ, ಸುಲಭವೂ ಅಲ್ಲ. ಸಂಪೂರ್ಣ ಭಿನ್ನ ವಾತಾವರಣದಲ್ಲಿ ಬೆಳೆದ ಇಬ್ಬರು ಪ್ರಾಯ ಪ್ರಬುದ್ಧ ವ್ಯಕ್ತಿಗಳು ಒಂದೇ ಸೂರಿನಡಿಯಲ್ಲಿ ಸ್ವತಂತ್ರವಾಗಿ ಬದುಕಬೇಕಾದರೆ ಹೊಂದಾಣಿಕೆಯ ಜತೆ ವೈಯಕ್ತಿಕ ಇಷ್ಟಾನಿಷ್ಟಗಳ ಜತೆ ರಾಜಿಯೂ ಅನಿವಾರ್ಯ. ಹಾಗೆಯೇ ಹೆಗಲೇರುವ ಜವಾಬ್ದಾರಿಯನ್ನು ನಿರ್ವಹಿಸುವ ಕೆಲಸವೂ ಕಠಿಣವೇ. ಆದ್ದರಿಂದಲೇ ಕಲ್ಪನೆಯಲ್ಲಿ ಇದ್ದಷ್ಟು ಇವೆಲ್ಲಾ ಸುಲಭ ಮತ್ತು ಸುಂದರವಲ್ಲ. ಅತಿಯಾದ ನಿರೀಕ್ಷೆ, ವಾಸ್ತವಕ್ಕೆ ಹೊಂದಿಕೊಳ್ಳಲಾರದ ಮನಸ್ಸು, ತನ್ನದೇ ಸರಿ ಎಂಬ ಅಹಂ, ಆರ್ಥಿಕ ಸ್ವಾತಂತ್ರ್ಯ ನೀಡುವ ಅತಿ ಆತ್ಮವಿಶ್ವಾಸ ಇವುಗಳೆಲ್ಲದರಿಂದ ಪ್ರೀತಿ- ಮದುವೆಗಳು ಕೊನೆಗೊಳ್ಳುತ್ತವೆ. ಈಗ ಯುವಜನರಲ್ಲಿ ಆತ್ಮವಿಶ್ವಾಸ, ಆಯ್ಕೆ, ಅವಕಾಶ ಎಲ್ಲವೂ ಇವೆ ಜತೆಗೇ ಅತಿಯಾದ ನಿರೀಕ್ಷೆ-ಅಹಂ- ಆತುರವೂ ! ಹೀಗಾಗಿ ಹೊಂದಿಕೊಂಡು ಬಾಳಬೇಕಾದ ದಂಪತಿ-ಪ್ರೇಮಿಗಳು ಕೊಲ್ಲುವ ಹಂತಕ್ಕೆ ಬಂದಿದ್ದಾರೆ!

ಬಾಲ್ಯದ ಪ್ರಭಾವ

ಈಗಿನ ಯುವಜನರು ಸರಿಯಿಲ್ಲ ಎಂದು ಎಲ್ಲದಕ್ಕೂ ಅವರನ್ನು ಹೊಣೆಯಾಗಿಸುವ ಮುನ್ನ ಬಾಲ್ಯದಲ್ಲಿ ಬೆಳೆಸಿದ ಕ್ರಮವನ್ನೂ ನೆನಪಿಸಿಕೊಳ್ಳಬೇಕು. ಅತಿ ಮುದ್ದಿನಿಂದ ಯಾವುದೇ ರೀತಿಯ ಜೀವನ ಕೌಶಲ, ಸಾಮಾಜಿಕ ನಡೆವಳಿಕೆ ಚಿಕ್ಕಂದಿನಿಂದ ಕಲಿಯದ ಯುವಜನರಿಗೆ ಏಕಾಏಕಿ ಹೊರಗಿನ ವಾತಾವರಣ-ಒತ್ತಡವನ್ನು ಎದುರಿಸುವುದು ಕಠಿಣವೆನಿಸುತ್ತದೆ. ಮೊದಲಿನಿಂದಲೂ ಸ್ವಾವಲಂಬನೆ ಅಭ್ಯಾಸವಾಗದಿದ್ದರೆ ನಂತರ ಅದು ಇದ್ದಕ್ಕಿದ್ದಂತೆ ಹೊರೆ ಎನಿಸುತ್ತದೆ. ದೇಹ-ಮನಸ್ಸು ಎರಡೂ ವಿರೋಧಿಸುತ್ತದೆ. ಸದಾ ತನ್ನ ತಾಳಕ್ಕೆ ಕುಣಿವ ತಂದೆ ತಾಯಿಯರನ್ನು ನೋಡುತ್ತಾ, ಅಧಿಕಾರ ಚಲಾಯಿಸುತ್ತಾ ಬೆಳೆದವರಿಗೆ ಸಂಗಾತಿಯೂ ಹಾಗೇ ಇರಬೇಕು ಎನ್ನಿಸುವುದು ಸಹಜ. ಸಹಬಾಳ್ವೆ-ಹೊಂದಾಣಿಕೆ ಅಪರಿಚಿತ, ಅಸಹನೀಯ ಶಬ್ದಗಳಾಗುತ್ತವೆ. ಇದರ ಪರಿಣಾಮ ಸಾಂಸಾರಿಕ ಬದುಕಿನಲ್ಲಿಯೂ ಕಾಣಲಾರಂಭಿಸುತ್ತದೆ. ವಿವಾಹ ವಿಚ್ಛೇದನ, ಕೊಲೆ/ ಆತ್ಮಹತ್ಯೆಯ ಪ್ರಯತ್ನ, ಆರ್ಥಿಕ ಮುಗ್ಗಟ್ಟು, ದುಶ್ಚಟ, ಮಾನಸಿಕ ಸಮಸ್ಯೆಗಳು ಹೆಚ್ಚುತ್ತಿರುವುದಕ್ಕೆ ಇದೂ ಕಾರಣ! ಸಂಬಂಧಗಳು ಸುಭದ್ರವಾಗಿರಬೇಕು ನಿಜ. ಹಾಗೊಮ್ಮೆ ಬಿರುಕು ಮೂಡಿದಲ್ಲಿ ಅದಕ್ಕೆ ಸಮಾಧಾನದಿಂದ ಪರಿಹಾರ ಕಂಡುಕೊಳ್ಳಬಹುದು. ಒಟ್ಟಿಗೇ ಬಾಳಲು ಸಾಧ್ಯವಾಗದೇ ಇದ್ದಲ್ಲಿ ತೊರೆದು ಗೌರವದಿಂದಲೇ ಮುನ್ನಡೆಯಬಹುದು; ಹೊರತು ದೌರ್ಜನ್ಯ, ಕೊಲೆ ಎಂಬ ಮನಸ್ಥಿತಿ ನಿಜಕ್ಕೂ ಅಪಾಯಕಾರಿ!

ರೈಲಿನಷ್ಟು ಆರಾಮದಾಯಕ ಪ್ರಯಾಣ ಇಲ್ಲವೆನ್ನುವುದು ನಿಜ. ಆದರೆ ಒಂದು ಕಡೆಯಿಂದ ನೋಡಿದರೆ ಬಸ್ ಹಿಡಿಯುವುದು ಬಲು ಅರಾಮ ಕಣ್ರೀ. ಎಂತೆಂತಹ ದೊಡ್ಡ ದೊಡ್ಡ ಲಕ್ಸರಿ

ಲಹರಿ

» ನಳಿನಿ ಟಿ. ಭೀಮಪ್ಪ

ಬಸ್ ಬುಕ್ ಮಾಡಿಸಿದ್ರೂ, ನಾವೂ ಹೋಗುವುದಕ್ಕೆ ಸ್ವಲ್ಪ ತಡವಾದರೂ ಸಹ ಚಿಂತೆಯಿಲ್ಲ, ನಮಗೆ ಕಾಲ್ ಮಾಡಿ, ಹತ್ತುವಾಗ ಒಂದೀಟು ನಮ್ಮನ್ನು ಡ್ರೈವರ್ ಕಮ್ ಕಂಡಕ್ಟರ್ ತರಾಟೆಗೆ ತೆಗೆದುಕೊಂಡು, ಕೆಲವೊಮ್ಮೆ ನಮ್ಮ ಭಾರದ ಲಗೇಜುಗಳನ್ನು ಹಿಡಿದು ಹತ್ತುವಾಗ ಕಸಿದುಕೊಂಡು ಒಳಗೆ ಇಟ್ಟು ಸಹಾಯ ಮಾಡುವುದಿದೆ. ಆದರೆ ಈ ರೈಲು ಮಾತ್ರ ಆನೆ ನಡೆದದ್ದೇ ದಾರಿ ಎನ್ನುವ ಹಾಗೆ, ಅದರ ಸಮಯಕ್ಕೆ ನಾವು ಹೊಂದಿಕೊಳ್ಳಬೇಕೇ ಹೊರತು, ನಮ್ಮ ಸಮಯಕ್ಕೆ ಅದು ಸಹಕರಿಸಲಾರದು. ರೈಲು ಆಗಮಿಸುವಾಗಲೂ ಸಹ ಯಾವ ದಿಕ್ಕಿನಿಂದ ಬರುತ್ತದೆ ಎಂಬುದು ಬಹುತೇಕರಿಗೆ ತಿಳಿದಿರುವುದಿಲ್ಲ ಎಂಬುದು, ತಮ್ಮ ಮುಂದಿರುವ ಹಳಿಯ ಎರಡೂ ದಿಕ್ಕಿಗೆ ಜನ ಹಣಕಿಹಾಕುವುದರಲ್ಲೇ ತಿಳಿಯುತ್ತದೆ. ಅದರ ಆಗಮನಕ್ಕೆ ಭೂಮಿ ನಡುಗಿ, ಗುಡುಗು ಮಿಂಚಿಗಿಂತ ಜೋರಾಗಿರುವ ಅದರ ಶಬ್ದಕ್ಕೆ ಕಿವಿಗಳು ಕೆಲಕಾಲ ಕೆಪ್ಪಾಗಿ, ಇನ್ನೂ ಹತ್ತಿರವಾಗುತ್ತಿದ್ದಂತೆ ಸುಂಟರಗಾಳಿ, ಚಂಡಮಾರುತ ನಿಂತವರನ್ನು ಅದುರುವಂತೆ ಮಾಡಿ, ದೀರ್ಘಕಾಲದ ತಪಸ್ಸಿನ ನಂತರ ಅರೆಘಳಿಗೆ ಪ್ರತ್ಯಕ್ಷವಾಗುವ ದೇವರಂತೆ ನಿಲ್ಲುವ ರೈಲಿನಲ್ಲಿ ಕೆಲಕ್ಷಣದಲ್ಲೇ ಸರಕ್ಕಂತ ತೂರಿಕೊಳ್ಳಬೇಕು. ಬೇಗ ವರ ಕೇಳಿಕೊಳ್ಳದಿದ್ದರೆ ಮಾಯವಾಗುವ ದೇವರಂತೆ, ಹತ್ತಿಯಾದರೂ ಹತ್ಕೊಳ್ಳಿ, ಬಿಟ್ಟಾದರೂ ಬಿಟ್ಕೊಳ್ಳಿ ಎಂದು ಸೀಟಿ ಹೊಡೆಯುತ್ತ ಮಾಯವಾಗಿಬಿಡುತ್ತದೆ.

ಆದರೆ ಈ ರೈಲು ಹತ್ತುವ ತನಕ ಆಗುವ ಟೆನ್ಷನ್ ಇದೆ ನೋಡಿ, ಇದು ಅನುಭವಿಸಿದವರಿಗೆ ಮಾತ್ರ ಗೊತ್ತು. ಎಸಿ ಬೋಗಿ ಎಂದು ಮೊದಲೇ ಆನ್ಲೈನ್ ಬುಕ್ ಮಾಡಿಸಿ, ನಮ್ಮ ಸೀಟು ನಮಗೆ ಕಾಯ್ದಿರಿಸಿದೆ ಎನ್ನುವ ಖುಷಿಯಿದ್ದರೂ, ಆ ಸೀಟಿಗೆ ಹೋಗಿ ಕುಳಿತುಕೊಳ್ಳುವ ತನಕ ಪಡುವ ಫಜೀತಿ ಮಾತ್ರ ಬಲ್ಲವನೇ ಬಲ್ಲ. ಟ್ರೈನ್ ಎಲ್ಲಿದೆ ಎಂದು ತಿಳಿಸುವ ಆಪ್ ಹಾಕಿಕೊಂಡರೂ ಬವಣೆ ತಪ್ಪಿದ್ದಲ್ಲ. ಇನ್ನೂ ದೂರದ ಊರಿನಲ್ಲಿದೆ ಎಂದು ಅದು ತೋರಿಸುತ್ತಿದ್ದರೆ, ಲೇಟಾಗಿ ಬರಬಹುದು ಅಂದುಕೊಂಡು ಹೋದ ದಿನ ಸರಿಯಾದ ಸಮಯಕ್ಕೆ ಹಾಜರಾಗಿರುತ್ತದೆ. ಇಲ್ಲೇ ಪಕ್ಕದ ಊರಿನಲ್ಲಿದೆ, ಸರಿಯಾಗಿ ಬರಬಹುದು ಎಂದು ದಡಬಡಿಸಿ ಹೋದರೆ, ಅದು ಅಲ್ಲೇ ಗಂಟೆಗಟ್ಟಲೆ ಕ್ರಾಸಿಂಗ್ ಅಥವಾ ಮತ್ತೇನೋ ಆಗಿ ಗೂಟ ಹೊಡೆದು ನಿಂತುಕೊಂಡು ನಿಗದಿತ ಸಮಯಕ್ಕಿಂತ ತುಂಬ ತಡವಾಗಿ ಬಂದಿರುತ್ತದೆ. ಕೆಲವೊಮ್ಮೆ ಸರಿಯಾದ ಸಮಯಕ್ಕೆ ಚಲಿಸುತ್ತಲೇ ಒಂದೊಂದು ಊರಿಗೆ ತಲುಪುವಷ್ಟರಲ್ಲಿ ಹತ್ತತ್ತು ನಿಮಿಷ ಲೇಟಾಗಿ, ನಮ್ಮೂರಿಗೆ ಬರುವಷ್ಟರಲ್ಲಿ ಗಂಟೆಗಟ್ಟಲೆ ತಡವಾಗಿರುತ್ತದೆ.

ಪ್ಲಾಟ್‌ಫಾರ್ಮ್‌ನಲ್ಲಿ ರೈಲು ಕಾಯುವುದು ಮತ್ತೊಂದು ರೀತಿ. ಅಲ್ಲಿ ರೈಲು ಕಾಯುತ್ತ

ಚುಕು ಬುಕು ರೈಲೇ

ರೈಲು ಪ್ರಯಾಣ ಒಳ್ಳೆಯದೋ, ಬಸ್ ಪ್ರಯಾಣ ಒಳ್ಳೆಯದೋ ಎಂಬ ಚರ್ಚೆ ನಡೆಯುತ್ತಲೇ ಇದೆ. ಅವೆರಡೂ ಚಲಿಸುವ ತನಕ, ನಡೆಯುತ್ತಲೇ ಇರುತ್ತದೆ.

ಕುಳಿತಿರುವ ಪ್ರಯಾಣಿಕರ ಸಂಖ್ಯೆಯನ್ನು ನೋಡಿದರೆ ಒಂದು ಕ್ಷಣ ಗುಂಡಿಗೆ ಝಲ್ ಎನ್ನುವುದು ನಿಜ. ಆದರೆ ಎಲ್ಲರೂ ನಮ್ಮ ರೈಲಿಗೇ ಹತ್ತುವುದಿಲ್ಲ ಎಂಬುದು, ಐದಾರು ಸಲ ಪ್ರಯಾಣ ಮಾಡುವ ಹೊತ್ತಿಗೆ ಅರಿವಾಗಿರುತ್ತದೆ. ರೈಲಿನಲ್ಲಿ ತುಂಬ ವಿರಳವಾಗಿ ಪ್ರಯಾಣಿಸುವವರಿಗೆ, ಕೆಲವೊಮ್ಮೆ ಗೊಂದಲವುಂಟಾಗಿ ತಾವು ಹತ್ತುವ ರೈಲನ್ನು ಬಿಟ್ಟು ಬೇರೆ ಹತ್ತಿ ಹೋಗಿ ಪರದಾಡುವುದೂ ಇದೆ.

ನಾವು ಪ್ರಯಾಣ ಮಾಡುವ ಟ್ರೈನು ಮುಂಚೆಯೇ ಯಾವ ಪ್ಲಾಟ್‌ಫಾರ್ಮ್‌ನಲ್ಲಿ ಬಂದು ನಿಲ್ಲುತ್ತದೆ ಎಂದು ಗೊತ್ತಿಲ್ಲದಿರುವುದರಿಂದ, ಇದೋ, ಅದೋ ಎಂದು ಅಲ್ಲಿ ನಿಂತವರನ್ನು, ಸಿಬ್ಬಂದಿಯನ್ನು ಪುರುಸೊತ್ತಿಲ್ಲದೆ ವಿಚಾರಿಸುತ್ತಿರಬೇಕು ಅಥವಾ ಯಾವ ಪ್ಲಾಟ್‌ಫರ್ಮ್‌ಗೂ ಹೋಗದೆ ಅಶರೀರವಾಣಿಯ ಅನೌನ್ಸ್‌ಮೆಂಟ್ ಆಗುವ ತನಕ, ನಡುವೆ ನಿಂತುಬಿಡುವುದು ಆಗುತ್ತದೆ. ದೊಡ್ಡ ದೊಡ್ಡ ನಗರಗಳಲ್ಲಂತೂ ಐದಾರು ಪ್ಲಾಟ್‌ಫಾರ್ಮ್‌ಗಳು ಇರುತ್ತವಾದ್ದರಿಂದ ಇನ್ನೂ ಗೊಂದಲ. ಹತ್ತು ನಿಮಿಷ ಇರುವಾಗ ಅನೌನ್ಸ್ ಆಗಿ ಡಿಸ್ಪ್ಲೇ ಆಗುತ್ತಿದ್ದಂತೆ, ಎಕ್ಸ್‌ಚೇಂಜ್ ಆಫರ್ ಸಿಕ್ಕ ಹಾಗೆ, ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ತಮ್ಮ ತಮ್ಮ ಪ್ಲಾಟ್‌ಫಾರ್ಮ್ ಕಡೆಗೆ ಕಪ್ಪೆಗಳ ತರಹ ಹಾರುತ್ತಿರುತ್ತಾರೆ. ಕೆಲವರು ಅಂಡರ್‌ಬ್ರಿಡ್ಜು, ಓವರ್ ಬ್ರಿಡ್ಜ್‌ಅನ್ನು ಎಸ್ಕಲೇಟರ್ ಇಲ್ಲದ ಕಡೆ, ಲಗೇಜ್ ಸಮೇತ ಹತ್ತಿಕೊಂಡು, ಇಳಿದುಕೊಂಡು ಹೋಗಿ ಹೈರಾಣಾಗುತ್ತಾರೆ. ಮತ್ತೆ ಕೆಲವರು ಕೂಲಿಯವರ ಮೊರೆ ಹೋಗುವುದಿದೆ. ಚಿಕ್ಕ ಊರುಗಳಲ್ಲಿ ಕೆಲವರು, ಯಾರ ಹೆದರಿಕೆಯಿಲ್ಲದೆ ಹಳಿಗಳನ್ನೇ ದಾಟಿಕೊಂಡು ಹೋಗುವುದಿದೆ.

ಬಸ್ಸಿನ ಹಾಗೆ ಟ್ರೈನನ್ನು ನಮ್ಮಿಚ್ಛೆಯಂತೆ ನಿಲ್ಲಿಸುವುದಕ್ಕೆ ಆಗುವುದಿಲ್ಲವಲ್ಲ. ಹಾಗಾಗಿ ಇರುವ ಅಲ್ಪ ಸಮಯದಲ್ಲಿ ಬೆಲ್ಲಕ್ಕೆ ಇರುವೆಗಳು ಮುತ್ತಿದಂತೆ ಬೋಗಿಗಳನ್ನು ಮುತ್ತುತ್ತಿರುತ್ತಾರೆ. ಡಿಸ್ಪ್ಲೇ ಆದಾಗ, ಹೆಚ್ಚಾಗಿ ನಾವು ಅಂದಾಜು ಮಾಡಿ ನಿಂತಿದ್ದಕ್ಕಿಂತ, ನಮ್ಮ ಬೋಗಿಗಳು ಇಸ್ಪೀಟ್‌ಕಾರ್ಡ್ ಶಫಲ್ ಆದಂತೆ ಪಲ್ಲಟವಾಗಿ ನಿಂತಿರುತ್ತವೆ. ಶಾಲೆಯಲ್ಲಿ ಪ್ರೇಯರ್ ಮುಗಿಯುತ್ತಿದ್ದಂತೆ ಮಕ್ಕಳೆಲ್ಲ ತಮ್ಮ ತಮ್ಮ ತರಗತಿಗಳಿಗೆ ಓಡುವಂತೆ, ಜನರೆಲ್ಲ ತಮ್ಮ ತಮ್ಮ ಬೋಗಿ ನಂಬರ್ ಹುಡುಕಿಕೊಂಡು, ಒಳ್ಳೆ ಆನಕೊಂಡ ಹೆಬ್ಬಾವಿನ ತಲೆ, ಬಾಲ ಎರಡೂ ಕಾಣದಂತೆ ಉದ್ದವಿರುವ ರೈಲನ್ನು ಹತ್ತಲು, ಪ್ಲಾಟ್‌ಫಾರ್ಮ್‌ನ ಎರಡೂ ಮೂಲೆಗೆ ಖೋ ಕೊಟ್ಟ ಹಾಗೆ ಪರದಾಡುತ್ತಿರುತ್ತಾರೆ. ಮಳೆಗಾಲದಲ್ಲಂತೂ ಮತ್ತಷ್ಟು ಫಜೀತಿ. ಕೆಲವೊಮ್ಮೆ ಎಷ್ಟೇ ಬಡಿದಾಡಿದರೂ ನಾವು ಹತ್ತಬೇಕಾದ ಬೋಗಿ ತಲುಪಲಾಗದೆ, ರೈಲು ಶಿಳ್ಳೆ ಹಾಕಿ ಹೆದರಿಸುವುದರಿಂದ, ಸಿಕ್ಕ ಬೋಗಿಯನ್ನು ಹತ್ತಿಕೊಂಡು ಒಳಗಿನಿಂದಲೇ ಹುಡುಕುತ್ತಾ ಸಾಗಬೇಕು. ಕೆಲವೊಮ್ಮೆ ರಿಸರ್ವೇಷನ್ ಮಾಡಿದ ಬೋಗಿಯೇ ಕ್ಯಾನ್ಸಲ್ ಆಗಿ ಬೇರೆ ಬೋಗಿಗೆ ನಮ್ಮ ಸೀಟನ್ನು ವರ್ಗಾಯಿಸಿರುತ್ತಾರೆ. ಆಗ ಸೀಟಿಗಾಗಿ ಕರಿಕೋಟಿನ ಟಿಸಿಯನ್ನು ಮೊದಲು ಹುಡುಕಿ ವಿಚಾರಿಸಬೇಕಾಗುತ್ತದೆ.

ಅಂತೂ ರೈಲು ಹತ್ತಿ ನಮ್ಮ ನಮ್ಮ ಸೀಟು ಹುಡುಕಿ ಕೂರುತ್ತಿದ್ದಂತೆ, ತಲೆಯ ಮೇಲೆ ಬಂಡೆಯ ಹಾಗೆ ಕೂತಿದ್ದ ಟೆನ್ಷನ್ ಕೂಡಾ ತಹಬದಿಗೆ ಬಂದು ಮೊಗದಲಿ ಸಣ್ಣನೆಯ ಮಂದಹಾಸ ಮೂಡಿರುತ್ತದೆ. ಕಿಟಕಿಯಿಂದಲೇ ನಮ್ಮನ್ನು ಕಳಿಸಲು ಬಂದವರಿಗೆ ವಿದಾಯದ ಟಾಟಾ ಹೇಳಿ, ಇನ್ನು ರೈಲು ಇನ್ನು ಯಾವಾಗಲಾದರೂ ಹೊರಡಲಿ, ಯಾವಾಗಲಾದರೂ ಊರು ಸೇರಲಿ ಚಿಂತೆಯಿಲ್ಲ ಎಂದು ನಿಶ್ಚಿಂತೆಯಿಂದ ಒರಗಿ ಕೂರುವುದಾಗುತ್ತದೆ.

ವಿದೇಶದ ಸಮಯವನ್ನು ಹೊಂದಿಸಿಕೊಂಡು, ಕೆಲವು ಬಾರಿ ವಿದೇಶದ ಸಂಬಳಕ್ಕೆ ಹೋಲಿಸುವಂತಹ ಸಂಬಳ ಪಡೆಯುವ ಸಾಫ್ಟ್‌ವೇರ್ ಇಂಜಿನಿಯರುಗಳ ಲೋಕ, ತುಸು ಗಂಭೀರ, ತುಸು ರೋಚಕ. ಆದರೆ ಕೆಲಸ ಮಾತ್ರ ವಿಪರೀತ. ಅವರ ಒತ್ತಡದ ಕೆಲಸದ ನಡುವೆಯೂ ಅಲ್ಲಲ್ಲಿ ರಸಪ್ರಸಂಗಗಳು ಸೃಷ್ಟಿಯಾಗುವುದುಂಟು!

ಸಾಫ್ಟ್‌ವೇರ್ ಲೋಕದ ರಸಪ್ರಸಂಗಗಳು



ಹಹ್ಹಾಸ್ಯ

» ಜನಮೇಜಯ ಉಮರ್ಜಿ

ಕಥೆಗಳು ಸದಾ ಕುತೂಹಲಕಾರಿ. ಅವುಗಳ ಹಿನ್ನೆಲೆಗಳು ಇನ್ನೂ ಕುತೂಹಲಕಾರಿ. ಕಥೆಗಳಿಗೆ, ಲೇಖನಗಳಿಗೆ ಒದಗುವ ಸ್ಫೂರ್ತಿಗಳು ಅದಕ್ಕಿಂತ ಕುತೂಹಲಕಾರಿ. ಸಾಫ್ಟ್‌ವೇರ್ ಇಂಜನಿಯರುಗಳಲ್ಲೂ ಹಲವು ಕಥೆಗಳಿವೆ; ಅವುಗಳ ತಿರುಳನ್ನು ತಿರುವುತ್ತಾ ಹೋದರೆ, ಕೆಲವು ರಸಪ್ರಸಂಗಗಳೂ ಕಾಣಸುತ್ತವೆ. ಸದಾ ಸಂಖ್ಯೆ, ಕೋಡ್, ಕಂಪ್ಯೂಟರ್‌ಗಳಲ್ಲೇ ಮುಳುಗಿರುವ ಇವರ ರಸ ಪ್ರಸಂಗಗಳು ಹೇಗಿರುತ್ತವೆ?

ನೀವು ಕರೆನ್ಸಿ ಹಾಕಾವ್ರ?

ಸಾಫ್ಟ್‌ವೇರ್ ಇಂಜನಿಯರುಗಳ ಉದ್ಯೋಗ ಆಕರ್ಷಕ. ಆದರೆ ಮಾಡುವ ಕೆಲಸ ಏನು ಎಂದು ವಿವರಿಸುವುದು ಅಷ್ಟೇ ಕಷ್ಟ. ಸಂಪರ್ಕ ನಿಮಿತ್ತ ಪ್ರಖ್ಯಾತ ರಾಜಕಾರಣಿಗಳೊಬ್ಬರ ಮನೆಗೆ ಹೋಗಿದ್ದೆ. 'ನೀವೇನು ಕೆಲಸ ಮಾಡುತ್ತೀರಿ?' ಅಂತ ಕೇಳಿದರು. 'ನಾನು ಸಾಫ್ಟ್‌ವೇರ್ ಇಂಜನಿಯರ್' ಎಂದೆ. 'ಅಲ್ಲಿ ಏನು ಕೆಲಸ' ಅಂತ ಕೇಳಿದರು. ಬಹುಶಃ ಅವರಿಗೆ ಹೆಚ್ಚು ಮಾಹಿತಿ ತಿಳಿದಿಲ್ಲ ಎಂದು ವಿವರಣೆ ಶುರು ಮಾಡಿದೆ. ಟೆಲಿಕಾಂ ಕ್ಷೇತ್ರದಲ್ಲಿ ನಮ್ಮ ಪ್ರಾಜೆಕ್ಟ್ ಇದೆ, ಇಂತಿಂಥ ಕೆಲಸ ಮಾಡುತ್ತದೆ; ಬಿಎಸ್‌ಎನ್‌ಎಲ್ , ಏರ್ಟೆಲ್, ಜಿಯೋ, ವೊಡಾಫೋನ್ ಇವೆಲ್ಲಾ ಟೆಲಿಕಾಂ ಕ್ಷೇತ್ರದ ಕೆಲ ಕಂಪನಿಗಳು ಅಂದೆ. 'ಓ ಹಂಗಾದ್ರೆ ನೀವು ಕರೆನ್ಸಿ ಹಾಕಾವ್ರಾ?' ಅಂತ ಕೇಳಿದರು. ಕರೆನ್ಸಿ ಹಾಕುವುದೂ ಸಹ ಸಣ್ಣ ಕೆಲಸವೇನಲ್ಲ. ಆದರೆ ಅವರು ನನ್ನ ಕುರಿತು ಆ ನಿರ್ಣಯಕ್ಕೆ ಬಂದದ್ದು ಸ್ವಾರಸ್ಯಕರವಾಗಿದೆ.

ಸಾಫ್ಟ್‌ವೇರ್ ಡೆಲಿವರಿ!

ವೈದ್ಯರು ಜೀವನದ ತುಂಬಾ ಪ್ರಾಕ್ಟೀಸ್ ಮಾಡುತ್ತಲೇ ಇರುತ್ತಾರೆ; ಆದರೆ ಸಾಫ್ಟ್‌ವೇರ್ ಇಂಜನಿಯರುಗಳು ಜೀವನಪೂರ್ತಿ ಡೆಲಿವರಿ ಮಾಡುತ್ತಲೇ ಇರುತ್ತಾರೆ. ತಿಂಗಳಿಗೊಂದು, ಮೂರು ತಿಂಗಳಿಗೊಂದು ಬಿಲ್ಡ್ ರಿಲೀಸ್ ಇರುತ್ತವೆ. 'ರಿಲೀಸ್ ಇದೆ, ಅದಕ್ಕೇ ಈ ವಾರ ವೀಕೆಂಡು ಇಲ್ಲ, ರಜೆ ತಗೋಳಕ್ಕಾಗಲ್ಲ' ಅಂತ ಯಾರಾದರೂ ಹೇಳಿದರೆ, 'ಪುಸ್ತಕ ಬಿಡುಗಡೆನಾ, ಸಿನಿಮಾ ಬಿಡುಗಡೆನಾ?' ಅಂತ ಕೇಳಿದವರೂ ಇದ್ದಾರೆ! ಆಟೋಮೊಬೈಲ್ ಇಂಜಿನಿಯರುಗಳು ತಮ್ಮ ಮಕ್ಕಳನ್ನ 2000 ಮಾಡೆಲ್, 2003 ಮಾಡೆಲ್ ಅಂತ ಪರಿಚಯ ಮಾಡಿಸಿದರೆ, ಸಾಫ್ಟ್‌ವೇರ್ ಇಂಜಿನಿಯರುಗಳು 1.0, 2.0 ಅಂತಾರೆ ಎಂಬ ಜೋಕು ಚಾಲ್ತಿಯಲ್ಲಿದೆ.

ಡೊಮೈನ್ ನಾಲೇಡ್ಜ

ತಂತ್ರಾಂಶ ರೂಪಿಸುವಲ್ಲಿ ಕ್ಷೇತ್ರ ಜ್ಞಾನ ಬಹಳ ಮುಖ್ಯ. ಇವರು ಎಲ್ಲ ಆಗಬೇಕಾಗುತ್ತದೆ, ವೈದ್ಯ, ವಿಜ್ಞಾನಿ, ಲೆಕ್ಕಿಗ ಹೀಗೆ. ಯಾವ ಕ್ಷೇತ್ರಕ್ಕೆ ತಂತ್ರಾಂಶ ಮಾಡಿಕೊಡಬೇಕು ಅದಕ್ಕೆ ತಕ್ಕಂತೆ. ಹೊಸದಾಗಿ ಸೇರಿಕೊಂಡವನೊಬ್ಬನಿಗೆ ಮೊದಲ ದಿನ ಸಿಕ್ಕಿದ ಪ್ರೊಜೆಕ್ಟು ಡೇಟಿಂಗ್ ಸೈಟ್! ಇದರಲ್ಲಿ ಮಜವಾಗಿರುತ್ತೆ ಅಂತ ಆತ ಖುಷಿಯಾಗಿದ್ದ - ಆದರೆ ಅದು ಪಾಕಿಸ್ತಾನ ದೇಶದ ಪ್ರಾಜೆಕ್ಟ್ ಅಂದಾಗ ತಲೆ ಕೆರೆದುಕೊಂಡ! ಇನ್ನೊಬ್ಬನಿಗೆ ಮ್ಯಾಟ್ರಿಮೋನಿಯಲ್ ಸೈಟ್. ಅದರಲ್ಲಿ ಗಂಭೀರವಾಗಿ ತೊಡಗಿಕೊಂಡ ಈತ, ಕ್ರಮೇಣ ಕುಂಡಲಿ, ಮಂಗಳದೋಷ ಬಗ್ಗೆ ಹೆಚ್ಚು ತಿಳಿದುಕೊಂಡು ತನ್ನ ಮದುವೆ ಆಗುವುದೋ ಇಲ್ಲವೋ ಎಂದು ಭಯಕ್ಕೆ ಬಿದ್ದ.

ಕಂಟ್ರೋಲ್ ಪಿ?

ಸರಕಾರಿ ಕಚೇರಿಗಳಲ್ಲಿ ಕಂಪ್ಯೂಟರ್ ಸಮಸ್ಯೆ ಹೇಳತೀರದು. ನೆಟ್ವರ್ಕ್ ಸಮಸ್ಯೆ, ಪ್ರಿಂಟರ್ ಸರಿಯಾಗಿಲ್ಲ ಈ ರೀತಿ ಹಲವಾರು ಕಿರಿಕಿರಿ. ಬ್ಯಾಂಕುಗಳಲ್ಲಿಯೂ ಇದು ಸರ್ವೇ ಸಾಮಾನ್ಯ. ನಾವು ಏನಾದರೂ ಕೆಲಸ ಅಂತ ಅಲ್ಲಿಗೆ ಹೋದಾಗಲೇ ಬಂದ್ ಆಗಿರುತ್ತದೆ. ದೂರದಿಂದ ಬಂದು, ಬಂದ ದಾರಿಗೆ ಸುಂಕವಿಲ್ಲ ಎಂದು ತೆರಳುವ ಗ್ರಾಹಕರ ಸಮಸ್ಯೆ ಕೇಳುವರಿಲ್ಲ. ಈಗ ಗಣಕೀಕರಣ ಸಾಮಾನ್ಯವಾಗಿದೆ. ಹತ್ತು-ಹದಿನೈದು ವರ್ಷಗಳ ಹಿಂದೆ ಸರಕಾರಿ ವಲಯದಲ್ಲಿ ಈ ಕಂಪ್ಯೂಟರ್‌ಗಳ ಮೇಲೆ ಒಂಥರಾ ತಾತ್ಸಾರವಿತ್ತು. ಹಳಬರಲ್ಲಿ ಕೆಲವರು ಇದನ್ನು ಕಲಿಯಬೇಕಿಲ್ಲ ಎಂದು ಗೊಣಗಿಕೊಂಡವರೇ ಹೆಚ್ಚು. ಒಂದು ದೊಡ್ಡ ಸರಕಾರಿ ಕಚೇರಿಗೆ ಬಂದ ಒಬ್ಬ ಯುವ ಅಧಿಕಾರಿ, ಕಛೇರಿ ಗಣಕೀಕರಣಗೊಳಿಸಲು ತಂತ್ರಾಂಶ ತಂದರು. ನೌಕರರದ್ದು ನಿತ್ಯ ದೂರು. ತಂತ್ರಾಂಶ ಬರೆದ ಸಾಫ್ಟ್‌ವೇರ್ ಇಂಜಿನಿಯರಿಗೂ ಕಿರಿಕಿರಿ. ಸಮಸ್ಯೆ ಕೇಳಲು ಕಚೇರಿಗೆ ಹೋದ. 'ಕಂಟ್ರೋಲ್ ಪಿ' ಒತ್ತಿದರೂ ಪ್ರಿಂಟ್ ಆಗುತ್ತಿಲ್ಲ ಎಂಬ ಆರೋಪ. ಅವರು ಒತ್ತುವ ಕೀಲಿಗಳನ್ನು ದಾಖಲಿಸುವ ಮತ್ತು ಆಮೇಲ ಅದನ್ನು ತಪಾಸಣೆ ಮಾಡುವ ಒಂದು ಕೋಡ್ ಬರೆದ. ಮರುದಿನ ಕಚೇರಿಗೆ ಹೋಗಿ ಅಧಿಕಾರಿಗಳ ಎದುರಲ್ಲೇ ಪ್ರಾತ್ಯಕ್ಷಿಕೆ ನೋಡಿದಾಗ, ಆ ನೌಕರ 'ಕಂಟ್ರೋಲ್ ಪಿ' ಬದಲಾಗಿ, ಪಕ್ಕದಲ್ಲಿದ್ದ 'ಕಂಟ್ರೋಲ್ ಓ' ಒತ್ತುತ್ತಿದ್ದ. ಹೀಗೆ ಕನಿಷ್ಠ ನೂರು ಬಾರಿಯಾದರೂ ಒತ್ತಿದ್ದು ಬೆಳಕಿಗೆ ಬಂತು. ಸಮಸ್ಯೆಗಳೇ ಇಲ್ಲ ಅಂತಿಲ್ಲ. ಆದರೆ ತಂತ್ರಜ್ಞರೇ ಮೊದಲು ಅದಕ್ಕೆ ಆಹಾರವಾಗುವುದು ದುರಾದೃಷ್ಟ.

ಅಪಾರ ನಿರೀಕ್ಷೆ

ಟೆಕ್ಕಿಗಳ ಬಗ್ಗೆ ಹೊರಗೆ ಹೆಚ್ಚಿನ ನಿರೀಕ್ಷೆಗಳಿವೆ. ಚೌಕಾಸಿ ಮಾಡಿದಾಗ, ನಿನಗೇನು ಕಡಿಮೆ ಡಾಲರ್ ಲೆಕ್ಕದಲ್ಲಿ ಹಣ ಬರುತ್ತದೆ ಎಂದು ಹೇಳುವುದುಂಟು. ಎಲ್ಲರಿಗೂ ಅದು ಅಲ್ಲ ಎಂಬುದು ವಾಸ್ತವ. ಯಾರೋ ಮನೆಗೆ ಕಾರ್ಯಕ್ರಮಕ್ಕೆ ಕರೆದಿರುತ್ತಾರೆ. ಅಲ್ಲಿ ವೈಫೈ ಕೆಲಸ ಮಾಡ್ತಿಲ್ಲ ಅಂದ್ರೆ, ಮೊಬೈಲ್‌ನಲ್ಲಿ ತೊಂದರೆ ಇದ್ದರೆ, ಕಂಪ್ಯೂಟರ್ ಹಾಳಾಗಿದ್ದರೆ, ಅದನ್ನ ಒಂಚೂರು ನೋಡು ಅಂತ ಇವರಿಗೆ ಹೇಳುತ್ತಾರೆ. 'ಅದರಲ್ಲಿ ನಾನು ಪರಿಣಿತ ಅಲ್ಲ' ಅಂದರೆ ಸಾಕು. ಅಲ್ಲಿದ್ದ ಎಲ್ಲರೂ ಇವನೊಬ್ಬ ಟೆಕ್ಕಿನಾ? ಎಂಬ ಸಂಶಯದಿಂದ ನೋಡುತ್ತಾರೆ. ಇನ್ನು ಕೆಲವರು ಇವರನ್ನು ಅತೀಂದ್ರಿಯ ಶಕ್ತಿ ಉಳ್ಳವರು ಎಂದಣಿಸುತ್ತಾರೆ. ಯಾರದೋ ಸಾಮಾಜಿಕ ಜಾಲತಾಣದಲ್ಲಿರುವ ಗೌಪ್ಯ ವಿಷಯವನ್ನು ಹ್ಯಾಕ್ ಮಾಡಿಕೊಡು ಎಂದು ಕೇಳುತ್ತಾರೆ. ಅದು ಕಾನೂನುಬಾಹಿರ, ಮೇಲಾಗಿ ನನಗೆ ಬರುವುದಿಲ್ಲ ಎಂದು ತಿಳಿ ಹೇಳಿದಾಗ, ಇವನು ನಿಜವಾಗಿಯೂ ಅಲ್ಲೇ ಕೆಲಸ ಮಾಡ್ತಾನಾ? ಎಂದುಕೊಂಡದ್ದು ಇದೆ.

ಅಮೆರಿಕಕ್ಕೆ ಹೊರಟ ಯುವತಿ

ಪ್ರೊಫೆಸರ್ ಒಬ್ಬರು ಹೇಳಿದ ಪ್ರಸಂಗ. ಎಲ್ಲ ಸೆಮಿಸ್ಟರುಗಳಲ್ಲಿ ಕಳಪೆ ಸಾಧನೆ ಮಾಡಿದ ಒಬ್ಬ ಯುವತಿಗೆ ಅವರು 'ನೀನೆಂದೂ ಉದ್ಧಾರ ಆಗೋದಿಲ್ಲ' ಅಂತ ಬೈದಿದ್ದರಂತೆ. ಕೆಲ ವರ್ಷಗಳ ನಂತರ ಆಕೆ ಮದುವೆ ಆಮಂತ್ರಣ ಪತ್ರಿಕೆ ಹಿಡಿದುಕೊಂಡು ಬಂದು 'ನನ್ನ ಮದುವೆ ನಿಶ್ಚಯವಾಗಿದೆ; ನೀವು ಜರೂರ ಬರಲೇಬೇಕು. ನಾನು ಉದ್ಧಾರ ಆಗಂಗಿಲ್ಲ ಅಂದಿದ್ರಿ, ನೀವು; ಮದುವೆ ಆಗೋ ಹುಡುಗ ಗೂಗಲ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ, ನಾನು ಮದುವೆಯಾಗಿ ಅಮೆರಿಕಕ್ಕೆ ಹೊರಟಿದ್ದೇನೆ. ನೀವು ಇನ್ನೂ ಇಲ್ಲೇ ಇದ್ದೀರಾ!' ಎಂದು ಹೇಳಿದಳಂತೆ. ಅವಳನ್ನು ಮೂದಲಿಸಿದ್ದ ಪ್ರೊಫೆಸರ್ ಮುಖವು ಇಂಗುತಿಂದ ಮಂಗನಂತಾಗಿತ್ತು.

ಹೊಸ ಹೊಳಹಿನ ತಾಳಮದ್ದಳೆ

» ಪೂರ್ಣಿಮಾ ಹೆಗಡೆ

ವೈಚಾರಿಕತೆ ಹಾಗೂ ರಂಜನೆಗಳಿಂದ ಸಮಪಾಕದಲ್ಲಿ ಸಂಮಿಳಿತವಾದ ಕಲೆ ತಾಳಮದ್ದಳೆ. ಯಕ್ಷಗಾನ ಆಕರ್ಷಕ ಕುಣಿತಕ್ಕೆ ಹೆಸರುವಾಸಿಯಾಗಿದ್ದರೆ, ತಾಳಮದ್ದಲೆಯು ಪಾತ್ರಗಳ ಒಳಗನ್ನು, ಮಾನಸಿಕ ತುಮುಲಗಳನ್ನು, ವೈಚಾರಿಕ ನಿಲುವನ್ನು ಮಾತುಕತೆಯಲ್ಲಿ ಪ್ರಸ್ತುತಪಡಿಸುವ ಮೂಲಕ ಪ್ರೇಕ್ಷಕರನ್ನು ಹೊಸ ಲೋಕಕ್ಕೆ ಕೊಂಡೊಯ್ಯುವ ಕಲೆಯಾಗಿ ಹೆಸರುವಾಸಿಯಾಗಿದೆ. ಹಿಂದೆ ಪ್ರಸಿದ್ಧ ಅರ್ಥಧಾರಿಗಳ ಪ್ರತಿಭಾವಿಲಾಸದಿಂದ ಕಳೆಗಟ್ಟುತ್ತಿದ್ದ ಈ ಕಲೆ ಈಗ ಹೊಸ ಪ್ರಯೋಗಗಳು ವಿನ್ಯಾಸಗಳಿಗಾಗಿ ತೆರೆದುಕೊಳ್ಳುತ್ತಿದೆ. ಹಿಂದೆ ಹೆಚ್ಚಾಗಿ ಪೌರಾಣಿಕ ಹಿನ್ನೆಲೆಯಲ್ಲಿ ರಚಿಸಲ್ಪಟ್ಟಿದ್ದ ಪ್ರಸಂಗಗಳಲ್ಲಿ ಮಹಿಳಾ ಸಂವೇದನೆಯ ವಸ್ತುಗಳು ಬಹುಗೌಣವಾಗಿದ್ದವು. ಆದರೆ ಈಗ ಬದಲಾದ ಕಾಲಘಟ್ಟ ಹಾಗು ಆಧುನಿಕತೆಯ ವಿನ್ಯಾಸಗಳಿಂದಾಗಿ ಹೊಸ ಹೊಸ ಪ್ರತಿಭಾವಂತರು ಈ ಕಲೆಗೆ ಜೀವ ತುಂಬುತ್ತಿದ್ದಾರೆ. ಈಚೆಗೆ ಬೆಂಗಳೂರಿನ 'ಯಕ್ಷ ವಾಹಿನಿ ಪ್ರತಿಷ್ಠಾನ'ದವರ ಆಯೋಜನೆಯಲ್ಲಿ ಹೆಗ್ಗೋಡಿನ ಯಕ್ಷದುರ್ಗಾ ಮಹಿಳಾ ಕಲಾ ಬಳಗದವರು ಪ್ರಸ್ತುತಪಡಿಸಿದ 'ಮೋದಾಳಿ ಪರಿಣಯ' ಎಂಬ ತಾಳಮದ್ದಲೆ ಪ್ರದರ್ಶನ ಈ ನಿಟ್ಟಿನಲ್ಲಿ ತಾತ್ತ್ವಿಕ ನಿಲುವಿನಿಂದಾಗಿ ಹೊಸ ಹೊಳಹಿನ ಮೂಲಕ ಪ್ರೇಕ್ಷಕರನ್ನು ಸೆಳೆಯಿತು.

ಈಗಾಗಲೇ ಹಿರಿತೆರೆ ಮತ್ತು ಕಿರಿತೆರೆಯಲ್ಲಿ ತಮ್ಮ ಸಂಭಾಷಣೆಗಳ ಮೂಲಕ ಹೆಸರುವಾಸಿಯಾದ ಕವಯಿತ್ರಿ ಪಿ. ಚಂದ್ರಿಕಾ ಅವರು ವಡ್ಡಾರಾಧನೆಯ ಕಥೆಯೊಂದರ ಎಳೆಯೊಂದನ್ನು ಹಿಡಿದು 'ಮೋದಾಳಿ' ಎಂಬ ನಾಟಕವನ್ನು ರಚಿಸಿದ್ದರು. ಅದು ಅನೇಕ ಪ್ರದರ್ಶನಗಳನ್ನು ಕಂಡು ಜನಪ್ರೀತಿಗಳಿಸಿಕೊಂಡಿತ್ತು. ಈಗ ಅದೇ ನಾಟಕವನ್ನು ಹೆಗ್ಗೋಡಿನ ಕೃತಿ ಆರ್. ಪುರಪ್ಪಮನೆಯವರು 'ಮೋದಾಳಿ ಪರಿಣಯ' ಎಂಬ ಯಕ್ಷಗಾನ ಪ್ರಸಂಗವಾಗಿ ಪರಿವರ್ತಿಸಿ ಹೆಣ್ಣಿಗೆ ಅನುವಾಗುವ ಅರಿವಿನ ಪರ್ಯಾಯ ಪರಂಪರೆಯ ನೆಲೆಗಳ ಅನ್ವೇಷಣೆ ನಡೆಸಿದ್ದಾರೆ. ಯಕ್ಷಗಾನದ ಜಾಯಮಾನಕ್ಕೆ ಅನುಗುಣವಾಗಿ ಪ್ರಸಂಗದ ಪದ್ಯಗಳನ್ನು ಹೆಣೆಯಲಾಗಿದ್ದರೂ ಪರಂಪರೆಯ ಸಾತತ್ಯವನ್ನು ಮೀರದೆ ಇರುವುದು ಈ ಪ್ರಸಂಗದ ವೈಶಿಷ್ಟ್ಯ.

ಸೂರ್ಯ ಮತ್ತನೆಂಬ ರಾಜನು ಒಡ್ಡೋಲಗದ ನಂತರ ರಾಣಿಯ ಅಂತಃಪುರಕ್ಕೆ ತೆರಳಿ ತನಗೆ ಪುತ್ರೋತ್ಸವ ಆಗಲಿದೆ ಎಂಬ ಸಿಹಿ ಕನಸನ್ನು ಹಂಚಿಕೊಳ್ಳುತ್ತಾನೆ. ಆದರೆ ರಾಣಿಯಾದ ಚಂದ್ರಮತಿ ರಾಜನು ಹೀಗೆ ತನ್ನ ತಂದೆಗೆ ಮಾಡಿದ ಕ್ರೌರ್ಯವನ್ನು ಪ್ರಸ್ತಾಪಿಸಿ ಕಹಿಯನ್ನು ಹೊರ ಹಾಕುತ್ತಾಳೆ. ಸೂರ್ಯಮಿತ್ರನಾಗಿ ನಿರ್ಮಲಾ ಕೃಷ್ಣಮೂರ್ತಿಯವರು ಮಾತನಾಡುವಾಗ ದರ್ಪದ ಛಾಯೆ ಇದ್ದರೆ, ಚಂದ್ರಮತಿಯಾಗಿದ್ದ ಜಯಶ್ರೀ ಪ್ರಕಾಶ್ ತನ್ನ ಮಾತಿನ ಉದ್ದಕ್ಕೂ

ಪರಂಪರೆಯ ಎಲ್ಲ ಸಾತತ್ಯಗಳನ್ನು ರೂಢಿಸಿಕೊಂಡಿರುವ ತಾಳಮದ್ದಲೆಯ ಹೊಸ ಪ್ರಯೋಗಗಳು ನಡೆಯುತ್ತಿವೆ. ಇತ್ತೀಚೆಗೆ ನಡೆದ ಹೊಸ ಪ್ರಯೋಗವೊಂದರ ವಿಶ್ಲೇಷಣೆ ಇಲ್ಲಿದೆ.

ತನಗಾದ ಅನ್ಯಾಯದ ಅಂಶಗಳನ್ನು ಉಲ್ಲೇಖಿಸುತ್ತಾ ಹೋದರು. ಮುಂದೆ ಕಥಾನಾಯಕಿಯಾದ ಮೋದಾಳಿಯ ಪ್ರವೇಶವಾಗುತ್ತದೆ. ಪ್ರಶಾಂತಿರಾವ್ ಅವರು ತಮ್ಮ ಪೀಠಿಕೆಯ ಮಾತುಗಳಲ್ಲಿ ತನ್ನ ಬಾಳಿನ ದುರಂತಕತೆ ಮನಸ್ಸಿಗೆ ತಟ್ಟುವಂತೆ ತಿಳಿಸಿದರು. ಬಾಲ್ಯದಲ್ಲೇ ಮದುವೆಯಾದ ಆಕೆಯ ಪತಿ ವ್ಯಾಪಾರಕ್ಕೆಂದು

ಹೊರಟಾಗ ತಾನು 12 ವರ್ಷದೊಳಗೆ ಹಿಂತಿರುಗದೇ ಹೋದರೆ ತಮ್ಮನನ್ನು ಮದುವೆಯಾಗು ಎಂದು ತಿಳಿಸಿರುತ್ತಾನೆ. ಆ ಅವಧಿ ಗತಿಸಿ ಆತ ಬಾರದೇ ಇದ್ದಾಗ ಕುಟುಂಬಸ್ಥರು ಅವಳ ಮೈದುನನೊಂದಿಗೆ ವಿವಾಹ ಏರ್ಪಡಿಸುತ್ತಾರೆ.

ಅತ್ತಿಗೆ ಎಂದೇ ಕರೆಯುತ್ತಿದ್ದ 'ಮೋದಾಳಿ'ಯನ್ನು ಮದುವೆಯಾದರೂ ಆತ ಪತ್ನಿಯಾಗಿ ಸ್ವೀಕರಿಸುವುದೇ ಇಲ್ಲ. ಹೀಗೆ ಎರಡು ಮದುವೆಯಾದರೂ ಪತ್ನಿಯಾಗುವ ಭಾಗ್ಯವಿಲ್ಲದ ಮೋದಾಳಿ ತವರಿಗೆ ಬಂದು ಅನಾಥಪ್ರಜ್ಞೆಯ ಏಕಾಂತ ಬದುಕನ್ನು ಅನುಭವಿಸುತ್ತಿರುತ್ತಾಳೆ. ತವರಿನಲ್ಲಿರುವಾಗಲೇ ಆಲೂರಿನ ವ್ಯಾಪಾರಿಯ ಪುತ್ರನ ಪ್ರವೇಶವಾಗಿ ಆತ ಮೋದಾಳಿಯನ್ನು ನೋಡಿ ಮೋಹಿಸುತ್ತಾನೆ. ತಾನು ಅವಳ ಬದುಕನ್ನು ನೇರ್ಪಡಿಸುವುದಾಗಿ ವಾಗ್ದಾನ ಕೊಡುತ್ತಾನೆ. ಬದುಕಿನ ಎಲ್ಲ ಪ್ರೀತಿಯ ಕವಾಟವನ್ನು ಮುಚ್ಚಿಕೊಂಡಿದ್ದ ಮೋದಾಳಿ ಬಹಳಷ್ಟು ಚಿಂತಿಸಿ ಒಪ್ಪಿಕೊಳ್ಳುತ್ತಾಳೆ. ನಾಗಶೂರನಾಗಿ ರೂಪಜರಾವ್ ಬಹು ಶೃಂಗಾರಮಯ ಮಾತುಗಾರಿಕೆಯಿಂದ ಲವಲವಿಕೆಯ ಮಾತಿನ ಅಭಿನಯಕ್ಕೆ ಒತ್ತುಕೊಟ್ಟ ಪ್ರಸಂಗಕ್ಕೆ ಒಂದು ಜೀವ ಕಳೆ ತಂದರೆಂಬುದು ಪ್ರೇಕ್ಷಕರ ಭಾವದಲ್ಲಿ ವ್ಯಕ್ತವಾಯಿತು. ಇಲ್ಲಿ ಬರುವ ಹಾಡುಗಳು ಬಹು ಆಕರ್ಷಕವಾಗಿ ಭಾಗವತರು ಪ್ರಸ್ತುತಪಡಿಸಿದರು.

ಮೋದಾಳಿಯ ಮದುವೆಯ ಹೊರಗಿನ ಅಪವಿತ್ರ ಸಂಬಂಧ ತಿಳಿದ ರಾಜ ಅವಳನ್ನು ಸೆರೆವಾಸಕ್ಕೆ ಹಾಕುತ್ತಾನೆ. ಗರ್ಭಿಣಿ ಎಂದು ಎಣಿಸದೆ ಮೋದಾಳಿ ಹಾಗೂ ರಾಣಿಯನ್ನು ರಾಜನು ಪುನಃ ಸೆರೆಮನೆಗೆ ಕಳಿಸುತ್ತಾನೆ. ರಾಣಿ ಸ್ತ್ರೀ ಸಹಜ ಅನುಕಂಪೆಯಿಂದ ಸಖಿಯರ ಮೂಲಕ ಸುರಂಗ ದಾರಿಯನ್ನು ತೋರಿಸಿ ಮೋದಾಳಿ ದೂರ ತೆರಳಿ ಹೊಸ ಬದುಕನ್ನು ಕಟ್ಟಿಕೊಳ್ಳುವಂತೆ ಸೂಚಿಸುತ್ತಾಳೆ. ತಾನು ರಾಜನನ್ನು ಎದುರಿಸಬಲ್ಲೆ, ಎಂತಹ ಅಪಾಯ ಸ್ಥಿತಿಯನ್ನು ದಾಟಿದ ಅಪಾರಧೈರ್ಯ ತನ್ನಲ್ಲಿದೆ ಎನ್ನುತ್ತಾಳೆ. ಯಾವುದೇ ನಿಜವಾದ ವಿವಾಹ ಇಲ್ಲದೇ 'ಮೋದಾಳಿ ಪರಿಣಯ' ಮಂಗಳವಾಗುತ್ತದೆ.

ತಾಳಮದ್ದಳೆಯ ಹೊಸ ಸಾಧ್ಯತೆಗಳನ್ನು ತೆರೆದಿಟ್ಟ 'ಮೋದಾಳಿ ಪರಿಣಯ'ವು ಯಕ್ಷಗಾನ ಕಲೆಯ ಹಲವು ಆಯಾಮಗಳನ್ನು ತೆರೆದಿಟ್ಟು, ಹೊಸ ಪ್ರಯೋಗಗಳಿಗೆ ಇಂಬು ನೀಡುತ್ತಿರುವುದು ವಿಶೇಷ ಎನಿಸಿದೆ.

ನಾಯಿಯೂ ಇಂಗ್ಲಿಷ್ ಭಾಷೆ ಕಲಿಯಬಲ್ಲದು!

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ವೇಣುಗೋಪಾಲ ಕೆ., (ಇಮೇಲ್ ಮೂಲಕ)

- **ಭಟ್ರೇ, ನನ್ನ ಸ್ನೇಹಿತರೆಲ್ಲ ಒಳ್ಳೆಯ ಇಂಗ್ಲಿಷ್ ಮಾತಾಡ್ತಾರೆ. ನಾನು ಎಂ.ಎ. (ರಾಜಕೀಯಶಾಸ್ತ್ರ) ಓದಿದರೂ ನನ್ನ ಇಂಗ್ಲಿಷ್ ಅಷ್ಟಕ್ಕಷ್ಟೇ. ಇದರಿಂದ ನನಗೆ ನನ್ನ ಸ್ನೇಹಿತರು ಸೇರಿದಂತೆ ಆಫೀಸಿನಲ್ಲಿ ಇಂಗ್ಲೀಷಿನಲ್ಲಿ ಮಾತಾಡಲು ಆತ್ಮವಿಶ್ವಾಸವೇ ಇಲ್ಲದಂತಾಗಿದೆ. ಹೈಸ್ಕೂಲ್ ಮಕ್ಕಳು ಇದಕ್ಕಿಂತ ಒಳ್ಳೆಯ ಇಂಗ್ಲಿಷ್ ಮಾತಾಡ್ತಾರೆ ಅಂತ ಮೊನ್ನೆ ಒಬ್ಬ ಸ್ನೇಹಿತ ಅಂದುಬಿಟ್ಟ, ಬಹಳ ಅವಮಾನ ಆಯ್ತು. ನಾನು ನನ್ನ ಇಂಗ್ಲಿಷ್ ಸುಧಾರಿಸಿಕೊಳ್ಳುವುದು ಹೇಗೆ ?**

-ವೇಣುಗೋಪಾಲ ಅವರೇ, ಎಲ್ಲಾ ಭಾಷೆಗಳಂತೆ ಇಂಗ್ಲಿಷ್ ಕೂಡ ಒಂದು ಭಾಷೆ ಎಂಬುದು ಗೊತ್ತಿರಲಿ. ಯಾವ ಭಾಷೆಯನ್ನಾದರೂ ಕಲಿಯಬಹುದು. ಆರಂಭದಿಂದ ನಿಮ್ಮ ಮನೆ ನಾಯಿ ಜತೆ ಇಂಗ್ಲಿಷಿನಲ್ಲಿ ಮಾತಾಡಿದರೆ ಅದೂ ಸಹ ಆ ಭಾಷೆಯನ್ನೂ ಕಲಿಯುತ್ತದೆ. ಅದರಲ್ಲಿ ಹೆಚ್ಚುಗಾರಿಕೆಯೇನೂ ಇಲ್ಲ. ನೀವು ಸಹ ಸುಲಭವಾಗಿ ಇಂಗ್ಲಿಷ್ ಕಲಿಯಬಹುದು. ಮನಸ್ಸು ಮಾಡಿದ್ದೇ ಆದರೆ, ಆರು ತಿಂಗಳಲ್ಲಿ ಕಲಿಯಬಹುದು. ಸುಮಾರು ನಾಲ್ಕು ನೂರು ಪದಗಳ ಅರ್ಥ ಮತ್ತು ಬಳಕೆಯನ್ನು ತಿಳಿದುಕೊಂಡಿದ್ದೇ ಆದಲ್ಲಿ, ಸುಲಭವಾಗಿ, ನಿರರ್ಗಳವಾಗಿ ಮಾತಾಡಬಹುದು. ಸಾಮಾನ್ಯ ವ್ಯಾಕರಣವನ್ನು ಅರ್ಥ ಮಾಡಿಕೊಂಡರೆ, ಬರೆಯಲೂ ಬಹುದು.

ನಾನು ಇಂಗ್ಲಿಷಿನಲ್ಲಿ ಮಾತಾಡಿದರೆ ತಪ್ಪಾಗಬಹುದು, ಅಷ್ಟಕ್ಕೇ ಜನ ನಗಬಹುದು ಎಂಬ ಯೋಚನೆಯನ್ನು ಮೊದಲು ತಲೆಯಿಂದ ತೆಗೆದುಬಿಡಿ. ತಪ್ಪೋ, ಒಪ್ಪೋ, ಇಂಗ್ಲಿಷಿನಲ್ಲಿ ಮಾತಾಡುತ್ತೇನೆ ಎಂದು ನಿರ್ಧರಿಸಿ. ಮೊದಲು ಈ ಮೈಚಳಿ ಬಿಟ್ಟುಬಿಡಿ. ನೀವು ಎಲ್ಲಿ ತಪ್ಪು ಮಾಡುತ್ತಿದ್ದೀರಿ, ಭಾಷೆ ಕಲಿಕೆಗೆ ಯಾವ ಹಂತದಲ್ಲಿ ಕಷ್ಟವಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಿ. ಇಂಗ್ಲಿಷನ್ನು ಚೆನ್ನಾಗಿ ಬಲ್ಲವರಿಂದ ತಿಳಿದುಕೊಳ್ಳಿ. ಇಲ್ಲವೇ ಇಂಗ್ಲಿಷ್ ಕಲಿಸುವ ಮೇಷ್ಟ್ರು ಅಥವಾ ವೆಬ್‌ಸೈಟ್‌ಗಳಿಂದ ತಿಳಿದುಕೊಳ್ಳಬಹುದು. ಕೈಗೆ ಸಿಕ್ಕ ಇಂಗ್ಲಿಷ್ ಪತ್ರಿಕೆ, ಕಥೆ ಪುಸ್ತಕ, ಹಳೆ ಇಂಗ್ಲಿಷ್ ಚಂದಮಾಮ, ಅಮರ ಚಿತ್ರ ಕಥೆಗಳನ್ನು ಓದಿ. ಎಂಥವರಿಗೂ ಅರ್ಥವಾಗುವ ಸುಲಭ ಭಾಷೆಯಲ್ಲಿ ಅವನು ಬರೆದಿರುತ್ತಾರೆ. ಸಾಧ್ಯವಾದರೆ ಇಂಗ್ಲಿಷ್ ಪಾಡ್‌ಕಾಸ್ಟ್, ನ್ಯೂಸ್ ಬುಲೆಟಿನ್‌ಗಳನ್ನು ಕೇಳಿ. ಉತ್ತಮ ಭಾಷಣಕಾರರ ಯೂ ಟ್ಯೂಬ್ ಕೇಳಿ.

ನಿಮಗೆ ಗೊತ್ತಿರಲಿ, ಯಡಿಯೂರಪ್ಪನವರಿಗೆ ಇಂಗ್ಲಿಷ್ ಗೊತ್ತಿರಲಿಲ್ಲ. ಇಂಗ್ಲಿಷ್ ನ್ಯೂಸ್ ಚಾನೆಲ್ಲಿನವರು ಮೈಕ್ ಹಿಡಿದರೆ, ತೊದಲುತ್ತಿದ್ದರು. 'ಬರೆದುಕೊಂಡು ಓದುತ್ತೇನೆ' ಅಂತ ಹೇಳಿ ತಮ್ಮ ಸಹಾಯಕರಿಗೆ ತಾವು ಹೇಳುವ ಮಾತುಗಳನ್ನು ಬರೆದುಕೊಡುವಂತೆ ಹೇಳುತ್ತಿದ್ದರು. ಅದಾದ ಬಳಿಕ ಆತ್ಮ ವಿಶ್ವಾಸದಿಂದ ಮಾತಾಡಲು ಆರಂಭಿಸಿದರು. ಈಗ ಅವರ ಮುಂದೆ ಮೈಕ್ ಹಿಡಿದರೆ, ನಿರರ್ಗಳವಾಗಿ ಮಾತಾಡುತ್ತಾರೆ. ಈ ಮಾತು ಮಾಜಿ ಪ್ರಧಾನಿ ದೇವೇಗೌಡರಿಗೂ ಅನ್ವಯ. ಕುಮಾರಸ್ವಾಮಿ, ರಾಮಲಿಂಗಾರೆಡ್ಡಿ, ಡಿ.ಕೆ. ಸುರೇಶ, ರೇವಣ್ಣ, ರೇಣುಕಾಚಾರ್ಯ, ವರ್ತೂರು ಪ್ರಕಾಶ್, ಶೋಭಾ ಕರಂದ್ಲಾಜೆ, ಶಿವಲಿಂಗೇಗೌಡರೇ ಇಂಗ್ಲಿಷ್ ಮಾತಾಡ್ತಾರಂತೆ, ಹೀಗಿರುವಾಗ ನಿಮಗೇಕೆ ಆಗೊಲ್ಲ ? ಆಸ್ಥೆಯಿಂದ ಏನನ್ನು ಬೇಕಾದರೂ ಕಲಿಯಬಹುದು. ಭೋಜಪುರಿ, ಅರೇಬಿಕ್, ಮ್ಯಾಂಡರಿನ್, ನವಜೋ, ಐಸ್‌ಲ್ಯಾಂಡಿಕ್ ಭಾಷೆಗಳನ್ನೂ ಕಲಿಯಬಹುದು. ಭಾಷೆಯೂ ಈಜು ಕಲಿತಂತೆ, ನೀರಿಗೆ ಬೀಳುವ ತನಕ ಚಳಿ. ಬಿದ್ದ ನಂತರ ಕೈಕಾಲು ಬಡಿದರೆ, ಮುಂದೆ ಸಲೀಸು.

ದೇವನಾಥ ಕೆ.ಆರ್., ಬೆಂಗಳೂರು

- **ಸಂಪಾದಕರೇ, ನನ್ನ ಕಾರಿನ ಮೇಲೆ ಏನಾದರೂ ಸೊಗಸಾದ ಸ್ಲೋಗನ್ ಬರೆಯಿಸಬೇಕೆಂದು ನಿರ್ಧರಿಸಿದ್ದೇನೆ. ಏನು ಬರೆಯಿಸಲಿ?**

- ದೇವನಾಥ ಅವರೇ, ನಾನು ಹಲವಾರು ದೇಶಗಳನ್ನು ಸುತ್ತಿದ್ದೇನೆ. ಆದರೆ ಯಾವ ದೇಶದಲ್ಲೂ ವಾಹನಗಳ ಮೇಲೆ ಮನೆ-ಮಂದಿಯಹೆಸರು ಬರೆಯಿಸಿರುವುದನ್ನು ನೋಡಿಲ್ಲ. ಹಾಗೆಯೇ, 'ಮಾತಾಡಿಸಿ ಮರೆಯಬೇಡ, ಮನಸು ಕೊಟ್ಟು ನೋಯಿಸಬೇಡ ಅಥವಾ ಯಾಕೆಬುಲ್ ಬುಲ್ ಮಾತಾಡಕಿಲ್ವಾ ? ಅಥವಾ ಲವ್ ಪಾಸಾದ್ರೆ ಲವರನನ್ನು ಸೇಫ್ ಆಗಿಟ್ಕೋ, ಲವ್ ಫೇಲ್ ಆದ್ರೆ ಲಿವರ್ ನ ಸೇಫ್ ಆಗಿಟ್ಕೋಅಥವಾ ಮುತ್ತು ಕೊಡುವವಳು ಬಂದಾಗ, ತುತ್ತು ಕೊಟ್ಟವಳನ್ನು ಮರೆಯಬೇಡ' ಮಾದರಿಯ ಬರಹಗಳನ್ನು ನೋಡಿಲ್ಲ. ವಾಹನಗಳ ಮೇಲೆ ಇಂಥ ಸ್ಲೋಗನ್‌ಗಳು ಇರುವುದು ಭಾರತದಲ್ಲೇ. ಕೆಲವರ ವಾಹನಗಳ ಹಿಂಬಾಗವನ್ನು ನೋಡಿದರೆ, ಅವರ ಕುಲದೇವರು ಯಾರು, ಹೆಂಡತಿ- ಮಕ್ಕಳ ಹೆಸರುಗಳೇನು, ತಂದೆ-ತಾಯಿ ಯಾರು.. ಸೇರಿದಂತೆ ವೈಯಕ್ತಿಕ ವಿವರಗಳನ್ನೆಲ್ಲಾ ಹೇಳಬಹುದು. ಇನ್ನು ಕೆಲವರ ವಾಹನಗಳನ್ನುನೋಡಿದರೆ, ಮಾಲೀಕ ಲವ್ ಫೇಲ್ಯೂರ್ ಕೇಸಾ ಎಂಬುದನ್ನೂ ಹೇಳಬಹುದು. ಅದೇ ರೀತಿ ತಂದೆ-ತಾಯಿ ಆಶೀರ್ವಾದ, ಅಣ್ಣ-ಅತ್ತಿಗೆಆಶೀರ್ವಾದ, ಹಿತಶತ್ರುಗಳ ಆಶೀರ್ವಾದ ಮಾದರಿಯ ಬರಹಗಳನ್ನು ನೋಡಿದರೆ, ವಾಹನ ಖರೀದಿಗೆ ಯಾರು ಹಣಕಾಸು ನೀಡಿದ್ದಾರೆಎಂಬುದನ್ನೂ ಹೇಳಬಹುದು.

ಇನ್ನು ಪತ್ರಕರ್ತರ ವಾಹನಗಳ ಮೇಲೆ ಕೆಂಪು ಅಕ್ಷರಗಳಲ್ಲಿ 'ಪ್ರೆಸ್' ಹಣೆಪಟ್ಟಿ. ಈ ವಿಷಯದಲ್ಲಿ ಪೊಲೀಸರು ಮತ್ತು ಮಿಲಿಟರಿಯವರೂ ಕಮ್ಮಿಯಿಲ್ಲ. ಏನೂ ಬರೆದಿರದ ವಾಹನಗಳನ್ನು ನೋಡುವುದು ದುರ್ಲಭ. ವಾಹನಗಳ ಮೇಲೆ ಏನಾದರೂ ಬರೆಯಿಸಲೇಬೇಕೆಂಬ ನಿಯಮವೇನೂ ಇಲ್ಲ. ಇದು ಒಂಥರಾ ಪ್ಲೇನ್ ಟಿ-ಶರ್ಟ್ ಧರಿಸಿದಂತೆ. ಸ್ಲೋಗನ್ ಇರುವ ಟಿ-ಶರ್ಟನ್ನೇಧರಿಸಬೇಕೆಂದಿಲ್ಲವಲ್ಲ. ನಿಮಗೆ ಎಷ್ಟು ಮಕ್ಕಳು, ಅವರ ಹೆಸರುಗಳೇನು, ನಿಮ್ಮ ಅಭಿರುಚಿಯೇನು, ನಿಮ್ಮ ಕುಲದೇವತೆ ಯಾರು ಮುಂತಾದವಿವರಗಳನ್ನು ನಿಮ್ಮ ವಾಹನದ ಮೇಲೆ ಜಾಹೀರು ಮಾಡುತ್ತೀರಿ? ಆ ವಿವರಗಳನ್ನು ದಾರಿ ಮೇಲೆ ಹೋಗುವವರೆಲ್ಲರೂ ತಿಳಿಯಬೇಕೆಂದುಯಾಕೆ ಬಯಸುತ್ತೀರಿ? ಅಷ್ಟಕ್ಕೂ ನಿಮ್ಮ ಕಾರಿನ ಗಾಜುಗಳೆಂದರೆ ಗೋಡೆಗಳಲ್ಲ, ಪೋಸ್ಟರ್ ಅಂಟಿಸಿಕೊಳ್ಳಲು ಮತ್ತು ಗೋಡೆಬರಹಗಳಿಂದ ಅಲಂಕರಿಸಿಕೊಳ್ಳಲು.

ಬಿ.ಕೆ.ರಾವ್, ಸಾಗರ

- **ಭಟ್ರೇ, ಮೊಬೈಲ್ ಫೋನ್ ಹಿಡಿದವರು ಬಹಳ ಸುಳ್ಳು ಹೇಳುತ್ತಾರೆ. ಕಾರಣ ಏನು?**

- ನಿಜ, ಮೊಬೈಲ್ ಫೋನ್ ಹಿಡಿದವರು ಎಲ್ಲಿದ್ದಾರೆಂಬುದು ಗೊತ್ತಾಗುವುದಿಲ್ಲ. ಹೀಗಾಗಿ ಫೋನ್ ಮಾಡಿದವರು ಮತ್ತು ಕರೆ ಸ್ವೀಕರಿಸಿದವರುತಾವಿರುವ ಜಾಗದ ಬಗ್ಗೆ ಸುಳ್ಳು ಹೇಳಲು ಆಯ್ಕೆಗಳಿರುತ್ತವೆ. ನೀವು ಬೆಂಗಳೂರಿನಲ್ಲಿದ್ದರೆ, ದುಬೈಯಲ್ಲಿದ್ದೇನೆ ಎಂದು ಹೇಳಬಹುದು. ಕರೆಸ್ವೀಕರಿಸಿದವನು ತಾನು ಸಿಂಗಾಪುರದಲ್ಲಿದ್ದೇನೆ ಎಂದು ಹೇಳಬಹುದು. ಅಂದರೆ ಇಬ್ಬರಿಗೂ ಸುಳ್ಳು ಹೇಳುವ ಅವಕಾಶವಿದೆ. ಆದರೆ ಆ ಪೈಕಿಯಾವುದಾದರೂ ಒಬ್ಬ ಅಥವಾ ಪರಸ್ಪರರು ನೀನಿರುವ ಲೊಕೇಷನ್ ಕಳಿಸು ಎಂದರೆ ಬಂಡವಾಳ ಬಯಲು. ಒಮ್ಮೆ ನಾನು ಬೆಂಗಳೂರಿನ ಯುಬಿ ಸಿಟಿಯಿಂದ ನನ್ನ ಸ್ನೇಹಿತನೊಬ್ಬನಿಗೆ ಫೋನ್ ಮಾಡಿದೆ. ಆತ ತಾನು ದಿಲ್ಲಿಯಲ್ಲಿರುವುದಾಗಿ ಹೇಳಿದ. ಅದಾಗಿ ಹತ್ತು ನಿಮಿಷಗಳ ಬಳಿಕ ಯುಬಿ ಸಿಟಿಯಲ್ಲೇ ನನಗೆ ಎದುರಾದ. ಆಗ ಅವನ ಮುಖ ಬಿಳುಚಿಕೊಂಡಿದ್ದನ್ನು ನನಗೆ ನೋಡಲಾಗಲಿಲ್ಲ. ಈಗಲೂ ಆತನಿಗೆ ನನಗೆಮುಖಕ್ಕೆ ಮುಖ ಕೊಟ್ಟು ನೋಡಲು ಆಗುತ್ತಿಲ್ಲ. ಇಂಥವರು ಬಹಳ ಬೇಗ ಥ್ಡಿಟಟಂಥಿ ಆಗುತ್ತಾರೆ. ಜೀವ ಹೋಗುವ ಸಂದರ್ಭದಲ್ಲಿ ಒಮ್ಮೆ ಸುಳ್ಳು ಹೇಳಬಹುದು. ಆದರೆ ಅದನ್ನೇ ಕಾಯಕ ಅಥವಾ ಅಭ್ಯಾಸ ಮಾಡಿಕೊಳ್ಳಬಾರದು. ಆಗ ನಿಜ ಹೇಳಿದರೂ ನಂಬುವುದಿಲ್ಲ.

ಪೃಥ್ವಿ ನಾಯಕ, ಮೈಸೂರು

- **ಭಟ್ರೇ, ನನಗೆ ಇಪ್ಪತ್ನಾಲ್ಕು ವರ್ಷ. ಕಳೆದ ಒಂದು ವರ್ಷದಿಂದ ನಾನು ಒಬ್ಬಳನ್ನು ಪ್ರೀತಿಸುತ್ತಿದ್ದೇನೆ. ಆರಂಭದಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಇತ್ತಿತ್ತಲಾಗಿ ಆಕೆಯ ವರ್ತನೆ ಬದಲಾಗಿದೆ. ಆಕೆಯ ಬಗ್ಗೆ ನನಗೆ ಅನುಮಾನ ಬರುತ್ತಿದೆ. ನನಗೆ ಮೋಸ ಮಾಡುತ್ತಿರಬಹುದಾ ಎಂದೂಅನಿಸುತ್ತಿದೆ. ಇವಳ ಜತೆ ಸಂಬಂಧ ಮುಂದುವರಿಸಲು ನನಗೆ ಧೈರ್ಯ ಸಾಕಾಗುತ್ತಿಲ್ಲ. ಇವಳನ್ನು ಮರೆತುಬಿಡಲಾ ಅಥವಾ ಅವಳ ವಿರುದ್ಧ ಸೇಡು ತೀರಿಸಿಕೊಳ್ಳಲಾ?**

- ನೀವು ನೂರೈವತ್ತು ವರ್ಷ ಬದುಕುವುದಾದರೆ, ಸೇಡು ತೀರಿಸಿಕೊಳ್ಳಲು ಮತ್ತು ಅದರಿಂದ ವಿಕೃತ ಆನಂದ ಪಡೆಯಲು ಒಂದಷ್ಟುಸಮಯವನ್ನು ಎತ್ತಿಡಬಹುದು. ಆದರೆ ಇವನ್ನೆಲ್ಲಾ ಮಾಡುವಷ್ಟು ಬದುಕು ದೀರ್ಘವಾಗಿಲ್ಲ. ಇನ್ನು ಆಕೆಯ ವಿರುದ್ಧ ಸೇಡು ತೀರಿಸಿಕೊಳ್ಳಲೇಬೇಕು ಎಂದಿದ್ದರೆ, ಅವಳಿಗಿಂತ ವಿದ್ಯಾವಂತೆ, ರೂಪವತಿಯಾದವಳನ್ನು ಪ್ರೀತಿಸಿ. ಮೊದಲಿನವಳ ಹೊಟ್ಟೆ ಉರಿಸಲು ಅವಳ ಮುಂದೆಯೇ ಈಗಿನವಳನ್ನು ಸುಜುಕಿ ಹಯಾಬುಸ ಬೈಕಿನಲ್ಲಿ ಒಂದು ರೌಂಡು ಹೊಡೆಸಬಹುದು. ಇಲ್ಲವೇ ಮೊದಲನೆಯವಳ ಮುಂದೆಯೇ, ಎರಡನೆಯವಳನ್ನು ಚುಂಬಿಸಬಹುದು. ನಿಮ್ಮಲ್ಲಿ ಹಣವಿದ್ದರೆ ಎರಡನೇಯವಳಿಗೆ ಡೈಮಂಡ್ ರಿಂಗ್ ಅಥವಾ ನೆಕ್ಲೆಸ್ ಕೊಡಿಸಿ, ಫೇಸ್ ಬುಕ್ ಅಥವಾ ಇನ್ಸ್ಟಾದಲ್ಲಿ ಪೋಸ್ಟ್ ಮಾಡಬಹುದು. ಅದನ್ನೇ ವಾಟ್ಸಾಪ್ ಸ್ಟೇಟಸ್‌ನಲ್ಲೂ ಹಾಕಿನಂತರ ಮರೆತುಬಿಡಬಹುದು. ಆದರೆ ಕೆಲವು ರಾಜಕಾರಣಿಗಳ ಹಾಗೆ ಮಾಟ ಮಾಡಿಸುವುದು ಮೊದಲಾದ ಅವಾಂತರಗಳತ್ತ ತಲೆ ಹಾಕಬೇಡಿ, ಅಷ್ಟೆ!

ಪ್ರಕಾಶ ಹೆಗಡೆ, (ಇಮೇಲ್ ಮೂಲಕ)

- **ನಿಮ್ಮ ಅಂಕಣದಲ್ಲಿ ಹೊಸ ಶಬ್ದಗಳ ನಿರಂತರ ಕಲಿಯುವಿಕೆಯ ಬಗ್ಗೆ ಹಿಂದೊಮ್ಮೆ ಮನದಟ್ಟಾಗುವಂತೆ ತಿಳಿಸಿರುತ್ತಿರಿ. ಅದನ್ನು ಅನುಸರಿಸಿ, ನಾನು ಒಂದು ನೋಟಬುಕ್ ಯಾವಾಗಲೂ ಹತ್ತಿರ ಇಟ್ಟುಕೊಂಡು ಡಿಕ್ಷನರಿ ಮೂಲಕ ಅರ್ಥವನ್ನು ಬರೆದಿಟ್ಟುಕೊಳ್ಳುತ್ತೇನೆ. ಆದರೆ, ಈ ಹೊಸಶಬ್ದಗಳು ಬೇಗ ನೆನಪಾಗುವುದಿಲ್ಲ. ಸುಮಾರು ಸಲ ಉಪಯೋಗಿಸಿದರೆ ಮಾತ್ರ ನೆನಪಿನಲ್ಲಿರುತ್ತವೆ. ನೆನಪಿನಲ್ಲಿಡಲು ಬೇರೆ ಯಾವುದೇ ಸುಲಭ ರೀತಿಯಿದೆಯೇ? ದಯವಿಟ್ಟು ತಿಳಿಸಿ.**

- ಹೆಗಡೆ ಅವರೇ, ಹೊಸ ಪದಗಳು ಅಂದ್ರೆ ಗರ್ಲ್‌ಫ್ರೆಂಡ್ ಥರಾ ಎಂದು ಹೇಳಿದ್ದನ್ನು ಮರೆತುಬಿಟ್ಟಿರಾ? ಗರ್ಲ್‌ಫ್ರೆಂಡ್ ಸುಮ್ಮನೆ ಒಲಿಯುತ್ತಾಳಾ ಹೇಳಿ? ಅವಳನ್ನು ಒಲಿಸಿಕೊಳ್ಳಲು ನೀವು ಎಷ್ಟೆಲ್ಲಾ ಕಷ್ಟಪಡಬೇಕಲ್ಲವೇ? ಆಗ ಆಕೆ ನಿಮ್ಮೆಡೆಗೆ ಸಣ್ಣ ಕಿರುನಗೆ ಬೀರುತ್ತಾಳೆ. ಪದಗಳೂ ಹಾಗೆಯೇ. ನೀವು ಅವುಗಳನ್ನು ಪಡೆಯ ಬೇಕು, ಪೊರೆಯಬೇಕು, ಪುಸಲಾಯಿಸಬೇಕು, ಪರಿಪರಿಯಾಗಿ ಕಾಡಬೇಕು. ಪದೇ ಪದೆ ಅದರ ಹಿಂದೆ ಬೀಳಬೇಕು. ಎತ್ತಿ ಮುದ್ದಾಡಬೇಕು. ಅದರ ಗುಂಗಿನಲ್ಲಿರಬೇಕು. ಆಗಲೇ ಅದು ನಿಮಗೆ ಫ್ರೆಂಡ್ ಆಗುವುದು.

ಅನುಮಾನವಿಲ್ಲ, ಪದಗಳು ಸಹ ಹಾಗೆಯೇ. ಅವುಗಳನ್ನು ಪ್ರೀತಿಸಬೇಕು, ರಮಿಸಬೇಕು. ಹೇಗಾದರೂ ಮಾಡಿ ಅವುಗಳನ್ನು ನಿಮ್ಮವಳನ್ನಾಗಿ ಮಾಡಬೇಕು. ಇದಕ್ಕಿರುವ ಏಕೈಕ ಮಾರ್ಗವೆಂದರೆ ಅವುಗಳನ್ನು ಬಳಸುವುದು. ಅವುಗಳನ್ನು ಬಳಸದಿದ್ದರೆ ಅವುಗಳಿಗೆ ತುಕ್ಕು ಹಿಡಿಯುತ್ತವೆ. ಅವು ಹೊಳಪನ್ನು ಕಳೆದುಕೊಳ್ಳುತ್ತವೆ. ಕ್ರಮೇಣ ಮರೆತು ಹೋಗುತ್ತವೆ. ಇಂಗ್ಲಿಷ್ ಡಿಕ್ಷನರಿಯಲ್ಲಿ ಲಕ್ಷಾಂತರ ಪದಗಳಿವೆ. ಆದರೆ ನಮಗೆ ಹೆಚ್ಚೆಂದರೆ ಒಂದು ಸಾವಿರ ಪದಗಳ ಅರ್ಥ, ಬಳಕೆ ಗೊತ್ತಿರಬಹುದು. ಉಳಿದವುಗಳನ್ನು ಬಳಸ ದಿರುವುದರಿಂದ ನಮಗೆ ಅವುಗಳ ಪರಿಚಯವೇ ಆಗಿಲ್ಲ. ಹೀಗಾಗಿ ಅವು ಅಜ್ಞಾತವಾಸ ಅನುಭವಿಸುತ್ತಾ ಡಿಕ್ಷನರಿ ಸೇರಿಬಿಟ್ಟಿವೆ. ನಾವು ಅವನ್ನು ಬಳಸಿದರೆ ಸಾಕು, ಚಲಾವಣೆಗೆ ಬಂದುಬಿಡುತ್ತವೆ. ನೀವು ಒಮ್ಮೆ ಬಳಸಿದರೆ, ಹತ್ತಾರು ಮಂದಿ ಬಳಸಲಾರಂಭಿಸುತ್ತಾರೆ.

ಉದಾಹರಣೆಗೆ, Snollygoster, Kakistocracy, Lalochezia, Floccinaucinihilipilification, Gonzo, Limpid, Sesquipedalian, Farrago, Quomodocunquize, Doomscrolling.. ಮುಂತಾದ ಪದಗಳನ್ನು ಯಾರೂ ಬಳಸುತ್ತಿರಲಿಲ್ಲ. ಅವುಗಳ ಅರ್ಥವೂ ಹೆಚ್ಚಿನವರಿಗೆ ಗೊತ್ತಿರಲಿಲ್ಲ. ಕಾಂಗ್ರೆಸ್ ಸಂಸದ ಮತ್ತು ಸಾಹಿತಿ ಶಶಿ ತರೂರ್ ಅವರು ಈ ಪದಗಳನ್ನು ಬಳಸಿದಾಗ, ಪದೇ ಪದೆ ಬಳಸಿದಾಗ, ಇವುಗಳ ಬಗ್ಗೆ ದೊಡ್ಡ ಚರ್ಚೆಯೇ ಆಯಿತು. ಅವರು ಈ ಪದಗಳನ್ನು ಮಾತಿನಲ್ಲಿ ತಮ್ಮ ಟ್ವೀಟ್‌ನಲ್ಲಿ ನಿರಂತರವಾಗಿ ಬಳಸಲಾರಂಭಿಸಿದರು. ಕ್ರಮೇಣ ಈ ಪದಗಳು ಚಾಲ್ತಿಗೆ ಬಂದವು. ಈಗ ಆ ಪದಗಳನ್ನು ಪತ್ರಿಕೆಗಳೂ ಬಳಸುವುದರಿಂದ ಹೆಚ್ಚಿನವರಿಗೆ ಗೊತ್ತಾಗಿವೆ.

'ಮೆಟ್ಟಿ ಮೆಟ್ಟಿ ಮಣ್ಣಿನ ಹಾದಿ ಸುಗಮವಾಗುವುದು ಮತ್ತು ಮುಟ್ಟಿ ಮುಟ್ಟಿ ಮೈ ಹಾದಿ ಸುಗಮವಾಗುವುದು' ಎಂಬ ಮಾತಿದೆ. ಅಂದರೆ ಪದೇ ಪದೆ ಬಳಸುವುದರಿಂದ ಮಾತ್ರ ಪದಗಳನ್ನು ನಮ್ಮದನ್ನಾಗಿ ಮಾಡಿಕೊಳ್ಳಲು ಸಾಧ್ಯ. ಬ್ಯಾಂಕಿನಲ್ಲಿ ಇರುವ ಎಲ್ಲ ಹಣ ನಮ್ಮದಲ್ಲ. ಹಾಗೇ ಡಿಕ್ಷನರಿಯಲ್ಲಿರುವ ಎಲ್ಲ ಪದಗಳೂ ನಮ್ಮವಲ್ಲ. ಬಳಸಿ, ಒಲಿಸಿಕೊಂಡವಷ್ಟೇ ನಮ್ಮದಾಗುತ್ತವೆ. ಉಳಿದವು ನಮ್ಮ ಪಾಲಿಗೆ ಅರ್ಥಹೀನ. ಅಷ್ಟೇ ಅಲ್ಲ, ಆಗಾಗ ಬಳಸಿದರೆ ಮಾತ್ರ ನೆನಪಿನಲ್ಲಿ ಉಳಿಯುತ್ತವೆ. ಇಲ್ಲದಿದ್ದರೆ ಆವಿಯಂತೆ ಹಾರಿ ಹೋಗುತ್ತವೆ.

ಶ್ರೀಲತಾ ಕೆ.,ಬೆಂಗಳೂರು

- **ಆತ ನನ್ನನ್ನು ಬಹಳ ಪ್ರೀತಿಸುತ್ತಾನೆ. ಅವನ ಬಿಟ್ಟು ನಾನೂ ಇರಲಾರೆ. ಆದರೆ ಆತನ ಬಗ್ಗೆ ಇರುವ ಒಂದೇ ತಕರಾರೆಂದರೆ ತುಂಬಾ ಸುಳ್ಳು ಹೇಳುತ್ತಾನೆ ಮತ್ತು ಕುಡಿಯುತ್ತಾನೆ. ಅವನನ್ನು ಸರಿದಾರಿಗೆ ತರಲು ಸಾಧ್ಯವಿದೆಯಾ?**

-ಶ್ರೀಲತಾ, ನೀವು ನಿಮ್ಮ ಪ್ರಿಯಕರನ ಈ ಎರಡು ದುರಭ್ಯಾಸಗಳಿಂದ ರೋಸಿ ಹೋಗಿದ್ದೀರಿ ಎಂಬುದು ಸ್ಪಷ್ಟ. ಈ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮಿಬ್ಬರ ಮಧ್ಯೆ ಸಾಕಷ್ಟು ವಾದ-ವಿವಾದಗಳು ಆಗಿರಲಿಕ್ಕೂ ಸಾಕು. ಸುಳ್ಳು ಹೇಳುವವನು ಇಬ್ಬರಿಗೆ ಮೋಸಮಾಡುತ್ತಾನೆ, ಮೊದಲು ಬೇರೆಯವರಿಗೆ ಮತ್ತು ಎರಡನೆಯದು ತನಗೆ. ಆತನ ಪ್ರೀತಿಯೂ ಸುಳ್ಳೇ ಆಗಿರಬಹುದು. ಸುಳ್ಳಿನ ಸೋಪಾನಗಳ ಮೇಲೆ ಯಾವ ಸಂಬಂಧ ಕಟ್ಟಿದರೂ ಅದು ಶಿಥಿಲವಾಗುತ್ತದೆ. ಅಲ್ಲದೇ ಸುಳ್ಳು ಹೇಳುವವನು ಏನೂ ಮಾಡಲೂ ಹೇಸಲಾರ. ಪ್ರತಿ ಸಲವೂ ಸುಳ್ಳು ತನ್ನ ರಕ್ಷಣೆಗೆ ಧಾವಿಸುತ್ತದೆ ಎಂದು ಭಾವಿಸಿರುತ್ತಾನೆ. ಸುಳ್ಳಿನಿಂದ ಬಚಾವ್ ಆಗುವ ಮಾರ್ಗವನ್ನು ಕಂಡು ಹಿಡಿಯುತ್ತಾ ಹೋಗುತ್ತಾನೆ. ಹೀಗಿರುವಾಗ ಆತನ ಯಾವ ಮಾತನ್ನು ನೀವು ನಂಬುತ್ತೀರಿ? ಮಾತು ಮಾತಿಗೆ ಸುಳ್ಳು ಹೇಳುವವನು ನಿಮ್ಮ ಜತೆಗಿನ ಪ್ರೀತಿಯನ್ನು ಕೂಡ ಸುಳ್ಳಿನಿಂದಲೇ ಕಟ್ಟಿರಬಹುದು.

ಇಷ್ಟೂ ಸಾಲದೆಂಬಂತೆ, ನಿಮ್ಮ ಪ್ರಿಯಕರನ ಕುಡಿತದ ಚಟ ಬೇರೆ. ಕುಡಿಯದಿದ್ದಾಗ ಸುಳ್ಳು ಹೇಳುತ್ತಾನೆ, ನಶೆಯೇರಿದಾಗ ನಿಜ ಹೇಳುತ್ತಾನೆ ಎಂದು ಅಂದುಕೊಂಡರೂ, ಆತನ ಬಾಯಿಯಿಂದ ಸತ್ಯವನ್ನು ಕೇಳಲು ಪ್ರತಿಸಲ ನೀವು ಎರಡು-ಮೂರು ಪೆಗ್ ಕುಡಿಸಬೇಕಾಗಿ ಬಂದರೆ ಕಷ್ಟ ಕಷ್ಟ. ಕೆಲವರು ಸುಳ್ಳನ್ನು ಸಮಯಪ್ರಜ್ಞೆ ಎಂದೂ, ಕುಡಿತವನ್ನು ರಿಲ್ಯಾಕ್ಸ್ ಆಗುವುದಕ್ಕೆ ಕಂಡುಕೊಳ್ಳುವ ಮಾರ್ಗ ಎಂದೂ ಭಾವಿಸುತ್ತಾರೆ. ನೀವೂ ಹಾಗೆ ಭಾವಿಸಿದರೆ ನಿಮ್ಮ ಪ್ರಿಯಕರನ ಆ ಎರಡು ದುರಭ್ಯಾಸಗಳನ್ನು ಒಂದು ಗುಣವಿಶೇಷವೆಂದು ಹೆಮ್ಮೆಪಡಬಹುದು. ಇಲ್ಲದಿದ್ದರೆ, ಇಂಥ ಹುಡುಗರನ್ನು ತಿರಸ್ಕರಿಸುವುದೇ ಲೇಸು. ಎಲ್ಲಾ ಪ್ರೀತಿಯೂ ಗೌರವ, ವಿಶ್ವಾಸವನ್ನು ಬಯಸುತ್ತದೆ. ಸುಳ್ಳನ ಜತೆ ಯಾವ ಪ್ರೀತಿ ಅರಳಲು ಸಾಧ್ಯ? ಹಾಗೆ ಅರಳುವ ಪ್ರೀತಿಯೂ ಸುಳ್ಳೇ ಆಗಿರುತ್ತದೆ.